
ಪುಸ್ತಕ ಪ್ರಪಂಚ

ಏಪ್ರಿಲ್ ೧೯೮೮



ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್: ವಿಶೇಷ ಸಂಚಿಕೆ

PUSTAKA PRAPANCHA : Monthly

Published and printed by Karnataka State Adult Eductaien Council, Mysore-4 Pages 128. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

‘ಒಂದು ನೂರು ವರ್ಷಗಳ ಏಕಾಂತ’ ಅಗೆದಷ್ಟೂ ಆಳ

ಎ. ಆರ್. ನಾಗಭೂಷಣ

“ಸಾಹಿತ್ಯ ಮನುಷ್ಯನ ವ್ಯಕ್ತಿತ್ವದ, ಅನನ್ಯತೆಯ ಶೋಧನೆ; ಕಾದಂಬರಿ ಪ್ರಪಂಚವನ್ನು ಬಿಡಿಸಿ ಸ್ಪಷ್ಟಗೊಳಿಸುವ ಪ್ರಕ್ರಿಯೆ” ಎಂದು ಸ್ಪ್ಯಾನಿಷ್ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ಒಂದೆಡೆ ಹೇಳಿದ್ದಾನೆ. ಇವನ ಈ ಮಹಾತ್ವಾಕಾಂಕ್ಷೆಯನ್ನು ಪ್ರಕಟಪಡಿಸುವ ಕಾದಂಬರಿಗಳು ಮತ್ತು ಸಣ್ಣ ಕಥೆಗಳು ಜಗತ್ತಿನ ಸೃಷ್ಟಿಯ ಮೂಲವನ್ನೂ ಮನುಷ್ಯನ ಒಳ ಮನೋವ್ಯಾಪಾರಗಳನ್ನು ಒಟ್ಟಾಗಿ ಅನ್ವೇಷಿಸುತ್ತವೆ. ಒಂದು ನಿರ್ದಿಷ್ಟ ರಾಜಕೀಯ ಪರಿಸರದಲ್ಲಿ, ಸಾಮಾಜಿಕ ಆವರಣದಲ್ಲಿ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಯ ಅಂತರ್ಯದ ಎಲ್ಲ ಸಂಕೀರ್ಣ ಪದರಗಳನ್ನು ಇವನು ಗಾಢವಾಗಿ ಅಭಿವ್ಯಕ್ತಿಸುತ್ತಾನೆ. ತಾತ್ವಿಕವಾಗಿ ವಾಮಪಂಥೀಯನಾದರೂ ತನ್ನ ರಾಜಕೀಯ ಧೋರಣೆಗಳಿಗೆ ಕೊಡುವ ಮಹತ್ವ, ಗೌರವಗಳನ್ನೇ ಕಲೆಯ ಸ್ವಾಯತ್ತತೆಗೂ ಕೊಡುತ್ತಾನೆ. ಲ್ಯಾಟಿನ್ ಅಮೆರಿಕಾದ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ಕಲೆಯಾಗಿಸಿರುವ ಮಾರ್ಕ್ವೆಸ್ ಕಾದಂಬರಿಯ ಬಗ್ಗೆ ನಮಗಿರುವ ಕಲ್ಪನೆಗಳನ್ನೇ ಮೂಲಭೂತವಾಗಿ ಬದಲಾಯಿಸುವಷ್ಟು ಶಕ್ತಿಶಾಲಿ ಲೇಖಕ. ಯೂರೋಪಿಯನ್ ಕಾದಂಬರಿಗಳ ಪರಂಪರೆಯಲ್ಲಿ ತರಬೇತು ಪಡೆದ ಓದುಗ ವರ್ಗವನ್ನು ಬೆಚ್ಚಿಬೀಳಿಸಿ ಹೊಸ ಜಗತ್ತಿಗೆ ಕರೆದೊಯ್ಯುತ್ತವೆ ಇವನ ಸಂವೇದನಾಶೀಲ ಕಾದಂಬರಿಗಳು. ಈ ಎಲ್ಲ ಸಾಮರ್ಥ್ಯಗಳು ಮಾರ್ಕ್ವೆಸ್‌ಗೆ ೧೯೮೨ರ ನೊಬೆಲ್ ಬಹುಮಾನವನ್ನು ತಂದುಕೊಡುವಲ್ಲಿ ನಿರ್ಣಾಯಕವಾದವು. ಲ್ಯಾಟಿನ್ ಅಮೆರಿಕಾದ ವಾಯುವ್ಯಕ್ಕಿರುವ ಪುಟ್ಟ ದೇಶ ಕೊಲಂಬಿಯಾದಲ್ಲಿ ಜನಿಸಿದ ಮಾರ್ಕ್ವೆಸ್‌ಗೆ ಇಂದಿಗೆ ಸರಿಯಾಗಿ

ಆಶವತ್ತು ವರ್ಷ. (ಜನನ: ೧೯೨೮) ದೇಶದ ರಾಜಧಾನಿ ಬೊಗೋಟಾದಲ್ಲಿರುವ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದು ಕೆಲಕಾಲ ಪತ್ರಕರ್ತನಾಗಿ ಕೆಲಸ ಮಾಡಿದ. ಕ್ಯೂಬಾದ ಕ್ಯಾಸ್ಟ್ರೋ ನೇತೃತ್ವದ ಕ್ರಾಂತಿ ಪ್ರಗತಿಪರ ಎಂಬ ನಿಲುವನ್ನು ಉಳಿಸಿಕೊಂಡು ಬಂದಿದ್ದಾನೆ. ಚಿಲಿಯ ಸರ್ವಾಧಿಕಾರಿ ಪಿನೋಚೆಗೆ ಪ್ರತಿಭಟನೆಯ ರೂಪದಲ್ಲಿ ಹಲವಾರು ವರ್ಷ ಸಾಹಿತ್ಯವನ್ನು ರಚಿಸಲಿಲ್ಲ. ಸಾಹಿತ್ಯ ಮತ್ತು ರಾಜಕೀಯಗಳನ್ನು ಎಂದೂ ಒಟ್ಟಾಗಿಯೇ ಪರಿಭಾವಿಸುವ ಇವನು ತನ್ನ ದೇಶವನ್ನು ಮೀರಿ ಇಡೀ ಲ್ಯಾಟಿನ್ ಅಮೆರಿಕವನ್ನೇ ತನ್ನ ಪ್ರಜ್ಞೆಯಾಗಿಸಿಕೊಂಡು ಬರೆಯುತ್ತಾನೆ. ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಮಹತ್ವವಾದದ್ದನ್ನು ಮಾತ್ರವೇ ಸೃಷ್ಟಿಸಬೇಕೆನ್ನುವ ಈತ ಒಂದೊಂದು ಕಾದಂಬರಿಯ ರಚನೆಗೂ ಹಲವಾರು ವರ್ಷಗಳನ್ನು ತೆಗೆದುಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಇವನು "ಬರೆಯುವುದು ಹಿಂಸೆಯ, ನೋವಿನ ಕ್ರಿಯೆ" ಎಂಬ ಮಾತು ಅರ್ಥಪೂರ್ಣವಾಗುತ್ತದೆ.

೧೯೬೮ರಲ್ಲಿ ಸ್ಪ್ಯಾನಿಷ್ ಭಾಷೆಯಲ್ಲಿ ಪ್ರಕಟವಾದ 'ಒಂದು ನೂರು ವರ್ಷಗಳ ಏಕಾಂತ' (One hundred years of Solitude) ಬುಯೆಂಡಿಯಾ ಕುಲದ ಆರು ತಲೆಮಾರುಗಳ ಕಥಾನಕವನ್ನು ಹೇಳುತ್ತ ಸೃಷ್ಟಿ ಮತ್ತು ಅಧಃಪತನಗಳ ಅಮೂರ್ತ ವಿಚಾರಗಳನ್ನು ಕಾದಂಬರಿಯ ಹಂದರದೊಳಗೆ ತರುತ್ತದೆ. ಒಂದು ಲೋಕದ ಸೃಷ್ಟಿ, ಬೆಳವಣಿಗೆ ಮತ್ತು ನಿರ್ನಾಮಗಳನ್ನು ಸೂಕ್ಷ್ಮವಾಗಿ (ಅನುಕೂಲಕ್ಕಾಗಿ ಇವನ್ನು ಕೃತಕವಾಗಿ ವಿಭಜಿಸದೆ) ವಿಶ್ಲೇಷಿಸುವ ಈ ಕಾದಂಬರಿ—ಎಲ್ಲ ಶ್ರೇಷ್ಠ ಕೃತಿಗಳಂತೆ—ಒಂದು ರೂಪಕವಾಗುವ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಸಮುದ್ರದ ಅನುಕೂಲವಿರುವ ಸ್ಥಳವೊಂದಕ್ಕಾಗಿ ದೀರ್ಘಕಾಲ ಅನ್ವೇಷಿಸುತ್ತ ಕೊನೆಗೆ ತಾನು ಕಂಡ ಕನಸಿನ ಫಲವಾಗಿ ಸಮುದ್ರವಿಲ್ಲದ ಒಂದೆಡೆ ನಿಲ್ಲುವ ನಿರ್ಧಾರ ಮಾಡುತ್ತಾನೆ ಬುಯೆಂಡಿಯಾ ಕುಲದ ಮೂಲ ಪುರುಷ ಜೋಸ್ ಅರ್ಕಾಡಿಯೊ ಬುಯೆಂಡಿಯಾ. ಕನ್ನಡಿಗಳನ್ನು ಗೋಡೆಗಳನ್ನಾಗುಳ್ಳ ಮನೆಗಳಿರುವ ಊರೊಂದನ್ನು ಇವನು ಕನಸಿನಲ್ಲಿ ಕಾಣುತ್ತಾನೆ, ಅದರ ಹೆಸರು ಮಕಾಂಡೊ ಎಂದು ಕೇಳುತ್ತಾನೆ. ಇವನು, ಇವನ ಹೆಂಡತಿ ಉರ್ಸುಲಾ ಇಗುವಾರನ್ ಮತ್ತು ಇವರೊಡನೆ ಬಂದ ಇತರರು ಕಷ್ಟಪಟ್ಟು ವ್ಯವಸ್ಥಿತವಾದ ಹಳ್ಳಿಯೊಂದನ್ನು ಕಟ್ಟುತ್ತಾರೆ; ಇದಕ್ಕೆ ಅರ್ಥವಿಲ್ಲದ ಆದರೆ ಜೋಸ್ ಅರ್ಕಾಡಿಯೊ ಬುಯೆಂಡಿಯಾ ಕನಸಿನಲ್ಲಿ ಕೇಳಿದ ಹೆಸರನ್ನು ಇಡುತ್ತಾರೆ. ಒಂದು ಸರಳ, ಮುಗ್ಧ ಸಮಾಜದ ನಿರ್ಮಾಣಕ್ಕೆ ಇವರೆಲ್ಲ ಕಾರಣಕರ್ತರಾಗುತ್ತಾರೆ. ಬುಯೆಂಡಿಯಾ ಕುಲ ವೃದ್ಧಿಯಾಗುತ್ತಾ ಹೋದಂತೆ ಮಕಾಂಡೊ ಸಹ ವಿಸ್ತಾರವಾಗುತ್ತಾ ಪಟ್ಟಣವಾಗುತ್ತದೆ. ಕುಲದಲ್ಲಿ ಮತ್ತು ಊರಿನಲ್ಲಿ ಏಳುಬೀಳುಗಳಾಗುತ್ತವೆ; ಕೊನೆಗೆ ಎರಡೂ ನಿರ್ನಾಮವಾಗುತ್ತವೆ. ಹೀಗೆ ಒಂದು ಸಮಾಜದ ನಿರ್ಮಾಣ ಮತ್ತು ನಿರ್ನಾಮಗಳು ಈ ಕಾದಂಬರಿಯ ಕಥಾನಕದ ಮುಖ್ಯ ಎಳೆಯಾಗಿದೆ.

ಜೋಸ್ ಅರ್ಕಾಡಿಯಾ ಬುಯೆಂಡಿಯಾನಿಂದ ಮಕಾಂಡೊ ಸ್ಥಾಪನೆಯಾದ ಮೇಲೆ ಬರತೊಡಗುವ ಜಿಪ್ಸಿಗಳಿಂದ ಮೊದಲ ಮುಖ್ಯ ಬದಲಾವಣೆಗಳಾಗುತ್ತವೆ. ಮೆಲ್‌ಕ್ವಿಯಾಡಿಸ್ ಎಂಬ ಪರಮಜ್ಞಾನ ಉಳ್ಳ ಜಿಪ್ಸಿ ನವ ವೈಜ್ಞಾನಿಕ ಶೋಧನೆಗಳನ್ನು ಮಕಾಂಡೊಗೆ ಪರಿಚಯಿಸಿ ಕಂಪನಗಳನ್ನು ಉಂಟುಮಾಡುತ್ತಾನೆ. ಇವನು ತರು

ಅಯಸ್ಕಾಂತ, ದೂರದರ್ಶಕ, ಮಸೂರ, ಕಂಪಾಸು, ಭೂಪಟಗಳು, ರಸ ತಂತ್ರ (alchemy) ಪ್ರಯೋಗಶಾಲೆ ಇತ್ಯಾದಿಗಳಿಂದ ಜೋಸ್ ಅರ್ಕಾಡಿಯೊ ಬುಯೆಂಡಿಯಾ ಆಕರ್ಷಿತನಾಗಿ ವೈಜ್ಞಾನಿಕ ಸಂಶೋಧನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡುಬಿಡುತ್ತಾನೆ. ಸಮಾಜಕ್ಕೆ ಚಲನಶೀಲತೆಯನ್ನು ತರುವ, ಹೊಸತನ್ನು ಸೃಷ್ಟಿಸುವ ಆತುರದಲ್ಲಿ ಸೃಷ್ಟಿಕ್ರಿಯೆಗೂ ಒಂದು ಮಿತಿ ಇರುವುದನ್ನು ಮನಗಾಣುವುದಿಲ್ಲ, ಮೆಲ್‌ಕ್ವಿಯಾಡಿಸ್‌ನ ವಿವೇಕದ ಎಚ್ಚರದ ಮಾತುಗಳನ್ನು ಲೆಕ್ಕಿಸುವುದಿಲ್ಲ. ಪ್ರಾಪಂಚಿಕ ಜೀವನವನ್ನು ತ್ಯಜಿಸಿ, ಪ್ರಯೋಗಶಾಲೆಯಲ್ಲಿ ಕಾರ್ಯನಿರತನಾಗುತ್ತಾ ಒಂಟಿಯಾಗಿ ಬಿಡುತ್ತಾನೆ. ಹೊಸತನ್ನು ಶೋಧಿಸುವ ಹಂಬಲ ತೀವ್ರವಾಗಿ ಕೊನೆಗೆಹುಚ್ಚಾಗುತ್ತಾನೆ. ಆಗ ಮನೆಯರೇ ಅವನನ್ನು ಮನೆ ಮುಂದಿನ ಮರಕ್ಕೆ ಕಟ್ಟಿಹಾಕುತ್ತಾರೆ. ಅಲ್ಲೇ ಅವನು ಒಂಟಿಯಾಗಿ ನರಳಿ ದುರಂತದ ಅಂತ್ಯವನ್ನು ಕಾಣುತ್ತಾನೆ. ಈ ಒಂಟಿತನ ಮತ್ತು ದುರಂತದ ಅಂತ್ಯ 'ಒಂದು ನೂರು ವರ್ಷಗಳ ಏಕಾಂತ' ಕಾದಂಬರಿಯ ಪ್ರಮುಖ ವಸ್ತುಗಳಲ್ಲೊಂದಾಗಿದೆ. ಜೋಸ್ ಅರ್ಕಾಡಿಯಾ ಬುಯೆಂಡಿಯಾನ ತರಹವೇ ಬುಯೆಂಡಿಯಾ ಕುಲದ ಎಲ್ಲ ವ್ಯಕ್ತಿಗಳೂ ಒಂಟಿಯಾಗಿ ನರಳಿ ದುರಂತವನ್ನು ಅಪ್ಪುತ್ತಾರೆ. ಬುಯೆಂಡಿಯಾ ಮನೆತನದ ಘನತೆಗೌರವಗಳಿಗಾಗಿ ತನ್ನ ಜೀವಮಾನವನ್ನೇ ತೇಯುವ ಉರ್ಸುಲಾ ಇಗುವಾರನ್ ಕುರುಡಿಯಾಗಿ, ಚಿಕ್ಕ ಮಕ್ಕಳಿಗೆ ಅಪಹಾಸ್ಯದ ವಸ್ತುವಾಗಿ, ತನ್ನ ಮುಂದೆಯೇ ಮಕ್ಕಳ ಮತ್ತು ಮೊಮ್ಮಕ್ಕಳ ಸಾವನ್ನು ನೋಡಿ ಸಾಯುತ್ತಾಳೆ. ಇವಳ ಮಗ ಕರ್ನಲ್ ಜೌರೆಲಿಯಾನೊ ಬುಯೆಂಡಿಯಾ ಕ್ರಾಂತಿಯ ವೈಫಲ್ಯವನ್ನು ಮನಗಂಡು ನಿರಾಶೆಯಿಂದ ಸಾಯುತ್ತಾನೆ. ಇವನ ಅಣ್ಣ ಜೋಸ್ ಅರ್ಕಾಡಿಯಾನ ಸಾವು ಇನ್ನೂ ದುರಂತವಾದದ್ದು ; ಇವನ ಸಾವು ಹೇಗೆ ಸಂಭವಿಸಿತು, ಇದಕ್ಕೆ ಯಾರು ಕಾರಣರು ಎಂಬುದು ರಹಸ್ಯವಾಗಿಯೇ ಉಳಿಯುತ್ತದೆ. ಗಂಡ ಸತ್ತಮೇಲೆ ಶಿಥಿಲವಾದ ಮನೆಯಲ್ಲಿ ಕೂತು ಬಾಹ್ಯ ಪ್ರಪಂಚಕ್ಕೆ ಬಾಗಿಲು ಮುಚ್ಚಿ ರೆಬೆಕಾ ಕಣ್ಣು ಮುಚ್ಚುತ್ತಾಳೆ. ಮದುವೆಯಾದ ಕೆಲವೇ ದಿನಗಳಲ್ಲಿ ಬಸಿರಾದ ರೆಮೆಡಿಯೋಸ್‌ಳ ರಕ್ತಕ್ಕೆ ವಿಷಪ್ರಾಶನವಾಗಿ ಚಿಕ್ಕ ವಯಸ್ಸಿನಲ್ಲೇ ಈ ಲೋಕವನ್ನು ಬಿಡುತ್ತಾಳೆ. ಮದುವೆಯಾಗಲು ಬಂದ ಆಹ್ವಾನಗಳನ್ನು ತಿರಸ್ಕರಿಸಿ ಅಮರಾಂತ ವರ್ಜಿನ್ನಳಾಗಿ ಸಾಯುತ್ತಾಳೆ. ಒಂಟಿಯಾಗಿದ್ದಾಗ ಜೌರೆಲಿಯಾನೊ ಜೋಸ್‌ನನ್ನು ಒಬ್ಬ ಕನ್ಸರ್ವೇಟಿವ್ ಕೊಲ್ಲುತ್ತಾನೆ. ಕರ್ನಲ್ ಜೌರೆಲಿಯಾನೊ ಬುಯೆಂಡಿಯಾ ಹದಿನೇಳು ಹೆಂಗಸರಿಂದ ಹುಟ್ಟಿಸಿದ ಹದಿನೇಳು ಗಂಡುಮಕ್ಕಳೂ ಸೈನಿಕರ ಗುಂಡಿನಿಂದ ಹತರಾಗುತ್ತಾರೆ. ಜೋಸ್ ಅರ್ಕಾಡಿಯೊನ ಮಗ ಅರ್ಕಾಡಿಯೊ ಕೋರ್ಟ್ ಮಾರ್ಷಲ್‌ನಲ್ಲಿ ಮರಣದಂಡನೆಗೆ ಗುರಿಯಾಗುತ್ತಾನೆ. ಎಲ್ಲರ ಆರಾಮಕ್ಕಾಗಿ ವಿರಾಮ ವಿಲ್ಲದೆ ದುಡಿದರೂ ನಿರ್ಲಕ್ಷ್ಯಕ್ಕೆ ಒಳಗಾಗುವ ಸಾಂತಾ ಸೋಫಿಯಾ ಡಿ ಲ ಪೈದಾದ್ ಮನೆಬಿಟ್ಟು ಹೊರಟುಹೋಗುತ್ತಾಳೆ. ಸುಂದರಿ ರೆಮೆಡಿಯೋಸ್ ಇಹ ಪ್ರಪಂಚದ ವಹಿವಾಟುಗಳಿಂದ ದೂರವಾಗಿ ಎಲ್ಲ ಬಂಧುಗಳನ್ನು ಬಿಟ್ಟು ಸ್ವರ್ಗಕ್ಕೆ ಹೊರಟುಹೋಗು ತ್ತಾಳೆ. ಅವಳ ಸೋದರರಾದ ಜೌರೆಲಿಯಾನೊ ಸೆಗುಂಡೊ ಮತ್ತು ಜೋಸ್ ಜೌರೆಲಿಯಾನೊ ಸೆಗುಂಡೊ ಇಬ್ಬರೂ ಮೆಲ್‌ಕ್ವಿಯಾಡಿಸ್‌ನ ಬರಹಗಳನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗಿ ಸಾಯುತ್ತಾರೆ. ಫರ್ನಂದಾ ತನ್ನ ಮೂರೂ ಮಕ್ಕಳಿಂದ

ದೂರವಾಗಿ, ಗಂಡನ ಸೂಳೆಯ ಮೋಹವನ್ನು ನಿಯಂತ್ರಿಸಲಾಗದೆ, ಮನೆಯ ಕಾರುಭಾರವನ್ನು ನಿರ್ವಹಿಸಲಾಗದೆ ಸಾವನ್ನಪ್ಪುತ್ತಾಳೆ. ಮನೆಯಿಂದ ದೂರವಿಡುವ ಕಾನ್ವೆಂಟ್‌ಗೆ ತಾಯಿಯಿಂದಲೇ ಬಲಾತ್ಕಾರವಾಗಿ ಸೇರಿಸಲ್ಪಟ್ಟ ಮೆಮೆ ಹಲವು ವರ್ಷಗಳ ನಂತರ ಒಂಟಿಯಾಗಿ ಆಸ್ಪತ್ರೆಯಲ್ಲಿ ಅಸುನೀಗುತ್ತಾಳೆ. ಇವಳ ಅಣ್ಣ ಜೋಸ್ ಅರ್ಕಾಡಿಯೊ ಸ್ನಾನ ಮಾಡುತ್ತಿರುವಾಗ ನಾಲ್ಕು ಹುಡುಗರಿಂದ ಕೊಲೆಯಾಗುತ್ತಾನೆ. ಅಮರಾಂತ ಉರ್ಸುಲಾ ತನ್ನ ಅಕ್ಕನ ಮಗನಿಂದ ಬಸಿರಾಗಿ, ಮಗುವಿಗೆ ಜನ್ಮ ನೀಡಿ, ರಕ್ತಸ್ರಾವದಿಂದ ಸಾಯುತ್ತಾಳೆ. ಹಂದಿಯ ಬಾಲವನ್ನುಳ್ಳ ಈ ಮಗುವನ್ನು ಇರುವೆಗಳು ತಿಂದುಹಾಕುತ್ತವೆ. ಔರೆಲಿಯಾನೊ ಬ್ಯಾಬಿಲೋನಿಯಾ ಬಿರುಗಾಳಿಯಲ್ಲಿ ನಾಶವಾಗುತ್ತಾನೆ. ಬುಯೆಂಡಿಯಾ ವಂಶದ ಎಲ್ಲ ವ್ಯಕ್ತಿಗಳ ಎಲ್ಲ ವಿವರಗಳನ್ನು ನೂರು ವರ್ಷಗಳಷ್ಟು ಮೊದಲೆ ಗ್ರಹಿಸಿದ ಏಕೈಕ ವ್ಯಕ್ತಿಯೆಂದರೆ ಜಿಪ್ಸಿ ಮೆಲ್‌ಕ್ವಿಯಾಡಿಸ್. ಇವನು ಸಂಸ್ಕೃತದಲ್ಲಿ ಬರೆದಿಡುವ ದಾಖಲೆಗಳಲ್ಲಿರುವ ಒಂದು ಸಾಲು: "ಈ ಕುಲದ ಮೊದಲ ವ್ಯಕ್ತಿಯನ್ನು ಮರಕ್ಕೆ ಕಟ್ಟಿಹಾಕಲಾಗುತ್ತದೆ ಮತ್ತು ಕೊನೆಯವನನ್ನು ಇರುವೆಗಳು ತಿನ್ನುತ್ತವೆ."

ಮಾರ್ಕ್ವೆಸ್ ಸೃಷ್ಟಿಸುವ ಮನುಷ್ಯ ಲೋಕದಲ್ಲಿ ಇವರೆಲ್ಲರೂ ಹೀಗೆ ಒಂಟಿಯಾಗಿ, ನರಳಿ, ನಾಶವಾಗುವುದು ಕೇವಲ ಆಕಸ್ಮಿಕವಲ್ಲ. ಈ ಮೂಲಕ ಲೋಕದಲ್ಲಿ ಮನುಷ್ಯ ವಹಿಸುವ ಕ್ಷಣಿಕ ಪಾತ್ರವನ್ನೂ ಕಾಲದ ನಿರಂತರತೆಯನ್ನೂ ಮನುಷ್ಯನ ಮಿತಿಗಳನ್ನೂ ಏಕಕಾಲಕ್ಕೆ ನಿಷ್ಠುರವಾಗಿ ಮಾರ್ಕ್ವೆಸ್ ಅಭಿವ್ಯಕ್ತಿಸುತ್ತಾನೆ. ಬುಯೆಂಡಿಯಾ ಕುಲದ ಜೊತೆಜೊತೆಗೆ ಮಕಾಂಡೊ ಸಹಾ ಬಿರುಗಾಳಿಯಲ್ಲಿ, ಮಳೆಯಲ್ಲಿ ನಾಶವಾಗಿಬಿಡುವುದು ಕಾಲ ಸೃಷ್ಟಿಯ ಮೇಲೆ ಸಾಧಿಸಿರುವ ಹಿಡಿತವನ್ನು ಸೂಚಿಸುತ್ತದೆ. ಹೀಗೆ ಕಾಲ ಕೇವಲ ಭೌತಿಕ ಘಟಕವಾಗದೆ ಅತಿಭೌತಿಕವಾದ ಶಕ್ತಿಯನ್ನು ಪ್ರಾಪ್ತಗಳಿಸಿಕೊಳ್ಳುತ್ತದೆ. ಎಲ್ಲ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ವೈಯಕ್ತಿಕ ಏಳು ಬೀಳುಗಳನ್ನು ಜೀರ್ಣಿಸಿಕೊಂಡು ಚಲಿಸುತ್ತಲೇ ಇರುವ ಕಾಲ ಆಧ್ಯಾತ್ಮಿಕ ಮೌಲ್ಯವನ್ನು ಮಾರ್ಕ್ವೆಸ್‌ನ ಸೃಜನಶೀಲತೆಯಲ್ಲಿ ಗಳಿಸಿಕೊಳ್ಳುತ್ತದೆ. ಈ ಅರ್ಥದಲ್ಲಿ 'ಒಂದು ನೂರು ವರ್ಷಗಳ ಏಕಾಂತ' ಕಾದಂಬರಿಯ ಕೇಂದ್ರ ಬಿಂದುವೇ ಕಾಲ.

ಕಾಲದ ಅತಿಭೌತಿಕ ಆಯಾಮವನ್ನು ಮೇಲೆ ಹೇಳಿದಂತೆ ವಸ್ತುವಾಗಿ ಅರ್ಥೈಸುವುದಷ್ಟೇ ಅಲ್ಲದೆ ತಂತ್ರವಾಗಿ ಸಹ ಮಾರ್ಕ್ವೆಸ್ ವ್ಯಾಖ್ಯಾನಿಸಿದ್ದಾನೆ. ಗಮನಿಸಲೇಬೇಕಾದ ಒಂದು ವಿಷಯವೆಂದರೆ ಈ ಕಾದಂಬರಿಗೆ ಎರಡು ನಿರೂಪಣೆಗಳಿವೆ, ಇಬ್ಬರು ನಿರೂಪಕರಿದ್ದಾರೆ. ಒಂದೇ ವಿಷಯದ ಬಗ್ಗೆ ಎರಡೂ ನಿರೂಪಣೆಗಳು ತೊಡಗಿದರೂ ನಿರೂಪಕರು ಮಾತ್ರ ವಿಭಿನ್ನ ಜಾಡುಗಳನ್ನು ಹಿಡಿಯುತ್ತಾರೆ. ಸರ್ವ ಸಾಕ್ಷಿತ್ವ ಸಾಮರ್ಥ್ಯ ಉಳ್ಳ ನಿರೂಪಕ ಬುಯೆಂಡಿಯಾ ಕುಲದ ಆರು ತಲೆಮಾರುಗಳ ಘಟನೆಗಳನ್ನು ಒಂದಾದ ಮೇಲೊಂದು ಚಿತ್ರಿಸುತ್ತಾ ಹೋಗುತ್ತಾನೆ. ಇವುಗಳನ್ನು ನೂರು ವರ್ಷ ಮೊದಲೇ ಬರೆದಿಟ್ಟಿರುವ ಮೆಲ್‌ಕ್ವಿಯಾಡಿಸ್‌ಗೆ ಕಾಲ ನೇರ ಸರಳ ರೇಖೆಯಲ್ಲ; ಈ ಘಟನೆಗಳೆಲ್ಲ ಒಮ್ಮೆಗೆ ಒಂದೇ ಗಳಿಗೆಯಲ್ಲಿ ಘಟಿಸುತ್ತವೇನೋ ಎಂಬಂತೆ ಅವನು ಪರಿಭಾವಿಸುತ್ತಾನೆ. ಈ ಎರಡು ನಿರೂಪಣೆಗಳು ಒಂದನ್ನೊಂದು ಪ್ರಭಾವಿಸುತ್ತ ಕಾಲದ ಅನಂತತೆಯನ್ನೂ ಕಾಲ—ಮನುಷ್ಯರ ಸಂಬಂಧವನ್ನೂ ಮೊನಚುಗೊಳಿಸುತ್ತವೆ. ಇವುಗಳ ಜೊತೆಗೆ

ಮೆಲ್‌ಕ್ವಿಯಾಡಿಸ್ ತ್ರಿಕಾಲ ಜ್ಞಾನಿಯಾದ್ದರಿಂದ ಅವನೇ ಕಾಲದ ಮೂರ್ತ ರೂಪವಾಗುತ್ತಾನೆ. ಈ ಹಿನ್ನೆಲೆಯಲ್ಲಿ ಅವನು ಸಾಯುವ ಮುನ್ನ ಆಡುವ ಮಾತು "ನಾನು ಅಮರತ್ವವನ್ನು ಪಡೆದಿದ್ದೇನೆ" ಬಹಳ ಮಹತ್ವದ್ದಾಗುತ್ತದೆ.

ಕಾಲದ ಹಿಡಿತದಡಿಯಲ್ಲಿ ಒಂದು ನಾಗರಿಕತೆಯ ಸೃಷ್ಟಿ, ಬೆಳವಣಿಗೆ, ಅವನತಿ ಮತ್ತು ವಿನಾಶದ ಪ್ರಕ್ರಿಯೆಯನ್ನು ಮಾರ್ಕ್ವೆಸ್ ಅತ್ಯಂತ ಸೂಕ್ಷ್ಮವಾಗಿ, ದಟ್ಟ ವಿವರಗಳ ಮುಖೇನ ಗುರುತಿಸುತ್ತಾನೆ. ಈ ಸೂಕ್ಷ್ಮತೆ ದಟ್ಟತೆಗಳು ಮಕಾಂಡೊ ಪಟ್ಟಣವನ್ನು ಲ್ಯಾಟಿನ್ ಅಮೆರಿಕಾಗೆ, ಇಡೀ ಭೂಮಂಡಲಕ್ಕೆ ಒಂದು ಪ್ರತೀಕವಾಗಿಸಲು ದುಡಿಯುತ್ತವೆ. ಜೋಸ್ ಅರ್ಕಾಡಿಯೊ ಬುಯೆಂಡಿಯಾ ಸ್ಥಾಪಿಸುವ ಸಮಾಜ ಸರಳವಾದದ್ದು, ಮುಗ್ಧವಾದದ್ದು; ಅಲ್ಲಿ ಸ್ಮಶಾನದ ಅಗತ್ಯವಿಲ್ಲ, ಏಕೆಂದರೆ ಅಲ್ಲಿ ಸಾವು ಸಂಭವಿಸಿಲ್ಲ. ಅಲ್ಲಿಯ ಜನರಿಗೆ ಚರ್ಚ್, ಕಛೇರಿ, ಸೈನ್ಯ ಇತ್ಯಾದಿಗಳ ಅಗತ್ಯವಿಲ್ಲ. ಮನುಷ್ಯರಿಂದ ಮನುಷ್ಯರಿಗಾಗಿ ನಿರ್ಮಾಣವಾದ ಮಾನವೀಯ ಸಮಾಜ ಅದು. ಕ್ರಮೇಣ ಅದು ಕೆಲವೊಮ್ಮೆ ನಿಧಾನಗತಿಯಲ್ಲಿ, ಕೆಲವೊಮ್ಮೆ ತೀವ್ರಗತಿಯಲ್ಲಿ ಬದಲಾಗುತ್ತಾ ಹೋಗುತ್ತದೆ. ಪ್ರಾರಂಭಕ್ಕೆ ಜಿಪ್ಸಿಗಳು ವೈಜ್ಞಾನಿಕ ಉಪಕರಣಗಳನ್ನು ತರುತ್ತಾರೆ; ಪಾದ್ರಿಯೊಬ್ಬ ಒಂದು ಚರ್ಚ್ ನಿರ್ಮಿಸುತ್ತಾನೆ; ಅರಬ್ಬರು ಜೇಕಬ್ ಎಂಬ ಹೋಟೆಲ್ ಕಟ್ಟುತ್ತಾರೆ; ಸಂಪ್ರದಾಯವಾದಿಗಳು ಮತ್ತು ಉದಾರವಾದಿಗಳು ಘರ್ಷಿಸುತ್ತಾರೆ; ರಾಜಕೀಯ ಪ್ರವೇಶಿಸುತ್ತದೆ; ಮ್ಯಾಜಿಸ್ಟ್ರೇಟ್, ಮೇಯರ್ ಮುಂತಾದವರ ನೇಮಕವಾಗುತ್ತದೆ; ಬಾಳೆಹಣ್ಣಿನ ಕಂಪೆನಿ ಪ್ರಾರಂಭವಾಗಿ ಹಣದ ಪ್ರಾಮುಖ್ಯತೆ ತೀವ್ರವಾಗುತ್ತದೆ; ಸೈನ್ಯ ತಲೆ ಎತ್ತುತ್ತದೆ; ಸಿನಿಮಾ, ಸರ್ಕಸ್‌ಗಳು ಬರುತ್ತವೆ; ಮೊದಲು ದೋಣಿ ನಂತರ ರೈಲು ಕಾಣಿಸಿಕೊಳ್ಳುತ್ತವೆ; ಏರೋಪ್ಲೇನಿನ ನಿರೀಕ್ಷೆಯೂ ಇದೆ. ಹೀಗೆ ಒಂದು ಸರಳವಾದ ಸಾಮುದಾಯಿಕ ಘಟಕ ತನಗೆ ಅಗತ್ಯವಿರಲೀ ಬಿಡಲೀ ನಿರಂತರ ಬದಲಾವಣೆಗಳನ್ನು ಕಾಣುತ್ತ, ಅವುಗಳ ಸಂಕೋಲೆಗೆ ಬಂಧಿಯಾಗಿ, ಕ್ಷೀಣಿಸುತ್ತದೆ. ಮಕಾಂಡೊನಲ್ಲಿ ಜರಗುವ ಎರಡು ಮುಖ್ಯ ಘಟನೆಗಳೆಂದರೆ ಬಾಳೆಹಣ್ಣಿನ ಕಂಪೆನಿಯ ಪ್ರಾರಂಭ ಮತ್ತು ಸಂಪ್ರದಾಯವಾದಿಗಳು—ಉದಾರವಾದಿಗಳ ನಡುವಣ ಯುದ್ಧ. ಬಾಳೆಹಣ್ಣಿನ ಕಂಪೆನಿಯ ಬಂಡವಾಳಶಾಹಿ ಮಾಲೀಕರು ಮಕಾಂಡೊ ಪಟ್ಟಣವನ್ನು ತಮ್ಮ ವಸಾಹತುವಾಗಿ ಪರಿವರ್ತಿಸಿ, ಅಲ್ಲಿಯ ಜನರನ್ನು ಕೇವಲ ದುಡಿಯುವ ವಸ್ತುಗಳನ್ನಾಗಿ ನೋಡುತ್ತಾರೆ. ರೈಲು ಪ್ರಯಾಣದ ಅನುಕೂಲತೆ, ಸೈನ್ಯದ ಬೆಂಬಲ, ಕಾರ್ಮಿಕರ ಶೋಷಣೆ—ಇವುಗಳನ್ನು ಸಾಧನಗಳನ್ನಾಗಿ ಬಳಸಿಕೊಂಡು ಹಣಗಳಿಸುತ್ತಾರೆ. ಮಾಲೀಕರ ವಿರುದ್ಧ ಕಾರ್ಮಿಕರು ಜೋಸ್ ಅರ್ಕಾಡಿಯೊ ಸೆಗೊಂಡೊ ನೇತೃತ್ವದಲ್ಲಿ ಮುಷ್ಕರ ಹೂಡಿದಾಗ ಅದನ್ನು ಭಗ್ನಗೊಳಿಸಲು ಎಲ್ಲ ತಂತ್ರಗಳೂ ಬಳಕೆಯಾಗುತ್ತವೆ. ಈ ಸನ್ನಿವೇಶದ ಮೂಲಕ ಮಾರ್ಕ್ವೆಸ್ ವಸಾಹತುಶಾಹಿ ಮತ್ತು ಬಂಡವಾಳಶಾಹಿಗಳನ್ನು ಏಕಕಾಲಕ್ಕೆ ಟೀಕೆಗೆ ಗುರಿಪಡಿಸುತ್ತಾನೆ. ಇಷ್ಟೇ ಮುಖ್ಯವಾದ ಇನ್ನೊಂದು ಸನ್ನಿವೇಶವೆಂದರೆ ಸಂಪ್ರದಾಯವಾದಿಗಳ ವಿರುದ್ಧ ಉದಾರವಾದಿಗಳು ಹೂಡುವ ಬಂಡಾಯ. ಉದಾರವಾದಿಗಳ ನಾಯಕತ್ವವನ್ನು ವಹಿಸುವ ಕರ್ನಲ್ ಔರೆಲಿಯಾನೊ ಬುಯೆಂಡಿಯಾ ಹಲವಾರು ಬಾರಿ ದಂಗೆಗಳನ್ನು ಕೈಗೊಂಡರೂ ವೈಫಲ್ಯವನ್ನು ಅನುಭವಿಸುತ್ತಾನೆ; ತನ್ನ ಆದರ್ಶಗಳನ್ನು ತ್ಯಜಿಸಿ ಒಪ್ಪಂದಕ್ಕೆ ಸಹಿ ಹಾಕುತ್ತಾನೆ;

ತಾನೇ ಸರ್ವಾಧಿಕಾರಿಯ ಗುಣಗಳನ್ನು ಪಡೆದುಕೊಳ್ಳುತ್ತಾನೆ; ಕೊನೆಗೆ ಹೋರಾಟದ ಮೂಲ ಅಹಂಕಾರವೆಂದೂ ಎಲ್ಲ ಹೋರಾಟಗಾರರೂ ಅಧಿಕಾರಲಾಲಸೆ ಉಳ್ಳವರೆಂದು ಅವನಿಗೆ ತಿಳುವಳಿಕೆ ಮೂಡುತ್ತದೆ; ಇದರ ಪರಿಣಾಮವಾಗಿ ಅವನು ಕೋಣೆಯೊಳಗೆ ಕೂತು ಚಿನ್ನದ ಮೀನುಗಳನ್ನು ಮಾಡುತ್ತಾ ಕಾಲ ನೂಕುತ್ತಾನೆ. ಈ ವಿವರಗಳಲ್ಲಿ ಕ್ರಾಂತಿ, ಹೋರಾಟಗಾರರು, ಹೋರಾಟದ ಸ್ವರೂಪ ಈ ವಿಷಯಗಳ ಬಗ್ಗೆ ಮಾರ್ಕ್ವೆಸ್‌ನ ವಿಮರ್ಶಾತ್ಮಕ ದೃಷ್ಟಿಕೋನವನ್ನು ಕಾಣಬಹುದು. ವಾಮಪಂಥೀಯ ತಾತ್ತ್ವಿಕತೆಗೆ ಸ್ವಯಂಬದ್ಧನಾಗಿದ್ದೂ ಈ ಬಂಡಾಯವನ್ನು ನಿರ್ಲಿಪ್ತತೆಯಿಂದ ಪರಿಭಾವಿಸಿರುವುದು ಮಾರ್ಕ್ವೆಸ್‌ನ ಹಿರಿಮೆಯಾಗಿದೆ.

ತಾನು ಎದುರಿಸಿದ ಅನುಭವಗಳನ್ನು ಶೋಧಿಸಲು ವಾಸ್ತವವಾದಿ ಮಾರ್ಗದ ಶೈಲಿಯಲ್ಲಿ ಸಾಧ್ಯವಿಲ್ಲವೆಂದು ಮಾರ್ಕ್ವೆಸ್ ಮನವರಿಕೆ ಮಾಡಿಕೊಂಡಿದ್ದಾನೆ. ವಾಸ್ತವವಾದಿ ಮಾರ್ಗದ ಅನಿವಾರ್ಯ ಲಕ್ಷಣಗಳಾದ ತಾರ್ಕಿಕ ಸಂವಿಧಾನ, ತೀವ್ರವಲ್ಲದ ಭಾಷೆ, ಕಸುವು ಕಳೆದುಕೊಂಡ ಸರಳ ರೇಖೆಯಂತಹ ದೃಷ್ಟಿಕೋನ, ಮನುಷ್ಯ ಸಂಬಂಧಗಳ ಸಂಕೀರ್ಣತೆಗೆ ಕುರುಡಾಗುವಿಕೆ, ಒಂದೇ ನಡೆಯಲ್ಲಿ ಸಾಗುವ ಘಟನಾವಳಿಗಳು ಇತ್ಯಾದಿಗಳನ್ನು ಮಾರ್ಕ್ವೆಸ್ ಪ್ರಜ್ಞಾಪೂರ್ವಕವಾಗಿ ತಿರಸ್ಕರಿಸಿದ್ದಾನೆ. ತಾನು ಕಂಡುಕೊಂಡ ಸತ್ಯವನ್ನೂ ಲೋಕದರ್ಶನವನ್ನೂ ದಾಖಲಿಸಲು ತನ್ನದೇ ಆದ ಒಂದು ಮಾರ್ಗವನ್ನೂ ಶೈಲಿಯನ್ನೂ ಇವನು ಆವಿಷ್ಕರಿಸಿಕೊಂಡಿದ್ದಾನೆ; ಸ್ವಂತದ್ದೇ ಎನ್ನಬಹುದಾದ ಒಂದು ಮೀಡಿಯಂ ಅನ್ನು ರೂಪಿಸಿಕೊಂಡಿದ್ದಾನೆ. 'ಒಂದು ನೂರು ವರ್ಷಗಳ ಏಕಾಂತ' ಕಾದಂಬರಿಯಲ್ಲಿ ವಾಸ್ತವ ಮತ್ತು ಫ್ಯಾಂಟಸಿಗಳು ಸಹಜವಾಗಿ ಮಿಳಿತವಾಗಿಬಿಡುತ್ತವೆ. ಕಣ್ಣೆದುರಿಗೆ ಮೂರ್ತವಾಗಿ ಘಟಿಸುತ್ತಿರುವುದನ್ನು ನಿರೂಪಿಸುತ್ತಲೇ ಕಾಲ್ಪನಿಕವಾದದ್ದೋ ಪರಲೋಕದ್ದೋ ಒಂದು ಅಮೂರ್ತ ಸನ್ನಿವೇಶ ಅಥವಾ ವಿವರಗಳ ವಿನ್ಯಾಸ ಬೆಸೆದುಕೊಂಡುಬಿಡುತ್ತದೆ. ಮಾರ್ಕ್ವೆಸ್‌ನ ಕಾಳಜಿಗಳ ಸಂವಹನಕ್ಕೆ, ಆಶಯಗಳ ಮೂರ್ತೀಕರಣಕ್ಕೆ ಇಂತಹ ಶೈಲಿ ತೀರಾ ಅನಿವಾರ್ಯವಾಗಿದೆ. ಗಟ್ಟಿಯಾದ, ಸೂಕ್ಷ್ಮವಾದ 'ನಿಜ'ವನ್ನು ಅದರ ಎಲ್ಲ ಸಂಕೀರ್ಣತೆಗಳೊಂದಿಗೆ ಅಭಿವ್ಯಕ್ತಿಸಬೇಕಾದಾಗ ಪಾರಂಪಾರಿಕವಾಗಿ ಒದಗಿಬಂದ ಎಲ್ಲೆಗಳನ್ನು ಮೀಟಿ ಜಿಗಿಯಲೇಬೇಕಾಗುತ್ತದೆ. ಸ್ವಲ್ಪವೂ ಕೃತಕತೆಗೆ ಎಡೆಮಾಡಿಕೊಡದಂತೆ, ಕಾದಂಬರಿಯ ನಂಬಲರ್ಹತೆಯನ್ನು ಕೆಡಿಸದಂತೆ ಇದನ್ನು ಮಾರ್ಕ್ವೆಸ್ ನಿರ್ವಹಿಸುತ್ತಾನೆ.ಎರಡು ಸನ್ನಿವೇಶಗಳನ್ನು ನಿದರ್ಶನಕ್ಕಾಗಿ ಗಮನಿಸಬಹುದು. ಜೋಸ್ ಅರ್ಕಾಡಿಯೊ ತನ್ನ ಮನೆಯ ಮಲಗುವ ಕೋಣೆಯಲ್ಲಿ ಗುಂಡೇಟಿನಿಂದ ಸಾಯುತ್ತಾನೆ. ಇವನ ರಕ್ತ ಬಲ ಕಿವಿಯಿಂದ ಪ್ರಾರಂಭವಾಗಿ, ಕೋಣೆಯ ಬಾಗಿಲಿನ ಕೆಳಗಿಂದ ಹರಿದು, ಮನೆಬಿಟ್ಟು, ರಸ್ತೆಗಳ ಏರು ತಗ್ಗುಗಳಲ್ಲಿ ಹರಿದು, ತಿರುವುಗಳನ್ನು ನಿಭಾಯಿಸಿ, ತಂದೆಯ ಮನೆಗೆ ಬಂದು, ಮುಚ್ಚಿದ ಬಾಗಿಲ ಕೆಳಗೆ ಹರಿದು, ಕುರ್ಚಿ ಮೇಜುಗಳನ್ನು ದಾಟಿ, ಯಾವೊಂದು ವಸ್ತುವನ್ನೂ ಮಲಿನಗೊಳಿಸದೆ, ತಾಯಿ ಬ್ರೆಡ್ ಮಾಡುತ್ತಿರುವ ಅಡುಗೆಕೋಣೆಗೆ ಬಂದು ನಿಲ್ಲುತ್ತದೆ. ಈ ಅದ್ಭುತ–ರಮ್ಯ ವಿವರಣೆ ತಾಯಿ–ಮಗನ ಸಂಬಂಧವನ್ನು ತೀವ್ರವಾಗಿ ಧ್ವನಿಸುತ್ತದೆ. ಒಂದು ಮಧ್ಯಾಹ್ನ ಜೋಸ್ ಅರ್ಕಾಡಿಯೊ ಬುಯೆಂಡಿಯಾ ಕಟ್ಟಿದ ಮನೆಯ ಪಕ್ಕದ ತೋಟದಲ್ಲಿ ಹೆಂಗಸರು ಮಲಗಲು ಹಾಸುವ ಬಟ್ಟೆಗಳನ್ನು ಮಡಿಸುತ್ತಿದ್ದಾಗ, ಮಂದ ಮಾರುತ ಬೀಸುತ್ತದೆ. ಅಮರಾಂತಳ ಕಣ್ಣಿಗೆ

ಮಂಕಾಗಿ ಕಾಣುವ ಸುಂದರಿ ರೆಮೆಡಿಯೊಸ್ ತಾನು ಎಂದಿಗಿಂತ ಸಂತೋಷದಿಂದ ಇದ್ದೇನೆ ಎನ್ನುತ್ತಾಳೆ. ಅಮರಾಂತ ಮತ್ತು ಫರ್ನಂದಾ ಇಬ್ಬರಲ್ಲೂ ಮುಂದನೂರುತ ವಿಚಿತ್ರವಾದ ಅನ ಭವಗಳನ್ನು ಉಂಟುಮಾಡುತ್ತಿರುವಾಗಲೇ ಸುಂದರಿ ರೆಮೆಡಿಯೊಸ್ ನಿಧಾನಕ್ಕೆ ಮೇಲೇರುತ್ತ ಸ್ವರ್ಗದ ಕಡೆ ಹಾರುತ್ತಾಳೆ. ಈ ಸ್ವರ್ಗಾರೋಹಣ ದೃಶ್ಯ ಇವಳ ಸರಳ, ಮುಗ್ಧ, ಸತ್ಯ, ಪರದೆ ಇಲ್ಲದ ಪಾರದರ್ಶಕ ವ್ಯಕ್ತಿತ್ವವನ್ನೂ ಮಕಾಂಡೊ ಮತ್ತು ಮನೆಯ ಜಂಜಾಟಗಳಿಂದ ದೂರವಾಗಿಬಿಡಬೇಕೆಂಬ ಇವಳ ಸುಪ್ತ ಆಕಾಂಕ್ಷೆ ಗಳನ್ನು ಅನನ್ಯವಾಗಿ ಕಟ್ಟಿಕೊಡುತ್ತದೆ. (ಈ ಎರಡು ಸನ್ನಿವೇಶಗಳಂತೆಯೇ ಇನ್ನೂ ಹಲವಾರು ಈ ಕಾದಂಬರಿಯು ಶಯ್ಯೆಯಲ್ಲಿ ಮೂಡಿವೆ: ನಾಲ್ಕು ವರ್ಷ ಒಂದೇಸಮನೆ ಸುರಿವ ಮಳೆ, ಜೋಸ್ ಅರ್ಕಾಡಿಯೊ ಬುಯೆಂಡಿಯಾ ಅಸು ನೀಗಿದಾಗ ಆಗುವ ಪುಷ್ಪವೃಷ್ಟಿ, ಊರಿನ ಎಲ್ಲರಿಗೂ ನಿದ್ರಾರಾಹಿತ್ಯ ಮತ್ತು ಮರೆವಿನ ರೋಗದ ಆಘಾತ, ಮೆಲ್‌ಕ್ವಿಯಾಡಿಸ್‌ನ ರೂಮಿಗೆ ಧೂಳುಕಸ ಮುಸುಕದಿರುವುದು, ಈ ರೂಮಿನಲ್ಲಿ ಕೂತ ಜೋಸ್ ಅರ್ಕಾಡಿಯೊ ಸೆಗುಂಡೊ ಸೈನ್ಯಾಧಿಕಾರಿಯ ಕಣ್ಣಿಗೆ ಅದೃಶ್ಯನಾಗಿ ಬಿಡುವುದು, ಉರ್ಸುಲಾ ನೆಲದಲ್ಲಿ ಹೂತಿದ್ದ ಚಿನ್ನದ ನಾಣ್ಯಗಳು ತಾವೇತಾವಾಗಿ ಮೇಲೆದ್ದು ಪಾದ್ರಿಯಾಗಲು ತರಬೇತು ಪಡೆದಿದ್ದ ಜೋಸ್ ಅರ್ಕಾಡಿಯೊ ಕಣ್ಣಿಗೆ ಗೋಚರವಾಗುವುದು, ಪ್ರುಡೆನ್‌ಷಿಯೊ ಅಗ್ವಿಲಾರ್—ಮೆಲ್‌ಕ್ವಿಯಾಡಿಸ್—ಜೋಸ್ ಅರ್ಕಾಡಿಯೊ ಬುಯೆಂಡಿಯಾ ಇವರ ಭೂತಗಳು ಪ್ರತ್ಯಕ್ಷವಾಗುವುದು ಇತ್ಯಾದಿ ಇತ್ಯಾದಿ) ಹೀಗೆ ವಾಸ್ತವದ ದಟ್ಟ ಮೂರ್ತ ವಿವರಗಳನ್ನು ಕಾವ್ಯಾತ್ಮಕ ತೀವ್ರತೆಯುಳ್ಳ ಫ್ಯಾಂಟಸಿ ಅಪ್ಪಿಕೊಂಡು ಐಂದ್ರಜಾಲಿಕ ವಾಸ್ತವತೆಯನ್ನು (magical realism) ಹುಟ್ಟಿಹಾಕುತ್ತದೆ. ಈ ಐಂದ್ರಜಾಲಿಕ ವಾಸ್ತವ ಶೈಲಿಯನ್ನು 'ಒಂದು ನೂರು ವರ್ಷ ಗಳ ಏಕಾಂತ'ದ ಉದ್ದಕ್ಕೂ ಮಾರ್ಕ್ವೆಸ್ ನಿರ್ಭಿಡೆಯಿಂದ ಬಳಸುತ್ತ ರಮ್ಯತೆ, ಗಾಂಭೀರ್ಯ, ಹಾಸ್ಯ, ದುಃಖ ಇತ್ಯಾದಿಗಳನ್ನು ಒಟ್ಟೊಟ್ಟಾಗಿ ಸಾಧಿಸುತ್ತಾನೆ. ಮಕಾಂಡೊನಲ್ಲಿ, ಮುಖ್ಯವಾಗಿ ಬುಯೆಂಡಿಯಾ ಕುಲದಲ್ಲಿ ಘಟಿಸುವ ಹುಟ್ಟು, ಸಾವು, ಮೂಢನಂಬಿಕೆ, ವೈಜ್ಞಾನಿಕ ಸಂಶೋಧನೆ, ನಿಗೂಢತೆ, ಜ್ಞಾನ, ಆನಂದ, ದುಃಖ, ಜಗಳ, ಗುಮಾನಿ, ಯುದ್ಧ, ಹಿಂಸೆ, ಪ್ರೀತಿ, ಕೊಲೆ, ಶೋಷಣೆ, ಹಣ, ಹಾದರ, ಕಾಮ, ಸೂಳೆಗಾರಿಕೆ, ಸಂಗೀತ, ನೃತ್ಯ, ಸ್ವಗೋತ್ರ ಸಂಬಂಧ (incest), ಮ್ಯಾಜಿಕ್ ಇತ್ಯಾದಿಗಳ ಸ್ವರೂಪವನ್ನು ವಿಶಾಲವಾದ ಭಿತ್ತಿಯಲ್ಲಿ ಪ್ರಕಟಪಡಿಸಲು ಐಂದ್ರಜಾಲಿಕ ವಾಸ್ತವಶೈಲಿ ಸಮರ್ಥವಾಗುತ್ತದೆ. ಹೀಗಾಗಿ ಅಸಹಜತೆ, ಕೃತಕತೆ, ನಂಬಲನರ್ಹತೆ ಇವುಗಳು 'ಒಂದು ನೂರು ವರ್ಷಗಳ ಏಕಾಂತ'ವನ್ನು ಕಿಂಚಿತ್ತೂ ಬಾಧಿಸುವುದಿಲ್ಲ; ಬದಲಾಗಿ ಮಾರ್ಕ್ವೆಸ್‌ನ ಕಳಕಳಿಗಳಿಗಾಗಿ, ಎತ್ತಿ ಹಿಡಿಯುವ ಮೌಲ್ಯಗಳಿಗೆ, ಸತ್ಯದ ಸಾಕ್ಷಾತ್ಕಾರಕ್ಕಾಗಿ ಐಂದ್ರಜಾಲಿಕ ವಾಸ್ತವ ಶೈಲಿ ದುಡಿಯುತ್ತದೆ. ಜೊತೆಗೆ ಮಾರ್ಕ್ವೆಸ್‌ನ ಭಾಷೆ (ಸ್ಪ್ಯಾನಿಷ್‌ನಿಂದ ಇಂಗ್ಲಿಷ್‌ಗೆ ಭಾಷಾಂತರವಾಗಿದ್ದೂ ಸಹ) ಪಾರದರ್ಶಕವಾದ, ಸಂವಹನಿಸುತ್ತಲೇ ಕ್ರಿಯಾತ್ಮಕವಾದ, ಮೂರ್ತತೆ ಅಮೂರ್ತತೆಗಳನ್ನು ಒಟ್ಟಾಗಿ ಬೆಸೆದು ಏಕಕಾಲಕ್ಕೆ ಅಭಿವ್ಯಕ್ತಿಸಲು ಸಮರ್ಥವಾದ ಧ್ವನಿಶಕ್ತಿಯನ್ನು ಪಡೆದ ಭಾಷೆ.

ಆಗೆದಷ್ಟೂ ಆಳವಾಗುವ, ಹೆಕ್ಕಿದಷ್ಟೂ ಸಮೃದ್ಧವಾಗುವ ಆಧುನಿಕ ಕ್ಲಾಸಿಕ್ 'ಒಂದು ನೂರು ವರ್ಷಗಳ ಏಕಾಂತ'.

ಮಾರ್ಕ್ವೆಸ್‌ನ "ಮೊದಲೇ ಹೇಳಿ ಮಾಡಿದ ಒಂದು ಕೊಲೆಯ ಚರಿತ್ರೆ"—ಒಂದು ಪರಿಚಯ

ಕೆ. ಪಿ. ವಾಸುದೇವನ್

ಲ್ಯಾಟಿನ್ ಅಮೆರಿಕಾದ ನವ್ಯ ಬರಹಗಾರರು ಮನೋವೈಜ್ಞಾನಿಕ ವಿಶ್ಲೇಷಣೆಯಲ್ಲಿ ಹೆಚ್ಚು ಸಮಯ ಕಳೆದಿಲ್ಲ. ನವ್ಯ ಕಾದಂಬರಿಯ ಬೇರುಗಳು ಸಮಾಜದಲ್ಲಿ ಮತ್ತು ರಾಷ್ಟ್ರೀಯ ಸಮಸ್ಯೆಗಳಲ್ಲಿ ಕಂಡುಬರುತ್ತವೆ. ಇವರು ಕ್ರಮೇಣ ವಾಸ್ತವತೆಯ ತಂತ್ರವನ್ನು ಕೈಬಿಟ್ಟು ಸಾಮಾಜಿಕ ಮತ್ತು ಮೆಟಫಿಸಿಕಲ್ ಫ್ಯಾಂಟಸಿಗಳ ಮೂಲಕ ತಮ್ಮ ಸುತ್ತಮುತ್ತನ್ನೂ ವಿಶ್ಲೇಷಿಸಲು ಯತ್ನಿಸುವುದನ್ನು ನಾವು ಕಾಣಬಹುದಾಗಿದೆ. ಈ ಒಂದು ಪರಂಪರೆಯ ಶ್ರೇಷ್ಠ ಬರಹಗಾರರಲ್ಲಿ ಕಾರ್ಪೆಂಟಿಯರ್, ಅಸ್ಟುರಿಯಾಸ್, ಜೋರ್ಜ್ ಬೋರ್ಜಸ್ ಮುಂತಾದವರನ್ನು ಹೆಸರಿಸಬಹುದಾಗಿದೆ.

ಸ್ಪೇನಿಷ್ ಅಮೆರಿಕಾದ ಈ ಪರಂಪರೆಯಲ್ಲಿ ಕೊಲಂಬಿಯಾದ ಮಾರ್ಕ್ವೆಸ್ ಬಹಳ ಪ್ರಮುಖ ಬರಹಗಾರ. ಕೊಲಂಬಿಯಾ ಅನೇಕ ವರ್ಷಗಳ ಕಾಲ, ಯಾದವೀ ಕಲಹಗಳಿಂದ ನೊಂದು ನರಳುತ್ತಿತ್ತು. ಕೊಲಂಬಿಯಾದ ಬರಹಗಾರರು ಹೀಗಾಗಿ ಹಿಂಸೆಯ ಪ್ರತಿರೂಪಗಳನ್ನು ತಮ್ಮ ಬರಹಗಳಲ್ಲಿ ಮೂಡಿಸಲು ಯತ್ನಿಸುತ್ತಿದ್ದರು. ಆದರೆ ಮಾರ್ಕ್ವೆಸ್ ಕೊಲಂಬಿಯಾದ ಬದುಕಿನ ವಿಶಿಷ್ಟತೆಗಳನ್ನು ಮೈಗೂಡಿಸಿಕೊಂಡು ಕಾದಂಬರಿಗಳನ್ನು ಬರೆಯಲು ಆರಂಭಿಸಿದ. ಇವನ ಪ್ರಖ್ಯಾತವಾದ "ಒಂದು ನೂರು ವರ್ಷಗಳ ಏಕಾಂತ" ಕಾದಂಬರಿಯಲ್ಲಿ ಕಂಡುಬರುವ ಅನೇಕ ಅಂಶಗಳು, ಇವನ ಮೊದಲ ಕಾದಂಬರಿಯಲ್ಲೇ ಕಾಣಿಸುತ್ತದೆ. ಈ ಕಾದಂಬರಿ "ಜಳ್ಳು" ಅವನ ಮುಂದಿನ ಅನೇಕ ಕಾದಂಬರಿಗಳಲ್ಲಿ ಕಂಡುಬರುವ ಅಂಶಗಳನ್ನು ಒಳಗೊಂಡಿದೆ. ಅವನ "ನೂರು ವರ್ಷಗಳ ಏಕಾಂತ"ದ ಮೊದಲ ಟಿಪ್ಪಣಿಯಾಗಿ ಈ ಕಾದಂಬರಿ

ರುಗೂಡಿದೆ. ಒಂದು ಮೂಲೆಯಲೆಲ್ಲೋ ಇರುವ ಊರು, ನಾಗರೀಕತೆಯಿಂದ ಪ್ರತ್ಯೇಕಿಸ ಲ್ಪಟ್ಟಿರುವುದು, ರಾಜಕೀಯ ವೈಷಮ್ಯಗಳು, ಅವುಗಳ ಗಾಯಗಳು ಸಾವು ಮತ್ತು ಮದುವೆಗಳು ಅಳಿಸದಷ್ಟು ಆಳ, ಹೊರಗಿನವನೊಬ್ಬ ಆ ಊರಿನ ಅನುಮಾನ ಮತ್ತು ಸಂಶಯಗಳಿಗೆ ತುತ್ತಾಗುವುದು ಇತ್ಯಾದಿ. ಇಲ್ಲಿ ಕೂಡ ಊರಿನಿಂದ ದೊರಕಲಾಗದ ಮಾನವೀಯತೆ ಮತ್ತು ಗೌರವಗಳನ್ನು ಕೆಲವು ಪಾತ್ರಗಳು ತಮ್ಮ ಒಬ್ಬಂಟಿತನದಲ್ಲಿ ಸಾಧಿಸಲು ಯತ್ನಿಸುತ್ತವೆ. ಇಡೀ ಊರಿನ ವಿರೋಧವನ್ನು ಕಟ್ಟಿಕೊಂಡು ಕೆಲವು ಪಾತ್ರಗಳು ಸಾಧಿಸುವ ವೈಯಕ್ತಿಕ ಗೌರವ, ಅವನ ಅನೇಕ ಕಾದಂಬರಿಗಳಲ್ಲಿ ಪುನರಾವೃತ್ತಿಗೊಳ್ಳುತ್ತದೆ. "ಒಬ್ಬ ಶ್ರೇಷ್ಠ ತಾಯಿಯ ಶವಯಾತ್ರೆ"ಯಲ್ಲಿ ಕೂಡ ಇದೇ ಅಂಶವನ್ನು ನಾವು ಕಾಣಬಹುದು. ಊರಿನ ಸಾಮಾಜಿಕ ಪ್ರತಿರೋಧಗಳ ನಡುವೆ ಅಗಣ್ಯ ವ್ಯಕ್ತಿಗಳು ತಲೆ ಎತ್ತಿ ನಿಲ್ಲುವ ಥೀಮ್ ಅನೇಕ ಕಾದಂಬರಿಗಳಲ್ಲಿ ಪುನರ್ ಉದ್ಧಾರಗೊಳ್ಳುತ್ತದೆ. "ಕರ್ನಲರಿಗೆ ಯಾರೂ ಪತ್ರಬರೆಯುವುದಿಲ್ಲ" ಕಿರುಕಾದಂಬರಿ ಯಲ್ಲೂ, ಹೊರಗಿನಿಂದ ಹೇರಲ್ಪಟ್ಟ ಒಂಟಿತನದ ಥೀಮ್‌ಅನ್ನು ಪುನಃ ನಾವು ಕಾಣಬಹುದು.

"ಒಂದು ನೂರು ವರ್ಷಗಳ ಏಕಾಂತ"ದಲ್ಲಿ ಸ್ಪೇನಿಷ್ ಅಮೆರಿಕನ್ ಪರಿಸರವನ್ನು ಅಭಿವ್ಯಕ್ತಿಸಲು ವಾಸ್ತವ ಮಾರ್ಗ ಏಕೆ ವಿಫಲವಾಗುತ್ತದೆ ಎಂಬುದು ನಿರೂಪಣೆಯಾಗಿದೆ. ಈ ಕಾದಂಬರಿಯಲ್ಲಿ ಅಸಹಜ ಅವಾಸ್ತವ ಘಟನೆಗಳು ಅದರ ವಿವರಗಳಲ್ಲಿ ಮೈಗೂಡು ವುದರಿಂದ, ಒಂದು ರೀತಿಯ ಅದ್ಭುತ ಲೋಕದ ಅನುಭವಗಳಾಗೇ (marvel) ಕಾಣುತ್ತವೆ. ವಿಮರ್ಶಕ ಒಬ್ಬ ಅಭಿಪ್ರಾಯಪಡುವ ಹಾಗೆ "ಮಾನವನ ಮೇಲೆ ಯಾವಾಗಲೂ ನಿಸರ್ಗ ವಿಜಯ ಸಾಧಿಸುವ ಈ ಖಂಡದಲ್ಲಿ ಅದ್ಭುತಗಳಿಗೆ ಸ್ಥಾನ ಇರಲೇಬೇಕು.

ಸ್ಪೇನಿಷ್ ಅಮೆರಿಕಾದ ಕಾದಂಬರಿಗಳಲ್ಲಿ ಅದರಲ್ಲೂ ಮಾರ್ಕ್ವೆಸ್‌ನ ಕಾದಂಬರಿ ಗಳಲ್ಲಿ ಮತ್ತೊಂದು ಮುಖ್ಯ ಅಂಶ ಎಂದರೆ ಯೂರೋಪಿನ ಮಾದರಿಗಳನ್ನು ಇವರು ನಿರಾಕರಿಸಿದ್ದು. ಇವರು ಯೂರೋಪಿನ ಸಾಹಿತ್ಯಿಕ, ಮನೋವೈಜ್ಞಾನಿಕ ಮತ್ತು ಪಾರ್ಲಿಮೆಂಟರಿ ಮಾದರಿಗಳನ್ನು ತಿರಸ್ಕರಿಸಿದರೂ, ರಾಜಕೀಯ ವೈಚಾರಿಕತೆಯನ್ನೇ ತಿರಸ್ಕರಿಸಲಿಲ್ಲ. ಈ ಕಾದಂಬರಿಗಳು ತಮ್ಮದೇ ಮೂಲ ಮತ್ತು ಐತಿಹಾಸಿಕ ಹಾಗೂ ರಾಜಕೀಯ ಪ್ರಶ್ನೆಗಳಿಗೆ ಎಂದೂ ಮುಖ ತಿರುಗಿಸುವುದಿಲ್ಲ. ಈ ಕಾದಂಬರಿಗಳು ತಮ್ಮ ಭೂತದ ಬಗ್ಗೆ, ಸಾಂಸ್ಕೃತಿಕ ಮಿಥ್‌ಗಳ ಬಗ್ಗೆ ವಿಶ್ಲೇಷಣೆಗಳನ್ನು ಒಳಗೊಳ್ಳುತ್ತ ಸಾಮಾಜಿಕ ಬದುಕನ್ನು ಪರಿಭಾವಿಸಿ ನೋಡುತ್ತವೆ. ಆದರೆ ಯುರೋಪಿನ ಬರಹಗಾರರು ರಾಜಕೀಯ ಎಂದು ಅರ್ಥಮಾಡಿಕೊಳ್ಳುವ ರೀತಿಯೇ ಬೇರೆ. ಈ ಬರಹಗಾರರು ರಾಜಕೀಯ ಎನ್ನುವುದೇ ಬೇರೆ ಆಗಿರುತ್ತದೆ. ಮಾರ್ಕ್ವೆಸ್ ಆಗಾಗ ಹೇಳಿರುವಂತೆ, ಬರಹಗಾರನ ಆಗತ್ಯವೆಂದರೆ ಸಾಮಾಜಿಕ ಸಂದರ್ಭವನ್ನು, ಸಾಂಸ್ಕೃತಿಕ ಸಂಕ್ರಮಣವನ್ನು ಮೀರುವುದೇ ಆಗಿರುತ್ತದೆ ಎಂಬ ನಂಬಿಕೆ ಈ ಎಲ್ಲ ಬರಹಗಾರರಲ್ಲಿ ಇದೆ. ಆದರೆ ಅವರೇ ಹೇಳುವಂತೆ ಈ ಸಾಂಸ್ಕೃತಿಕ ಸಂದರ್ಭ ಅವರಿಗೆ ಅಂಟಿಕೊಂಡುಬಿಟ್ಟದೆ ಮತ್ತು ಅವರ ಕೆಲಸ ಸಂಸ್ಕೃತಿಯನ್ನು ಮೀರುವುದಕ್ಕಿಂತಲೂ, ಅದನ್ನು ಬದಲಾಯಿಸುವುದೇ ಆಗಿದೆ.

ಹೀಗಾಗಿ ಲ್ಯಾಟಿನ್ ಅಮೆರಿಕನ್ ಕಾದಂಬರಿಗಳು ರಾಜಕೀಯ ಚರ್ಚೆಗಳೂ ಅಲ್ಲ ಅಥವಾ ಗೋಳಾಟ, ರಾಜಕೀಯ ಉದ್ಗಾರಗಳೂ ಅಲ್ಲ. ಬದಲಾಗಿ ವಾಸ್ತವತೆ ಒಂದು ಅಗತ್ಯ ಎಂಬ ವಿಚಾರವನ್ನು ಬರಹಗಾರ ಮೂಡಿಸಬೇಕಾಗುತ್ತದೆ. ಈ ಅಗತ್ಯದ ವಿರುದ್ಧ ಬದಲಾವಣೆಯನ್ನು ಬಯಸುವ ವ್ಯಕ್ತಿಗಳು ತನ್ನ ಹಂಬಲ ಮತ್ತು ವಿಚಾರಗಳ ಜೊತೆ ನಿಲ್ಲಬೇಕಾಗುತ್ತದೆ. ಫ್ರೆಂಚ್ ಕಾದಂಬರಿಕಾರ ಬಾಲ್ಜಾಕ್ ಹೇಳಿರುವಂತೆ ಕಾದಂಬರಿ, ಒಂದು ದೇಶದ ಚರಿತ್ರೆ. ಆದರೆ ಅದು ಆಯಾ ಲೇಖಕ ಕಂಡ ಖಾಸಗಿ ಯಾದ ಇತಿಹಾಸ ಎನ್ನುವ ಮಾತು ಇವರ ಕಾದಂಬರಿಗಳಿಗೆ ಅನ್ವಯಿಸುತ್ತದೆ. ಮತ್ತೊಬ್ಬ ಲ್ಯಾಟಿನ್ ಅಮೆರಿಕನ್ ಬರಹಗಾರ ಮೆರಿಯೊಲೋಸ್ ಈ ಮಾತುಗಳು ತನ್ನ ಕಾದಂಬರಿಗಳಿಗೆ, ಬಾಲ್ಜಾಕನ ಕಾದಂಬರಿಗಳಿಗಿಂತ ಹೆಚ್ಚು ಅನ್ವಯಿಸುತ್ತದೆ ಎನ್ನುತ್ತಾನೆ.

ಈ ಎಲ್ಲ ಹಿನ್ನಲೆಯಲ್ಲೇ ಮಾರ್ಕ್ವೆಸ್‌ನ ಕಾದಂಬರಿಗಳಲ್ಲಿ ಬಹುಶಃ ಬಹಳ ಕಡಿಮೆ ರಾಜಕೀಯವಾದದ್ದು ಎನ್ನಬಹುದಾದ "....ಒಂದು ಮರಣದ ಚರಿತ್ರೆ"ಯನ್ನು ನಾವು ಈಗ ಗಮನಿಸಬಹುದಾಗಿದೆ.

೨

"...ಒಂದು ಮರಣದ ಚರಿತ್ರೆ"ಯ ಕಥಾ ಸಾರಾಂಶ ಹೀಗಿದೆ. ಸಾಂಟಿಯಾಗೊ ನಾಸರ್‌ನನ್ನು ಒಂದು ದಿನ ಬೆಳಗ್ಗೆ ಕೊಲ್ಲಲಾಯಿತು. ಈ ಕೊಲೆಯನ್ನು ಮಾಡಿದವರು, ಅವಳಿ ಜವಳಿಗಳಾದ ಪೆಡ್ರೊ ಮತ್ತು ಪ್ಯಾಬ್ಲೊ ವಿಕೋರಿಯೊ; ಅವರು ಈ ಕೊಲೆ ಮಾಡುವುದಕ್ಕೆ ಅನೇಕರಿಗೆ ಹೇಳುತ್ತಾರೆ. ಇಡೀ ಊರಿಗೇ ಈ ಕೊಲೆಯ ಸಂಗತಿ ತಿಳಿದಿರುತ್ತದೆ. ಆದರೂ ಈ ಕೊಲೆ ನಡೆಯುತ್ತದೆ. ಇಡೀ ಊರೇ ಈ ಕೊಲೆಯಲ್ಲಿ ಭಾಗಿಗಳಾಗುತ್ತಾರೆ. ಹೆಸರಿಲ್ಲದ ನೆರಳಿನಂಥ ಒಬ್ಬ ನಿರೂಪಕ ಅನೇಕ ವರ್ಷಗಳನಂತರ ಈ ಕೊಲೆ ನಡೆದದ್ದು ಏಕೆ ಮತ್ತು ಹೇಗೇ ಎಂಬುದನ್ನು ಪತ್ತೆ ಹಚ್ಚುತ್ತ ನಮಗೆ ತಿಳಿಸುತ್ತಾನೆ. ಅವನು ನಮ್ಮ ಮುಂದೆ ಇಡುವ ಉತ್ತರಗಳು ಅನಿರ್ದಿಷ್ಟ. ಮತ್ತು ಅಸ್ಪಷ್ಟವಾದ ಒಂದು ಚಿತ್ರವನ್ನು ಮೂಡಿಸುತ್ತದೆ. ಗೊಂದಲಗಳು, ಹುಚ್ಚು ಹುಚ್ಚು ನಡವಳಿಕೆಗಳ ಮಧ್ಯೆ ನಮ್ಮ ಕಣ್ಣು ಮುಂದೆ ಒಂದು ದುರಂತದ ಚಿತ್ರ ಮೂಡುತ್ತದೆ. ಆದರೆ ನಿರೂಪಕನ ವಿಧಾನದಲ್ಲಿ ಎಲ್ಲೂ ದುರಂತವನ್ನು ಬೇಡುವ ನಾಟಕೀಯತೆ ಇಲ್ಲ. ಬದಲಾಗಿ ಉದ್ದಕ್ಕೂ ಹಲವು ಘಟನೆಗಳು ದುರಂತದಿಂದ ದೂರ ನಿಂತ ನಮಗೆ ತಮಾಷೆ ಯಾಗೇ ಕಾಣಿಸುತ್ತದೆ. ಆದರೆ ಕಾದಂಬರಿಕಾರ ದುರಂತದಿಂದ ದೂರ ನಿಂತ ನಮ್ಮನ್ನು ಊರಿನವರ ಜೊತೆ ಒಂದು ಮಾಡಿ, ಈ ಕೊಲೆಗೆ ಪ್ರೇಕ್ಷಕರನ್ನಾಗಿ ಮಾಡುತ್ತಾನೆ. ಜೊತೆಗೇ ಕೊಲೆಯ ಭಾಗಿಗಳೂ ಆಗಿಬಿಡುತ್ತೇವೆ.

ಈ ಕೊಲೆ ನಡೆದದ್ದು ಹೀಗೆ: ಬಯಾರ್ಡೋ ಸಾನ್‌ರೊಮಾನ್, ಆಗಸ್ಟ್‌ನಲ್ಲಿ ಒಂದು ದಿನ ಈ ಊರಿಗೆ ಹಡಗಿನಿಂದ ಬಂದು ಇಳಿಯುತ್ತಾನೆ. ಇವನು ರೈಲ್ವೆ ಇಂಜಿನಿಯರ್ ಎಂದು ಹೇಳುತ್ತಾನೆ. ತಾನೇ ಟೆಲಿಗ್ರಾಫ್ ಯಂತ್ರವನ್ನು ಉಪಯೋಗಿಸು ತ್ತಾನೆ. ಜಗಳ ಬಿಡಿಸುತ್ತಾನೆ. ರಾತ್ರಿ ಇಡೀ ಕುಡಿದು ಕುಪ್ಪಳಿಸುವ ಜನಗಳ ಜೊತೆಗಾರ

ನಾಗುತ್ತಾನೆ. ಇಸ್ಪೀಟಿನಲ್ಲಿ ಮೋಸ ಮಾಡುವವರನ್ನು ವಿರೋಧಿಸುತ್ತಾನೆ. ಪರಿಣತ ಜೂಜುಗಾರರ ಜೊತೆ ಸ್ಪರ್ಧೆಗೆ ಇಳಿದು ಅವರನ್ನು ಸೋಲಿಸುತ್ತಾನೆ. ಬಹಳ ಶ್ರೀಮಂತ ಕೂಡ. ಎಲ್ಲವನ್ನು ಬಹಳ ಪರಿಣತಿಯಿಂದ ಮಾಡುವ ಇವನನ್ನು ಜನ ಕ್ರಮೇಣ ಇಷ್ಟ ಪಡುತ್ತಾರೆ.

ಏಂಜಲೋ ವಿಕೆರಿಯೋ ಎಂಬ ಹುಡುಗಿಯನ್ನು ಇವನು ಅಕ್ಟೋಬರಿನಲ್ಲಿ ನಡೆದ ಒಂದು ಧರ್ಮಾರ್ಥದ ವಸ್ತುಪ್ರದರ್ಶನದಲ್ಲಿ ಕಾಣುತ್ತಾನೆ. ಅಲ್ಲಿ ಏಂಜಲೊ ವಿಕೆರಿಯೋಳ ಸ್ಟಾಲಿನಲ್ಲಿ ಇದ್ದ "ಮ್ಯೂಸಿಕ್‌ಬಾಕ್ಸ್" ಒಂದನ್ನು ಲಾಟರಿಯಲ್ಲಿ ಗೆಲ್ಲುತ್ತಾನೆ. ಗೆದ್ದದ್ದನ್ನು ಅವಳಿಗೇ ಪಾರಿತೋಷಕವಾಗಿ ಕಳುಹಿಸಿಕೊಡುತ್ತಾನೆ. ಅವಳ ಅಣ್ಣಂದಿರಾದ ಪೆಡ್ರೊ ಮತ್ತು ಪ್ಯಾಬೆಲ್ಲ ಆ ಸಂಗೀತದ ಪೆಟ್ಟಿಗೆಯನ್ನು ಅವನಿಗೆ ವಾಪಸ್ಸುಮಾಡಲು ಅವನ ಬಳಿ ಹೋಗುತ್ತಾರೆ. ಹೋದವರು ಮರುದಿನ ಬೆಳಗ್ಗೆಯ ವರೆಗೆ ವಾಪಸ್ಸಾಗುವುದಿಲ್ಲ. ಆದರೆ ಮರುದಿನ ಬೆಳಗಿನಜಾವ ಕಂಠಪೂರ್ತಿ ಕುಡಿದು ತೂರಾಡುತ್ತ ಸಂಗೀತದ ಪೆಟ್ಟಿಗೆಯನ್ನು ಹೊತ್ತುಕೊಂಡು ವಾಪಸ್ಸು ಬರುತ್ತಾರೆ. ಅವರ ಜೊತೆ ಬಯಾರ್ಡೋ ಸಾನ್ ರೋಮಾನ್ ಕೂಡ ಬಂದಿರುತ್ತಾನೆ, ಮೇಜುವಾನಿಯನ್ನು ಅವರ ಮನೆಯಲ್ಲಿ ಮುಂದುವರಿಸಲು. ಏಂಜಲೊ ವಿಕಾರಿಯೊ ಬಡವರ ಮನೆಯ ಹುಡುಗಿ.

ಅವಳು ನಾಲ್ಕು ಹೆಣ್ಣುಮಕ್ಕಳ ಪೈಕಿ ಕೊನೆಯವಳು ಮತ್ತು ಎಲ್ಲರಿಗಿಂತಲೂ ಸುಂದರಿ. ಅವಳಲ್ಲಿ ಮೊದಲಿನಿಂದಲೂ ಒಂದು ರೀತಿಯ ಉತ್ಸಾಹವೇ ಕಾಣಿಸದೆ ಇದ್ದುದರಿಂದ, ರೊಮಾನ್ ಅವಳನ್ನು ಮದುವೆಯಾಗುತ್ತೇನೆ ಎಂದಾಗ, ಅನೇಕ ಜನ ಪರಊರಿನವನ ಮೂರ್ಖತನ ಅದು ಎಂದುಕೊಂಡರು. ಆದರೆ ಅವಳ ಕುಟುಂಬದವರು ಈ ಮದುವೆಯ ಹಂಬಲವನ್ನು ಗಂಭೀರವಾಗಿ ಪರಿಗಣಿಸಿದರು. ರೊಮಾನ್, ಜನರಲ್ ಪೆಟ್ರೋನಿಯೋ ರೊಮಾನ್‌ನ ಮಗ ಎಂದು ತಿಳಿದು ಬರುತ್ತದೆ. ಅವನ ತಂದೆ, ತಾಯಿ ಮತ್ತು ಆಗತಾನೆ ಅರಳಿದ ಇಬ್ಬರು ಸಹೋದರಿಯರು ಬಂದಿಳಿಯುತ್ತಾರೆ. ಮದುವೆ ನಿಶ್ಚಯವಾಗುತ್ತದೆ. ಹುಡುಗಿ ಒಬ್ಬಳನ್ನು ಬಿಟ್ಟರೆ, ಇನ್ನ್ಯಾರೂ ಈ ಮದುವೆಯನ್ನು ವಿರೋಧಿಸುವುದಿಲ್ಲ. ಅವಳ ಅಕ್ಕಂದಿರು, ತಾಯಿ ಮತ್ತು ಕುಟುಂಬದ ಇತರರು ಅವಳನ್ನು ಮದುವೆಗೆ ಒಪ್ಪಿಸುತ್ತಾರೆ. ಹುಡುಗಿ ತಾನು ಅವನನ್ನು ಪ್ರೀತಿಸುವುದಿಲ್ಲ ಎಂದು ಹೇಳಿದಾಗ, ಅವಳ ತಾಯಿ "ಪ್ರೀತಿಯನ್ನು ಮದುವೆಯ ನಂತರ ರೂಢಿಸಿಕೊಳ್ಳ ಬಹುದು" ಎಂದು, ಆಕ್ಷೇಪಣೆಯನ್ನೂ ತಳ್ಳಿಹಾಕುತ್ತಾಳೆ.

ಮದುವೆಯ ಗಂಡಿನ ಹಂಬಲದಂತೆ, ನಿಶ್ಚಿತಾರ್ಥದ ನಾಲ್ಕು ತಿಂಗಳ ಒಳಗೆ ಮದುವೆ ನಡೆಯಬೇಕೆಂದು ನಿರ್ಧರಿಸಲಾಗುತ್ತದೆ. ವಿಧುರ ಕ್ಸೆಯಸ್‌ನ ಮನೆಯನ್ನು ರೊಮಾನ್ ಕೊಂಡುಕೊಂಡ ರೀತಿಯನ್ನು ಇಲ್ಲಿ ಹೇಳಬೇಕಾಗುತ್ತದೆ.

ಏಂಜಲ್, ತನ್ನ ಗಂಡನಾಗುವವನಿಗೆ ಒಮ್ಮೆ ಊರಿನಲ್ಲಿ ಎಲ್ಲ ಮನೆಗಳಿಗಿಂತಲೂ ಸುಂದರವಾದದ್ದು ಕ್ಸೆಯಸ್‌ನ ಮನೆ ಎಂದು ಹೇಳುತ್ತಾಳೆ. ಅದೇ ರಾತ್ರಿ ವಿಧುರ ಕ್ಸೆಯಸ್‌ನನ್ನು ಕ್ಲಬ್ಬಿನಲ್ಲಿ ರೊಮಾನ್ ಕಂಡು ಮನೆಯನ್ನು ಕೊಳ್ಳುವ ವಿಷಯ ಪ್ರಸ್ತಾಪಿಸುತ್ತಾನೆ. ತನ್ನ ಹೆಂಡತಿಯ ನೆನಪಾಗಿ ಉಳಿದ ಮನೆಯನ್ನು ಮಾರಲು

ಕ್ಸೈಯಸ್ ನಿರಾಕರಿಸುತ್ತಾನೆ. ಐದು ಸಾವಿರ ಪೆಸೊ ಕೊಡುವನೆಂದಾಗಲೂ, ಅಷ್ಟು ಬೆಲೆ ಬಾಳದಿದ್ದ ತನ್ನ ಮನೆಯನ್ನು ಅವನು ಮಾರುವುದಿಲ್ಲ ಎನ್ನುತ್ತಾನೆ. ಆಗ ರೊಮಾನ್, ಹತ್ತು ಸಾವಿರ ಪೆಸೊ ಹಣವನ್ನು ತಕ್ಷಣವೇ ತಂದು, ನೋಟುಗಳನ್ನು ಟೇಬಲ್ಲಿನ ಮೇಲೆ ಇಡುತ್ತಾನೆ. ಇದಾದ ಎರಡು ತಿಂಗಳ ನಂತರ ಕ್ಸೈಯಸ್ ಸತ್ತು ಹೋಗುತ್ತಾನೆ. ಡಾಕ್ಟರ್ ಇಗುರಾನ್‌ನ ಅಭಿಪ್ರಾಯದಲ್ಲಿ ಅವನು ಆರೋಗ್ಯವಂತನಾದರೂ ಅಷ್ಟು ಬೇಗ ಸಾಯಲು ಈ ಘಟನೆಯೇ ಕಾರಣವಾಗಿರುತ್ತದೆ. ಆ ಮನೆಯ ಒಳಗಿನ ಸಾಮಾನಿನ ಜೊತೆ, ಇಡೀ ಮನೆಯನ್ನು ರೊಮಾನ್ ಹೀಗೆ ಕೊಂಡುಕೊಳ್ಳುತ್ತಾನೆ.

ಏಂಜಲಾ ವಿಕೆರಿಯೋ ಕನ್ಯೆ ಅಲ್ಲ ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಏಕೆಂದರೆ ಅವಳು ಬೆಳೆದ ರೀತಿ ಹಾಗಿತ್ತು. ಅವಳ ತಾಯಿ ಅವಳನ್ನು ಬಹಳ ಶಿಸ್ತಿನಿಂದ ಬೆಳೆಸಿದ್ದಳು. ಅವಳು ತನ್ನ ತಾಯಿ ಬಳಿ ಈ ವಿಷಯ ತಿಳಿಸಬೇಕೆಂದಿದ್ದಾಗ, ಅವಳ ಗೆಳತಿಯರು ಬೇಡವೆಂದು ಒತ್ತಾಯಿಸಿದರು. ಅವಳ ಗೆಳತಿಯರು ಅವಳಿಗೆ ಮೊದಲ ರಾತ್ರಿ ನಡೆದುಕೊಳ್ಳಬೇಕಾದ ರೀತಿಯನ್ನು ಹೇಳಿಕೊಟ್ಟದ್ದಲ್ಲದೆ, "ಗಂಡಸರು ಬೆಡ್-ಶೀಟಿನ ಮೇಲೆ ಕಂಡು ಬರುವ ಸಾಕ್ಷಿಯನ್ನು ಮಾತ್ರ ನಂಬುತ್ತಾರೆ" ಎಂದು ನಂಬಿಸಿದರು. ಈಗಾಗಿ ಏಂಜಲಾ ಈ ನಂಬಿಕೆಯಲ್ಲೇ ಮದುವೆಯಾದಳು.

ರೊಮಾನ್, ತನ್ನ ಪ್ರಭಾವ ಮತ್ತು ಹಣದಿಂದ ಸಂತೋಷವನ್ನು ಕೊಂಡುಕೊಳ್ಳಬಹುದೆಂದುಕೊಂಡಿರಬೇಕು. ಮದುವೆಯ ದಿನದ ಮೋಜುವಾನಿಯನ್ನು ಅವನು ದೊಡ್ಡದಾಗಿ ಮಾಡುತ್ತಲೇ ಹೋದ. ಔಪಚಾರಿಕ ಔತಣ ಮುಗಿದಿದ್ದು ಸಂಜೆ ೬ ಗಂಟೆಗೆ. ಆದರೆ ಕುಡಿಯುವುದು, ಕುಣಿಯುವುದು ಮುಂದುವರಿಯುತ್ತಲೇ ಇತ್ತು. ಕೊನೆಗೆ ಮದುವೆ ಗಂಡು ತನ್ನ ನೃತ್ಯವನ್ನು ಮುಗಿಸಿ, ಇತರರನ್ನು ತನ್ನ ಖರ್ಚಿನಲ್ಲೇ ಮುಂದುವರಿಸಿಕೊಂಡು ಹೋಗಬೇಕೆಂದು ವಿನಂತಿಸಿ, ತನ್ನ ವಧುವಿನ ಜೊತೆ ತನ್ನ ಕನಸಿನ ಮನೆಗೆ ನಡೆದ.

ಸುಮಾರು ಹನ್ನೊಂದು ಗಂಟೆಯ ನಂತರ ಮನೆಗೆ ಮರಳಿದ ವಧುವಿನ ತಾಯಿಗೆ ಇನ್ನೇನು ನಿದ್ದೆ ಹತ್ತಬೇಕು ಎನ್ನುವಾಗ ಬಾಗಿಲು ಬಡಿದ ಶಬ್ದ ಕೇಳಿ ಬಂತು. ಅಸ್ತವ್ಯಸ್ತ ವೇಷಭೂಷಣದಲ್ಲಿ ಬಾಗಿಲಿನಾಚೆ ನಿಂತಿದ್ದ ಮದುವೆಯ ಗಂಡು, ಏಂಜಲಾಳನ್ನು ಒಳಗೆ ತಳ್ಳಿ, "ತಾಯಿ, ನಿಮಗೆ ವಂದನೆಗಳು. ನೀವು ಸಂತರು" ಎಂದು ಹೇಳಿದವನೆ ಹೊರಟು ಹೋದ. ಅನಂತರ ಗಂಟೆ ಎರಡು ಗಂಟೆಗಳ ಕಾಲ ತಾಯಿ, ಮಗಳನ್ನು ಒಂದೇ ಸಮನೆ ರೋಷದಿಂದ ಚಚ್ಚಿದಳು.

ಕೊನೆಗೆ ಮೂರು ಗಂಟೆಯ ಸುಮಾರಿಗೆ, ಅವಳ ಜವಳಿಗಳನ್ನು ಅವರ ತಾಯಿ ಕರೆಸಿ ನಡೆದ ಸಂಗತಿಯನ್ನು ತಿಳಿಸಿದಳು. ಅವಳ ಜವಳಿಗಳು ಏಂಜಲಾಳನ್ನು, ಅವನ ಹೆಸರನ್ನು ತಿಳಿಸುವಂತೆ ಕೇಳಿದರು. ಏಂಜಲಾ "ಸಾಂಟಿಮಾಗೊ ನಾಸರ್" ಎಂದು ಹೇಳಿದಳು.

ಸಾಂಟಿಮಾಗೊ ನಾಸರ್ ಆ ಊರಿನ ಪ್ರಮುಖ ಮನೆತನಕ್ಕೆ ಸೇರಿದವನು. ತಂದೆ ಸತ್ತು ಅಪಾರ ಆಸ್ತಿಗೆ ಒಡೆಯನಾಗಿ, ತನ್ನ ಆಸ್ತಿಯನ್ನು ಬಹಳ ಪರಿಣತಿಯಿಂದ

ಬೆಳೆಸಿದವನು. ಮದುವೆಯ ಮೋಜುವಾನಿಯಲ್ಲಿ ಬಹಳ ಹೊತ್ತಿನವರೆಗೆ ಇತರರ ಜೊತೆ ಇದ್ದವನು. ಆದರೆ ಮನೆತನದ ಗೌರವದ ದೃಷ್ಟಿಯಿಂದ ಈಗ ಅವನನ್ನು ಕೊಲ್ಲುವುದು ಅಗತ್ಯವಾಗುತ್ತದೆ.

ಅವಳಿ ಜವಳಿಗಳು ಊರಿನ ಅನೇಕರಿಗೆ ಸಾಂಟಿಯಾಗೊನನ್ನು ಕೊಲ್ಲುವುದಾಗಿ ಹೇಳುತ್ತಾರೆ. ಈ ವಿಷಯ ಹಾಲು ಮಾರುವವರಿಗೆ, ಅಂಗಡಿಯವರಿಗೆ, ಪಾದ್ರಿಗೆ, ಊರಿನ ಮೇಯರ್‌ಗೆ ಮತ್ತು ಇತರ ಅನೇಕರಿಗೆ ತಿಳಿದಿರುತ್ತದೆ. ಆದರೆ ಒಂದು ರೀತಿಯ ದುರಂತದ ನಿರ್ಣಾಯಕತೆಯಿಂದಾಗೋ ಏನೋ ಸಾಂಟಿಯಾಗೊ ಈ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಅವಳಿ ಜವಳಿಗಳೂ ಕೂಡ, ಯಾರಾದರೂ ಈ ಸಾವನ್ನು ತಪ್ಪಿಸಿ, ತಮ್ಮ ಗೌರವವನ್ನು ಉಳಿಸಬಹುದೇನೋ ಎಂಬಂತೆ ನಡೆದು ಕೊಳ್ಳುತ್ತಾರೆ. ಆದರೆ ಇದು ಸಾಧ್ಯವಾಗುವುದಿಲ್ಲ. ಅವರು ಸಾಂಟಿಯಾಗೊನನ್ನು ಕೊಚ್ಚಿಹಾಕುತ್ತಾರೆ.

ನಿರೂಪಕ ಕತೆಯನ್ನು ಒಂದು ಕ್ರಮದಲ್ಲಿ ಹೇಳದೇ ಹಿಂದೆ ಮುಂದೆ ನಡೆದಾಡಿ ಸುತ್ತ ನಮ್ಮ ಕುತೂಹಲ ಕೆರಳಿಸುತ್ತ, ಘಟನೆಗಳ ಅಸ್ಪಷ್ಟತೆಯಲ್ಲಿ, ಸನ್ನಿವೇಶಗಳ ಅಸಹಜತೆಯಲ್ಲಿ, ದುರಂತವನ್ನು ಘಟ್ಟಿ ಮಾಡುತ್ತಾನೆ. ಸಾಂಟಿಯಾಗೊ ಮತ್ತು ಏಂಜಲಾಳ ಮಧ್ಯ ಸಂಬಂಧವಿದ್ದುದರ ಬಗ್ಗೆ, ಏಂಜಲಾಳ ಮಾತು ಬಿಟ್ಟು ಮತ್ಯಾವ ಆಧಾರವೂ ಸಿಕ್ಕುವುದಿಲ್ಲ. ಅನೇಕರು ಇದನ್ನು ನಂಬುವುದಿಲ್ಲ.

ಕೊಲೆಯ ನಂತರದ ಘಟನೆಗಳೂ ಈ ವರದಿಯಲ್ಲಿ ನಮಗೆ ಸಿಗುತ್ತದೆ. ಏಂಜಲಾ ಹೇಗೆ ಊರನ್ನೆ ಬಿಟ್ಟು ಹೋಗಿ ನವೆಯುತ್ತ ತನ್ನ ಬದುಕ ಸಾಗಿಸಿದಳು, ಅವಳು ತನ್ನ ಗಂಡನಿಗೆ ಬರೆದ ನೂರಾರು ಕಾಗದಗಳು, ಕೊನೆಗೆ ಒಂದು ದಿನ ಆ ಒಂದು ಕಾಗದ ವನ್ನೂ ಓದದೇ, ಆ ಕಟ್ಟುಗಳನ್ನೂ ಹೊತ್ತುಕೊಂಡು ಅವನು ಅವಳ ಬಳಿ ಬಂದದ್ದು ಇತ್ಯಾದಿ. ನಿರೂಪಣೆಯ ಕ್ರಮದಲ್ಲಿ ಇರುವ ಉದ್ವಿಗ್ನತೆಯ ಅಭಾವ ಮತ್ತು ನಾಟಕೀಯತೆ ಇಲ್ಲದಿರುವುದು ಈ ಕಾದಂಬರಿಯ ಕ್ರಮದ ಮಹತ್ವವನ್ನು ನಮಗೆ ಮನದಟ್ಟು ಮಾಡಿಕೊಡುತ್ತದೆ.

ವಿಧಿಯ ನಿರ್ಣಾಯಕತೆಯ ಬಗ್ಗೆ ಕಾದಂಬರಿ ನಮ್ಮಲ್ಲಿ ಕಳವಳ ಮೂಡಿಸಿದರೆ, ಒಂದು ಸರಳವಾದ ಕತೆಯನ್ನು ನಿರೂಪಣಾ ಕ್ರಮದಿಂದ ಹೇಗೆ ಮಹತ್ವವಾದ ಕಲೆ ಮಾಡಬಹುದೆಂಬುದನ್ನೂ ನಾವು ಕಾಣಬಹುದಾಗಿದೆ. ಇದೊಂದು ಹುಚ್ಚುತನದ ಅಜ್ಜಿ ಕತೆಯಾಗಿ ಕಾಣಿಸುತ್ತದೆ. ಆದರೆ ಈ ಹುಚ್ಚುತನ ಅಸ್ಪಷ್ಟ ನೈತಿಕತೆಯಿಂದ ಮಾತ್ರ ಹುಟ್ಟುವಂಥದ್ದು. ಇಲ್ಲಿ ಮಾರ್ಕ್ವೆಸ್ ತೋರಿರುವ ಅಸಾಧಾರಣವಾದ ಅಭಿವ್ಯಕ್ತಿ ನಿಯಂತ್ರಣ, ಬಹಳ ನಿಧಾನಗತಿಯಲ್ಲಿ ಒಂದು ಸಾಮಾನ್ಯ ಸಂಗತಿ ಹೇಗೆ ಒಂದು ಮಹತ್ವದ ಘಟನೆಯಾಗಿ ಪರಿವರ್ತನೆಗೊಳ್ಳುತ್ತದೆ ಎಂಬುದನ್ನು ಅವನು ಸಾಧಿಸಿರುವ ರೀತಿ ಮತ್ತು ನಮ್ಮ ಮೇಲೆ ಲೇಖಕ ಸಾಧಿಸುವ ಸಂಮೋಹನ ಇತ್ಯಾದಿ ಸಮಕಾಲೀನ ಸಾಹಿತ್ಯದ ಅಪರೂಪದ ಕೃತಿಗಳಲ್ಲಿ ಇದು ಒಂದು ಎಂದು ಸಾಬೀತುಗೊಳಿಸುತ್ತದೆ.

ಇದರ ನಿರೂಪಕ ಸಾವು ಘಟಿಸಿದ ಅನೇಕ ವರ್ಷಗಳ ನಂತರ ನಿಧಾನವಾಗಿ, ಅರೆಬರೆ ನೆನಪುಗಳು, ಮುಚ್ಚು ಮರೆಯ ಮಾತುಗಳು, ಒಂದಕ್ಕೊಂದು ವಿರುದ್ಧವಾದ

ಹೇಳಿಕೆಗಳು ಮತ್ತು ನೋವುಗಳ ನಡುವೆ, ಹೊಕ್ಕು ಸತ್ಯಕ್ಕಾಗಿ ತಡಕಾಡುವ ರೀತಿಯಲ್ಲಿ ನಮಗೆ ಕ್ರಮೇಣ ಕಾರಣಗಳು ಅಮುಖ್ಯವಾಗಿ ಈ ಘಟನೆಯಷ್ಟೇ ಪ್ರಮುಖವಾಗಿ ಉಳಿಯುತ್ತದೆ. ಏಕೆ ಮತ್ತು ಹೇಗೆ ಒಂದು ದುರಂತ ಘಟಿಸಿತು ಎನ್ನುವುದಕ್ಕಿಂತಲೂ, ದುರಂತ ಒಂದು ನಡೆಯಿತು ಎಂಬುದು ಮುಖ್ಯ. ಕೂದಲು ಸೀಳುವ ಬುದ್ಧಿಜೀವಿ ಸ್ಟಂಟ್‌ಗಳು ಇಲ್ಲಿ ಅಮುಖ್ಯ. ದುರಂತಗಳು ಈ ಜಗತ್ತಿನಲ್ಲಿ ನಡೆಯುವವರೆಗೆ, ನಾವೆಲ್ಲರೂ ಅವುಗಳಿಗೆ ಶಾಮೀಲಾಗುತ್ತೇವೆ ಎಂಬ ಸತ್ಯ ನಮಗೆ ಮನವರಿಕೆಯಾಗುತ್ತ ಹೋಗುತ್ತದೆ. ಆದರೆ ಇದೂ ಕೂಡ, ಭಾಷಣಕಾರರ ಶೈಲಿಯಲ್ಲಿ ಒತ್ತಿ ಹೇಳುವ ಚಪಲವಿಲ್ಲ. ಈ ಒಂದು ನಿಲುವನ್ನೂ ನಿರಾಕರಿಸಿದರೂ, ಈ ಕಾದಂಬರಿ ಒಂದು ಸ್ವಾರಸ್ಯಕರವಾದ ಕತೆಯಾಗಿಯಾದರೂ ಉಳಿದುಬಿಡುತ್ತದೆ. ಬರಹಗಾರನಿಗೂ ಓದುಗನ ಮೇಲೆ ಏನನ್ನೂ ಹೇರುವ ಅಭಿಲಾಶೆ ಇಲ್ಲ. ಇಲ್ಲಿ ಬಹಳ ಮುಖ್ಯವಾಗುವುದು ಕತೆಯ ಕ್ರಮ ಮತ್ತು ಕ್ರಮದಲ್ಲೇ ಅಡಗಿರುವ ದುರಂತದ ನೆರಳು ಮಾತ್ರ.

ಬಹುಶಃ ಮಾರ್ಕ್ವೆಸ್‌ನ ಇತರ ಎಲ್ಲ ಕೃತಿಗಳಿಗಿಂತಲೂ ಓದಲು ಬಹಳ ಸುಲಭವಾದರೂ, ವಿಮರ್ಶೆಗೆ ಒಳಪಡಿಸಲು ಬಹಳ ಕಷ್ಟವಾದ ಕೃತಿ ಎಂದರೆ ಇದೇ ಇರಬೇಕು. ಆಗಾಗ ಒಬ್ಬ ಸೃಷ್ಟ್ಯಾತ್ಮಕ ಬರಹಗಾರ ಅಥವಾ ಒಂದೊಂದು ಕೃತಿ ಮೂಡುತ್ತವೆ. ಈ ಕೃತಿಗಳು ಚಾಲ್ತಿಯಲ್ಲಿ ಇರುವ ವಿಮರ್ಶಕರ ಉಪಾಯಗಳನ್ನೇ ಪ್ರಶ್ನಿಸುತ್ತವೆ. ವಿಮರ್ಶೆಯ ಕ್ರಮ, ವಿಮರ್ಶಕನ ಉಪಕರಣಗಳು ಈ ಕೃತಿಗಳ ಮುಂದೆ ನಿಷ್ಪ್ರಯೋಜಕವಾಗಿಬಿಡುತ್ತವೆ. ವಿಮರ್ಶಕನನ್ನು ದಂಗು ಬಡಿಸಬೇಕೆಂಬ ಹಂಬಲದಿಂದಲೇ ಕೆಲವು ಕೃತಿಗಳು ಹುಟ್ಟುವುದೂ ಉಂಟು. ಅನೇಕ ನವ್ಯ ಕೃತಿಗಳು ಈ ಉದ್ದೇಶದಿಂದ ಮೂಡಿದವಾಗಿವೆ. ಆದರೆ ನಾನು ಮೇಲೆ ಹೇಳಿದ ಕೃತಿಗಳು ಅಂತವಲ್ಲ. ಅವುಗಳ ಉದ್ದೇಶ ಉತ್ತಮವಾಗಿ ಕತೆ ಹೇಳುವುದೋ, ಹಾಡುವುದೋ ಆಗಿರುತ್ತದೆ. ಆದರೆ ಪ್ರಾಸಂಗಿಕವಾಗಿ ಅವು ವಿಮರ್ಶಕನಿಗೆ ಸವಾಲು ಒಡ್ಡುತ್ತವೆ. ವಿಮರ್ಶಕ ತನ್ನನ್ನು ತಾನು ಪರೀಕ್ಷಿಸಿಕೊಂಡು ತನ್ನ ಉಪಕರಣಗಳು ಈ ಕೃತಿಗಳ ಮುಂದೆ ನಿಷ್ಪ್ರಯೋಜಕವೆಂದುಕೊಳ್ಳುತ್ತಾನೆ. ಆದರೆ ಅವನ ಮನಸ್ಸಿನಲ್ಲಿ ಉತ್ತಮವಾಗಿ ಒಂದು ಕೃತಿಯನ್ನು ಓದಿದ ಪರಿಣಾಮ ಮಾತ್ರ ಇರುತ್ತದೆ. ಮಾರ್ಕ್ವೆಸ್‌ನ ಈ ಕೃತಿ ಅಂತಹ ಜಾತಿಗೆ ಸೇರಿದ ಮಹತ್ವ ಕಾದಂಬರಿ.

ಕೆಟ್ಟದ್ದನ್ನು ನೋಡದಿರಬೇಕಾದರೆ ಕೆಟ್ಟದ್ದರಿಂದ ಪೂರ್ಣವಾಗಿ ದೂರವಿರಬೇಕು.

ಗಾಂಧೀಜಿ

ಬರಹಗಾರನ ಪಾಕಶಾಲೆ

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ನೊಂದಿಗೆ ಸಂದರ್ಶನ

ಕಲ್ಪನಾ ಸಹನಿ

ಮಾರ್ಕ್ವೆಸ್ : ನಾನೊಮ್ಮೆ ಟ್ರೈನಿನಲ್ಲಿ ಜಿನೀವಾಕ್ಕೆ ಪ್ರಯಾಣಿಸುತ್ತಿದ್ದೆ. ಹನ್ನೆರಡು ಗಂಟೆಗಳ ಪ್ರಯಾಣವದು. ನಾನು ನನ್ನ ಗೆಳೆಯರಿಗೆಂದು ಕೊಂಡೊಯ್ಯುತ್ತಿದ್ದ 'One hundred years of Solitude' ನ ಪ್ರತಿಯೊಂದನ್ನುಳಿದು ಓದಲು ನನ್ನ ಬಳಿ ಇನ್ನೇನೂ ಇರಲಿಲ್ಲ. ಹಾಗಾಗಿ ನನ್ನದೇ ಕಾದಂಬರಿಯನ್ನ ನಾನು ಓದತೊಡಗಿದೆ. ಅದನ್ನ ಪೂರ್ತಿ ಓದಲಾಗಲಿಲ್ಲ. ಆದರೆ ಎರಡು ಮೂರು ಅಧ್ಯಾಯಗಳನ್ನಂತೂ ಮುಗಿಸಿದೆ.

ಪ್ರಶ್ನೆ : ನಿಮಗದು ಇಷ್ಟವಾಯಿತೆ ?

ಮಾ : ನಿಜ ಹೇಳಬೇಕೆಂದರೆ, ಇಲ್ಲ. ಬರೆಯುತ್ತಿದ್ದಾಗ, ಪ್ರಪಂಚದಲ್ಲೇ ಅದೊಂದು ಉತ್ತಮ ಕೃತಿ ಎಂದೇ ನಾನು ನಂಬಿದ್ದೆ. ಆದರೆ ಜಿನೀವಾಗೆ ಹೋಗುವ ದಾರಿಯಲ್ಲಿ ಅದನ್ನ ಓದಿದಾಗ ನನಗೆ ತುಂಬಾ ನಾಚಿಕೆಯಾಯಿತು. ಅದನ್ನ ಸರಿಯಾಗಿ ಬರೆಯಲು ಸಾಕಷ್ಟು ಸಮಯ ನನಗಿರಲಿಲ್ಲ ಅಂತ ಅರಿವಾಯಿತು. ನಾನು ಮಾಡಿದ್ದೆಂದರೆ ಅದನ್ನ ಪುನರ್ ವರ್ಣಿಸಿದಷ್ಟೆ.

ಪ್ರ : ನಿಮ್ಮ ಮೊದಲಿನ ಕೃತಿಗಳಲ್ಲೆಲ್ಲಾ ಇದೇ ಶ್ರೇಷ್ಠವಾದದ್ದು.

ಮಾ : ವೈಯಕ್ತಿಕವಾಗಿ ನನಗನ್ನಿಸುವುದು No one Writes to the Colonel ಉತ್ತಮವಾಗಿದೆ

ಅಂತ. ನಾನು ಹೀಗೆ ಅಂದುಕೊಳ್ಳೋದ್ರಲ್ಲಿ ತಪ್ಪಿರಬಹುದು, ಆದರೆ One hundred years of Solitude ಓದುವಾಗ 'ಲೇಖಕ ಇದನ್ನ ಬರೆಯುವಾಗ ಸಾಕಷ್ಟು ವೇಳೆಯನ್ನ ಉಪಯೋಗಿಸಲಿಲ್ಲ' ಎಂಬುದಂತೂ ಸ್ಪಷ್ಟ ವಾಗಿತ್ತು. ಆ ಕಾದಂಬರಿಯನ್ನ ನಾನು ತುಂಬಾ ಕ್ಷಿಪ್ರವಾಗಿ, ನಿಖರವಾದ ದಿನಾಂಕದಂದೇ ಮುಗಿಸಬೇಕಾಗಿತ್ತು. ಕಾರಣ, ಒಂದು—ನಾನು ಕೊಂಡ ಕಾರಿನ ಹಣವನ್ನ ಪಾವತಿ ಮಾಡಬೇಕಿತ್ತು, ಎರಡನೇದಾಗಿ, ಆರು ತಿಂಗಳಿಂದ ಬಾಕಿಯಿದ್ದ ಮನೆಬಾಡಿಗೆಯನ್ನ ತೀರಿಸಬೇಕಿತ್ತು. ಬರೆಯಲು ಪ್ರಾರಂಭಿಸಿದಾಗ ಆರು ತಿಂಗಳ ಕಾಲಾವಧಿ ಬೇಕಾದಷ್ಟಾಯಿತು ಎಂದೇ ನಾನು ಭಾವಿಸಿದ್ದೆ. ಆದರೆ ೧೮ ತಿಂಗಳ ವರೆಗೆ ಅದು ಬರೆಸಿಕೊಂಡು ಹೋಯಿತು. ಹಾಗಾಗಿ ಅದೊಂದು ಅತೀ ದೀರ್ಘ ಅವಧಿ 'ಅಂತಲೇ ನಾನು ಆ ಕ್ಷಣಕ್ಕೆ ಭಾವಿಸಿದ್ದು. ಆದರೆ Autumn of the Patriarch' ಬರೆಯುವಾಗಿನ ಸ್ಥಿತಿ ತುಂಬಾ ಭಿನ್ನವಾಗಿತ್ತು. ಅದನ್ನು ಮುಗಿಸಲು ನನಗೆ ೭ ವರ್ಷಗಳಷ್ಟು ದೀರ್ಘ ಸಮಯವಿತ್ತು, ಹಾಗಾಗಿ ತುಂಬಾ ವಿರಾಮವಾಗಿ ಅದನ್ನ ಬರೆಯಬಹುದಿತ್ತು. ಆದರೆ One hundred years of Solitude' ಬರೆಯುವಾಗಿನ ದಿನಗಳು ತುಂಬಾ ಕಷ್ಟದ ದಿನ ಗಳಾಗಿದ್ದವು. ಇದರಿಂದಾಗಿ, ಬ್ಯುನ್‌ಡಿಯಾ ಕುಟುಂಬದ ಎರಡು ತಲೆಮಾರು ಗಳ ಕಥೆಯನ್ನ ಅದರಿಂದ ಕಿತ್ತುಹಾಕಿಬಿಟ್ಟೆದ್ದೆ. ನಾನೊಬ್ಬ ಕೆಟ್ಟ ಓದುಗ. ಬೇಸರ ವನ್ನುಂಟು ಮಾಡುವಂತಹ ಭಾಗಕ್ಕೆ ಬರುತ್ತಲೇ, ನಾನು ಓದುತ್ತಿದ್ದ ಪುಸ್ತಕ ವನ್ನ ಪಕ್ಕಕ್ಕಿಟ್ಟುಬಿಡುತ್ತೇನೆ. ಬರೆಯುವಾಗಲೂ ಅಷ್ಟೇ. ಓದುಗ ಬೇಸರಿಸಿ ಕೊಳ್ಳುವ ಘಟ್ಟ ತಲುಪಿದ್ದಾನೆ ಅಂತ ಅನ್ನಿಸಿದಾಕ್ಷಣವೇ, ಆ ಪುಸ್ತಕವನ್ನ ಸ್ವಾರಸ್ಯಕರವಾಗಿಸುವ ದಾರಿಯೊಂದನ್ನು ಹುಡುಕತೊಡಗುತ್ತೇನೆ. 'One hundred years of Solitude' ಇಂಥಾ ಮನಸ್ಥಿತಿಯಲ್ಲಿ ಬರೆಯಲ್ಪಟ್ಟಿದ್ದು. ಅದರಲ್ಲಿ ಬಹಳಷ್ಟು ತಲೆಮಾರುಗಳು ಇಡಿಕಿರಿದಿವೆ ಅಂತ ಅನ್ನಿಸಿತ್ತು. ಒಂದು ಚಕ್ರದ, ಪುನರಾವರ್ತನೆಯ ಭಾವನೆಯನ್ನು ಸೃಷ್ಟಿಸುವುದು ನಾನು ಕಲ್ಪಿಸಿಕೊಂಡ ರೀತಿಗೆ ಅವಶ್ಯವಾಗಿತ್ತಾದರೂ, ಇದೇ ಆ ಕೃತಿ ನೀರಸ ವೆನಿಸಲಿಕ್ಕೂ ಕಾರಣವಾಗಿತ್ತು. ಆದ್ದರಿಂದಲೇ ಪುಸ್ತಕದ ಮಧ್ಯದಲ್ಲಿ, ಯುದ್ಧಾ ನಂತರ ಬರುವ ಮ್ಯಾಕಂಡೋನ ವರ್ಣನೆಯ ಭಾಗದಲ್ಲಿ, ಎರಡು ತಲೆಮಾರು ಗಳ ಕಥೆಯನ್ನು ಕೈಬಿಡಲು ನಿರ್ಧರಿಸಿದೆ. ಅನಂತರ, ಜಿನೀವಾಗೆ ಹೋಗುವಾಗ ಅದನ್ನು ಓದಿದ ಬಳಿಕ 'ನನಗೆ ಸಾಕಷ್ಟು ಸಮಯವಿದ್ದಿದ್ದರೆ ಎಲ್ಲವನ್ನೂ ಅತ್ಯಂತ ಎಚ್ಚರಿಕೆಯಿಂದ, ಸ್ವಾರಸ್ಯವಾಗಿ ಬರೆಯಬಹುದಿತ್ತು' ಅಂದುಕೊಂಡೆ.

ಪ್ರ: ಒಬ್ಬ ಸೋವಿಯತ್ ವಿಮರ್ಶಕ ನೀವು One hundred years of Solitude ಕಾದಂಬರಿಯನ್ನು 'Autumn of the Patriarch'ಗೆ ಮುನ್ನುಡಿ ಎಂದು ಪರಿಗಣಿಸಿರುವುದಾಗಿ ಬರೆದಿದ್ದಾನೆ. ಆದರೆ ನಾವು ಅದನ್ನು ಮತ್ತೆ ಮತ್ತೆ ಓದುತ್ತಲೇ ಇರುತ್ತೇವೆ. ಹಾಗೆ ಓದಿದಾಗಲೆಲ್ಲಾ, ಪ್ರತೀಬಾರಿಯೂ ಅದರಲ್ಲೇನೋ ಹೊಸತನ ಗೋಚರಿಸುತ್ತಲೇ ಇರುತ್ತದೆ.

ಮಾ: ನೀವು ಇಷ್ಟೆಲ್ಲಾ ಅದರ ಬಗ್ಗೆ ಹೇಳುವುದನ್ನ ಕೇಳುತ್ತಿದ್ದರೆ, ಮತ್ತೊಮ್ಮೆ ಅದನ್ನ ಓದಬೇಕು ಅಂತ ನನಗೂ ಅನ್ನಿಸ್ತಾ ಇದೆ. ನಿಮಗೆ ಅಷ್ಟೊಂದು ಆಸಕ್ತಿಯನ್ನ ಅದು ಉಂಟುಮಾಡಿರುವುದನ್ನ ನೋಡಿದರೆ, 'ಅದರಲ್ಲಿ ಅಂಥ ವಿಶೇಷವಾದದ್ದೇನಿದೆ' ಅಂತ ನೋಡೋ ಕುತೂಹಲ ನನಗೂ ಮೂಡ್ತಾ ಇದೆ.

ಇದರ ಬಗ್ಗೆ ಬಂದಿರುವ ಅನೇಕ ವಿಮರ್ಶೆಗಳು ನನಗೆ ಚಿರಪರಿಚಿತ. ಜನ ಈ ಪುಸ್ತಕದ ಬಗ್ಗೆ ಎಷ್ಟೊಂದು ಬರೆದಿದ್ದಾರೆಂದರೆ, ನಾನು ಬಹಳದಿನಗಳಿಂದ ಅವುಗಳನ್ನ ಓದುವುದನ್ನೇ ನಿಲ್ಲಿಸಿದ್ದೇನೆ. ವಿಮರ್ಶಕರನ್ನು ವಿರೋಧಿಸುವ ನನ್ನ ಈ ರೀತಿ ಪೂರ್ವಗ್ರಹಪೀಡಿತವಾಗಿರಬಹುದು. ಇರಲಿ—ಲೇಖಕ ಮತ್ತು ಓದುಗನ ಮಧ್ಯೆ ನೇರ ಸಂಪರ್ಕ ಇರಬೇಕು ಅಂತ ನಾನು ಬಯಸ್ತೀನಿ. ನಾನು ಬರೆಯುವಾಗಲೆಲ್ಲಾ; ನಾನು ಬರೆಯುತ್ತಿರುವುದು ಓದುಗನಿಗಾಗಿ, ನನ್ನ ಪುಸ್ತಕ ಎಲ್ಲಾ ಮಧ್ಯವರ್ತಿಗಳನ್ನೂ ದಾಟಿ ಓದುಗನನ್ನ ನೇರವಾಗಿ ಮುಟ್ಟುತ್ತೆ ಅಂತ ಭಾವಿಸ್ತಾ ಇರ್ತೀನಿ.

ಕೆಲವು ವಿಮರ್ಶಕರು ಓದುಗನಿಗೆ, ಆತ ಒಂದು ಪುಸ್ತಕವನ್ನು ಓದುವ ಮುನ್ನವೇ ಲೇಖಕ ಏನು ಹೇಳಬೇಕೆಂದಿದ್ದಾನೆ ಅನ್ನೋದನ್ನು ಹೇಳಲು ಬಯಸ್ತಾರೆ. ಅಂಥ ಸಂದರ್ಭದಲ್ಲಿ ನೇರ ಸಂಪರ್ಕ ತಪ್ಪಿಹೋಗುತ್ತೆ. ಈ ಕಾರಣದಿಂದಾಗಿಯೇ ನಾನು ವಿಮರ್ಶಕರನ್ನ ವಿರೋಧಿಸುವುದು. ಅವರು ಲೇಖಕ ಮತ್ತು ಓದುಗನ ನಡುವಿನ ಅಡ್ಡಗೋಡೆ ಅಂತ ನಾನು ಯಾವಾಗಲೂ ಭಾವಿಸುತ್ತೇನೆ. ಕೆಲವೊಮ್ಮೆ ನನಗೆ 'ಪಕ್ಕಕ್ಕೆ ಸರಿಯಿರಿ, ನಾನು ಓದುಗನೊಂದಿಗೆ ಮಾತನಾಡಬೇಕಾಗಿದೆ, ನಿಮ್ಮೊಟ್ಟಿಗಲ್ಲ' ಅಂತ ತೂಗಿ ಹೇಳಬೇಕೆನ್ನಿಸುತ್ತೆ.

ಕೆಲವೊಮ್ಮೆ ಅವರು ಲೇಖಕನ ತಲೆಗೆ, ಓದುಗನ ತಲೆಗೆ ಹೊಳೆದಿರದಂಥ ಎಷ್ಟೋ ವಿಷಯವನ್ನು ಶೋಧಿಸಿಬಿಡುತ್ತಾರೆ. ಕೆಲವೊಮ್ಮೆ ಅದು ಸರಿಯಿರಬಹುದು ಅಪ್ರಜ್ಞಾಪೂರ್ವಕವಾಗಿ ಹುಗಿದಿಟ್ಟ ಅನೇಕ ವಿಷಯಗಳು ಪುಸ್ತಕದಲ್ಲಿರಬಹುದು. ಲೇಖಕನಿಗೆ ಅರಿವಿರದ ಇಂಥ ಅಪ್ರಜ್ಞಾಪೂರ್ವಕ ಅಸ್ತಿತ್ವವನ್ನಷ್ಟೇ ವಿಮರ್ಶಕರು ಕಾಣುವುದು. ಆದ್ದರಿಂದ ವಿಮರ್ಶಕರು ಏನು ಹೇಳುತ್ತಾರೆಂಬುದನ್ನು ನಾನು ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ ಅಥವಾ 'ಅದೊಂದು ಅನಿವಾರ್ಯ' ಅಂತಲೂ ನಾನು ಭಾವಿಸೋದಿಲ್ಲ.

'One hundred years of Solitude' ಕಾದಂಬರಿ Autumn of the Patriarch ಗೆ ಮುನ್ನುಡಿ ಅಂತ ಭಾವಿಸ್ತೀನಿ ಅರಿತ ಹೇಳಿಕೆಯಿತ್ತಿದ್ದೇನೆ ಎನ್ನುವುದು ನನಗೆ ಹೊಸತು. ಅದನ್ನ ಹೇಳಿದಹಾಗೆ ನನಗೆ ನೆನಪಿಲ್ಲ. ಅದೇನೇ ಇರಲಿ, ನಾನೂ ಅದೇ ರೀತಿ ಯೋಚಿಸುತ್ತಿದ್ದೇನೆ. ಬರಿ 'One hundred years of Solitude' ಮಾತ್ರವಲ್ಲ, ನನ್ನ ಮೊದಲ ಎಲ್ಲಾ ಬರಹಗಳೂ 'Autumn of the patriarch ಗೆ ಮುನ್ನುಡಿಯಿದ್ದಂತೆ. ವಿಮರ್ಶಕರು ನನ್ನ ಮೊದಲ ಬರಹಗಳು 'One hundred years of Solitude' ಕಾದಂಬರಿಗೆ ಮುನ್ನುಡಿಯಿದ್ದಂತೆ ಎಂದು ಗುರುತಿಸಿ,

'Autumn of the Patriarch' ಇವೆಲ್ಲಕ್ಕಿಂತ ಭಿನ್ನವಾದದ್ದು ಎಂದಿದ್ದಾರೆ. ಆದರೆ ಇದು ತದ್ವಿರುದ್ಧವಾದದ್ದು ಎಂದು ನನ್ನ ಭಾವನೆ. ನನ್ನ ಪ್ರಮುಖ ಆಸಕ್ತಿ ಯಾವಾಗಲೂ ಅಧಿಕಾರದ ಸಮಸ್ಯೆ. ಕರ್ನಲ್ ಅರಿಲಿಯಾನೊ ಬ್ಯೂಂಡಿಯಾ ಯುದ್ಧದಲ್ಲಿ ಸೋಲದೆ ಗೆದ್ದಿದ್ದರೆ, ಅವನೊಬ್ಬ ಸರ್ವಾಧಿಕಾರಿಯಾಗಿರ್ತಿದ್ದ. ಕರ್ನಲ್‌ನ ಒಡನಾಡಿಯಾಗಿದ್ದು, ಈಗ ಇನ್ನೇನು ಅವನ ಗುಂಡಿಗೆ ಬಲಿಯಾಗಬೇಕಾಗಿದ್ದವನು, ಹೇಳುವ ಮಾತಿದು "ನೀನು ಯುದ್ಧದಲ್ಲಿ ಗೆದ್ದರೆ, ದೇಶ ಹಿಂದೆಂದೂ ಕಾಣದಿದ್ದಂಥ ರಕ್ತಪಿಪಾಸು ಸರ್ವಾಧಿಕಾರಿಯಾಗುತ್ತಿ!" ಬ್ಯೂಂಡಿಯಾ ಯುದ್ಧದಲ್ಲಿ ಗೆದ್ದು, ಅಧಿಕಾರ ಹಿಡಿದು ರಕ್ತಪಿಪಾಸು ಸರ್ವಾಧಿಕಾರಿಯಾಗಬಹುದಾದ ಗಳಿಗೆಯೊಂದಿತ್ತು. ಹಾಗಾಗಿದ್ದರೆ, ಪುಸ್ತಕ ಭಿನ್ನವಾದ, ಬೇರೊಂದು ದಾರಿಯನ್ನೇ ಹಿಡಿಯುವ ಸಾಧ್ಯತೆಯಿತ್ತು. ಅದಕ್ಕೇ ಈ ರೀತಿಯ ತಿರುವು ಸರ್ವಾಧಿಕಾರಿಯೊಬ್ಬನ ಬಗೆಗೇ ಬರೆಯಬೇಕಾದ ಇನ್ನೊಂದು ಪುಸ್ತಕಕ್ಕಿರಲಿ ಅಂತಬಿಟ್ಟೆ. ಬಹಳಷ್ಟು ವರ್ಷಗಳಿಂದ ನಾನು ಬರೆಯಬೇಕೆಂದು ತಯಾರಾಗುತ್ತಿದ್ದ ಪುಸ್ತಕ ಅದು. ಈ ದೃಷ್ಟಿಯಲ್ಲಿ, 'One hundred years of Solitude' ಕಾದಂಬರಿ 'Autumn of the Patriarch' ಕಾದಂಬರಿಗೆ ಮುನ್ನುಡಿಯಿದ್ದಂತೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ನಾನು ಇಷ್ಟು ದಿನಗಳವರೆಗೆ ಹುಡುಕುತ್ತಿದ್ದ, ಹಾಗೂ ಬರೆಯಬೇಕೆಂದುಕೊಂಡಿದ್ದ ಕೃತಿ 'One hundred years of Solitude' ಅಲ್ಲ, 'Autumn of the Patriarch'. ಇದಿಷ್ಟೇ ವಾಸ್ತವ. ಪ್ರಾರಂಭದಲ್ಲಿ 'ನಾನು ವಿಮರ್ಶಕರ ವಿರುದ್ಧ' ಎಂದು ಮಾತು ಪ್ರಾರಂಭಿಸಿ, ಈಗ ಅವರು ಹೇಳುವುದನ್ನೇ ಒಪ್ಪಿಕೊಂಡಿದ್ದೇನೆ.

ಹಾಗಾಗಿ, ಕರ್ನಲ್ ಅರಿಲಿಯಾನೊ ಬ್ಯೂಂಡಿಯಾ ಯುದ್ಧದಲ್ಲಿ ಗೆದ್ದು ಸರ್ವಾಧಿಕಾರಿಯಾಗಿದ್ದರೆ ಎಲ್ಲವೂ ಭಿನ್ನವಾಗಿರುತ್ತಿತ್ತು. ಸರ್ವಾಧಿಕಾರಿಯ ಮೇಲೆ ಬರೆಯಬೇಕಾದರೆ ಅದಕ್ಕೆ ಬೇರೆಯದೇ ಆದ ಮಾರ್ಗವೊಂದನ್ನು ಹಿಡಿಯಬೇಕಾಗುತ್ತದೆ. 'One hundred years of Solitude' ಕಾದಂಬರಿಯನ್ನು ತುಂಬಾ ಜನ ಇಷ್ಟಪಟ್ಟಿರೋದು ಬಹುಶಃ ಅದು ತುಂಬಾ ಲಘುಕೃತಿ ಅಂತ ಭಾವಿಸಿ, ಅನ್ನೋ ಭಯ ನನಗಿದೆ. ಅಲ್ಲದೆ ನನಗಿರೋ ಇನ್ನೊಂದು ಭಯ ಅಂದ್ರೆ, ಆ ಗ್ರಂಥದಲ್ಲಿ 'ಒಳ್ಳೆಯ ಅಂಶ' ಅಂತ ನಾನು ತಿಳಿದಿರೋದನ್ನ ಜನ ಇಷ್ಟಪಡದೇ, 'ದುರ್ಬಲ' ಅಂತ ನಾನು ತಿಳಿದಿರೋ ಅಂಶಗಳನ್ನ ಅವರು ಇಷ್ಟಪಟ್ಟಿರೋದು. ದೂರದರ್ಶನದಲ್ಲಿ ಧಾರಾವಾಹಿಯಾಗಿ ಬರೋ ಕಾದಂಬರಿಯನ್ನು ಅದು ಹೋಲುತ್ತೆ' ಅಂತ ನನಗನ್ನಿಸುತ್ತೆ.

ಆದರೆ, 'Autumn of the Patriarch' ಹಾಗಿರದೆ, ಒಂದು ನಿರ್ದಿಷ್ಟ ಸಾಹಿತ್ಯಿಕ ನೆಲಗಟ್ಟನ್ನು ಒತ್ತಾಯಿಸುತ್ತೆ. ನಾನದನ್ನು ಇಷ್ಟಪಡೋದು ಈ ಕಾರಣಕ್ಕಾಗಿಯೇ. ಇದನ್ನ ನಾನು ಬಿಡುವು ಮಾಡಿಕೊಂಡು ಬರೆದೆ, ಬರೆಯೋಕೆ ಆಗದೇ ಹೋದಾಗ ಬರೆಯೋದನ್ನೇ ನಿಲ್ಲಿಸಿದ್ದೆ. ಮುಂದುವರೆಸೋದಕ್ಕೆ

ಏನೂ ಹೋಳೀದೇ ಇದ್ದಾಗ ಹಾಗೇ ಮುಚ್ಚಿಟ್ಟುಬಿಡ್ತಿದ್ದೆ. ಉದಾಹರಣೆಗೆ, ಒಮ್ಮೆ ನನಗೆ ಪೇರಲಹಣ್ಣಿನ ವಾಸನೆಯನ್ನು ಜ್ಞಾಪಿಸಿಕೊಳ್ಳೋಕೆ ಆಗ್ತಾ ಇಲ್ಲ ಅನ್ನಿಸ್ತು. ಪೇರಲಹಣ್ಣಿನ ವಾಸನೇನ ಜ್ಞಾಪಿಸಿಕೊಳ್ಳೋಕೆ ಆಗದೇ ಇದ್ದರೆ, ನಾನು ನನ್ನ ಭೂತಕಾಲದೊಟ್ಟಿಗಿನ ಸಂಪರ್ಕವನ್ನ ಕಡಿದುಕೊಂಡಿದ್ದೇನೆ, ನನ್ನ ಬೇರುಗಳನ್ನ ಕಳೆದುಕೊಂಡಿದ್ದೇನೆ, ಅಂತ ಅರ್ಥ. ಯಾಕೆಂದರೆ ನಾನಾಗ ಆ ಕೃತಿಯನ್ನ ಬಾರ್ಸಿಲೋನಾದಲ್ಲಿ ಬರೀತಿದ್ದೆ.

ನಾನೊಬ್ಬ ಲ್ಯಾಟಿನ್ ಅಮೆರಿಕನ್ ಆಗಿ ನನ್ನನ್ನು ನಾನೇ ಅತ್ಯಂತ ವಿಶಿಷ್ಟ ಸನ್ನಿವೇಶದಲ್ಲಿ ಕಂಡುಕೊಂಡಿದ್ದೇನೆ. ಸರ್ವಾಧಿಕಾರತ್ವದಲ್ಲಿ ಬದುಕುವ ಅವಕಾಶ ನನಗೊದಗಿಬಂದಿರಲಿಲ್ಲ. ಆ ದಿನಗಳಲ್ಲಿ ಸರ್ವಾಧಿಕಾರ ಅಂದರೇನೆಂದು ಅರ್ಥ ಮಾಡಿಕೊಳ್ಳಲು ತಕ್ಕುದಾದ, ಅಧ್ಯಯನ ಯೋಗ್ಯವಾದ ಸರ್ವಾಧಿಕಾರತ್ವ ಲ್ಯಾಟಿನ್ ಅಮೆರಿಕಾದಲ್ಲಿರಲಿಲ್ಲ. ಆದ್ದರಿಂದ, ಏಕವ್ಯಕ್ತಿಯ, ಹಳೆಯ, ನಿಜವಾದ ಅರ್ಥದಲ್ಲಿ ಸರ್ವಾಧಿಕಾರತ್ವವಿದ್ದ ಸ್ಪೆಯಿನ್‌ಗೆ ನಾನು ಹೋದೆ. ಸೊಮೊಸಾವ ಮನೆತನದ ಸರ್ವಾಧಿಕಾರ ಪ್ರಾಚೀನವಾದದ್ದಲ್ಲವಾದರೂ ಅದು ಸಂಪ್ರದಾಯ ಬದ್ಧವಾಗಿ ಕೈಗೆ ಬಂದದ್ದು. ನಾನು ಸ್ಪೆಯಿನ್‌ಗೆ ಹೋದೆ, ಆದರೆ ಸ್ಪೆಯನ್‌ನಲ್ಲಿ ಕುಳಿತು ಬರಿಯ ನೆನಪಿನಿಂದಲೇ ಲ್ಯಾಟಿನ್ ಅಮೆರಿಕಾದ ಬಗ್ಗೆ ಬರೆಯೋದು ಕಷ್ಟದ ಕೆಲಸ. ಜತೆಗೆ, ಅಲ್ಲಿ ದಿನದಿಂದ ದಿನಕ್ಕೆ ಬೇರೆಬೇರೆ ಘಟನೆಗಳೂ ನಡೆಯುತ್ತಿದ್ದುದರಿಂದ ಅವೆಲ್ಲ ಕಾದಂಬರಿಯನ್ನ ಹೆಚ್ಚು ಶ್ರೀಮಂತಗೊಳಿಸಿದವು.

ತುಂಬಾ ಸುತ್ತಿಬಳಸಿ,ಮಾತಾಡ್ತಿದೀನಿ. ನಾನು ಸ್ಪಷ್ಟಪಡಿಸಬೇಕೂಂತಿರೋ ವಿಷಯಕ್ಕೆ ನಂತರ ಬರ್ತೀನಿ....'Autumn of the Patriach'ನಲ್ಲಿ ಸರ್ವಾಧಿಕಾರಿಯ ಹೆಂಡತಿ ಕೊಲೆಯಾತ್ನ ನಡೆಯೋ ಘಟನೆ ಒಂದಿದೆ. ಈ ಘಟನೆಯನ್ನು ನಾನಾಗಲೇ ಬರೆದಾಗಿತ್ತು. ಅವಳು ತನ್ನ ಮಗನ ಜತೆ ಮಾರ್ಕೆಟ್ಟಿಗೆ ಹೊರಟಿರ್ತಾಳೆ. ಆದರೆ ಅವಳ ಕಾರು ಕೆಟ್ಟುಹೋಗಿರುತ್ತೆ, ಹೀಗಾಗಿ, ಕಡೆಗಳಿಗೇಲಿ ಅವಳು ತನ್ನ ಗಂಡನ ಕಾರನ್ನ ತೊಗೊಂಡು ಹೋಗೋ ಪರಿಸ್ಥಿತಿ ಬರುತ್ತೆ. ಆ ಕಾರಲ್ಲಿ ಬಾಂಬ್‌ನ ಇಡಲಾಗಿರತ್ತೆ. ಅವಳು ಮಾರ್ಕೆಟ್ಟಿಗೆ ಬಂದಾಗ ಬಾಂಬ್ ಸ್ಫೋಟಿಸಿ, ಕಾರು ಚಿಂದಿಚಿಂದಿಯಾಗಿ, ಚೂರುಗಳೆಲ್ಲಾ ಮಾರ್ಕೆಟ್ ಉದ್ದಗಲಕ್ಕೂ ಬೀಳುತ್ತವೆ.

ಪ್ರ : ಇದೇ ಥರದ ಘಟನೆ ಕೆರೆರೊ ಬ್ಲಾಂಕೋಗೆ ಸಂಭವಿಸಿತ್ತಲ್ಲವಾ ?

ಮಾ : ಕೆರೆರೊ ಬ್ಲಾಂಕೋ ಘಟನೆ ನಾನು ಕಾದಂಬರಿ ಬರೆದು ಮುಗಿಸಿದನಂತರ ನಡೆದದ್ದು. ಆದರೆ, ಅದು ಹೇಗಿತ್ತೋ ಹಾಗೇ ಬಿಡಲು ನನಗೆ ಮನಸ್ಸಾಗಲಿಲ್ಲ. ಯಾಕೆಂದರೆ, ನಾನೊಂದು ವಾಸ್ತವಿಕ ಘಟನೆಯನ್ನೇ ಉಪಯೋಗಿಸಿಕೊಂಡೆ ಅಂತ ಅದು ತೋರಿಸುತ್ತಿತ್ತು. ಒಬ್ಬ ಲೇಖಕ ಒಂದು ವಾಸ್ತವ ಘಟನೆಯನ್ನು ಉಪಯೋಗಿಸಿಕೊಳ್ಳಬಹುದು, ಆದರೆ ಆಗ ಅದಕ್ಕೆ ಸಾಹಿತ್ಯಿಕ ಮೆರುಗನ್ನು

ನೀಡಬೇಕಾಗುತ್ತೆ. ಹಾಗಾಗಿ, ನನ್ನದು ಕೇವಲ ಒಂದು ಸುದ್ದಿಯ ಐಟಂ ಆಗಿ, ಒಂದು ಕನ್ನಡಿಯ ಪ್ರತಿಮೆಯಾಗಿ ಬದಲಾಗುತ್ತೆ, ಆದರೆ ಅದು ವಾಸ್ತವ ಘಟನೆಯ ತದ್ವತ್ ನಕಲಿನಂತೇ ತೋರುತ್ತೆ. ಆದರಿಂದಾಗಿ, ಮೂಲಕ್ಕಿಂತ ಸಾಹಿತ್ಯಿಕವಾಗಿಯೂ, ಮಾನವೀಯ ಅರ್ಥದಲ್ಲೂ ತುಂಬಾ ಸೊಗಸಾದ ಘಟನೆ ಯೊಂದು ನನಗೆ ಪ್ರಾಪ್ತವಾಯಿತು.

ಸ್ಪೆಯಿನ್ ನಿಜವಾದ ಮತ್ತು ವಾಸ್ತವಾಂಶಗಳಿಂದ ಕೂಡಿದ ಹಲವಾರು ವಿಷಯಗಳಿಂದ ನನ್ನ ಪುಸ್ತಕವನ್ನ ಶ್ರೀಮಂತಗೊಳಿಸಿತು. ಹಲವಾರು ವಿಷಯ ಸಾಮಗ್ರಿಯನ್ನದು ಒದಗಿಸಿತು. ಆದರೆ ಹಠಾತ್ತನೆ ಆ ಪುಸ್ತಕದ ತಳಹದಿಯೇ, ಜೀವಾಳವೇ, ತುಂಬಾ ಅಸ್ಪಷ್ಟಗೊಳ್ಳುತ್ತಿದೆ, ಅನ್ನೋದನ್ನ ನಾನು ಗಮನಿಸಿದೆ. ಅಷ್ಟೇ ಅಲ್ಲ, ಭಾಷೆಯೂ ಬದಲಾಗಿತ್ತು. ಯಾಕೆಂದರೆ, ನಾನು ಬರೆಯಲು ಉಪಯೋಗಿಸುತ್ತಿದ್ದ ಭಾಷೆ, ನನ್ನ ದೈನಂದಿನ ಬದುಕಿನ ಭಾಷೆಗಿಂತ ಸಂಪೂರ್ಣ ಭಿನ್ನವಾಗಿತ್ತು ಇದನ್ನ ಗಮನಿಸಿದ ಮೇಲೆ, ಆ ಪುಸ್ತಕವನ್ನ ತುಂಬಾ ಆರಾಮ ವಾಗಿ ಒಂದು ಕಡೆಗೆ ಎತ್ತಿಟ್ಟೆ. ಆ ಆರಾಮ ; 'ನಾನು One hundred years of Solitude' ಬರೆಯುವಾಗ ದುರ್ಲಭವಾಗಿತ್ತು. ಆ ಮೇಲೆ ನಾನು ಕ್ಯಾರಿಬಿಯನ್ ದ್ವೀಪಗಳನ್ನು ನೋಡಲು ಹೋದೆ. ಎರಡು ತಿಂಗಳವರೆಗೆ, ಒಂದು ದ್ವೀಪದಿಂದ ಇನ್ನೊಂದು ದ್ವೀಪಕ್ಕೆ ನಾನು ಪ್ರಯಾಣಿಸಿದೆ. ಮರಳಿ ಬಂದಮೇಲೆ ಪ್ರತಿಯೊಂದೂ ಮತ್ತೊಮ್ಮೆ ಹೊಸದಾಗಿದ್ದಂತೆ ತೋರುತ್ತಿತ್ತು. ಹಾಗಾಗಿ, ನನ್ನ ಬರವಣಿಗೆಯನ್ನ ಮುಂದುವರಿಸುವುದು ಸಾಧ್ಯವಾಯಿತು. ಇವು, ಒಂದು ಕೆಲಸವನ್ನ ಕೈಗೆತ್ತಿಕೊಳ್ಳಲು ಅವಶ್ಯವಾದ, ಆದರ್ಶಪ್ರಾಯ ಸ್ಥಿತಿಗಳು ಅಂತ ನನ್ನ ಅನಿಸಿಕೆ. ನಿಮಗೆ ಖುಷಿ ಕೊಡದ ನಿಮ್ಮದೇ ಕೃತಿಯನ್ನ ಹರಿದು ಗಾಳಿಗೆ ತೂರುವುದೂ ಒಂದು ಅದ್ಭುತ ಅನುಭವವೇ. ಆದರೆ 'One hundred years of Solitude' ಗೆ ಆ ಗತಿ ಕಾಣಿಸಲು, ನನಗೆ ಸಾಕಷ್ಟು ಸಮಯಾವಕಾಶವೇ ಇರಲಿಲ್ಲ.

ಪ್ರ : ನಿಮಗೆ ಆ ಸಮಯಾವಕಾಶ ಸಿಗದೇ ಹೋದದ್ದು ನಮ್ಮ ಅದೃಷ್ಟ! ಹಲವು ವರ್ಷಗಳಿಂದ 'One hundred years of Solitude' ನ ಅರ್ಥ ಮಾಡಿಕೊಳ್ಳಲು ನಾವು ಪ್ರಯತ್ನಿಸುತ್ತಲೇ ಇದ್ದೇವೆ.

ಮಾ : ಸಂದರ್ಶನವೊಂದರಲ್ಲಿ, 'ಕಾದಂಬರಿ ಅಂದರೆ ಏನು' ಅಂತ ನನಗೆ ಪ್ರಶ್ನಿಸ ಲಾಯಿತು. "ಪ್ರಪಂಚದ ಗೋಜಲನ್ನು ಬಿಡಿಸುತ್ತಾ ಹೋಗುವ ಒಂದು ಪ್ರಕ್ರಿಯೆ" ಅಂತ ನಾನು ಉತ್ತರಿಸಿದೆ. 'ಅದನ್ನ ನೀವು ಹೇಗೆ ಅರ್ಥೈಸುತ್ತೀರಿ?' ಎಂಬ ಪ್ರಶ್ನೆಗೆ ಮಾತ್ರ ಉತ್ತರಿಸದಾದೆ. ವಿಚಿತ್ರ ಹಾಗೂ ಅಸ್ವಾಭಾವಿಕ ಸಂಗತಿಗಳು 'One hundred years of Solitude' ಕಾದಂಬರಿಗೆ ಘಟಿಸಿವೆ. ಬ್ಯೂನಸ್ ಏರಿಸ್‌ನ ಪುಸ್ತಕ ಪ್ರಕಾಶಕನೊಬ್ಬ, ತಾನು ಈ

ಕಾದಂಬರಿಯು ೫೦೦೦ ಪ್ರತಿಗಳನ್ನು ಹೊರತರುತ್ತಿರುವುದಾಗಿ ಬರೆದಾಗ ನಾನು ದಿಗ್ಮೂಢನಾದೆ. ನಾನು ಅವನಿಗೆ, ತುಂಬಾ ಜಾಗರೂಕನಾಗಿರಬೇಕೆಂದು ಒಂದು ಪತ್ರ—ಅದಿನ್ನೂ ಅಲ್ಲೇ ಇದೆ—ಬರೆದು ಅವನನ್ನು ಎಚ್ಚರಿಸಿದೆ. ನನ್ನ ಉಳಿದ ಮುದ್ರಿತ ಕಾದಂಬರಿಗಳ ಪ್ರತಿಗಳು ಕೇವಲ ೭೦೦ ರಿಂದ ೧೫೦೦ ರವರೆಗೆ ಮಾತ್ರ ಚಲಾವಣೆಯಲ್ಲಿವೆ, ಎಂದವನಿಗೆ ತಿಳಿಸಿದೆ. ಹೀಗಿದ್ದೂ, ಅವನು ೮೦೦೦ ಪ್ರತಿಗಳನ್ನು ೧೯೬೭ ರ ಮೇ ತಿಂಗಳಲ್ಲಿ ಹೊರತಂದ. ಡಿಸೆಂಬರ್ ಹೊತ್ತಿಗೆ ಆ ಪ್ರತಿಗಳೆಲ್ಲಾ ಖರ್ಚಾಗುತ್ತವೆ ಎಂದವನು ಎಣಿಸಿದ್ದ. ಇದಕ್ಕಿಂತ ಮೊದಲು, ಆ ಪುಸ್ತಕವನ್ನ ಒಂದು ನಿಯತಕಾಲಿಕೆಗೆ ಕೊಡಲು ಅವನು ನಿರ್ಧರಿಸಿದ್ದ. ಅದರ ಹೆಸರು 'The first plan' ಎಂದು ಇದ್ದುದಾಗಿ ನೆನಪು. ಕೆಲವು ಪ್ರತಿಗಳನ್ನು, ಕೆಲವು ವಿಮರ್ಶಕರಿಗೂ, ಓದುಗರಿಗೂ, ಅಂಕಣಕಾರರಿಗೂ, ಆ ಪುಸ್ತಕ ಬಿಡುಗಡೆಗೊಳ್ಳುವ ಮೊದಲೇ ಅವನು ಹಂಚಿದ್ದ; ಇದರಿಂದ, ಈ ಮಹನೀಯರು ನಿಯತಕಾಲಿಕೆಗಳಲ್ಲಿನ ತಮ್ಮ ವಿಮರ್ಶೆಯಿಂದಾಗಿ ಆ ಪುಸ್ತಕವನ್ನ ಪರಿಚಯಿಸ್ತಾರೆ ಎಂದವನು ಹಂಚಿಕೆ ಹಾಕಿದ್ದ. ಆದರೆ, ಆ ಸಂಚಿಕೆ ಸಂಪೂರ್ಣವಾಗಿ ಸಿದ್ಧವಿದೆ ಎನ್ನುವಷ್ಟರ ಹೊತ್ತಿಗೆ ಆರು ದಿನಗಳ ಮಧ್ಯಪ್ರಾಚ್ಯ ಯುದ್ಧ ಶುರುವಾಯಿತು. ಸಂಪಾದಕರು ಕ್ಷಿಪ್ರವಾಗಿ ತಮ್ಮ ಸಂಚಿಕೆಯ ಮುಖಪುಟ ಹಾಗೂ ಕಾದಂಬರಿಯ ಅಂಶವನ್ನ ತೆಗೆದುಹಾಕಬೇಕಾಯಿತು; ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಬದಲಾವಣೆಗಳನ್ನು ಮಾಡಬೇಕಾಯಿತು. ಆದರೆ ಪುಸ್ತಕದ ಮಳಿಗೆಗಳಿಗೆ ಈ ಪುಸ್ತಕವನ್ನ ಹಿಂದಿತೆಗೆದುಕೊಳ್ಳುವುದು ಅದಾಗಲೇ ವಿಳಂಬವಾಗಿ ಹೋಗಿತ್ತು. ಹಾಗಾಗಿ, ಆ ನಿಯತಕಾಲಿಕೆಯ ಮುಂದಿನ ಸಂಚಿಕೆ ಹೊರಬರುವ ಹೊತ್ತಿಗಾಗಲೇ, ಅಂದರೆ ಮರುವಾರದಷ್ಟು ಹೊತ್ತಿಗೇ, ಎಲ್ಲಾ ಪ್ರತಿಗಳೂ ಮಾರಾಟವಾಗಿ ಹೋಗಿದ್ದವು. ೮೦೦೦ ಪ್ರತಿಗಳಲ್ಲಿ ಒಂದೇ ಒಂದು ಪ್ರತಿಯೂ ಉಳಿಯುಲಿಲ್ಲ. ಇದರಿಂದಾಗಿ, ಮುಂದಿನ ಮೂರು ನಾಲ್ಕು ತಿಂಗಳವರೆಗೆ ಪ್ರಕಾಶಕನಿಗೆ ಕಿಂಚಿತ್ತು ಕಾಗದ ಉಳಿಯಲಿಲ್ಲ; ಅದನ್ನ ಪುನರ್ ಮುದ್ರಿಸುವ ಅವಕಾಶವೂ ಬರಲಿಲ್ಲ. ಅಲ್ಲದೇ, 'One hundred years of Solitude' ನ ಒಂದೇ ಒಂದು ಪ್ರತಿಯನ್ನ ಎಲ್ಲಿಂದಲಾದರೂ ದೊರಕಿಸೋಣವೆಂದರೂ ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ, ಲೇಖಕ ಮತ್ತು ಓದುಗನ ನಡುವೆ ನೇರ ಸಂಪರ್ಕ ಇದರಿಂದಾಗಿಯೆ, ಸಾಧ್ಯವಾಯಿತು. ಆದರೆ, 'ಈ ನಿಕಟ ಸಂಪರ್ಕ ಹೇಗೆ ಸಾಧ್ಯವಾಯಿತು?' ಎಂಬುದು ನನಗಿನ್ನೂ ರಹಸ್ಯವಾಗಿಯೇ ಉಳಿದಿದೆ. ಯಾಕೆಂದರೆ, ಆ ಪ್ರಕಾಶಕನೇ ನನಗೆ ಹೇಳಿದ್ದು, "ಪುಸ್ತಕದ ಮಾರಾಟ ಮುಖ್ಯವಾಗಿ ಬ್ಯೂನಸ್ ಏರಿಸ್‌ನ ಬೀದಿಗಳಲ್ಲಿ ಹಾಗೂ ಭೂಗತಮೆಟ್ರೋಗಳ ಪ್ರವೇಶದ್ವಾರಗಳಲ್ಲಿ ಹೆಚ್ಚಾಗಿತ್ತೇ ಹೊರತು ಪುಸ್ತಕ ಮಳಿಗೆಗಳಲಲ್ಲ" ಅಂತ.

ಅಂದಿನಿಂದ ಆ ಕಾದಂಬರಿಯ ೧೦೦೦೦ ಪ್ರತಿಗಳು ಪ್ರತೀ ತಿಂಗಳಿಗೊಮ್ಮೆ ಪುನರ್ ಮುದ್ರಿತವಾಗ್ತಾ ಇವೆ. ಹಾಗಾಗಿ, ಸ್ಪ್ಯಾನಿಷ್ ಭಾಷೆಯೊಂದರಲ್ಲೇ ಎಷ್ಟು ಪ್ರತಿಗಳು ಹೊರ ಬಂದಿವೆ ಅಂತ ಹೇಳೋದು ತುಂಬಾ ಕಷ್ಟ–ಸುಮಾರು

೨-೩ ಮಿಲಿಯನ್ ಇರಬಹುದು. ಆಮೇಲೆ, ಕಳ್ಳತನದಲ್ಲಿ, ನನ್ನ ಅನುಮತಿ ಪಡೆಯದೇ ಮುದ್ರಿಸಿದ ಪ್ರತಿಗಳೂ ಹೊರ ಬಂದಿವೆ. ನಿಜ ಹೇಳಬೇಕೆಂದರೆ, ಇದು ನನಗೆ ತುಂಬಾ ಸಂತೋಷವುಂಟುಮಾಡಿದೆ. ಯಾಕೆಂದರೆ, ಇದರಲ್ಲಿ ನಷ್ಟಕ್ಕೆ ತುತ್ತಾಗುವವನು ಅಂದ್ರೆ ಅದರ ಪ್ರಕಾಶಕನೊಬ್ಬನೇ. ನಾನು ಇದರಲ್ಲಿ ಕಳೆದುಕೊಳ್ಳುವಂಥದ್ದೇನೂ ಇಲ್ಲ. ಯಾಕೆಂದರೆ ಆ ಪ್ರಕಾಶಕ ತನಗನಿಸಿದ ರೀತಿಯಲ್ಲಿ ನನ್ನೊಡನೆ ವ್ಯವಹಾರ ಇಟ್ಟುಕೊಂಡೇ ಇರ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ, ಈ ಚೋರ ಪ್ರಕಾಶನ ಜೇರಿಯವರು ತಲುಪಲಾರದವರನ್ನೂ ಮುಟ್ಟುತ್ತೆ. ಈ ರೀತಿಯಾಗಿ, ಒಬ್ಬ ನ್ಯಾಯಯುತ ಪ್ರಕಾಶಕ ಸೃಷ್ಟಿಸಿಬಿಟ್ಟ ಶೂನ್ಯವನ್ನ ಇವನು ತುಂಬ್ತಾನೆ.

ಪ್ರ : ಚೋರ ಪ್ರಕಾಶಕರ ಬಗ್ಗೆ ನಿಮ್ಮ ವಿರೋಧವೇನೂ ಇಲ್ಲ ಎಂದಿದರ ಅರ್ಥವೇನು?

ಮಾ : ನನ್ನ ಸಾಹಿತ್ಯದ ಏಜೆಂಟರು ಮತ್ತು ಪ್ರಕಾಶಕರು ಇಂಥ 'ಚೋರ ಪ್ರಕಾಶಕರು' ನನಗೆ ಹಾನಿಯುಂಟು ಮಾಡ್ತಾರೆ ಅಂತ ಹೇಳ್ತಿರ್ತಾರೆ. ಆದರೆ ಯಾರು ಏನೇ ಹೇಳಿದ್ರೂ ಇಂಥ ಪ್ರಕಾಶಕರು ಮಾರಾಟವಾಗದಂಥ ಪುಸ್ತಕಗಳನ್ನ ಪ್ರಕಟಿಸೋದಿಲ್ಲ ಅನ್ನೋದನ್ನ ನಾನು ಚೆನ್ನಾಗಿ ಬಲ್ಲೆ. ನಷ್ಟವನ್ನನುಭವಿಸಿ, ಕೈ ಕಚ್ಚಿಸಿಕೊಳ್ಳೋಕೆ ಅವನು ಯಾವತ್ತೂ ಇಚ್ಛಿಸೋಲ್ಲ. ಅಂಥ ಸಂದರ್ಭದಲ್ಲಿ, ಅಗ್ಗದರದಲ್ಲಿ ಅವನು ಅವುಗಳನ್ನ ಮಾರ್ತಾರೆ. ಹೆಚ್ಚು ಬೆಲೆ ತೆತ್ತು ಕೊಂಡುಕೊಳ್ಳಲಾರದ ಓದುಗರು ಈ ರೀತೀನಾದ್ರೂಕೊಂಡು ಓದುತ್ತಾರೆ. ಉದಾಹರಣೆಗೆ, ಹತ್ತು ಜನ ಕೊಲಂಬಿಯನ್ ವಿದ್ಯಾರ್ಥಿಗಳು 'One hundred years of Solitude'ನ ಒಂದು ಪ್ರತಿಯನ್ನ ತಮ್ಮ ಹಣವನ್ನೆಲ್ಲಾ ಒಟ್ಟುಗೂಡಿಸಿಕೊಂಡ ನಿದರ್ಶನವೊಂದು ನನಗೆ ಗೊತ್ತು. ನಾನು ಆ ಪ್ರತಿಯನ್ನು ನೋಡಿದ್ದೀನಿ. ಅದು ಶಿಥಿಲವಾಗಿ, ಚಿಂದಿಚಿಂದಿಯಾಗಿ ಹೋಗಿತ್ತು; ಆ ಹತ್ತೂ ಜನ ಬರೆದ ಟಿಪ್ಪಣಿಗಳಿಂದ ತುಂಬಿ ಹೋಗಿತ್ತು. ನಾನು ಒಬ್ಬೊಬ್ಬರಿಗೂ ಒಂದೊಂದು ಪ್ರತಿಯನ್ನ ಉಡುಗೊರೆಯಾಗಿ ಕೊಟ್ಟು, ಪ್ರತಿಯಾಗಿ ಅವರಲ್ಲಿದ್ದ ಆ ಪುಸ್ತಕವನ್ನ ಪಡೆದುಕೊಂಡೆ. ಅದು ಈಗಲೂ ನನ್ನ ಬಳಿ ಇದೆ.

ಮತ್ತೆ 'One hundred years of Solitude' ಪುಸ್ತಕದ ಬಗ್ಗೆ ಹೇಳುವುದಾದರೆ,—ಈ ಪುಸ್ತಕದ ಬಾಳ್ವಿಕೆಯ ಬಗ್ಗೆ ನನಗೆ ಹೆಚ್ಚು ಆಸಕ್ತಿಯಿದೆ. ಸಾಹಿತ್ಯಚರಿತ್ರೆಯಲ್ಲಿ ಬಹಳಷ್ಟು ಕೃತಿಗಳು ಇದ್ದಕ್ಕಿದ್ದಂತೇ ಪ್ರಸಿದ್ಧಿ ಪಡೆಯುತ್ತವೆ; ಕ್ರಮೇಣ ಹೇಳಹೆಸರಿಲ್ಲದಂತಾಗಿ, ಯಾರ ಗಮನಕ್ಕೂ ಬಾರದಂತಾಗುತ್ತವೆ. ಕೆಲವೊಮ್ಮೆ ನನ್ನನ್ನು ನಾನೇ ಕೇಳಿಕೊಳ್ಳುತ್ತಿರುತ್ತೇನೆ. 'ಬಿಸಿದೋಸೆಯಂತೆ ಖರ್ಚಾಗುತ್ತಿದ್ದ, ಮತ್ತೆ ಮತ್ತೆ ಓದಿಸಿಕೊಂಡು ಹೋಗುತ್ತಿದ್ದ, ಬೆರಗು ಹುಟ್ಟಿಸುವ ಆ ರೋಚಕ ವೀರಗಾಥೆಗಳು ಎಲ್ಲಿ ಹೋದವು?' ಅಂತ. ಅವು ಆ ಕಾಲದ 'One hundred years of

Solitude' ಆಗಿದ್ದವು. ಈಗ ಅವು ಯಾರಿಗೂ ಗೊತ್ತಿಲ್ಲ....ಹುಂ....ನಾನು ನನ್ನ ಪುಸ್ತಕದ ಮೇಲಾಗುವ ಕಾಲದ ಪರಿಣಾಮದ ಬಗ್ಗೆ ಚಿಂತಿತನಾಗಿದ್ದೇನೆ.

'One hundred years of Solitude' ಪುಸ್ತಕಕ್ಕೆ ಸಂಬಂಧಿಸಿದಂತೆ ಹೇಳಬೇಕೆಂದರೆ, ಅದು ಗಳಿಸುವ ಯಶಸ್ಸಾಗಲಿ, ಬಹಳಷ್ಟು ಪ್ರತಿಗಳು ಖರ್ಚಾಗಿದ್ದ್ವೋ ಖರ್ಚಾಗುತ್ತಿರುವುದೋ ಆಗಲಿ, ಅದು ಭಾಷಾಂತರಗೊಂಡ ಭಾಷೆಗಳ ಸಂಖ್ಯೆಯಾಗಲೀ ನನಗೆ ದೊಡ್ಡದೆನಿಸುವುದಿಲ್ಲ. ಅದು ಇದುವರೆಗೆ ೩೦ಕ್ಕೂ ಹೆಚ್ಚು ಭಾಷೆಗಳಿಗೆ ತರ್ಜುಮೆಗೊಂಡಿದೆ, ಈಗ ಸೋವಿಯತ್ ದೇಶ ತನ್ನ ಪ್ರಾದೇಶಿಕ ಭಾಷೆಗಳಿಗೆ ಅದನ್ನು ಅನುವಾದಿಸುತ್ತಿದೆ—ನನಗೆ ಅದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹಸ್ತಾಂತರಗೊಳ್ಳುವುದು ಮುಖ್ಯ. ತಂದೆ ಓದಿದ್ದು ಮಗನಿಗೆ ಇಷ್ಟವಾಗಬೇಕು. ಮಗನಿಂದ ಅದು ಮೊಮ್ಮಕ್ಕಳಿಗೆ ತಲುಪಬೇಕು. 'ಸಾಹಿತ್ಯದಲ್ಲಿ ಉಳಿಯುವಿಕೆ' ಎಂದರೆ, ಹೀಗೆ—ಅಂತ ನನ್ನ ಅನಿಸಿಕೆ.

ಒಂದು ಪುಸ್ತಕ ವಿಮರ್ಶಕರಿಂದ ಎಷ್ಟೇ ಹೊಗಳಿಸಿಕೊಳ್ಳಲಿ, ಅದರ ಓದುಗರ ಸಂಖ್ಯೆ ಎಷ್ಟೇ ದೊಡ್ಡದಿರಲಿ, ಮಕ್ಕಳು ತಮ್ಮ ಹಿರಿಯರ ಅಭಿರುಚಿಯ ವಿರುದ್ಧ ಬಂಡೇಳುವುದು ಒಂದು ಸ್ವಾಭಾವಿಕ ಹಾಗೂ ಸಾಂಪ್ರದಾಯಿಕ ಲಕ್ಷಣ. ಆದಾಗ್ಯೂ, ತಂದೆ ಮತ್ತು ಮೊಮ್ಮಕ್ಕಳಾದಿಯಾಗಿ—ಅಬಾಲವೃದ್ಧರಾದಿಯಾಗಿ—ಓದಿಸಿಕೊಂಡು ಹೋದ ಅನೇಕ ಕೃತಿಗಳಿವೆ–ಅವು ನನಗೆ ಪ್ರಮುಖವೆನಿಸುತ್ವೆ.

ಪ್ರ : ಪ್ರತಿಯೊಂದು ಜನಾಂಗವೂ ತನ್ನ ಭಾವನೆಗಳ ಪ್ರತಿಧ್ವನಿಯನ್ನು ಒಂದು ಕೃತಿಯಲ್ಲಿ ಕಂಡುಕೊಳ್ಳಲಿಕ್ಕೆ ಪ್ರಯತ್ನಿಸುತ್ತಿರುತ್ತೆ. ಬಹುಶಃ, ಈ ಕಾರಣದಿಂದಾಗಿಯೆ, ವಿಮರ್ಶಕರು ಹುಟ್ಟಿಕೊಳ್ಳೋದು.

ಮಾ : ದುರದೃಷ್ಟವಶಾತ್, ಕೇವಲ ವಿಮರ್ಶಕರ ಹಾಗೂ ಬುದ್ಧಿಜೀವಿಗಳೆನಿಸಿಕೊಂಡ ಓದುಗರ ಪ್ರತಿಕ್ರಿಯೆಗಳಷ್ಟೇ ನನಗೆ ಗೊತ್ತು. ಆದರೆ, ಒಬ್ಬ ಸಾಮಾನ್ಯ ಓದುಗನ ಪ್ರತಿಕ್ರಿಯೆಗಳೇನು?' ಅನ್ನೋದು ಆ ಲೇಖಕನಿಗೆ ತಿಳಿಯೋದೇ ಇಲ್ಲ. ತನ್ನ ಅನಿಸಿಕೆಗಳನ್ನ ಅಭಿವ್ಯಕ್ತಿಸಲು ಅವನಿಗಿರುವ ಅಧೈರ್ಯ ಇದಕ್ಕೆ ಕಾರಣ ಅನಿಸುತ್ತೆ. ಅದು, ಕೀರ್ತಿ ನಿರ್ಮಿಸಿದ ಕಂದಕದಿಂದ ಬಂದಿರಲಿಕ್ಕೂ ಸಾಕು. ಕೆಲವೊಮ್ಮೆ, ನಾನೂ ನನ್ನ ಹೆಂಡತಿ ಮರ್ಸಿಡೆಜ್, ಮನೆಯಲ್ಲಿದ್ದು ಬೇಸರವಾದಾಗ, ಈ ಸಂಜೆ ಯಾರಾದರೂ ನಮ್ಮನ್ನು ತಮ್ಮಲ್ಲಿಗೆ ಆಹ್ವಾನಿಸಬಾರದೇ ಹಂಬಲಿಸುತ್ತಿರುತ್ತೇವೆ. ನಮಗೆ ಹಿಂಡುಗಟ್ಟಲೇ ಸ್ನೇಹಿತರಿದ್ದಾರೆ, ಆದರೆ ಯಾರೊಬ್ಬರೂ ನಮ್ಮನ್ನ ಆಹ್ವಾನಿಸೋಲ್ಲ. ಯಾಕೆಂದರೆ, 'ಆ ದಿನ ನಾವು ನೂರಾರು ಔಪಚಾರಿಕ ಔತಣಕೂಟದಲ್ಲಿ ಭಾಗವಹಿಸುತ್ತಿರುತ್ತೇವೆ' ಅಂತ

ಅವರು ಅಂದುಕೊಂಡಿರ್ತಾರೆ. ಆದ್ದರಿಂದ, ನೀವು ಎಷ್ಟೋ ವೇಳೆ ನಿಮ್ಮ ಪ್ರೀತಿ ಪಾತ್ರರಿಂದ ದೂರನಾಗಿ, ಏಕಾಂಗಿತನವನ್ನು ಅನುಭವಿಸಬೇಕಾಗುತ್ತೆ. ಈ ಏಕಾಂಗಿತನ ಕೀರ್ತಿಯು ಬೆನ್ನಹಿಂದೇ ಬಂದದ್ದು. ಇದಕ್ಕೂ, ಅಧಿಕಾರದಿಂದ ಬಂದ ಏಕಾಂಗಿತನಕ್ಕೂ ಬಹಳ ಸಾಮ್ಯತೆಯಿದೆ.

ಪ್ರ: ಓದುಗರ ಪತ್ರಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ?

ಮಾ: ಒಂದೋ, ಓದುಗ ನನ್ನ ಹಸ್ತಾಕ್ಷರಕ್ಕೆ ಹಂಬಲಿಸ್ತಾನೆ, ಇಲ್ಲವೇ ನನ್ನ ಸೃಜನಶೀಲ ಬರಹದ ಮೇಲೆ ತಾನು ಬರೆದ ಪಿ.ಹೆಚ್‌ಡಿ. ಪ್ರಬಂಧವನ್ನೋ ಅಥವಾ ಪಡೆದ ಪದವಿಯನ್ನೋ ಸಮರ್ಥಿಸಿಕೊಳ್ತಾ ಪ್ರಶ್ನೆಗಳನ್ನ ಕೇಳಲು ಇಷ್ಟಪಡ್ತಾನೆ. ಇಲ್ಲ ವಾದಲ್ಲಿ ಪ್ರೇಮಪತ್ರಗಳಿರುತ್ತವೆ. ನನ್ನ ಪತ್ನಿ ಮರ್ಸಿಡೆಜ್ ಅವುಗಳ ಬಹುದೊಡ್ಡ ಸಂಗ್ರಹವನ್ನೇ ಇಟ್ಟುಕೊಂಡಿದ್ದಾಳೆ. ಅವುಗಳಿಗೆ ಉತ್ತರಿಸಲು ಆಕೆ ನನಗೆ ಅವಕಾಶವನ್ನೇ ಕೊಟ್ಟಿಲ್ಲ ಎಂಬುದು ಬೇರೆ ವಿಷಯ. ಆದರೆ ಅವೆಲ್ಲವನ್ನೂ ಜೋಪಾನವಾಗಿ ಇಟ್ಟಿದ್ದಾಳೆ ಅನ್ನೋದು ಮುಖ್ಯ.

ದುರದೃಷ್ಟವಶಾತ್, ಲೇಖಕ ಮತ್ತು ಓದುಗನ ಸಂಪರ್ಕದ ನಡುವೆ ಉಂಟಾಗುವ ದೊಡ್ಡ ಅಡಚಣೆಯೆಂದರೆ ಓದುಗನಲ್ಲಿರುವ ಹಿಂಜರಿಕೆ. ಬಹಳಷ್ಟು ಜನ ಓದುಗರು 'One hundred years of Solitude'ನ ಕಥೆ ತಮ್ಮ ಕುಟುಂಬದ ಕಥೆಯೇ ಅಂತ ಬರೆದದ್ದು ಹಾಗೂ ಹೇಳಿದ್ದು, ನಿಜ. ಒಪ್ಪಿದೆ. ಆದರೆ ಕ್ಯಾರಿಬಿಯನ್ ದ್ವೀಪದ ಓದುಗನೋ, ಲ್ಯಾಟಿನ್ ಅಮೆರಿಕೆಯ ಓದುಗನೋ, ಈ ರೀತಿ ಹೇಳಿದ್ದರೆ, ಅದರಲ್ಲಿ ಸೋಜಿಗಪಡುವಂಥದ್ದೇನೂ ಇರಲಿಲ್ಲ. ಆದರೆ, ಒಂದು ದಿನ ಜರ್ಮನಿಯ ಪರ್ವತಪ್ರದೇಶದಲ್ಲೆಲ್ಲೋ ವಾಸಿಸುವ ಮಹಿಳೆಯೊಬ್ಬಳಿಂದ ನನಗೆ ಒಂದು ಪತ್ರ ಬಂತು. ನನಗೀಗ ಆಕೆಯ ಹೆಸರು ಮರೆತುಹೋಗಿದೆ. ಆವಳು ಅದರಲ್ಲಿ, 'One hundred years of Solitude'ನ ಕಥೆ ಅವಳ ಕುಟುಂಬದ ಕಥೆಯೆಂತಲೂ, ಮ್ಯಾಕಂಡೋ ಅವಳ ಹಳ್ಳಿಯೇ ಅಂತಲೂ ಬರೆದಿದ್ದಳು.

ಇದು, ನಾನು ಏಕೆ 'One hundred years of Solitude' ಕೃತಿಯನ್ನು ಆಧರಿಸಿ ಸಿನಿಮಾ ಮಾಡುವುದನ್ನು ಉಗ್ರವಾಗಿ ವಿರೋಧಿಸಿದೆ ಎಂಬುದಕ್ಕೆ ವಿವರಣೆ ನೀಡುತ್ತೆ. ಅದಕ್ಕೆ ನಾನು ಯಾವಾಗಲೂ ವಿರೋಧ ವಾಗಿಯೂ ಇದ್ದೆ. ಆದರೆ ಈ ಮಧ್ಯೆ, ಅಮೆರಿಕಾದ ಕೆಲವು ನಿರ್ದೇಶಕರು ಚಿತ್ರ ತಯಾರಿಸಲು ತಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು; ನಾನು ಶಾಂತಿಯಿಂದಿರ ಲಿಕ್ಕೇ ಬಿಡಲಿಲ್ಲ. ಹೆಚ್ಚುಹೆಚ್ಚು ಹಣ ಕೊಡುವ ಆಮಿಷ ತೋರಿಸುತ್ತಲೇ ಇದ್ದರು. ಪ್ರಾರಂಭದಲ್ಲಿ, ಅಂದ್ರೆ ಸುಮಾರು ೧೨ ವರ್ಷಗಳ ಹಿಂದೆ, ಎಷ್ಟೊಂದು ಒತ್ತಡ ತಂದರು ಅಂದ್ರೆ, ಅವರಿಂದ ತಪ್ಪಿಸಿಕೊಳ್ಳೋದಿಕ್ಕಾಗಿ, 'ಮಿಲಿಯನ್ ಡಾಲರ್ ಕೊಟ್ಟರೆ ಮಾತ್ರ ಅನುಮತಿ ಕೊಡುತ್ತೇನೆ' ಅಂತ ಹೇಳಬೇಕಾಯ್ತು. ಇದನ್ನು

ಕೇಳಿ ಅನೇಕ ನಿರ್ದೇಶಕರು ಹಿಮ್ಮೆಟ್ಟಿದರು. ಕೆಲಕಾಲದ ನಂತರ ಅವರು ಅಷ್ಟು ಹಣವನ್ನು ಕೊಡಲು ಮುಂದೆ ಬಂದದ್ದರಿಂದ ಅದನ್ನು ಎರಡು ಮಿಲಿಯನ್‌ಗೆ ಏರಿಸಬೇಕಾಯ್ತು. ಆದರೆ ಈಗವರು ಮೂರು ಮಿಲಿಯನ್ ಕೊಡಲಿಕ್ಕೂ ತಯಾರಾಗಿದ್ದಾರೆ.

ನನ್ನ ಈ ವಿರೋಧಕ್ಕೆ ನಿಜವಾದ ಕಾರಣವೇನೆಂದರೆ, ನನ್ನ ಪ್ರತಿಯೊಬ್ಬ ಓದುಗನೂ ಈ ಕಾದಂಬರಿಯ ನಾಯಕರ ಬಗ್ಗೆ ತನ್ನದೇ ಆದ ಕಲ್ಪನೆಯನ್ನ ಮೂಡಿಸಿಕೊಳ್ಳಬೇಕು ಅನ್ನೋ ನನ್ನ ಹಂಬಲ. ಒಬ್ಬ ಓದುಗ ಉರ್ಸುಲಾಳನ್ನು ತನ್ನ 'ಅಜ್ಜಿ' ಅಂತ ಭಾವಿಸಿದರೆ, ಇನ್ನೊಬ್ಬ ಓದುಗ ಅವಳನ್ನು ತನ್ನ 'ಸೋದರಿ' ಅಂತ ಭಾವಿಸೋ ರೀತಿ ನನಗೆ ತುಂಬಾ ಇಷ್ಟ. ಆದರೆ ತೆರೆಯ ಮೇಲೆ ಪ್ರತಿಯೊಂದು ಪಾತ್ರಕ್ಕೂ ನಿರ್ದಿಷ್ಟ ಮುಖವಿರುತ್ತೆ. ಈ ವಿಷಯದಲ್ಲಿ ನನ್ನ ಊಹೆ ತಪ್ಪಿರ ಬಹುದು. ಆದರೆ, ಇದು ಜನರಿಗೆ ನಿರಾಶೆಯನ್ನುಂಟುಮಾಡೋದಂತೂ ನಿಜ ಅಂತ ನನಗನ್ನಿಸುತ್ತೆ. ಎಂಥ ಸಂದರ್ಭದಲ್ಲೂ ನನ್ನ ಓದುಗನಿಗೆ ನಿರಾಶೆಯುಂಟು ಮಾಡೋ ರಿಸ್ಕ್ ತೆಗೆದುಕೊಳ್ಳಲಿಕ್ಕೆ ನಾನು ಸಿದ್ಧನಿಲ್ಲ. ಅವರು, ಉರ್ಸುಲಾ ಸೋಫಿಯಾ ಲಾರೆನ್‌ಳನ್ನು ಹೋಲ್ತಾಳೆ ಅಂತ ಭಾವಿಸೋದಕ್ಕಿಂತ, ತನ್ನ ಅಜ್ಜಿಯನ್ನೋ ತಂಗಿಯನ್ನೋ ಹೋಲ್ತಾಳೆ ಅನ್ನೋದೆ ಚೆಂದ. ಅವಳು ತುಂಬಾ ಸುಂದರಿಯಾಗಿರಬೇಕೆಂದೇನೂ ಇಲ್ಲ; ಆದರೆ ಅವರು ಕಲ್ಪಿಸಿಕೊಳ್ಳುವ ರೀತಿ, ಅವರೊಂದಿಗೆ ಲೇಖಕನಿಗೆ ಇರೋ ನಿಜವಾದ ಸಂಬಂಧವನ್ನು ಸೂಚಿಸುತ್ತೆ. ಕೇವಲ ಇದು—ನಿಜವಾದ ಸಂಬಂಧ ಅಂತ ನಾನು ಭಾವಿಸ್ತೀನಿ.

ಪ್ರ: ಒಂದು ಕಾದಂಬರಿಯ ಸಿನಿಮಾ ಅವತರಣಿಕೆ ಆ ಕಾದಂಬರಿಯ ಪ್ರತಿಮಾಗುಣ ವನ್ನೇ ನಾಶಪಡಿಸುತ್ತೆ ಅಂತ ನಿಮ್ಮ ಭಾವನೆಯೆ?

ಮಾ: ಹೌದು, ನಿಸ್ಸಂದೇಹವಾಗಿ ಪ್ರತಿಮಾಗುಣದ ಕೊಲೆಯೆಂತಲೇ ಅದರರ್ಥ. ಯಾಕೆಂದರೆ, ಒಂದು ಚಲನಚಿತ್ರದಲ್ಲಿ 'ನೋಡು, ಅವನು ಹೀಗಿದ್ದ' ಅಂತ ಹೇಳಿದಾಕ್ಷಣ ನೀವು ನಿರಾಶರಾಗಲೇಬೇಕಾಗುತ್ತೆ. ನಾನು, 'One hundred years of Solitude' ಪುಸ್ತಕದ ಹಕ್ಕನ್ನು ಮೂರು ಮಿಲಿಯನ್‌ಗೆ ಮಾರು ತ್ತಿದ್ದೇನೆಂತಲೂ, ಅದರಿಂದ ಲ್ಯಾಟಿನ್ ಅಮೆರಿಕಾದಲ್ಲಿ ಒಂದು ಕ್ರಾಂತಿಯನ್ನೇ ಹುಟ್ಟುಹಾಕಬಹುದೆಂದೂ ಹೇಳಿದಾಗ, ಅರ್ನೆಸ್ಟೋ ಕಾರ್ಡೆನಲ್ ನನಗೆ ಫೋನಿಸಿ ಹೇಳಿದ—'ಆ ಪುಸ್ತಕದ ಹಕ್ಕನ್ನ ಮಾರಿಬಿಡು, ಕ್ರಾಂತಿಯನ್ನ ಹುಟ್ಟು ಹಾಕಲು ಪ್ರಯತ್ನಿಸೋಣ' ಅಂತ. ಆದರೆ ಆ ಪುಸ್ತಕ ಇಲ್ಲದೆಯೇ ಅವರು ಕ್ರಾಂತಿಯನ್ನೆಸಗಿದರು. ಹಾಗಾಗಿ, ಆ ಪುಸ್ತಕ ಇನ್ನೊಂದು ಕ್ರಾಂತಿಯ ಉಗಮದ ಕ್ಷಣಕ್ಕಾಗಿ ಇನ್ನೂ ಕಾಯುತ್ತಲೇ ಇದೆ.

ಪ್ರ: ನಿಮ್ಮನ್ನು ಗಾಢವಾಗಿ ಪ್ರಭಾವಿಸಿದ ಯಾರಾದರೂ ಮೂರುಜನ ಲೇಖಕರನ್ನು ಒಬ್ಬ ಓದುಗನಾಗಿ, ಲೇಖಕನಾಗಿ, ನೀವು ಹೆಸರಿಸುತ್ತೀರಾ?

ಮಾ: ನನಗಿನ್ನೂ 'ಸಾಹಿತ್ಯಿಕ ಪ್ರಭಾವ'ದ ಅರ್ಥವೇ ಸರಿಯಾಗಿ ನಿಲುಕದ್ದರಿಂದ, ಇಬ್ಬರನ್ನೋ, ಹತ್ತು ಜನರನ್ನೋ ಅಥವಾ ೨೦ ಜನರನ್ನೋ ಹೆಸರಿಸುವುದು ಸೂಕ್ತವೇ' ಅನ್ನೋದು ನನ್ನ ಅಳುಕು. ಇದಕ್ಕೆ ಏನಾದರೊಂದು ಸಾಮಾನ್ಯ ಉತ್ತರ ಕೊಟ್ಟುಬಿಡುತ್ತೇನೆ. ಯಾಕೆಂದರೆ, ಸಾಹಿತ್ಯಿಕ ಪ್ರಭಾವ ಅಂದರೇನು, ಅದು ತನ್ನಷ್ಟಕ್ಕೆ ತಾನೇ ಹೇಗೆ ಪ್ರಕಟಗೊಳ್ಳುತ್ತೆ' ಅಂತ ತಿಳಿದುಕೊಳ್ಳೋ ಆಸೆ ನನಗೂ ಇದೆ.

ಒಮ್ಮೆ, 'Autumn of the Patriarch'ನ ಹೇಗೆ ಮುಂದು ವರಿಸುವುದು ? ಎಂಬ ತೊಳಲಾಟದಲ್ಲಿದ್ದಾಗ, ಹೆಮಿಂಗ್‌ವೇನ ಮುನ್ನುಡಿಯಿದ್ದ 'Hunting in Africa' ಎಂಬ ಪುಸ್ತಕವೊಂದು ಸಿಕ್ಕಿತು. ಮುನ್ನುಡಿ ಅಷ್ಟೇನೂ ಚೆನ್ನಾಗಿರಲಿಲ್ಲ, ಆದರೆ ಪುಸ್ತಕ ಕೈಯಲ್ಲಿದ್ದುದರಿಂದ, ಬೇಟೆ ಹಾಗೂ ಆನೆಗಳ ಸ್ವಭಾವಗಳ ಬಗ್ಗೆ ನಾನು ಓದನ್ನು ಮುಂದುವರಿಸಿದೆ. ಆನೆಗಳ ಸ್ವಭಾವ, ನಡುವಳಿಕೆಯ ಬಗ್ಗೆ ಓದುತ್ತಿರುವಾಗ, ನನ್ನ ತಪ್ಪಿರುವುದೆಲ್ಲಿ ಹಾಗೂ ನಾನು ಹೇಗೆ ಬರೆಯಬೇಕು ಎಂಬುದು ತತ್‌ಕ್ಷಣ ಹೊಳೆಯಿತು. ಬೇರೆ ಮಾತಿನಲ್ಲಿ ಹೇಳ ಬೇಕೆಂದರೆ, ತೀರಾ ಅನಿರೀಕ್ಷಿತ ರೀತಿಯಲ್ಲಿ ನನ್ನ ನಾಯಕನ ವ್ಯಕ್ತಿತ್ವ ಹಾಗೂ ನಡುವಳಿಕೆ ಹೇಗಿರಬೇಕು ಎಂಬುದಕ್ಕೆ ಸುಳಿವು ದೊರೀತು.

ಎಲ್ಲಾ ರೀತಿಯ ಪ್ರಭಾವವನ್ನೂ ಗುರುತಿಸುವುದು ತುಂಬಾ ಕಷ್ಟದ ಕೆಲಸ. ಎಷ್ಟೋ ವೇಳೆ ವಿಮರ್ಶಕರು ಕೆಲವೊಂದು ನಿರ್ದಿಷ್ಟ ಪುಸ್ತಕಗಳ ಪ್ರಭಾವ ಲೇಖಕನಲ್ಲಿ ಗುರುತಿಸಿರ್‍ತಾರೆ, ಆದರೆ ಅವುಗಳನ್ನ ಲೇಖಕ ತನ್ನ ಜನ್ಮದಲ್ಲೇ ಓದಿರೋಲ್ಲ. ಆದರೆ, ಇದು ಸಂಪೂರ್ಣವಾಗಿ ವಿಮರ್ಶಕನ ತಪ್ಪು ಅಂತ ಹೀಗಳೆಯೋ ಹಾಗಿಲ್ಲ. ಯಾಕೆಂದರೆ, ಎಷ್ಟೋ ಬಾರಿ, ಲೇಖಕ ಆ ಪುಸ್ತಕಗಳನ್ನ ತಾನೇ ಓದಿರದಿದ್ದರೂ, ಅವುಗಳನ್ನ ಓದಿದ ಇನ್ನೊಬ್ಬ ಲೇಖಕನಿಂದ ಪ್ರಭಾವಿತ ನಾಗಿರಲು ಸಾಧ್ಯ.

ನನ್ನ ಮೇಲೆ ಗಾಢ ಪ್ರಭಾವ ಬೀರಿದವರಲ್ಲಿ ಫ್ರಾನ್ಜ್ ಕಾಫ್ಕಾ ಒಬ್ಬ. ಬರೆಯಬೇಕೆಂಬ ತುಡಿತ ನಾನಿನ್ನೂ ಸ್ಕೂಲಿನಲ್ಲಿ ಓದುತ್ತಿರುವಾಗಲೇ ಬಲ ವಾಗಿತ್ತು. ನಾನು ಓದಿದ ಲೇಖಕರೆಲ್ಲರನ್ನೂ ಮೀರಿಸಿ ಮುಂದೆ ಹೋಗಬೇಕು ಅನ್ನೋ ಆಕಾಂಕ್ಷೆ ಇತ್ತು. ವಿಶ್ವವಿದ್ಯಾಲಯಕ್ಕೆ ಸೇರಿದಮೇಲೆ, ಒಂದು ರಾತ್ರಿ, ಕಾಫ್ಕಾನ ಸಣ್ಣ ಕತೆಗಳ ಸಂಕಲನ 'Metamorphosis' ಓದಲು ಸಿಕ್ಕಿತು. ಅದನ್ನು ಓದುತ್ತಾ ಹೋದಂತೇ, ಯೋಚನೆಯೊಂದು ರೂಪಗೊಳ್ಳುತ್ತಿತ್ತು, ಇದನ್ನೇ 'ಸಾಹಿತ್ಯ' ಅಂತ ಕರೆಯುತ್ತಾರೆ.ಅಂದ್ರೆ,ಇದು ನಿಜವಾಗಲೂ ಬರೆಯಲು ಯೋಗ್ಯವಾದದ್ದು ಅಂತ. ಅದರಲ್ಲಿ ಬರೆದದ್ದೆಲ್ಲಾ ಸಾಧ್ಯ ಅಂತ ಮೊದಲು ನನಗೆ ಅನಿಸಿರಲಿಲ್ಲ, ಅದು ನಿಷೇಧಿಸಲ್ಪಟ್ಟಿದೆ ಅಂತಲೇ ಅಂದುಕೊಂಡಿದ್ದೆ. ಆದರೆ ಅದನ್ನ ಓದಿದಮೇಲೆ ಜನರಿಗೆ ಹೇಳಲು ನನ್ನ ಬಳಿಯೂ ವಿಷಯ ಸಾಮಗ್ರಿ ಇದೆ ಅನ್ನಿಸ್ತು. ಮಾರನೆಯ ದಿನದಿಂದಲೇ ನಾನು ಬರೆಯಲಿಕ್ಕೆ ಪ್ರಾರಂಭಿಸಿದೆ.

ಕಾಫ್ಕಾನ ಪ್ರಭಾವವನ್ನ ಇತ್ತೀಚೆಗಷ್ಟೇ ಹೊರಬಂದ ನನ್ನ ಸಣ್ಣಕತೆಗಳ ಸಂಕಲನದಲ್ಲಿ ಕಾಣಬಹುದು. ಅವೆಲ್ಲಾ ನನ್ನ ಪ್ರಾರಂಭಿಕ ಕಥೆಗಳು. ಸ್ವಲ್ಪಕಾಲದ ಹಿಂದೆ ಅವುಗಳನ್ನ ಮತ್ತೊಮ್ಮೆ ಓದಿದಾಗ, ಅವು ಬೌದ್ಧಿಕವಾಗಿ ತುಂಬಾ ಎತ್ತರದ ಸ್ತರದಲ್ಲಿವೆ ಅನಿಸ್ತು. ನನ್ನ ದೈನಂದಿನ ಸಾಮಾನ್ಯ ಜೀವನಕ್ಕೂ, ಅವುಗಳಲ್ಲಿದ್ದ ತಾರ್ಕಿಕತೆಗೂ ಯಾವುದೇ ಸಂಬಂಧ ಆಗಲೂ ಇರಲಿಲ್ಲ; ಈಗಲೂ ಇಲ್ಲ ನಂತರ ನಾನು ಹುಟ್ಟಿದ ಹಳ್ಳಿಗೆ ವಾಪಸಾದೆ. ಕಾಫ್ಕಾನನ್ನೂ ಒಳಗೊಂಡು, ನಾನಿದುವರೆಗೆ ಹೊಂದಿದ್ದ ವಿಷಯಸಾಮಗ್ರಿ ಬಹಳ ತೆಳುವಾದದ್ದೆಂದೂ, ನಾನೀಗ ನೋಡುತ್ತಿದ್ದ ಸತ್ಯದ ಚಿತ್ರಣವೇ ಬೇರೆ ಎಂಬುದನ್ನೂ ನಾನು ಮನಗಂಡೆ. ನಾನು ಬರೆಯಬೇಕೆಂದುಕೊಂಡದ್ದಕ್ಕೆ ನನ್ನಲ್ಲಿದ್ದ ವಿಷಯಸಾಮಗ್ರಿ ವ್ಯತಿರಿಕ್ತವಾಗಿತ್ತು.

ನಾನು ನನ್ನ ಬಾಲ್ಯಜೀವನದ ಅನುಭವಗಳ ಬಗ್ಗೆ ಬರೆಯಬೇಕೆಂದುಕೊಂಡಿದ್ದೆ. ನಾನಾಗ, ನನ್ನ ಹಳ್ಳಿ ಅರಕಟಕಕ್ಕೆ ನನ್ನ ಮನೆಗೆ, ನನ್ನ ತಾಯಿಯಲ್ಲಿಗೆ ಹಿಂದಿರುಗಿದ್ದೆ. ೮ ವರ್ಷದವನಾಗಿದ್ದಾಗ ಆ ಹಳ್ಳಿಯನ್ನು ಬಿಟ್ಟವನು ನಾನು, ಈಗ ೨೦-೨೨ ರ ಪ್ರಾಯದವನಾಗಿ ಹಿಂದಿರುಗಿದ್ದೆ. ನನ್ನನ್ನು ದಿಗ್ಮೂಢಗೊಳಿಸಿದ ಅನೇಕ ಅನುಭವಗಳಲ್ಲೊಂದಕ್ಕೆ ನಾನಲ್ಲಿ ನನ್ನನ್ನೀಡುಮಾಡಿಕೊಂಡೆ. ಆ ಹಳ್ಳಿಯ ಪ್ರತಿಯೊಂದೂ—ಜನ, ವಸ್ತು, ಎಲ್ಲ—ತುಸು ದೊಡ್ಡದಾಗಿದ್ದನ್ನೋ ಅಥವಾ ಸಣ್ಣದಾಗಿದ್ದನ್ನೋ ಹೊರತುಪಡಿಸಿ, ಮೊದಲು ಹೇಗಿದ್ದಿತೋ ಹಾಗೇ ಇದ್ದುದನ್ನ ಕಂಡುಕೊಂಡೆ. ಮೊದಲು ಅಗಲವಾಗಿ ತೋರುತ್ತಿದ್ದ ರಸ್ತೆಗಳು ಈಗ ಅತೀ ಕಿರಿದಾಗಿಯೂ, ಮನೆಯ ಮಾಡು, ತುಂಬಾ ಎತ್ತರವೆಂದು ನಾನಂದುಕೊಂಡದ್ದು, ಈಗ ಅತ್ಯಂತ ಕೆಳಗಿದ್ದಂತೆಯೂ, ದೊಡ್ಡ ಸ್ನಾನಗೃಹಗಳೂ, ನೀರಿನ ತೊಟ್ಟಿಗಳೂ, ಅತ್ಯಂತ ಚಿಕ್ಕವಾಗಿಯೂ ನನಗೆ ಕಂಡುಬಂದವು. ನನ್ನ ಸುತ್ತಲಿನ ಪ್ರಪಂಚ ಒಮ್ಮೆಲೇ ಕುಗ್ಗಿದಂತೆ, ಸಂಕುಚಿಸಿದಂತೆ, ನನಗೆ ಭಾಸವಾಯಿತು. ಯಾರೋ ಒಬ್ಬರು ನನ್ನೆಲ್ಲಾ ಹಳೆಯ ನೆನಪುಗಳ ಒಂದು ಕುಬ್ಜ ಮಾದರಿಯಾಗಿ ಈ ಹಳ್ಳಿಯನ್ನು ಬದಲಾಯಿಸಿಬಿಟ್ಟಿದ್ದಾರೆ ಅಂತ ಅನ್ನಿಸುತ್ತಿತ್ತು. ಈ ಭಾವನೆ, ನಾನು ವಿಲಿಯಂ ಫಾಕ್‌ನರ್‌ನ ಕೃತಿಗಳನ್ನು ಓದುವವರೆಗೂ ನನ್ನ ಮನಸ್ಸಿನಲ್ಲಿತ್ತು. ಮುಂದೆ, ನನ್ನಮೇಲೆ ಫಾಕ್‌ನರ್‌ನ ಪ್ರಭಾವನನ್ನ ಗುರುತಿಸಿಕೊಂಡಾಗ, ವಾಸ್ತವವಾಗಿ ನಮ್ಮಿಬ್ಬರಲ್ಲೂ ತುಂಬಾ ಸಾಮ್ಯತೆಯಿದೆ ಅನ್ನಿಸ್ತು.

ಫಾಕ್‌ನರ್ ತನ್ನ ಕೃತಿಗಳಲ್ಲಿ ವರ್ಣಿಸಿದ, ಪಶ್ಚಿಮ ಅಮೆರಿಕೆಯ ಸ್ಥಳಗಳಲ್ಲೆಲ್ಲಾ ನಾನು ತಿರುಗಾಡಿದೆ. ಅವಕ್ಕೂ ನನ್ನ ಹಳ್ಳಿ ಅರಕಟಕಕ್ಕೂ ಇರುವ ಅದ್ಭುತವಾದ ಹೋಲಿಕೆಗಳನ್ನ ಕಂಡೆ. ಈ ಹೋಲಿಕೆ, ನಿಮಗೇ ಗೊತ್ತಿದ್ದಂತೆ, ತುಂಬಾ ಸರಳವಾದ ಕಾರಣದಿಂದ ಬಂದದ್ದು. ವಾಸ್ತವವಾಗಿ ಅರಕಟಕ, United fruit company ಯಿಂದ ನಿರ್ಮಿತವಾದದ್ದು. ಈ United fruit company ವಾಸ್ತುಶಿಲ್ಪ, ರೈಲ್ವೇ ವ್ಯಾಗನ್,

ಹುಲ್ಲುಗಾವಲು, ಝಿಂಕ್ ಲೇಪಿತ ಛಾವಣಿಯು ಆದಿಯಾಗಿ—ಎಲ್ಲವನ್ನೂ ಎಲ್ಲಾ ಕೌಟುಂಬಿಕ ಸಂಸ್ಕೃತಿಯನ್ನೂ ಪಶ್ಚಿಮ ಅಮೆರಿಕೆಯಿಂದಲೇ ಪಡೆದದ್ದು.

ಆದರೆ ಇದೆಲ್ಲವನ್ನೂ ನಾನು ನೋಡಿದ್ದು ತುಂಬಾ ಕಾಲದ ನಂತರ ಅಂದರೆ, ಅಭಿವ್ಯಕ್ತಿಯ ಮಾರ್ಗಗಳನ್ನೂ, ವಿಭಾಗಗಳನ್ನೂ ಅನ್ವೇಷಿಸಲು ಶುರು ಮಾಡಿದ ನಂತರ ನಾನು ಫಾಕ್‌ನರ್‌ನಿಂದ ಈ ವಿದ್ಯೆಯನ್ನ ಕಲಿತೆ. ಯಾಕೆಂದರೆ, ಯಾವುದನ್ನು ವರ್ಣಿಸಬೇಕೆಂದು ನಾನು ತಹತಹಿಸಿದೆನೋ ಅದೆಲ್ಲವನ್ನೂ ಅವನು ವರ್ಣಿಸುತ್ತಿದ್ದ, ಮಾತನಾಡುತ್ತಿದ್ದ ಪ್ರಪಂಚದಲ್ಲಿ ನಾನು ಕಂಡಿದ್ದೆ. ಆದ್ದರಿಂದಲೇ ನನ್ನ ಮೇಲೆ ಫಾಕ್‌ನರ್‌ನ ಪ್ರಭಾವವನ್ನ ಗುರುತಿಸುವುದು ತುಂಬಾ ಸಮಂಜಸವೆಂತಲೇ ನನ್ನ ಭಾವನೆ.

ಇದಾದಮೇಲೆ, ನಾನು ತುಂಬಾ ವಿಚಿತ್ರವಾದ ಪ್ರಭಾವವೊಂದಕ್ಕೊಳಗಾದೆ. ಯಾವೊಬ್ಬ ವಿಮರ್ಶಕನೂ ಈ ಪ್ರಭಾವವನ್ನ ಸಂಶೋಧಿಸಿಲ್ಲವಾದರೂ ನಾನು ಈ ಪ್ರಭಾವವನ್ನ ಚೆನ್ನಾಗಿ ಗುರುತಿಸಬಲ್ಲೆ—ಅದು ವರ್ಜಿನಿಯಾ ವೂಲ್ಫ್‌ಳ ಪ್ರಭಾವ. ವರ್ಜೀನಿಯಾ ವೂಲ್ಫ್ ಜಗತ್ತಿನ ಹಾಗೂ ಅದರಲ್ಲಿರುವ ವಸ್ತುಗಳ ಬಗ್ಗೆ ಒಂದು ಮೂಲಭೂತವಾದ ಹಾಗೂ ಅಪರೂಪವಾದ ತೀಕ್ಷ್ಣಪ್ರಜ್ಞೆ ಯೊಂದನ್ನು ಹೊಂದಿದ್ದಾಳೆ. ಮುಖ್ಯವಾಗಿ ಅವಳ ಕಾಲಪ್ರಜ್ಞೆ ನನ್ನ ಬರವಣಿಗೆಗೆ ತುಂಬಾ ಸಹಾಯ ಮಾಡಿತು.

ನಾನೀಗ ಹೇಳಿದ ಈ ಮೂರು ಲೇಖಕರಲ್ಲಿ ಯಾರೊಬ್ಬರೂ ಸ್ಪ್ಯಾನಿಷ್ ಲೇಖಕರಿಲ್ಲ ಅಂತ ನಿಮಗೆ ಆಶ್ಚರ್ಯವಾಗಿರಬಹುದು. ಆದರೆ ಒಂದು ರೀತಿಯಲ್ಲಿ ಅತ್ಯಂತ ಗಾಢವಾದ ಇನ್ನೊಂದು ಪ್ರಭಾವ ನನ್ನಮೇಲಿದೆ. ಇದು, ಸ್ವರ್ಣಯುಗದ ಸ್ಪ್ಯಾನಿಷ್ ಕಾವ್ಯ. ಬೇರೊಂದು ರೀತೀಲಿ ಹೇಳೋದಾದ್ರೆ, ಯಾವ ಸ್ಪ್ಯಾನಿಷ್ ಭಾಷೆ ಹಾಗೂ ಕವಿತೆಗಳು ನನ್ನನ್ನ ವಿದ್ಯಾವಂತನನ್ನಾಗಿಸಿದ್ದವೋ ನನ್ನ ಕೃತಿಗಳಿಗೆ ಆಧಾರವೊದಗಿಸಿದ್ದವೋ ಅವುಗಳೆಲ್ಲದರ ಬೇರು ಈ ಸ್ವರ್ಣಯುಗದ ಕಾವ್ಯದಲ್ಲಿ ಹಾಗೂ ರೊಮ್ಯಾನ್ಸೆರೋನ ಕವಿತೆಗಳಲ್ಲಿ ಇತ್ತು. ಬರೆಯಬೇಕೆಂದು ತುಡಿದ, ಆದರೆ ಹೇಗೆ ಬರೆಯಬೇಕು ಎಂದು ತಿಳಿಯದೇ ಒದ್ದಾಡಿದ ಆ ದಿನಗಳಲ್ಲಿ ನಾನು ಕವನ, ಕಾವ್ಯಗಳನ್ನು ತುಂಬಾ ಓದುತ್ತಿದ್ದೆ. ಕಾವ್ಯ ನನ್ನ ಆಹಾರವಾಗಿತ್ತು. ಹಾಗಾಗಿ ಸ್ಪ್ಯಾನಿಷ್ ಕವಿತೆಗಳು ನನಗೆ ಚೆನ್ನಾಗಿ ಗೊತ್ತು, ಅವುಗಳಲ್ಲಿ ಅನೇಕ ಕವಿತೆಗಳನ್ನು ನಾನು ಕಂಠಪಾಠ ಮಾಡಿದ್ದೇನೆ. ಇವೆಲ್ಲಾ ನನ್ನ ಕಾರ್ಯದಲ್ಲಿ ಸಹಕಾರಿಯಾದವು. ಇದರ ಜೊತೆಗೇ, ಕೊಲಂಬಿಯಾದ ಅಟ್ಲಾಂಟಿಕ್ ಕರಾವಳಿಯ, ಹಾಗೂ ಕ್ಯಾರಿಬಿಯನ್ ದ್ವೀಪಗಳ ಜನಪದ ಗೀತೆಗಳೂ ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಇವೆಲ್ಲಾ ತಮ್ಮದೇ ಆದ ವಿಶಿಷ್ಟ ನಿರೂಪಣಾ ಶೈಲಿಯನ್ನು ಹೊಂದಿವೆ. ಇವು ವರ್ಣಿಸಲು ಹೋಗುವು ದಿಲ್ಲ, ಯಾಕೆಂದರೆ ವರ್ಣನೆ ಸಂಗೀತದೊಡನೆ ಹೊಂದುವುದಿಲ್ಲ. ಬದಲಾಗಿ, ಅವರ ಹಾಡುಗಳು ಭಾವನಾತ್ಮಕ ನೆಲೆಗಟ್ಟಿನಮೇಲೆ ನಿಂತಿವೆ. ಈ ಎಲ್ಲಾ ನಿರ್ಧಾರಗಳನ್ನು ನಾನು ತುಂಬಾ ತಡವಾಗಿ ರೂಪಿಸಿಕೊಂಡೆ ಎಂಬುದು ನಿಜ.

ಆ ಗಳಿಗೆಯಲ್ಲಿ, ಆ ಹಾಡುಗಳು ನಾನು ಚಿತ್ರಿಸಬೇಕೆಂದುಕೊಂಡ ಪ್ರಪಂಚವನ್ನೇ ಚಿತ್ರಿಸುತ್ತಿವೆ ಎಂಬುವನ್ನಷ್ಟೇ ನಾನು ಗಮನಿಸಿದ್ದೆ.

ನನ್ನ ಮೇಲಾದ ಕ್ಯಾರಿಬಿಯನ್ ಆದಿವಾಸಿಗಳ ಸಂಗೀತದ ಪ್ರಭಾವವನ್ನೂ ನಾನಿಲ್ಲಿ ಒಪ್ಪಿಕೊಳ್ಳಲೇಬೇಕು. ಇದು, Autumn of the patriarchನಲ್ಲಿ ತುಂಬಾ ಪ್ರಜ್ಞಾಪೂರ್ವಕವಾಗಿ ಮಿಳಿತಗೊಂಡಿದೆ. ಈ ದಿಸೆಯಲ್ಲಿ, Autumn of the patriarch ನ್ನು ಇತರ ಭಾಷೆಗಳಿಗೆ ತರ್ಜುಮೆ ಮಾಡುವ ಅನುವಾದಕರ ಸಂಕಷ್ಟಗಳನ್ನು ನಾನಿಲ್ಲಿ ಕಲ್ಪಿಸಿಕೊಳ್ಳಬಲ್ಲೆ. ಪುಸ್ತಕದ ತುಂಬಾ ಕ್ಯಾರಿಬಿಯನ್ ಜಾನಪದ ಗೀತೆಗಳು ಇಡಿಕಿರಿದಿವೆ. ಅವರಲ್ಲಿ ಕ್ಯೂಬಾದ ಹಾಡಿವೆ, ಮೆಕ್ಸಿಕೋದ ಗೀತೆಗಳಿವೆ, ಪೋರ್ಟೋರಿಕೋದ ಹಾಡೊಂದಿದೆ. ಇವೆಲ್ಲಾ, ನಿಜ ಹೇಳಬೇಕೆಂದರೆ, ಪ್ರಜ್ಞಾಪೂರ್ವಕವಾಗಿಯೇ ಸೇರಿಸಲ್ಪಟ್ಟವು. ಅದು, ಲೇಖಕ ತುಂಬಾ ಹರ್ಷಿಸಿದ ಒಂದು ರೀತಿಯ ಸಾಹಿತ್ಯಿಕ ವಿನೋದವಾಗಿತ್ತು. ಆದರೆ, ಹಾಡುಗಳು ಪುಸ್ತಕದ ತುಂಬಾ ಹರಡಿಹೋಗಿವೆ. ಇದಲ್ಲದೇ ಪುಸ್ತಕ ದುದ್ದಕ್ಕೂ ರೊಬೆನ್ ಡೇರಿಯೋನ ಭಾವಗೀತೆಗಳು ಚೆಲ್ಲುವರಿದಿವೆ. ಎಲ್ಲಾ ಅನುವಾದಕರೂ ಎದುರಿಸಬೇಕಾದ ಮುಖ್ಯ ತೊಂದರೆ ಏನೆಂದರೆ, ರೊಬೆನ್ ಡೇರಿಯೋ ಸ್ಪ್ಯಾನಿಷ್ ಪ್ರಪಂಚದ, ಅಥವಾ ಲ್ಯಾಟಿನ್ ಅಮೆರಿಕೆಯ ಜನರನ್ನು ಹೊರತಃಪಡಿಸಿ, ಹೊರಗಿನ ಇನ್ಯಾರಿಗೂ ತಿಳಿದಿಲ್ಲ ಎಂಬುದು ಅವನ ಕೃತಿಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಮಾತ್ರ ಇತರ ಭಾಷೆಗಳಿಗೆ ಅನುವಾದಗೊಂಡಿವೆ.

ಪ್ರ: ಸೋವಿಯತ್ ಓದುಗನಿಗೆ ರೂಬೆನ್ ಡೇರಿಯೋ ಪರಿಚಿತ.

ಮಾ: ತುಂಬಾ ಒಳ್ಳೆಯದಾಯಿತು. 'Autumn of the patriarch' ನ ಉದ್ದಕ್ಕೂ ರೂಬೆನ್ ಡೇರಿಯೋನ ಭಾಷೆಯನ್ನೇ ಬಳಸಿರೋದ್ರಿಂದ ಸೋವಿಯತ್ ಅನುವಾದಕರಿಗೆ ಈ ಕೃತಿ ಖುಷಿಕೊಡಬಹುದು ಅಂತ ನನಗೆ ಸಂತಸವಾಗ್ತಿದೆ. ಇದನ್ನ ನಾನು ಬೇಕೆಂತಲೇ ಬಳಸಿದ್ದು. ಸರ್ವಾಧಿಕಾರೀ ಯುಗದಲ್ಲಿ ಲೌನಾಶಾಹೀ ಸರ್ವಾಧಿಕಾರಿಗಳು ರಕ್ತಪಿಪಾಸುಗಳಂತೆ ವರ್ತಿಸುವ ಆ ಅವನತಿಯ ಕಾಲದಲ್ಲಿ, ಯಾರದು ಮಾದರಿ ಧ್ವನಿಯಾಗಬಲ್ಲದು ಅಂತ ನಾನು ಹುಡುಕುತ್ತಿದ್ದೆ. ಆಗ, ರೊಬೆನ್ ಡೇರಿಯೋದು ಅಂಥ ಶ್ರೇಷ್ಠ ದನಿಗಳಲ್ಲೊಂದು ಅಂತ ನಾನು ಕಂಡುಕೊಂಡೆ. ಈಗ ಅವನ ಆಯ್ಕೆಯನ್ನ ಕಾರಣಸಹಿತ ಸಮರ್ಥಿಸಿಕೊಳ್ತಾ ಇರೋಹಾಗೆ, ನಾನೇನೂ ಆಗ ಯೋಚಿಸಿರಲೇ ಇಲ್ಲ. ಒಂದು ಕೃತಿಯನ್ನು ಕೇವಲ ಯಾಂತ್ರಿಕವಾಗಿ ಬರೆಯುವುದಲ್ಲ. ಆದರೆ, ಈಗ ಯೋಚಿಸಿದರೆ, ನಾನಾಗ ಒಳ್ಳೆಯದನ್ನೇ ಮಾಡಿದೆ ಅನ್ನಿಸುತ್ತೆ. ನಿಕಾರಾಗುವಾದ ಕವಿ ರೂಬೆನ್ ಡೇರಿಯೋ ಆ ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಂಡ.

ಪ್ರಭಾವಗಳಿಗೆ ಸಂಬಂಧಿಸಿದ ನಿಮ್ಮ ಪ್ರಶ್ನೆಗೆ ನಾನಾಗ ಕೊಟ್ಟಿದ್ದು ಸಂಕ್ಷಿಪ್ತವಾದ, ಸುಮಾರಾದ ಉತ್ತರ. 'ಇಂಥಿಂಥವರು ನನ್ನ ಮೇಲೆ ತಮ್ಮ ಪ್ರಭಾವ ಬೀರಿದರು' ಅಂತ ಖಡಾಖಂಡಿತವಾಗಿ ಹೇಳಲು ನನ್ನಿಂದ ಸಾಧ್ಯವಾಗುತ್ತಿಲ್ಲ, ಯಾಕೆಂದರೆ, ಅದು ತುಂಬಾ ಸಂಕುಚಿತವಾಗಿಬಿಡಬಹುದು ಅನ್ನೋ ಭಯ ನನಗಿದೆ. ನನಗನ್ನಿಸುವುದು, ನಾವು ಓದುವ ಎಲ್ಲಾ ಪುಸ್ತಕಗಳೂ, ಭೇಟಿಯಾಗುವ ಪ್ರತಿಯೊಬ್ಬರೂ, ಸಂಭವಿಸೋ ಎಲ್ಲಾ ಘಟನೆಗಳೂ ನಮ್ಮ ಸಾಹಿತ್ಯವನ್ನ ಪ್ರಭಾವಿಸುತ್ತವೆ ಅಂತ ಅವೆಲ್ಲಾ ಸಾಹಿತ್ಯಿಕ ಪ್ರಭಾವಗಳಾಗಿ ಒಬ್ಬ ಲೇಖಕನಿಗೆ ಸಹಾಯ ಮಾಡುತ್ವೆ.

ಸಾಹಿತ್ಯಿಕ ಪಾತ್ರ ಅನ್ನೋದು ಕೇವಲ ಒಂದು ನಿರ್ದಿಷ್ಟ ವ್ಯಕ್ತಿಯಲ್ಲ; ಹಲವು ವ್ಯಕ್ತಿತ್ವಗಳ ಒಂದು ಸಮುಚ್ಚಯ ಒಂದು ವೇಳೆ ಯಾವುದಾದರೊಂದು ಪಾತ್ರ ತನ್ನ ಬಾಹ್ಯಚಹರೆಗಳ ಶಬ್ದಶಃ ಪುನರ್‌ಸೃಷ್ಟಿಯನ್ನ ಮಾಡಬೇಕು ಅಂತ ಇಚ್ಛಿಸಿದರೆ, ಒಬ್ಬನ ಕಣ್ಣನ್ನೋ, ಇನ್ಯಾರದೋ ಮೂಗನ್ನೋ, ಮಗದೊಬ್ಬನ ವ್ಯಕ್ತಿತ್ವವನ್ನೋ, ಇನ್ಯಾರದೋ ಕೂದಲನ್ನೋ ರೇಖಿಸಬೇಕಾಗುತ್ತೆ. ಒಟ್ಟಿನಲ್ಲಿ ಒಂದು ಭಯಂಕರ ರಾಕ್ಷಸ ಸೃಷ್ಟಿಯಾಗುತ್ತೆ. ನನ್ನ ನೆನಪಿನಲ್ಲಿ ಉಳಿದ, ನನ್ನ ಕೃತಿಗಳ ಪಾತ್ರಗಳ ಬಗ್ಗೆ ವಿವೇಚಿಸುವುದಾದರೆ, ಯಾರು ಯಾವ ಯಾವ ಪಾತ್ರಕ್ಕೆ ಆದರ್ಶವಾಗಿ ದೊರೆತರು ಅಂತ ನನಗೆ ಗೊತ್ತು. ಆದರೆ, ಅದೇ ಸಮಯದಲ್ಲೇ ಹಲವರ ಹಲವಾರು ಗುಣಗಳ ಒಂದು ಮೊತ್ತ ಅವರು ಅನ್ನೋದೂ ಹೌದು. ಆದರೆ ಈ ಎಲ್ಲಾ ಪಾತ್ರಗಳ ಮೂಲದಲ್ಲಿ ಮುಖ್ಯವಾಗಿ ಲೇಖಕನೇ ನಿಂತಿರ್ತಾನೆ. ಅದು ಸ್ತ್ರೀಪಾತ್ರವಾಗಿರಬಹುದು, ಪುರುಷಪಾತ್ರವಾಗಿರಬಹುದು; ಇತ್ಯಾತ್ಮಕ ಧೋರಣೆಯದ್ದಾಗಿರಬಹುದು ಅಥವಾ ನೇತ್ಯಾತ್ಮಕದ್ದಾಗಿರಬಹುದು —ಇವೆಲ್ಲಕ್ಕೂ ಮೂಲವಾಗಿ, ನನ್ನ ದೃಷ್ಟಿಯಲ್ಲಿ ಲೇಖಕ ನಿಂತಿರ್ತಾನೆ. ಪರಿಣಾಮವಾಗಿ ಆ ಲೇಖಕನ ಪ್ರಭಾವವೊಂದೇ ಮುಖ್ಯವಾಗುತ್ತೆ. ಇದರ ನಂತರವೇ ಉಳಿದ ಬಾಹ್ಯ ಅಂಶಗಳು ಅದಕ್ಕೆ ಸೇರಿಕೊಳ್ಳುತ್ವೆ. ಲೇಖಕನ ಹೃದಯ ಅವನು ಸೃಷ್ಟಿಸಿದ ಪಾತ್ರಗಳಲ್ಲೆಲ್ಲಾ ಮಿಡೀತಾ ಇರುತ್ತೆ—ಕೆಟ್ಟವರಲ್ಲಿ, ನಮ್ಮೆಲ್ಲರಲ್ಲೂ ಇರುವ—ನೇತ್ಯಾತ್ಮಕ ಗುಣವಾಗಿ ಒಳ್ಳೆಯತನದ ಗುಣವಾಗಿ—ಅಲ್ಲಿ ಒಟ್ಟೊಟ್ಟಿಗೇ ಕೆಲಸ ಮಾಡ್ತಿರತ್ತೆ. ಈ ಗುಣದಿಂದಾಗಿಯೇ, ಸಾಹಿತ್ಯದಲ್ಲಿ ಸ್ವಲ್ಪವೂ ಬದಲಾವಣೆಗೊಳ್ಳದ Manichee ಆಗಿ, ಸ್ಥಾಯಿಯಾಗಿ ಉಳಿಯೋದು ತುಂಬಾ ಕಷ್ಟದ ಕೆಲಸ. ಯಾಕೆಂದ್ರೆ, ಬೆಳಗಿನಲ್ಲಿ ನೀನು ಒಂದು ರೀತಿ ಇದ್ರೆ, ಸಾಯಂಕಾಲ ಇನ್ಯಾರ ಹಾಗೋ ಇರ್ತೀಯ. ನನಗನ್ನಿಸುವುದು, ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಈ ಸ್ಥಿತ್ಯಂತರಗಳು ಸಾಧ್ಯವಿಲ್ಲ. ಅಂತ ಇನ್ನುಳಿದ ಕ್ಷೇತ್ರಗಳಲ್ಲಿ ನಾನು ನಿನ್ನ ಮನಸ್ಸಿಗೆ ಬಂದದ್ದನ್ನ ಮಾಡಬಹುದು ಮತ್ತು ನಾನು ಇದನ್ನ ಗೌರವಿಸ್ತೇನೆ ಸಹ. ಆದರೆ, ರಾಜಕೀಯದಲ್ಲಿ ವಕ್ರಮಾರ್ಗ ಹಿಡಿಯೋದು ಬೇರೆ ವಿಷಯ.

ಪ್ರ: ಲ್ಯಾಟಿನ್ ಅಮೆರಿಕೆಯ ಸರ್ವಾಧಿಕಾರಿಗಳನ್ನೇ Autumn of the Patriarch ಆಧರಿಸಿದೆ' ಎಂಬ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲ—ಆದರೆ,

ಸೊಮೋಸಾನಿಂದ್ಲೇ ಅದರಲ್ಲಿ ಬರುವ ಸರ್ವಾಧಿಕಾರಿಯು ಹಲವಾರು ಲಕ್ಷಣಗಳನ್ನ ಹೆಕ್ಕಿಕೊಳ್ಳಲಾಗಿದೆ' ಅಂತ ಭಾವಿಸೋದು ಸೂಕ್ತವೆ?

ಮಾ: ಸರ್ವಾಧಿಕಾರದ ಮೇಲೆ ಬರೆಯಬೇಕು ಅಂತ ಸದಾ ಬಯಸ್ತಾ ಇದ್ದವನು ನಾನು, ಸಾಮಾನ್ಯವಾಗಿ ಜನ ಅಧಿಕಾರವನ್ನ—ಅದು ಒಬ್ಬನ ವೈಯಕ್ತಿಕ ಕೆಲಸದಲ್ಲಿರಬಹುದು ಅಥವಾ ಅವನ ವೃತ್ತಿಗೆ ಸಂಬಂಧಿಸಿದ್ದಾಗಿರಬಹುದು—ಹೊಂದುವುದು ಅಂದ್ರೆ, ತಾವು ಪಡೀಬಹುದಾದ ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು ಅಂತ ಭಾವಿಸ್ತಾರೆ. ಈ ಅಧಿಕಾರದಾಹ ಒಂದು ರೀತೀಲಿ ನೀರಿನಲ್ಲಿರುವ ಕಾರ್ಕ್ ಇದ್ದಂತೆ. ಅದು ಮೇಲೆ, ಮೇಲೆ, ನೀರಿನ ಮೇಲ್ಪದರದವರೆಗೂ ಹೋಗುತ್ತಲೇ ಇರುತ್ತೆ, ಆದರೆ ಮುಂದೆ ಹೋಗಲಿಕ್ಕಾಗೋಲ್ಲ. ಅದು, ಅದರ ಗರಿಷ್ಠ ಮಿತಿ. ಇದೇ ಮಾತು ಸರ್ವಾಧಿಕಾರಕ್ಕೂ ಅನ್ವಯಿಸುತ್ತೆ. ಅಂತ ಒಂದು ಪಾತ್ರ ನನ್ನ ಅನ್ವೇಷಣೆಯ ಅಂತಿಮ ಗುರಿಯಾಗಿರ್ಬೇಕು' ಅಂತ ಲೇಖಕನಾಗಿ ನಾನು ಯಾವಾಗ್ಲೂ ಬಯಸ್ತಾ ಇದ್ದೆ.

'Autumn of the Patriarch'ನ ಬರೀಲಿಕ್ಕೆ ನಾನು ಪ್ರಾರಂಭಿಸಿದ್ದು ತುಂಬಾ ಹಿಂದೆ, ಅಂದ್ರೆ 'One hundred years of Solitude' ಬರೆಯೋದಿಕ್ಕೂ ಮೊದಲು. ಆದರೆ ಅದು ಫಲಕಾರಿಯಾಗಿಲ್ಲ. ಏನಾದರೊಂದು ಅಡಚಣೆ ಬಂದು ಅದು ಮುಂದುವರೀತಾನೇ ಇರಲಿಲ್ಲ. ಈಗ ಯೋಚಿಸಿದ್ರೆ, 'One hundred years of Solitude' ಕಾದಂಬರಿ ಬರೆಯುವಾಗಿನ ಶ್ರೀಮಂತ ಅನುಭವದ ಆರತೆ ಆಗ ಇರ್ಲಿಲ್ಲ ಅಂತ ಗೊತ್ತಾಗುತ್ತೆ. ಆದ್ರೆ, ಈ ಪುಸ್ತಕದ ಬಗ್ಗೆ ನಾನು ಯಾವಾಗಲೂ ಯೋಚಿಸುತ್ತಿದ್ದೆ. ಒಬ್ಬ ಸರ್ವಾಧಿಕಾರಿಯು ಜೀವನ ರೀತಿಯನ್ನ ಅವನು ತನ್ನ ವಿಚಾರಣೆಯಲ್ಲಿ ಹೇಳಿದ್ದಂತೆ, ಅವನ ಮಾತುಗಳಲ್ಲೇ ಹಿಡಿದಿಡಲು ನಾನು ಇಷ್ಟಪಟ್ಟಿದ್ದೆ. ಈ ವಿಚಾರ ನನಗೆ ಹೊಳೆದದ್ದು ಸೋಸಾ ಬ್ಲಾಂಕೋ ಹವಾನಾದಲ್ಲಿ ವಿಚಾರಣೆಗೆ ಒಳಗಾದಾಗ. ಅಂಥ ಒಂದು ವಿಚಾರಣೆ ಚರಿತ್ರೇಲಿ ಮತ್ತೊಮ್ಮೆ ಕಾಣಿಸಿಕೊಳ್ಳೋಲ್ಲ ಅಂತ ನನಗನ್ನಿಸುತ್ತೆ. ಕ್ಯೂಬಾದ ಕ್ರಾಂತಿ ಅಂಥ ದುಸ್ಸಾಹಸವನ್ನ ಇನ್ಯಾವತ್ತೂ ಕೈಗೊಳ್ಳಲ್ಲ. ಆದರೆ ಆಗ ಅವರು ಅಂಥ ಒಂದು ಸಾಹಸಕ್ಕೆ ಕೈಹಾಕಿದ್ದರು. ಇದು, ಕ್ರಾಂತಿ ಮುಗಿದು, ಜನತಾ ನ್ಯಾಯಾಲಯಗಳು ರೂಪುಗೊಂಡ ತತ್‌ಕ್ಷಣವೇ ಸಂಭವಿಸಿದ್ದು. ಕ್ರಾಂತಿಕಾರಕ ರೀತಿಯಲ್ಲೇ ನ್ಯಾಯವನ್ನ ದೊರಕಿಸುವುದು ಆಗ ಅವಶ್ಯವಾಗಿತ್ತು. ಈ ಕ್ರಾಂತಿಯಲ್ಲಿ ಯಾರೂ ಯಾರನ್ನೂ ಕೊಲ್ಲಲಿಲ್ಲ ಅಥವಾ ಕಾನೂನನ್ನ ಕೈಗೆತ್ತಿಕೊಂಡು ರಸ್ತೆಗಳಲ್ಲಿ ರಕ್ತದ ಕೋಡಿ ಹರಿಸಲಿಲ್ಲ. ಈ ದೃಷ್ಟಿಯಿಂದ, ಕ್ಯೂಬಾದ ಕ್ರಾಂತಿ ಎಲ್ಲಾ ಕ್ರಾಂತಿಗಳಿಗಿಂತ ಬಹುಷಃ ವಿಶಿಷ್ಟವಾದದ್ದು 'ಅಂತ ನನಗನ್ನಿಸುತ್ತೆ. ಆದರೆ ಯುದ್ಧಾಪರಾಧಿಗಳು ಅಲ್ಲಿದ್ದರು, ಜನತಾ ನ್ಯಾಯಾಲಯದ ಆದೇಶದಂತೆ ಅವರೆಲ್ಲಾ ವಿಚಾರಣೆಗೆ ಒಳಗಾಗಲೇಬೇಕಿತ್ತು. ಮೇಲಾಗಿ, 'ಕ್ಯೂಬಾ ನೆತ್ತರಿನ ಹೊಳೆಯಲ್ಲಿ ಮಿಂದಿದೆ' ಎಂದು ಇತರರು ಬೊಟ್ಟುಮಾಡಿ ಆಕ್ಷೇಪಿಸುವುದನ

ತಡೆಯಲು ಇದು ಅವಶ್ಯವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ, ಯುದ್ಧ ಚಟುವಟಿಕೆಗಳಲ್ಲಿ ತೊಡಗದ ಶಾಂತ ಜನಸಮುದಾಯದ ಹಳ್ಳಿಗಳನ್ನ ನಿರ್ದಯವಾಗಿ ಸುಟ್ಟು ಹಾಕುತ್ತಿದ್ದ ಬ್ಯಾಟಿಸ್ಟಾ ಪಾಳೆಯದ ಜನರಲ್ ಸೋಸಾ ಬ್ಲಾಂಕೋನ ವಿಚಾರಣೆ ನಡೆಸಲು ಜನತಾ ನ್ಯಾಯಾಲಯ ತೀರ್ಮಾನಿಸಿತು. ಬೇರೆ ಮಾತಲ್ಲಿ ಹೇಳೋದಾದ್ರೆ, ಸೊಮೋಸಾನ ಸೈನ್ಯ ಎಂಥಹ ಬರ್ಬರ ಕೃತ್ಯಗಳನ್ನ ಹಿಂದೆ ಎಸಗ್ತಾ ಇತ್ತೋ, ಅವುಗಳನ್ನೇ ಅವನೂ ಮಾಡಿದ್ದ. ಆದ್ದರಿಂದ ಈ ವ್ಯಕ್ತಿಯ ಬಹಿರಂಗ ವಿಚಾರಣೆಯನ್ನ, ಎಲ್ಲಾ ದೇಶಗಳಿಂದಲೂ ಬಂದ ಪತ್ರಕರ್ತರ ಸಮ್ಮುಖದಲ್ಲಿ ನಡೆಸಲು ತೀರ್ಮಾನಿಸಲಾಯ್ತು. ಇದರಿಂದ, ಇದೊಂದು ನಿಷ್ಪಕ್ಷಪಾತ ವಿಚಾರಣೆ 'ಅಂತ ಎಲ್ಲರೂ ತಿಳಿದುಕೊಳ್ಳಲಿ' ಅನ್ನೋದು ಈ ತೀರ್ಮಾನದ ಹಿಂದಿನ ಉದ್ದೇಶವಾಗಿತ್ತು.

ನಾನು ನನ್ನ ಜೀವಮಾನದಲ್ಲಿ ನೋಡಿದ ವಿಚಾರಣೆಗಳಲ್ಲೆಲ್ಲಾ ಇದು ಅತ್ಯಂತ ಭಯಾನಕವಾದದ್ದು. ಪ್ಯಾಲೇಸ್ ಆಫ್ ಸ್ಪೋರ್ಟ್ಸ್‌ನಲ್ಲಿ ಅವನು ವಿಚಾರಣೆಗೊಳಗಾಗಿದ್ದ. ಅವನು ನ್ಯಾಯಾಲಯದ ದಂಡಾಧಿಕಾರಿ, ಅಪಾದಿತ ಹಾಗೂ ಇಡೀ ನ್ಯಾಯಾಂಗ ಸಿಬ್ಬಂದಿಯೊಂದಿಗೆ ಸಭಾಂಗಣದ ಮಧ್ಯೆ ನಿಂತಿದ್ದ. ಅವರೆಲ್ಲರೂ ಅಮೇರಿಕಾದೊಂದಿಗೆ ನೇರ ಸಂಪರ್ಕಹೊಂದಿದ್ದ ದಿನಪತ್ರಿಕೆಗಳ ಹಾಗೂ ದೂರದರ್ಶನದ ವರದಿಗಾರರಿಂದ ಸುತ್ತುವರಿಯಲ್ಪಟ್ಟಿದ್ದರು; ಇಲ್ಲಿ ನಡೆದಪ್ರತಿಯೊಂದೂ ಅಲ್ಲಿ ತತ್‌ಕ್ಷಣವೇ ಬಿತ್ತರಗೊಳ್ಳುತ್ತಿತ್ತು. ಜನ ಬಾಕ್ಸಿಂಗ್ ಮ್ಯಾಚ್ ನೋಡಲು ಬಂದವರಂತೆ, ಮಾರ್ಗಗಳನ್ನ ಮುಚ್ಚಿಬಿಡುವಷ್ಟರ ಮಟ್ಟಿಗೆ ಕಿಕ್ಕಿರಿದು ತುಂಬಿದ್ದರು. ಸ್ಟೇಡಿಯಂನ ಹೊರಗೆ, ಹುರಿದ, ಹಬೆಯಾಡುತ್ತಿದ್ದ, ಪಾನೀಯಗಳೂ, ತಿಂಡಿತಿನಿಸುಗಳೂ ಮಾರಾಟವಾಗ್ತಾ ಇದ್ದವು. ವೇಶ್ಯೆಯರು ತಮ್ಮನ್ನೇ ತಾವು ಮಾರಿಕೊಳ್ಳಲು, ಹಿಂದೆ, ಮುಂದೆ ಓಡಾಡುತ್ತಿದ್ದರು ಸ್ಟೇಡಿಯಂನಿಂದ ಹೊರಗೆ ಯಾರಾದರೂ ಕಾಲಿಟ್ಟಕೊಡಲೇ ಅವರ ಹತ್ತಿರ ಓಡಿ, 'ಈ ವಿಚಾರಣೆ ರಾತ್ರಿಯೆಲ್ಲಾ ನಡೆಯುತ್ತೆ. ಆದ್ದರಿಂದ ನಿಮ್ಮ ಕಾಮನೆಗಳನ್ನ ತಣಿಸಲಿಕ್ಕೆ ಬೇಕಾದಷ್ಟು ಸಮಯ ಇದೆ' ಅಂತ ಯೋಚಿಸ್ತಾ ಇದ್ರು. ಅದು ಒಂದು ರೀತಿಯಲ್ಲಿ ಜಾತ್ರೆ, ನಿಜವಾದ ವಿಹಾರ ಆಗಿಬಿಟ್ಟಿತ್ತು.

ವಿಚಾರಣೆ ಸಂಜೆ ೭ ಗಂಟೆಗೆ ಶುರುವಾಗಿ ಬೆಳಗಿನ ಜಾವ ೬ ಗಂಟೆಗೆ ಮುಗೀತು, ಅಪರಾಧಿಗೆ ಮರಣದಂಡನೆ ವಿಧಿಸಲಾಯ್ತು. ಅವನ ಎಲ್ಲಾ ಕ್ರೂರ ಅಪರಾಧಗಳೂ ಸಾಬೀತಾದವು, ಯಾಕೇಂದ್ರೆ ಅವನ ಕೈಯಲ್ಲಿ ಕೊಲೆಗೀಡಾದ ಜನರ ಸಂಬಂಧಿಗಳೂ, ಅವನ ಕ್ರೂರ ಕಾರ್ಯಗಳಲ್ಲಿ ಹೇಗೋ ಜೀವ ಉಳಿಸಿಕೊಂಡವರು ಎಲ್ಲಾ ಅಲ್ಲಿ ಹಾಜರಿದ್ದರು. ರಾತ್ರಿಯೆಲ್ಲಾ ಅವರು ಬರುತ್ತಲೇ ಇದ್ರು, ಕಪ್ಪು ಉಡುಗೆ ತೊಟ್ಟ ಹೆಂಗಸರ ಪೆರೇಡೊಂದು ನಮ್ಮ ಕಣ್ಣಮುಂದೆ ಹಾದು ಹೋಗುತ್ತಿತ್ತು. ಎಲ್ಲವೂ 'ಪೂರ್ವನಿರ್ಧಾರಿತ' ಎಂಬಂತೆ ಅದು ತೋರುತ್ತಿತ್ತು. ಆದರೆ ವಾಸ್ತವವಾಗಿ ಅಲ್ಲಿ ಅಂಥ ವರ್ಣಮಯ ದೃಶ್ಯಾವಳಿಯೇ ಇರಲಿಲ್ಲ; ಇದೇ ಎಲ್ಲಕ್ಕಿಂತ ಹೆಚ್ಚು ಭಯಾನಕವಾಗಿತ್ತು. 'ಒಬ್ಬ ಮನುಷ್ಯನಿಗೆ

ಈ ರೀತಿ ಆಗಬಹುದು' ಎಂಬುದೇ ಎದೆ ನಡುಗಿಸುವಂಥದ್ದಾಗಿತ್ತು. ಆ ರಾತ್ರಿ ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಭಯಂಕರ ಪ್ರಭಾವವೊಂದನ್ನ ಮೂಡಿಸಿತ್ತು. ನಾನು ಸ್ತಂಭೀಭೂತನಾಗಿ ಕುಳಿತಿದ್ದೆ, ಒಂದೇ ಒಂದು ಶಬ್ದವೂ ನನ್ನ ಬಾಯಿಂದ ಹೊರಬರಲಿಲ್ಲ. ಮರಣದಂಡನೆಯ ತೀರ್ಪನ್ನು ಓದುತ್ತಿದ್ದಾಗ, ಛಾಯಾಚಿತ್ರಕಾರರ ಜೊತೆ ನಾನು ಬ್ಲಾಂಕೋನ ಎದುರೇ ನಿಂತಿದ್ದೆ. ಅವನ ಕಲ್ಲಿನಂಥ ಮುಖಮುದ್ರೆ ಸ್ವಲ್ಪವೂ ಬದಲಾಗಲಿಲ್ಲ. ತೀರ್ಪನ್ನು ಓದುತ್ತಿದ್ದಾಗ ಅವನು ನಿಂತುಕೊಂಡಿದ್ದ, ಯಾವಾಗ 'ಮರಣದಂಡನೆ' ಎಂಬ ಶಬ್ದ ಕಿವಿಗೆ ಬಿತ್ತೋ, ಆಗಮಾತ್ರ ಅವನ ತೊಡೆಗಳು ತುಸು ಕಂಪಿಸಿದವು.

ಅದು ನನ್ನ ಪಾಲಿಗೆ 'ದರ್ಶನ'ದಂತಿತ್ತು. "ನಾನು ಇದುವರೆಗೂ ಹುಡುಕುತ್ತಿದ್ದ ಪುಸ್ತಕ ಇಲ್ಲಿದೆ; ಇಲ್ಲಿ ವಿಚಾರಣೆಗೊಳಪಟ್ಟ ನನ್ನ ಸರ್ವಾಧಿಕಾರಿ ಇದಾನೆ" ಅಂತ ಯೋಚಿಸುತ್ತಿದ್ದೆ. ಆದರೆ ಶಾಂತವಾಗಿ ವಿಶ್ಲೇಷಿಸತೊಡಗಿದಾಗ 'ಇದು ಸಾಧ್ಯವಿಲ್ಲ' ಅನ್ನಿಸಿತು. ಯಾಕಂದ್ರೆ, ನನ್ನ ನಾಯಕ 'ಪ್ರಥಮ ಪುರುಷ'ದಲ್ಲೇ ಮಾತನಾಡಲಿಕ್ಕೆ ತೊಡಗಿದರೆ, ಅವನು ಅವನ ದೃಷ್ಟಿಕೋನವನ್ನ ನಮಗೆ ಚೆನ್ನಾಗಿ ತೋರಿಸುತ್ತಾನಾದರೂ, ಲೇಖಕನಾದ ನಾನು ಅವನು ಉಪಯೋಗಿಸೋ ಭಾಷೆಯೊಂದಿಗೆ, ಸೇರಿಹೋಗುವ ಅಪಾಯ ಇದೆ ಅನ್ನಿಸ್ತು. ನಾನು ನನ್ನ ಭಾಷೆಯನ್ನೇ ಉಪಯೋಗಿಸಲಾಗದೇ ನಿಸ್ಸಹಾಯಕನಾಗಿ, ಕಟ್ಟಿಹಾಕಿದಂತಿರಬೇಕಾಗುತ್ತೆ. ಇದರಿಂದಾಗಿ ಈ ಯೋಚನೆಯನ್ನು ಕೈಬಿಟ್ಟು, ಬೇರೊಂದು ಕೋನದಿಂದ ನನ್ನ ಅನ್ವೇಷಣೆಯನ್ನ ಪ್ರಾರಂಭಿಸಿದೆ. ನಾನು ಅನುಸರಿಸಿದ ವಿಧಾನ ಈ ರೀತಿ ಇತ್ತು; ಹಲವಾರು ವರ್ಷಗಳವರೆಗೆ, ಬಹುಷಃ ೧೦–೧೨ ವರ್ಷ, ಲ್ಯಾಟಿನ್ ಅಮೆರಿಕಾದ ಸರ್ವಾಧಿಕಾರಿಗಳ ಬಗ್ಗೆ ಬರೆಯಲ್ಪಟ್ಟ ಎಲ್ಲವನ್ನೂ— ಸಾಕ್ಷ್ಯಪತ್ರಗಳು, ಪತ್ರಗಳು, ಆತ್ಮಚರಿತ್ರೆಗಳು, ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು—ಎಲ್ಲವನ್ನೂ ನಾನು ತಿರುವಿಹಾಕಿದೆ. ಸಿಕ್ಕದ್ದೆಲ್ಲವನ್ನೂ ಓದಿದ ಮೇಲೆ, ಅದನ್ನೆಲ್ಲಾ ಮರೆಯಲು ಯತ್ನಿಸಿದೆ. ಇದುವರೆಗೆ ತಿಳಿದುಕೊಂಡದ್ದನ್ನ ಆಧಾರವಾಗಿಟ್ಟುಕೊಂಡು, ಪ್ರತಿಯೊಂದನ್ನೂ ನಾನು ಹೊಸದಾಗಿ ಬರೆದೆ, ಹಾಗೆ ಬರೆಯುವಾಗ ಒಂದೇ ಒಂದು ವಾಸ್ತವ ಚಿತ್ರವೂ ಅಲ್ಲಿರದಂತೆ ನಾನು ಜಾಗ್ರತೆ ವಹಿಸಿದೆ. ಸರ್ವಾಧಿಕಾರದ ಕಾರ್ಯನಿರ್ವಹಣೆಯನ್ನ ನಿರ್ಧರಿಸೋ ಕೆಲವು ನಿಯಮಗಳ ಗುಚ್ಛವೊಂದನ್ನ ನಾನು ಅನುಸರಿಸಿದೆ. ಆ ರೀತಿಯಾಗಿ, ನಾನು ಸೃಷ್ಟಿಸಿದ ಸರ್ವಾಧಿಕಾರಿ ಕೇವಲ ಒಬ್ಬ ಸರ್ವಾಧಿಕಾರಿಯಾಗಿ ಉಳಿಯದೇ ಇನ್ನುಳಿದವರನ್ನೂ ಹೋಲುವಂತೆ ತುಂಬಾ ವಿಚಕ್ಷಣತೆಯಿಂದ ಎಲ್ಲವನ್ನೂ ಅಣಿಗೊಳಿಸಿದೆ. ಇದಷ್ಟೇ ಅಲ್ಲ, ಆ ಸರ್ವಾಧಿಕಾರಿಯ ವ್ಯಕ್ತಿತ್ವದ ಮೂಲ ಲೇಖಕನಾದ ನಾನೇ ಆಗಿದ್ದೆ.

ಆ ಪಾತ್ರದ ಹಲವಾರು ಗುಣವಿಶೇಷಗಳು ಜುಲಿಯನ್ ವಿಸೆಂಟ್ ಗೋಮೆಜ್‌ನ ವ್ಯಕ್ತಿತ್ವದಿಂದ ಹೆಕ್ಕಿಕೊಂಡವುಗಳು. ಸೊಮೊಸಾ ಮನೆತನ ತುಂಬಾ ಕಡಿಮೆಯಿತ್ತಿದೆ. ಯಾಕಂದ್ರೆ ಆ ಮನೆತನದ ಮೂಲ ಸೊಮೊಸಾ ಒಬ್ಬನೇ ಹೆಚ್ಚು

ಕಡಿಮೆ ಅಂಥಾ ಸರ್ವಾಧಿಕಾರೀ ಬುದ್ಧಿ ಹೊಂದಿದ್ದದ್ದು. ಈ ಸೋಮೋಸಾನೇ ಮಧ್ಯದಲ್ಲಿ ಅರೆಯುವ ಹಲ್ಲುಳ್ಳ ಬೋನುಗಳನ್ನ ಕಂಡುಹಿಡಿದದ್ದು. ನರಭಕ್ಷಕ ಪ್ರಾಣಿ, ಉದಾ: ಹುಲಿಯೊಂದು ಒಂದು ಭಾಗದಲ್ಲಿದ್ದರೆ, ಆ ಬೋನಿನ ಇನ್ನೊಂದು ಭಾಗದಲ್ಲಿ ಆತನ ರಾಜಕೀಯ ಖೈದಿ ನಿಂತಿರ್ತ್ತಿದ್ದ. ಈ ಬೋನು ಗಳನ್ನ ಅವನು ಜನರು ನೋಡಲೋಸುಗ ಉದ್ಯಾನವನದಲ್ಲಿಟ್ಟಿರ್ತ್ತಿದ್ದ. ಆದರೆ ಒಟ್ಟಾರೆ, ಸೋಮೋಸಾ ವಂಶದವರ ಸರ್ವಾಧಿಕಾರ ನೀರಸವಾಗಿತ್ತು. ಆದರೆ ಜುಆನ್ ವಿಸೆಂಟ್ ಗೋಮೆಜ್‌ನ ವ್ಯಕ್ತಿತ್ವ ಎಷ್ಟು ಆಕರ್ಷಕವಾಗಿತ್ತೆಂದ್ರೆ, ವೆನಿಜುಯೇಲಾದ ಜನತೆ ಅವನನ್ನ 'ವೆನಿಜುಲಾದ ಶ್ರೇಷ್ಠಪ್ರಜೆ' ಅಂತ ಪುನರ್ ನಾಮಕರಣ ಮಾಡುವಷ್ಟು ಅವನು ಅವರನ್ನ ಪ್ರಚೋದಿಸಿದ್ದ. ಬೇರೆ ರೀತೀಲಿ ಹೇಳ್ಬೇಕಂದ್ರೆ, ಅವನ ಪಶುತ್ವ, ಕ್ರೌರ್ಯ, ಅವನು ಗೈದ ಕ್ರೂರಕೃತ್ಯಗಳು ಇವನ್ನೆಲ್ಲಾ ಮರೆಯದೆಯೂ ಅವರು ಅವನ ವ್ಯಕ್ತಿತ್ವದಲ್ಲಿದ್ದ ರಾಷ್ಟ್ರೀಯತೆಯ ಭಾವನೆಯನ್ನ ನೆನಪಿಟ್ಟುಕೊಳ್ಳಲಿಕ್ಕೆ ಪ್ರಯತ್ನಿಸಿದರು. ಯಾಕಂದ್ರೆ ಅವನು ತನ್ನ ಅತೀಂದ್ರಿಯ ಜ್ಞಾನ ಹಾಗೂ ವಿಸ್ಮಯಕಾರಕ ಜನಪದ ಬುದ್ಧಿಮತ್ತೆ ಯಿಂದಾಗಿ ಎಲ್ಲರನ್ನೂ ಮೀರಿ ನಿಂತಿದ್ದ. ನಾನು ಓದಿದ್ದರಲ್ಲೆಲ್ಲಾ ಜುಆನ್ ವಿಸೆಂಟ್ ಗೋಮೇಜ್ ನನ್ನ ಗಮನವನ್ನ ಹೆಚ್ಚಾಗಿ ಸೆಳೆದದ್ದರಿಂದ, ನಾನು ಚಿತ್ರಿಸಿದ ವ್ಯಕ್ತಿ ಇವನ ವ್ಯಕ್ತಿತ್ವಕ್ಕೆ ತುಂಬಾ ಹತ್ತಿರದವನಾಗ್ತಾನೆ.

ಪ್ರ: ಟ್ರುಚಿಲೋ ಬಗ್ಗೆ ಏನು ಹೇಳ್ತೀರಿ?

ಮಾ: ಹೌದು. ಟ್ರುಚಿಲೋನಿಂದಲೂ ನಾನು ತುಂಬಾ ವಿಷಯಗಳನ್ನ ಹೆಕ್ಕಿಕೊಂಡಿದೀನಿ.

ಪ್ರ: ಫ್ರಾಂಕೋನಿಂದ?

ಮಾ: ಇಲ್ಲ. ಸ್ಪೈಯಿನ್‌ನಿಂದ—ಅಂದ್ರೆ ಆ ದೇಶದ ಆಗಿನ ಸ್ಥಿತಿಗತಿಗಳಿಂದ ಹೆಚ್ಚು ತೊಗೊಂಡಿದೀನೇ ಹೊರತು ಫ್ರಾಂಕೋನಿಂದಲ್ಲ. ಫ್ರಾಂಕೋನಲ್ಲಿ ಸ್ಪೈಯಿನ್‌ನ ಅಂಶವೇ ಇಲ್ಲ. ಒಮ್ಮೆ, ನಾನವನನ್ನ ತುಂಬಾ ಹತ್ತಿರದಿಂದ ನೋಡ್ಬೇಕು ಅಂದ್ಕೊಂಡು, 'ಪ್ರೇಕ್ಷಕರಲ್ಲೊಬ್ಬರಾಗಲಿಕ್ಕೆ ನನಗೆ ಅನುಮತಿ ಕೊಡಿ' ಅಂತ ಅವನನ್ನ ಕೇಳಬೇಕು ಅಂದ್ಕೊಂಡಿದ್ದೆ. ಅವನ ಅನುಮತಿಯನ್ನ ದೊರಕಿಸಿ ಕೊಳ್ಳೋದೇನೂ ಕಷ್ಟದ್ದಾಗಿರಲಿಲ್ಲ. ಆದರೆ, ಅವನಿಗೆ ನಾನು ಎಂಥ ಸಮಜಾಯಿಷಿ ನೀಡಬೇಕು? ಅನ್ನೋ ಗೊಂದಲ ಉಂಟಾಯಿತು. ಸುತ್ತಲೂ ನೋಡುತ್ತಾ, ನಾನು ಅವನಿಗೆ ನಿಂಗೊತ್ತಾ, ನಾನು ಒಬ್ಬ ಸೂಳೆಮಗನ ಬಗ್ಗೆ ಪುಸ್ತಕವೊಂದನ್ನ ಬರೀತಾ ಇದೀನಿ, ಅದಕ್ಕೆ ನಿನ್ನನ್ನ.... ಅಂತ ಹೇಳಲಿಕ್ಕೆ ಸಾಧ್ಯವೇ ಇರಲಿಲ್ಲ.

ಪ್ರ: ಅವನು ಸತ್ತರೀತಿ ಮಾತ್ರ ಒಬ್ಬ ಕಲಾವಿದನ ಕಲ್ಪನೆಯನ್ನ ಹೋಲುತ್ತೆ. ಅವನ ಸಾವು ಸಾಹಿತ್ಯದ ಕಂಪನ್ನ ಹೊಮ್ಮಿಸಿತ್ತು.

ಮಾ: ನಿಜ. ಆದರೆ ಅದು ಆದದ್ದು ಹೀಗೆ. ನನ್ನ ಕೃತಿ; ಅದರ ಅಂತಿಮ ಭಾಗವೊಂದನ್ನುಳಿದು, ಇನ್ನೆಲ್ಲಾ ರೀತಿಯಲ್ಲೂ ಮುಗಿದಿತ್ತು. ಫ್ರಾಂಕೋನ ಸಾವು ಯಾವರೀತಿ ಇರಬಹುದು ಅಂತ ನಾನು ಅವನ ಸಾವಿಗಾಗಿ ಕಾಯ್ತಾ ಇದ್ದೆ. ಆದರೆ ಅವನು ಸಾವನ್ನ ತಿರಸ್ಕರಿಸ್ತಾನೇ ಇದ್ದ. ಈ ಕಾಯುವಿಕೆ ಎಷ್ಟು ದಿನಗಳವರೆಗೆ ಎಳೆದುಕೊಂಡುಹೋಯ್ತು ಅಂದ್ರೆ ಕೊನೇಗೆ ತಡೀಲಾರ್ದೆ, ಅದು ಮೊದಲು ಹೇಗಿತ್ತೋ ಹಾಗೇ ಪ್ರಕಟಿಸಿಬಿಟ್ಟೆ. ಅದನ್ನ ಪ್ರಕಟಿಸಿ ವರ್ಷವೂ ಆಗಿರಲಿಲ್ಲ, ಫ್ರಾಂಕೋ ಸಾಯತೊಡಗಿದ. ಆದರೆ ಅವನ ಕೊನೇದಿನಗಳು ನನ್ನ ಪುಸ್ತಕದ ಕೊನೇ ಅಧ್ಯಾಯಕ್ಕಿಂತ ಹೆಚ್ಚು ಶಕ್ತಿಯುತವಾಗಿದ್ದವು. ಅವನು ಕಲ್ಪನಾಶಕ್ತಿಯ ಎಲ್ಲೆಯನ್ನ ಎಲ್ಲರೀತಿಯಲ್ಲೂ ಮೀರಿಬಿಟ್ಟ.

ಪ್ರ: ಲ್ಯಾಟಿನ್ ಅಮೆರಿಕೆಯ ಮೂರು ಜನ ಬೇರೆ ಬೇರೆ ಲೇಖಕರು ಸರ್ವಾಧಿಕಾರಿಗಳ ಬಗ್ಗೆ ಬರೆದ ಪುಸ್ತಕಗಳು ಏಕಕಾಲದಲ್ಲಿ ಪ್ರಕಟಗೊಂಡಿದ್ದು ಕಾಕತಾಳೀಯವೆ?

ಮಾ: ಹೌದು ಮತ್ತು ಅಲ್ಲ. ಸರ್ವಾಧಿಕಾರತ್ವ ಲ್ಯಾಟಿನ್ ಅಮೆರಿಕಾ ಸಾಹಿತ್ಯದ ಒಂದು ಮಾಮೂಲೀ ವಸ್ತು ಎಂಬ ಅರ್ಥದಲ್ಲಿ, ಅದು ಕಾಕತಾಳೀಯ ಅಲ್ಲ. ನನಗನ್ನಿಸುವಮಟ್ಟಿಗೆ, ಲ್ಯಾಟಿನ್ ಅಮೆರಿಕಾದ ಪ್ರತಿಯೊಬ್ಬ ಲೇಖಕನೂ ಒಂದಲ್ಲಾ ಒಂದು ಗಳಿಗೆಯಲ್ಲಿ ಸರ್ವಾಧಿಕಾರೀ ವಿಷಯವನ್ನಿಟ್ಟುಕೊಂಡು ಬರೀಬೇಕು ಅನ್ನೋ ಪ್ರಚೋದನೆಗೆ ಒಳಗಾಗ್ತಾನೆ ನನಗನ್ನಿಸಿದ್ದು ಇದು. ಆದರೆ ಈ ಮೂರು ಗ್ರಂಥಗಳೂ ಭವಿಷ್ಯದ ಬರಹಗಾರರಿಗೆ ಈ ವಸ್ತುವನ್ನ ಬಳಸಲಿಕ್ಕೆ ತೊಡಕಾಗೋದಿಲ್ಲ ಅಂತ ಆಶಿಸ್ತೀನಿ. ಜೀವತುಂಬಿದ, ಸೂತ್ರೀಕರಣ ಗೊಂಡ ಸರ್ವಾಧಿಕಾರಿಯನ್ನ ಮಾತ್ರ ಲ್ಯಾಟಿನ್ ಅಮೆರಿಕಾ ಪ್ರಪಂಚಕ್ಕೆ ಕೊಡುಗೆಯಾಗಿ ನೀಡ್ಲಿಕ್ಕೆ ಸಾಧ್ಯ ಅಂತ ನನ್ನ ಅಭಿಪ್ರಾಯ. ಕೆಲವು ರಾಷ್ಟ್ರಗಳು ಸಾಹಸಗಳ ಅನ್ವೇಷಕನನ್ನ, ಇನ್ನು ಕೆಲವು ಒಬ್ಬ ದಾರ್ಶನಿಕನನ್ನ ಕೊಡುಗೆ ಯಾಗಿ ನೀಡಬಹುದು. ಆದರೆ ಕೊಲಂಬಿಯಾದಲ್ಲಿ, ಲ್ಯಾಟಿನ್ ಅಮೆರಿಕಾದಲ್ಲಿ ಚರಿತ್ರೆಯ ಕೊಡುಗೆಯೆಂದರೆ ಕೇವಲ ಸರ್ವಾಧಿಕಾರಿಯೊಬ್ಬನೇ—ಅದರಲ್ಲೂ ಊಳಿಗಮಾನ್ಯ ಸರ್ವಾಧಿಕಾರಿಯನ್ನೇ ಹೊರತು ಇತ್ತೀಚಿನ ಸರ್ವಾಧಿಕಾರಿ ಯನ್ನಲ್ಲ. ಈಗಿನ ಸರ್ವಾಧಿಕಾರಿಗಳು ತಾಂತ್ರಿಕ ಶಾಹಿಗಳು (technocrats) ಅವರು ಉತ್ಪಾದಿತ ವಸ್ತುಗಳಂತೆ, ಸಿದ್ಧ ಭಾಗಗಳಿಂದ ತಯಾರಾದಂತೆ ಇರ್ತಾರೆ. ಒಂದು ರೀತಿಯಲ್ಲಿ ಅವರು ಗಣಕಯಂತ್ರವನ್ನ ಹೋಲ್ತಾರೆ. ಆದರೆ ಮೊದಲಿನವರು ಜನ ಸಮುದಾಯಗಳ ಬೆಂಬಲ ಬಯಸ್ತಾ ಇದ್ರು, ಯಾಕೆಂದ್ರೆ ಅವು ಅವರ ನಂಬಿಕೆಗಳನ್ನ ಪ್ರತಿಸಿಧಿಸ್ತಾ ಇದ್ವು. ಈ ಜನತೆ ಸರ್ವಾಧಿಕಾರಿಯನ್ನ ವೈಭವೀಕರಿಸ್ತಾ ಇತ್ತು, ದೈವತ್ವಕ್ಕೇರಿಸಿತ್ತು. ಆಗ ಜನತೆ ಸರ್ವಾಧಿಕಾರಿಯೊಬ್ಬನ ಹಿಂಸಾ ಪ್ರವೃತ್ತಿಯಿಂದ ನೇರವಾಗಿ ಸಂಕಷ್ಟಕ್ಕೊಳಗಾಗ್ತಾ ಇದ್ದದ್ದು, ಈಗಿನ ರಾಜಕಾರಣಿಗಳು, ವಿದ್ಯಾರ್ಥಿಗಳು, ಹಲವಾರು ಪಕ್ಷಗಳ ಪ್ರತಿನಿಧಿಗಳು ಈ

ಜನತೆಯನ್ನ ರಾಜಕೀಯವಾಗಿ ಶೋಷಿಸುವ ಪ್ರಮಾಣಕ್ಕೆ ಹೋಲಿಸಿ ನೋಡಿದರೆ ಕಡಿಮೆಯೆಂದೇ ಹೇಳಬೇಕು. ಸಾಮಾನ್ಯ ಜನರು ಸರ್ವಾಧಿಕಾರಿ ಹೊಂದಿದ ಸಂಮೋಹಕ ಶಕ್ತಿಯನ್ನೆ ಮೊದಲು ಗುರುತಿಸ್ತಾ ಇದ್ರು. ಇದೇನೂ ಅಷ್ಟೊಂದು ಸೋಜಿಗಪಡುವಂಥದ್ದೇನಲ್ಲ — ಯಾಕೆಂದ್ರೆ, ಆಗಿನ ಜನ ಅವಿದ್ಯಾವಂತ ರಾಗಿದ್ರು. ಈಗಿನವರಂತಿರಲಿಲ್ಲ. ಟ್ರುಜಿಲೋನ ಶವದಹನ ಅವನನ್ನ ದಿವ್ಯ ಪುರುಷನನ್ನಾಗಿಸಿತು, ಅವನೊಬ್ಬ ದೇವರಾದ. ಆದರೆ ಕಾಲ ಸಂದಂತೇ ಎಲ್ಲಾ ಬದಲಾಗುತ್ತೆ....

ಈ ಸರ್ವಾಧಿಕಾರದ ವಸ್ತು ಲ್ಯಾಟಿನ್ ಅಮೇರಿಕೆಯ ಪ್ರತೀ ಲೇಖಕನನ್ನೂ ಆಕರ್ಷಿಸುತ್ತಾ ಇರುತ್ತೆ. ಅದರ ಮೇಲೆ ಎಷ್ಟೊಂದನ್ನ ಬರೆಯಲಾಗಿದೆ ಅಂದ್ರೆ ನಮ್ಮ ಮುಂದಿನ ಪೀಳಿಗೆಯವರು ಅದರ ಹತ್ತಿರವೂ ಸುಳಿಯುವುದಿಲ್ಲವೇನೋ ಎಂಬ ಭಯ ನನ್ನನ್ನ ಕಾಡ್ತಿರುತ್ತೆ. ಅವರು ಅದನ್ನ ನಿವಾರಿಸೋಕೆ ಪ್ರಯತ್ನಿಸ ಬಹುದು.

ಪ್ರ : ಸರ್ವಾಧಿಕಾರಿಗಳೇ ಇಲ್ಲವಾದರೆ ಒಳ್ಳೆಯದು.

ಮಾ : ಆದರೆ ಅವರು ಇದ್ದರೂ ಆಗಿಹೋದದ್ದರ ಬಗ್ಗೆ ಪುಸ್ತಕಗಳೂ ಬರೆಯಲ್ಪಟ್ಟವು. ಮುಂದಾದರೂ ಯಾವ ಸರ್ವಾಧಿಕಾರಿಯೂ ತಲೆಯೆತ್ತದಿರಲಿ ಅಂತ ನಾವು ಬಯಸಬಹುದು ಅಷ್ಟೆ. ಆದರೆ ದುರದೃಷ್ಟವಶಾತ್ ಇದು ನಮ್ಮ ಅಂದ್ರೆ, ಲೇಖಕರ ಕೈಲಿ ಸಾಧ್ಯವಿಲ್ಲ. ಸರ್ವಾಧಿಕಾರಿಗಳನ್ನೂ ತೊಲಗಿಸುವಂಥದ್ದೇನನ್ನೂ ನಾವು ಮಾಡಲಾರೆವು. ಬಹುಶಃ ಇದು ಬೇರೆ ಯಾರಿಂದಲಾದರೂ ಸಾಧ್ಯವಾಗ ಬಹುದು. ಆದರೆ ಲೇಖಕನಿಂದಂತೂ ಅಲ್ಲ. ಅದರಲ್ಲೀ ಅವನೊಬ್ಬನೇ ಪ್ರಯತ್ನಿಸಿ ಸಿದರಂತೂ ಸಾಧ್ಯವೇ ಇಲ್ಲ.

ಈ ಕಾರಣಕ್ಕಾಗೇ ನಾನು ಹೇಳೋದು, ಸರ್ವಾಧಿಕಾರಿ, ವಸ್ತುವನ್ನುಳ್ಳ ಆ ಮೂರು ಪುಸ್ತಕಗಳು ಹೊರಬಂದಿದ್ದು ಕಾಕತಾಳೀಯ ಅಲ್ಲ, ಅಂತ....

ಪ್ರ : ನೀವು ಮುಂದೇನು ಬರೆಯಲು ಯೋಚಿಸಿದ್ದೀರಿ. ಏನನ್ನು ಪ್ರಕಟಿಸುತ್ತಿದ್ದೀರಿ ಎಂಬುದರ ಬಗ್ಗೆ ನೀವು ಕೊಡುವ ಎಲ್ಲಾ ಹೇಳಿಕೆಗಳನ್ನು ನಾವು ತುಂಬಾ ಉತ್ಸುಕರಾಗಿ ಓದುತ್ತಿರುತ್ತೇವೆ. ಪತ್ರಿಕೆಯೊಂದಕ್ಕೆ ನೀವಿತ್ತ ಸಂದರ್ಶನವೊಂದ ರಲ್ಲಿ, ಲ್ಯಾಟಿನ್ ಅಮೇರಿಕೆಯಲ್ಲಿ ಪ್ರತಿಯೊಂದು ಸರ್ವಾಧಿಕಾರದ ಅವಧಿಯು ೭ ರಿಂದ ೧೦ ವರ್ಷಗಳವರೆಗೆ ಇರುತ್ತೆ ಅಂತ ಹೇಳಿದ್ದೀರಿ. ಸರಿಸುಮಾರು ಅದೇ ಅವಧಿಯನ್ನ ನಿಮ್ಮ ಕಾದಂಬರಿ ಮುಗಿಸಲಿಕ್ಕೆ ನೀವು ತೊಗೊಂಡಿದ್ದೀರಿ. ಹಾಗಾ ದರೆ, ಪಿನೋಚೆಯ ಪತನದ ಹೊತ್ತಿಗೆ ನೀವು ಹೊಸದೊಂದು ಕಾದಂಬರಿಯನ್ನ ಬರೆದಿರ್ತೀರಿ ಅಂತ ನಂಬೋಣವೆ ? ಅಥವಾ, ನೀವು ಮೊದಲೊಮ್ಮೆ ಹೇಳಿದಂತೆ, ಇತ್ತೀಚೆಗೆ ಯಾವ ಕಾದಂಬರಿಯನ್ನೂ ಬರೆಯುತ್ತಿಲ್ಲವೆ ?

ಮಾ : ವಾಸ್ತವವಾಗಿ, ಪದೇ ಪದೇ ಕೇಳಿಬರುವ 'ಇತ್ತೀಚೆಗೆ ನೀವು ಏನನ್ನ ಬರೀತಾ ಇದೀರಿ'? ಎಂಬ ಪ್ರಶ್ನೆಯ ಒತ್ತಡದಿಂದಾಗಿ ನನಗೆ ಬರೀಲಿಕ್ಕೇ ಕಷ್ಟವಾಗುತ್ತೆ. ಆ ಪರಿಸ್ಥಿತಿಯಿಂದ ಪಾರಾಗ್ಲಿಕ್ಕಾಗಿ, ಎಲ್ಲಾ ರೀತಿಯ ಉತ್ತರಗಳ ಬಗ್ಗೆನೂ ಯೋಚಿಸಿರ್ತೀನಿ. ಇದು ನನಗೆ ಸಹಾಯ ಮಾಡುತ್ತೆ. ಆದರೆ ನೆನ್ನೆ ಏನು ಹೇಳಿರ್ತೀನೊ ಅದನ್ನ ಇವತ್ತು ಮರೆತುಬಿಟ್ಟಿರ್ತೀನಿ, ನಾಳೆ ಹೇಳಬೇಕಾಗಿರೋದನ್ನ ಯೋಚಿಸಿಯೇ ಇರೋದಿಲ್ಲ. ಆದರೆ ನಾನು ಹೇಳಿದ್ದನ್ನೆಲ್ಲಾ ಬರೆದುಕೊಳ್ಳುವ, ಅವುಗಳ ಸತ್ಯಾಸತ್ಯತೆಯನ್ನ ತಾಳೆ ನೋಡುವ ಸ್ವಭಾವದ ಅನೇಕ ಗೆಳೆಯರು ನನಗಿದ್ದಾರೆ. ಹಾಗಾಗಿ, ಕೊಟ್ಟಕೊನೆಗೆ ಅರ್ಥವಿಲ್ಲದ್ದೆಂತಹದ್ದೋ ಹುಟ್ಟಿ ಕೊಳ್ಳುತ್ತೆ. ಆದರೆ ಇವುಗಳೆಲ್ಲದರಲ್ಲೂ ಒಂದು ಎಳೆಯಷ್ಟಾದರೂ ಸತ್ಯ ಇದ್ದೇ ಇರುತ್ತೆ.

ರಾಜಕೀಯ ವಸ್ತುವನ್ನುಳ್ಳ ಕಥೆಯೊಂದಕ್ಕೆ ಹಿಂದಿರುಗಲು ಶಕ್ಯ ವಾದದ್ದು ಆ ದಿನಗಳಲ್ಲಿ ತುಂಬಾ ಪ್ರಮುಖವಾದದ್ದು ಅಂತ ನನಗನ್ನಿಸುತ್ತೆ. ಅದು ಲೇಖಕನಾಗಿ ನಾನು ನಿರತನಾಗಬಹುದಾದ ಎಲ್ಲಾ ರೀತಿಯ ಸಾಹಿತ್ಯಿಕ ಚಟುವಟಿಕೆಗಳನ್ನೂ ಒಳಗೊಂಡಿತ್ತು. ಕ್ಷಿಪ್ರವೇಗದಿಂದ ಸಾಧಿಸಿದ ಚಿಲಿಯಾದ ಕ್ರಾಂತಿ ನನ್ನನ್ನಿದಕ್ಕೆ ದೂಡಿತ್ತು....

'Autumn of the patriarch' ಬಿಡುಗಡೆಯಾದ ದಿನ ಪತ್ರ ಕರ್ತರು ಆ ಕೃತಿಯ ಬಗ್ಗೆ ಒಂದೇ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ; ಬದಲು ನನ್ನ ಮುಂದಿನ ಕೃತಿ ಯಾವುದರ ಬಗ್ಗೆ ಇರುತ್ತೆ ಅಂತ ಮಾತ್ರ ಕೇಳಿದರು. ಅಂಥ ಒಂದು ಸಂಭಾಷಣೆಗೆ ಅದು ತುಂಬಾ ವ್ಯತಿರಿಕ್ತ ಸಮಯವಾಗಿತ್ತು. ನಾನು ಯಾವೊಂದು ಕಾದಂಬರಿಯ ವಸ್ತುವಿನ ಬಗ್ಗೆಯೂ ಯೋಚಿಸಿರಲಿಲ್ಲ, ಆ ಕ್ಷಣವೇ ಬರೆಯಲು ಕೂರುವ ಮನಸ್ಥಿತಿಯೂ ನನಗಿರಲಿಲ್ಲ. ಆ ಕಾದಂಬರಿ ನನ್ನೆಲ್ಲಾ ಶಕ್ತಿಯನ್ನೂ ಹೀರಿಬಿಟ್ಟಿತ್ತು. 'Autumn of the patriarch' ಪದ ದಿಂದ ಪದಕ್ಕೆ ಮುಂದುವರೆದಿದ್ದಲ್ಲ; ಅಕ್ಷರದಿಂದ ಅಕ್ಷರಕ್ಕೆ ಮುಂದುವರೆದದ್ದು, ಅದರ ಬಗೆಗಿನ ಕೆಲಸ ತುಂಬಾ ತ್ರಾಸದಾಯಕವಾಗಿತ್ತು. ಎಲ್ಲಾ ತಿದ್ದುಪಡಿ ಗಳನ್ನೂ, ಬದಲಾವಣೆಗಳನ್ನೂ ಮಾಡಿಯೂ ೫-೬ ವಾಕ್ಯಗಳನ್ನ ನಾನು ಬರೆ ದಿದ್ದಾದರೆ, ಆ ದಿವಸದ ನನ್ನೆಲ್ಲಾ ಶ್ರಮ ಸಾರ್ಥಕವಾಯಿತು ಅಂತ ಅಂದು ಕೊಳ್ಳುತ್ತಿದ್ದೆ. ಆದರೆ ಕಾಲ ಸಂದಿತು. ವಿಶ್ರಾಂತಿಯನ್ನ ತೆಗೆದುಕೊಂಡೆ, ಆಮೇಲೆ ನಾನು ಗೀಚಿದ ಪುಟಗಳ ಮೇಲೆ ಮತ್ತೊಮ್ಮೆ ಕಣ್ಣಾಡಿಸುತ್ತಾ ಹೋದೆ. ತುಂಬಾ ಹಿಂದಿನ ಕಾಲಕ್ಕೆ ಅದು ಸಂಬಂಧಿಸಿದಂತೆ ನನಗೆ ತೋರಿತು. ನಿಮಗೆ ಆಯಾಸವಾಗಿಲ್ಲದಿದ್ದರೆ, ನಾನು ಅದರ ಬಗ್ಗೆ ಹೇಳ್ತೀನೆ. ಆ ಟಿಪ್ಪಣಿಗಳು ನಾನು ೧೯೫೫ ರಲ್ಲಿ ಮೊಟ್ಟಮೊದಲ ಬಾರಿಗೆ ರೋಮ್‌ಗೆ ಹೋದದ್ದು, ಅಲ್ಲಿ ಘಟಿಸಿದ್ದನ್ನು ದಾಖಲಿಸುತ್ತವೆ.

ನಾನು ಅಲ್ಲಿಗೆ ಸಂಪೂರ್ಣ ಹೊಸಬನಾದ್ದರಿಂದ, ನನಗೆ ಆ ಪಟ್ಟಣದ ಬಗ್ಗೆಯೂ ಗೊತ್ತಿರಲಿಲ್ಲ; ಯಾವ ಹೋಟೆಲ್‌ಗೆ ಹೋಗಬೇಕು ಎಂಬುದೂ

ತಿಳಿದಿರಲಿಲ್ಲ. ಅಲ್ಲಿಯ ಪೋರ್ಟರ್ ಒಬ್ಬ ತನಗೆ ಉತ್ತಮವಾದ ಹೋಟೆಲ್ ಒಂದು ಗೊತ್ತೆಂದೂ Nacional ಮೂಲಕ ಅಲ್ಲಿಗೆ ತಲುಪಬೇಕೆಂದೂ ಹೇಳಿದ. ಇಟಾಲಿಯನ್ನರು ವಿಚಿತ್ರವಾದ ಅನೇಕ ಪದ್ಧತಿಗಳನ್ನಿಟ್ಟುಕೊಂಡವರು. ಉದಾಹರಣೆಗೆ, ಆರು ಮಹಡಿಗಳ ಕಟ್ಟಡವೊಂದರಲ್ಲಿ ಐದಾದರೂ ಬೇರೆ ಬೇರೆ ಹೋಟೆಲ್‌ಗಳಿರುತ್ತವೆ. ಪ್ರತೀ ಮಹಡಿಯಲ್ಲೂ ಒಂದು ಪ್ರತ್ಯೇಕ ಹೋಟೆಲ್ ಇರುತ್ತದೆ. ಲಿಫ್ಟ್ ಪ್ರತೀಮಹಡಿಯಲ್ಲಿದ್ದ ಅಲ್ಲಿಯ ಹೋಟೆಲ್‌ನ ಮೇಲ್ವಿಚಾರಕನ ಡೆಸ್ಕ್ ಮುಂದೆ ನಿಲ್ಲುತ್ತದೆ. ಹಾಗಾಗಿ, ಆ ಪೋರ್ಟರ್ ನನ್ನನ್ನ ಅಂಥಾ ಒಂದು ಹೋಟೆಲ್‌ಗೆ ಕರೆದುಕೊಂಡು ಹೋದ. ಬಹುಶಃ ತನ್ನ ಗಿರಾಕಿಗಳನ್ನ ಅಲ್ಲಿಗೆ ತಂದು ಒಪ್ಪಿಸುವ ವ್ಯವಸ್ಥೆ ಮಾಡಿಕೊಂಡಿದ್ದಿರಬಹುದು. ಲಿಫ್ಟ್‌ನ ಬಾಗಿಲನ್ನ ತೆರೆದಾಗ ಸುಮಾರು ೧೫-೨೦ ಜನ ಪ್ರವಾಸಿಗರು ಸಾಲಾಗಿ—ಭೋಜನಕ್ಕಿರ ಬೇಕೆಂದು ನನ್ನ ಊಹೆ—ಕುಳಿತದ್ದನ್ನ ನೋಡಿದೆ. ಅದು ಅತ್ಯಂತ ಬಿರುಬೇಸಿಗೆಯ ಕಾಲ. ಅವರೆಲ್ಲಾ ಷಾರ್ಟ್ಸ್‌ನಲ್ಲಿದ್ದರು, ಹಾಗಾಗಿ ಅವರ ಗುಲಾಬಿರಂಗಿನ ಮಂಡಿ ಗಳಷ್ಟೇ ನನ್ನ ಗಮನಕ್ಕೆ ಬಂದದ್ದು. ಅವರೆಲ್ಲಾ ಬ್ರಿಟಿಷರಾಗಿದ್ದಿರಬಹುದು. ಅವರನ್ನ ನೋಡುತ್ತಿದ್ದ ಹಾಗೇ ನಾನು ಭಯದಿಂದ ತತ್ತರಿಸಿದೆ, ಯಾಕೆ ಅಂತ ನನಗೇ ಗೊತ್ತಿಲ್ಲ. ಆ ಪೋರ್ಟರ್‌ಗೆ 'ಇಲ್ಲಿ ಬೇಡ, ಮುಂದಿನ ಮಾಳಿಗೆಗೆ ಹೋಗೋಣ' ಅಂತ ಹೇಳಿದೆ. ನಾವು ಮೇಲೆ ಹೋದೆವು. ಅಲ್ಲಿ ನನಗೆ ರೂಮೊಂದು ಸಿಕ್ಕಿತು. ನಾನು ಸ್ನಾನಮಾಡಿ ಊಟ ಮಾಡಿದೆ. ಆಮೇಲೆ ಅಲ್ಲಿಯ ಬೀದಿಗಳಲ್ಲಿ ವಾಯುಸಂಚಾರಕ್ಕೆ ಹೋದೆ. ಮರುದಿನ ನಾನು ಕೊಲಂಬಿಯಾದ ರಾಯಭಾರಿ ಯನ್ನ ಭೇಟಿಯಾದೆ. ಅವನು ನಾನು ಉಳಿದದ್ದೆಲ್ಲಿ ಅಂತ ವಿಚಾರಿಸಿದ. ನಾನು, 'Nacional ಮೂಲಕ ತಲುಪುವ ೨೬ನೇ ನಂಬರಿನ ಬಿಲ್ಡಿಂಗ್‌ನಲ್ಲಿ' ಅಂತ ಉತ್ತರಿಸಿದೆ. "ಅದು ಸಾಧ್ಯವೇ ಇಲ್ಲ. ಆ ಬಿಲ್ಡಿಂಗ್‌ನಲ್ಲಿರುವ ಹೋಟೆಲ್ ಒಂದ ರಲ್ಲಿ ೧೭ ಜನ ಬ್ರಿಟಿಷರು ವಿಷ ಸೇವನೆಯಿಂದಾಗಿ ನೆನ್ನೆ ರಾತ್ರಿಯಷ್ಟೇ ಸತ್ತಿದ್ದಾರೆ." "ಏನು!?" ನಾನು ಉದ್ಗರಿಸಿದೆ. "ನೋಡು"—ಅವನು ಅವತ್ತಿನ ದಿನಪತ್ರಿಕೆ ಯನ್ನ ನನಗೆ ತೋರಿಸಿದ—ಇಷ್ಟನೇ ಮಹಡಿಯ ಹೋಟೆಲ್ ಒಂದರಲ್ಲಿ ಉಳಿದಿದ್ದ ೧೭ ಜನ ಬ್ರಿಟಿಷರು—ಹಿಂದಿನ ಸಂಜೆಯಷ್ಟೇ ನಾನು ನೋಡಿದ್ದವರು–ಇಚ್ಚಿಪ್ಪಿನ ಮೃದ್ವಂಗಿಗಳನ್ನ (Oyesters) ಊಟಕ್ಕೆಂದು ತರಿಸಿಕೊಂಡು ತಿಂದರು. ಅವು ಅದೇ ತಾನೇ ಬಂದವುಗಳಾಗಿರಲಿಲ್ಲ; ಅವು ವಿಷಮಯವಾಗಿದ್ದರಿಂದ, ಅದನ್ನು ತಿಂದ ಅವರೆಲ್ಲರೂ ಮೃತಪಟ್ಟರು. ಒಂದು ವೇಳೆ ನಾನೂ ಅಲ್ಲೇ ಉಳಿದಿದ್ದರೆ.... ನಾನು ಈ ಘಟನೆಯನ್ನ ಬರೆದಿಟ್ಟೆ.

ಮುಂದೆ, ಯೂರೋಪ್ ಪ್ರವಾಸ ಕೈಗೊಂಡಾಗಲೂ ನಾನು ಟಿಪ್ಪಣಿ ಗಳನ್ನ ಬರೆಯುತ್ತಾ ಬಂದೆ, ಈಗಲೂ ಅದನ್ನ ಮುಂದುವರಿಸಿಕೊಂಡು ಹೋಗು ತ್ತಿದ್ದೇನೆ. ಹಾಗಾಗಿ, ಒಮ್ಮೆ ನಾನು ಬರೆದ ಪುಟಗಳ ಮೇಲೆ ಕಣ್ಣಾಡಿಸು ತ್ತಿದ್ದಾಗ, ಸುಮಾರು ೧೦೦ ರಿಂದ ೧೫೦ ಕಥೆಗಳನ್ನು ಬರೆಯುವಷ್ಟು ಸಾಮಗ್ರಿ ನನಗೆ ಸಿಕ್ಕಿತು. ಅದೆಲ್ಲ ಲ್ಯಾಟಿನ್ ಅಮೆರಿಕಾದ ಒಬ್ಬ ನಿವಾಸಿಗೆ ಯೂರೋಪ್

ನಲ್ಲಾದ ಅನುಭವ ಕುರಿತದ್ದು. ಇವುಗಳಲ್ಲೆಲ್ಲ ಇದ್ದ ಮುಖ್ಯ ವಿಷಯವೆಂದರೆ ಎರಡು ಭಿನ್ನ ಸಂಸ್ಕೃತಿಗಳ ನಡುವಣ ಸಂಘರ್ಷ. ಈ ರೀತಿಯ ಸಂಘರ್ಷ, ಅದೇ ಮುಂಚೂಣಿಯೆನಿಸಿಕೊಳ್ಳದೇ, ಒಂದು ಪರಿಕಲ್ಪನೆಯಾಗದೇ ಉಳಿಯುವವರೆಗೂ ತುಂಬಾ ಆಸಕ್ತಿಪೂರ್ಣವಾಗಿರುತ್ತೆ. ಯಾಕೆಂದ್ರೆ ನನ್ನೆಲ್ಲಾ ಕೃತಿಗಳಲ್ಲಿ ಪ್ರಾರಂಭದ ಬಿಂದು ಎಂದರೆ ಪ್ರತಿಮೆಯೇ ಹೊರತು ಪರಿಕಲ್ಪನೆಯಲ್ಲ. ಹಾಗೇನೇ, ಈ ಕಥೆಯಲ್ಲಿ, ಹದಿನೇಳು ಜನ ಇಂಗ್ಲಿಷ್ ಮಂದಿ ಹೋಟೆಲ್‌ನಲ್ಲಿ ಕುಳಿತಿದ್ದಾರೆ, ಅವರ ಮೊಣಕಾಲುಗಳು....ಈ ಪ್ರತಿಮೆಯ ಮೂಲಕ ಹೊಳಹು ನನಗೆ ಮೂಡಿಬಂತು.

ಒಂದು ಸ್ಕೂಲ್ ನೋಟ್‌ಬುಕ್ಕಿನಲ್ಲಿ ಇಪ್ಪತ್ತು ವರ್ಷದಿಂದ ಮಾಡಿಟ್ಟುಕೊಂಡ ಟಿಪ್ಪಣಿಗಳನ್ನ ನಾನು ಕ್ರಮವಾಗಿ ಜೋಡಿಸಿಕೊಂಡೆ. ಇದರ ಸಹಾಯದಿಂದ ಒಂದು ನೂರುಕಥೆಗಳ ಒಳ್ಳೆಯ ಪುಸ್ತಕವೊಂದನ್ನ ಹೊರತರಲು ಸಾಧ್ಯ ಅನಿಸಿತು. ಮೊದಲನೆಯದನ್ನ ಬರೆಯೋಕೆ ಪ್ರಾರಂಭಿಸಿದೆ. "ವಿಷಪ್ರಾಶನಕ್ಕೊಳಗಾದ ಹದಿನೇಳುಮಂದಿ ಇಂಗ್ಲೀಷರು." ಅಲ್ಲಿ ಬರುವ ಪ್ರಮುಖ ವ್ಯಕ್ತಿಯನ್ನ ನಮ್ಮ ಹಳ್ಳಿಗಾಡಿನ ಹೆಣ್ಣಾಗಿ ಪರಿವರ್ತಿಸಿಕೊಂಡೆ. ಈಕೆ ವಿಧವೆ ಆಗಿರ್ತಾಳೆ. ಅವಳ ಮಕ್ಕಳು ಅವಳನ್ನ 'ಏನು ಮಾಡಿದರೆ ನಿನ್ನ ಮನಸ್ಸಿಗೆ ಶಾಂತಿ ಸಿಗುತ್ತೆ ?' ಅಂತ ಕೇಳಿರ್ತಾರೆ. ಆಕೆ, ತಾನು ರೋಮ್‌ಗೆ ಹೋಗಿ ಪೋಪ್‌ನನ್ನ ನೋಡ್ಬೇಕು ಅಂತಾಳೆ. ಮಕ್ಕಳು ಅವಳನ್ನ ಒಂದು ಹಡಗಿಗೆ ಹತ್ತಿಸಿ ರೋಮ್‌ಗೆ ಕಳಿಸ್ತಾರೆ. ಅಲ್ಲಿ ನಾನು ನಿಮಗೆ ಆಗಲೇ ಹೇಳಿದಂಥ ಘಟನೆ ಅವಳಿಗೆ ಎದುರಾಗುತ್ತೆ.

ಈ ಕಥೆಯನ್ನು ಮೂಲವಾಗಿಟ್ಟುಕೊಂಡು, ಮಿಕ್ಕ ಘಟನೆಗಳನ್ನು ಏನು ಮಾಡಬೇಕು ?; ಅವು ಒಂದೊಂದೂ ಒಂದೊಂದು ಸ್ವತಂತ್ರ ಕಥೆಗಳಾಗಿ ಗೋಚರಿಸ್ತಿವೆ ಅಂತ ಯೋಚಿಸತೊಡಗಿದೆ. ಈಗ ಎಲ್ಲವೂ ಶುದ್ಧ ಫ್ಯಾಂಟಸಿಯಾಗಿ ಕಾಣತೊಡಗಿತು. ಮತ್ತೊಮ್ಮೆ ಸರಿಯಾಗಿ ನನ್ನ ವಸ್ತುವಿನ ಮೇಲೆ ಕಣ್ಣಾಡಿಸಿದಾಗ, ನನ್ನಲ್ಲಿ ಅಷ್ಟೊಂದು ಸಾಮಗ್ರಿಯಿಲ್ಲ ಎಂಬ ವಾಸ್ತವತೆಯ ಅರಿವಾಗತೊಡಗಿತು. ನಾನು ಅದನ್ನ ಪೃಥಕ್ಕರಿಸಿ ೩೦-೪೦ ಕಥೆ ಮಾಡಿದರಷ್ಟೇ ಸಾಕು ಎಂದು ನಿರ್ಧರಿಸಿಕೊಂಡೆ. ಒಂದೊಂದು ಕಥೇನೂ ೫೦ ಪುಟಗಳಷ್ಟು ದೀರ್ಘವಾಗಬಹುದು, ಮಿಕ್ಕವಸ್ತುಗಳನ್ನು ಈ ಕಥೆಗಳಿಗೇ ಅಳವಡಿಸಿದರಾಯ್ತು ಅಂತ ನನ್ನ ಟಿಪ್ಪಣಿ ಕೈಗೆತ್ತಿಕೊಂಡೆ. ಅದು ನನ್ನ ಜತೆಗೇ ಪ್ರಪಂಚವೆಲ್ಲಾ ಸುತ್ತಾಡಿತ್ತು. ಅನಾವಶ್ಯಕ ಹಾಳೆಗಳನ್ನೆಲ್ಲಾ ಕಿತ್ತು ಬೇರೆಕಡೆ ಇಟ್ಟು ಟೇಬಲ್ ಸಿದ್ಧಪಡಿಸಿಕೊಂಡೆ. ಆದರೆ ಮಾರನೇ ದಿನ ಟಿಪ್ಪಣಿ ಪುಸ್ತಕ ಹುಡುಕಿದಾಗ ಅದು ನನಗೆ ಸಿಗಲಿಲ್ಲ. ಬಹುಶಃ ಮಿಕ್ಕ ಕಾಗದಗಳ ಜತೆ ಅದನ್ನೂ ನಾನು ಎಸೆದಿರಬೇಕು. ಇದೊಂದು ಭಾರೀ ವ್ಯಥೆಯ ಸಂಗತಿಯಾಗಿತ್ತು. ಅದನ್ನು ವ್ಯವಸ್ಥಿತವಾಗಿ ಹುಡುಕೋ ಪ್ರಯತ್ನಾನೂ ಮಾಡಿದೆ. ಅದು ಬಿದ್ದಿದ್ದ ಕಡೆ, ನೆಲದ ಮೇಲೆ, ಟೇಬಲ್ ಕುರ್ಚಿ ಕೆಳಗೆ, ಅದನ್ನ ಎಲ್ಲೆಲ್ಲಿಗೆ ತೊಗೊಂಡು ಹೋಗಿದ್ದೆನೋ ಅಂಥ ಕಡೆಯಲ್ಲೆಲ್ಲಾ ಅಂಗುಲ ಅಂಗುಲನೂ ಬಿಡದೆ ಶೋಧಿಸಿದೆ. ಎರಡು ದಿನ ಕಳೆದ ಮೇಲೆ ಈ ಪುಸ್ತಕ ಉಳಿವಿಲ್ಲ ಅಂತ ನನಗೆ ಖಾತ್ರಿ ಆಯ್ತು. ಈಗ ಉಳಿದ ಒಂದೇ

ಒಂದು ದಾರಿ ಅಂದ್ರೆ ಟಿಪ್ಪಣಿಗಳನ್ನ ನೆನಪಿಸಿಕೊಳ್ಳೋದು. ನಾನು ಇಪ್ಪತ್ತಾರು ಕತೆಗಳನ್ನ ನೆನಪಿಸಿಕೊಳ್ಳೋವಷ್ಟು ಯಶಸ್ವಿಯಾದೆ. ಇವಿಷ್ಟೂ ಬರವಣಿಗೆಯಲ್ಲಿ ಮೂಡುವಂತಹ ಅಂತಃಸತ್ವವುಳ್ಳವು ಅಂತ ನನಗನ್ನಿಸ್ತು. ಮಿಕ್ಕವನ್ನೂ ಜ್ಞಾಪಿಸಿಕೊಳ್ಳೋಕೆ ಪ್ರಯತ್ನಿಸಿದೆ, ಆದರೆ ಅಂಥ ಅರ್ಹತೆ ಇದ್ದ ಯಾವುವೂ ನೆನಪಿಗೆ ಬರಲಿಲ್ಲ. ಬರೆಯೋಕೆ ಪ್ರಾರಂಭಿಸಿ ಇಪ್ಪತ್ತಾರರಲ್ಲಿ ಹನ್ನೆರಡು ಕಥೆಗಳನ್ನ ಬರೆದಿದ್ದೀನಿ.

ಇಪ್ಪತ್ತಾರನೇ ಕಥೆಯನ್ನೂ ಮೀರಿ ಪಿನೋಚೆ ಹೋಗಲಾರ. ಪಿನೋಚೆ ನಾಳೆ ಏನಾದರೂ ಅಧಿಕಾರ ತ್ಯಜಿಸಿದರೆ, ಅದರ ಮಾರನೇ ದಿನಾನೇ ಎಷ್ಟು ಕಥೆ ಬರೆಯಬಹುದೋ ಅಷ್ಟನ್ನ ಮುಗಿಸಿ ಪ್ರಕಾಶಕರಿಗೆ ಕೊಡ್ತೀನಿ.

ಪ್ರ: ನೀವು ಮಾಯಾಜಾಲದ ವಾಸ್ತವವಾದವನ್ನ ನಂಬ್ತೀರೋ ಅಥವಾ ಸಾಹಿತ್ಯಿಕ ಮಾಯಾಜಾಲವನ್ನ ನಂಬ್ತೀರೋ?

ಮಾ: ನಾನು ನಿಜ ಜೀವನದ ಮಾಯಾಜಾಲವನ್ನ ನಂಬ್ತೀನಿ. ಕಾರ್‌ಪೆಂಟ್ಯೆರ್‌ನ 'ಮಾಯಾಜಾಲದ ವಾಸ್ತವವಾದ' ಲ್ಯಾಟಿನ್ ಅಮೆರಿಕೆಯ ವಾಸ್ತವದ ಅದ್ಭುತಗಳ ಬಗ್ಗೆ ಪ್ರಸ್ತಾಪಿಸುತ್ತೆ ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಕ್ಯಾರಿಬಿಯನ್ ದೇಶಗಳ ವಾಸ್ತವದ ಬಗ್ಗೆ ಪ್ರಸ್ತಾಪಿಸುತ್ತೆ. ಅದು ನಿಜವಾದ ಇಂದ್ರಜಾಲ. ಅಲ್ಲಿ ನಡೆಯುವಂತಹ ಘಟನೆಗಳು....ನಿಜ ಅವೆಲ್ಲ ಆಫ್ರಿಕ ಮತ್ತು ಅರಬ್ ಪ್ರಭಾವದಿಂದ ಆದಂಥವು. ಇದನ್ನ ಹೀಗೆ ವಿವರಿಸಬಹುದು. ಆದರೆ ಕ್ಯಾರಿಬಿಯನ್ ಜನರಿಗೆ ಮುಂದಾಗುವುದನ್ನು ಕಾಣುವ ವರ ಲಭಿಸಿತ್ತು. ಅಷ್ಟು ದೂರ ಯಾಕೆ—ನನ್ನ ತಾಯಿಗೇ ಅಪರೂಪದ ಅನುಭವಗಳಾಗಿವೆ. ಅವರಲ್ಲೇ ಮಾಯಾಜಾಲದ ವಾಸ್ತವತೆ ಇದೆ. ನಾವು ಡೆಕಾರ್ಟ್ ಜ್ಞಾನದ ಹಿನ್ನೆಲೆಯಲ್ಲಿ ಜೀವನದಲ್ಲಿ ಪಾದಾರ್ಪಣೆ ಮಾಡಿದವರು. ಆದರೆ ಆ ಥರದ ಶಿಕ್ಷಣ ಅಷ್ಟೇ ಸಾಕಾಗಲ್ಲ. ಯಾಕೇಂದ್ರೆ, ನಮ್ಮ ಜೀವನದಲ್ಲಿನ ಸಾಮಾನ್ಯ ವಿಷಯಗಳನ್ನ ಕಂಡಾಗ ಅವುಗಳ ಬಗ್ಗೆ ಏನೂ ಹೇಳದೇ ಸುಮ್ಮನೆ ತಲೆಕುಣಿಸಿಬಿಡ್ತೀವಿ. ಆದ್ದರಿಂದಾನೆ, ಒಬ್ಬ ಲೇಖಕ ಮಾಯಾಜಾಲದ ವಾಸ್ತವವಾದದ ಕೂಟಕ್ಕೆ ಸದಸ್ಯನಾಗುವ ಅರ್ಹತೆ ಪಡೆಯಬೇಕಾದರೆ ವಾಸ್ತವವಾದದಲ್ಲಿ ಅವನು ಸುಮ್ಮನೆ ನಂಬಿಕೆ ಇಡಬೇಕು, ಅದನ್ನ ವಿವರಿಸೋಕೆ ಹೋಗಬಾರದು. ವಿವರಣೆಯೆಲ್ಲ ವಿಮರ್ಶಕರು, ವಿಜ್ಞಾನಿಗಳು, ಸಮಾಜವಾದಿಗಳು ಅಥವಾ ಬೇರೆ ಯಾರಾದರೂ ಕಂಡುಕೊಳ್ಳಲಿ....

ಇಲ್ಲ. ನನಗೆ ನಿಮಗೊಂದು ಕಥೆ ಹೇಳ್ಬೇಕು ಅಂತ ಅನ್ನಿಸ್ತಿದೆ. ಅದೂ ಸಮಾಜವಾದಿ ದೇಶದಲ್ಲಿ, ಚಾರ್ವಾಕರ ದೇಶದಲ್ಲಿ–ಇದನ್ನು ನಾನು ಹೇಳ್ತಿದ್ದೀನಿ. 'ಕಿವಿಯಲ್ಲಿ ಹುಳುಗಳಾಗಿರೋ ಹಸುಗಳನ್ನು ಗುಣಪಡಿಸೋ ಒಬ್ಬ ಮನುಷ್ಯನನ್ನು ನಾನು ಕಂಡೆ. ಅವನು, ತಾನು ಕೇವಲ ಪ್ರಾರ್ಥಿಸುವುದರ ಮೂಲಕ,

ಹಸುಗಳನ್ನು ಒಂದಿಷ್ಟೂ ಮುಟ್ಟದೇ, ಗುಣಪಡಿಸಿದ' ಅಂತ ಹೇಳಿದೆ. ಅವನು ಹಸುಗಳಿಂದ ತುಸು ದೂರ ನಿಂತು ಪ್ರಾರ್ಥಿಸಲಿಕ್ಕೆ ಶುರುಮಾಡ್ತಿದ್ದ. ಸತ್ತುಹೋದ ಹುಳುಗಳು ಕಿವಿಯಿಂದ ಉದುರಿಬೀಳುತ್ತಿದ್ದವು, ಕಿವಿ ಸ್ವಚ್ಛವಾಗುತ್ತಿತ್ತು. ಇದನ್ನು ನಾನು ಕಣ್ಣಾರೆ ಕಂಡಿದ್ದೀನಿ. ಅವನು ಇದಕ್ಕಾಗಿ ಬೇರೆ ಕಡೆ ಹೋಗೋ ಅವಶ್ಯಕತೆಯೇ ಇರಲಿಲ್ಲ. ಜನ ಅವನ ಮನೆಗೇ ಬಂದು, ತಮ್ಮ ಹಸುಗಳ ಬಗ್ಗೆ ಹೇಳಿದರೆ ಸಾಕು, ಅಲ್ಲೇ ಇದ್ದು ಅವುಗಳನ್ನ ಗುಣಪಡಿಸ್ತಿದ್ದ. ನಾನೇ ಕಣ್ಣಾರೆ ನೋಡದೇ ಇದ್ದಿದ್ರೆ ನಿಮಗೆ ಇದನ್ನು ಹೇಳ್ತಾನೇ ಇರ್ಲಿಲ್ಲ. ನಾನು ಇದನ್ನ ಶಬ್ದಶಃ, ಅದು ಹೇಗೆ ನಡೀತೋ ಹಾಗೆ, ಹೇಳ್ತಾ ಇದೀನಿ. ವಿಜ್ಞಾನಿಗಳಿಗೆ ಇದೊಂದು ಸವಾಲು, ಆದರೆ ನನಗೆ ಇದು 'ಮಾಯಾಜಾಲದ ವಾಸ್ತವವಾದ.'

ಇನ್ನೂ ಒಂದು ವಿಷಯ ಇದೆ. ಒಂದು ಫನೆಯನ್ನು ಹೊಸದಾಗಿ ಸಂಶೋಧಿಸೋದು ತುಂಬಾ ಕಷ್ಟದ ಕೆಲಸ. ಯಾಕೆಂದ್ರೆ ಅದಕ್ಕೆ ಅದರದ್ದೇ ಆದ ಕೆಲವು ಮಿತಿಗಳಿರುತ್ವೆ. ಮತ್ತೆ ಬರಹಗಾರನ ಆಯ್ಕೆಗೂ ಕೆಲವೊಂದು ನಿಯಮಾವಳಿಗಳಿರುತ್ವೆ. ಈ ನಿಯಮಗಳ ಚೌಕಟ್ಟನ್ನು ಮೀರಬೇಕು ಅಂತ ಒಬ್ಬ ನಿರ್ಧರಿಸಿದ್ರೂ ಕೂಡ, ಬೇರೊಂದು ರೀತಿಯ ನಿಯಮಾವಳಿಗಳಿಗೆ ಅವನು ಬದ್ಧನಾಗಬೇಕಾಗುತ್ತೆ. ಸಂಪೂರ್ಣವಾಗಿ ಅವುಗಳನ್ನ ದಾಟಿಹೋಗೋದು ಯಾರಿಂದ್ಲೂ ಸಾಧ್ಯವಿಲ್ಲ. ಯಾಕಂದ್ರೆ, ಆ ನಿಯಮಗಳನ್ನು ಅವನು ಉಪೇಕ್ಷಿಸಿದ ಕ್ಷಣವೇ, ತನ್ನ ಬರಹಗಳಲ್ಲಿ ನಂಬಿಕೆಯನ್ನ ಕಳೆದುಕೊಳ್ತಾನೆ. ಓದುಗನೂ ಆ ನಂಬಿಕೇನ ಕಳೆದುಕೊಳ್ತಾನೆ ಅಂದ್ರೆ ಅವನ ಎಲ್ಲಾ ಸಾಹಿತ್ಯವೂ ಗಾಳಿಯಲ್ಲಿ ತೂರಿಹೋಗುತ್ತೆ....ಇವತ್ತು ಸಾಹಿತ್ಯದ ಬಗ್ಗೆ ಮಾತನಾಡ್ತಾ ಇರೋದು ಎಷ್ಟೊಂದು ಖುಷಿ ಕೊಡ್ತಿದೆ! ಹೀಗೆ ಮಾತನಾಡ್ಲಿಕ್ಕೆ ಎಷ್ಟೋ ವರ್ಷಗಳಿಂದ ನನಗೆ ಅವಕಾಶನೇ ಬಂದಿರ್ಲಿಲ್ಲ.

ಪ್ರ : 'One hundred years of Solitude'ನ ಅಂತ್ಯದ ಬಗ್ಗೆ ನಮ್ಮ ಗೆಳೆಯರವರ್ತುಲದಲ್ಲಿ ನಾವು ತುಂಬಾ ಸಾರಿ ಚರ್ಚಿಸಿದ್ದೀವಿ. 'ವಿಶ್ವಮಹಾಪೂರ'ದ ಮೂಲಕ ನೀವು ಏನನ್ನು ಹೇಳಬೇಕು ಅಂದ್ಕೊಂಡಿದ್ರಿ?

ಮಾ : 'One hundred years of Solitude'ನ ಕೊನೇ ಭಾಗವನ್ನು ತಲುಪಿದಾಗ ಅದನ್ನ ಹೇಗೆ ಮುಗಿಸಬೇಕು ಎಂಬುದೇ ನನಗೆ ತೋಚಲಿಲ್ಲ. ಅದನ್ನ ಸುಮ್ಮನೇ ಎಳೆದುಕೊಂಡು ಹೋಗ್ತಿದ್ದೆ. ಪುಸ್ತಕದ ಕೊನೆ ಹತ್ತಿರ ವಾಯ್ತು ಅಂತ ಅರಿತ ಮೇಲೆ ಅದನ್ನು ಮೇಲೆತ್ತುವಂತೆ ಏನನ್ನಾದರೂ ಬರೀಬೇಕು ಅಂತ ಅಂದ್ಕೊಂಡೆ. ಯಾಕೆಂದ್ರೆ ಒಂದು ವೇಳೆ ನಾನದನ್ನ ಸಾಮಾನ್ಯ ರೀತಿಯಲ್ಲೇ ಮುಗಿಸಿದ್ದರೆ, ಆ ಪುಸ್ತಕ ಕುಸಿದು ಬೀಳುತ್ತಿತ್ತು. ಅದನ್ನ ಮೇಲೆತ್ತಲಿಕ್ಕೆ ಏನನ್ನಾದರೂ ಮಾಡಲೇ ಬೇಕಿತ್ತು. ಮೊದಮೊದಲು ನಾನು ಹೀಗೆ ಯೋಚಿಸಿದ್ದೆ : 'ಕೊನೇ ಬ್ಯುಯೆಂಡಾ, ತನಗೆ ಹಂದೀ ಬಾಲವಿರೋ

ಮಗ ಹುಟ್ಟಿದ, ಅವನು ಬೇಗನೇ ಸಾಯ್ತಾನೆ' ಅಂತ ಯಾವಾಗ ಕಂಡುಕೊಳ್ತಾನೋ ಆಗ ಅವನು ಮನೆ ಒಳಗೆ ಹೋಗಿ ಚಿಲುಕ ಹಾಕ್ಕೋತಾನೆ, ತಾನು ಸಾಯೋವರೆಗೂ ಅಲ್ಲೇ ಉಳೀತಾನೆ ಅಂತ. ಈ ಕೊನೆ ತುಂಬಾ ದುರ್ಬಲವೆನಿಸ್ತು. ನಾನು ಅಂದುಕೊಂಡದ್ದನ್ನೇನೂ ಅದು ಹೇಳುತ್ತಿರಲಿಲ್ಲ. ಆಗಿದ್ದಕ್ಕೆಲ್ಲಾ ಪೂರ್ಣವಿರಾಮ ಬೀಳುತ್ತಿತ್ತಾದರೂ, ನಾನು ಹೇಳಬೇಕಾದ್ದೆಲ್ಲಾ ಗಾಳಿಯಲ್ಲೇ ಇದ್ದಂತೆ ತೋರುತ್ತಿತ್ತು. ಈ ರೀತಿಯ ಕೊನೆ, ಒಂದು ನಿರ್ದಿಷ್ಟ ಚರಿತ್ರೆಯ ವಾಸ್ತವತೆಯನ್ನ, ಅದರಲ್ಲಿ ಬರುವ ಪಾತ್ರಗಳನ್ನ, ಜಗತ್ತಿನ ರೀತಿಯನ್ನ, ಕಟುವಾಗಿ ಟೀಕಿಸಿದ ಪುಸ್ತಕವೊಂದಕ್ಕೆ ತಕ್ಕುದಾಗಿರಲಿಲ್ಲ; ಇದು ಪುಸ್ತಕ ಕೊನೆಗೊಳ್ಳುವ ರೀತಿಯೇ ಆಗಿರಲಿಲ್ಲ.

ಮೆಲ್‌ಕ್ವೈಡೆಸ್ ಏನನ್ನ ಬರೆದ ಎಂಬುದಾಗಲೀ ಅಥವಾ ಅವನ ಓಲೆಗರಿಗಳಲ್ಲಿ ಇದ್ದುದಾದರೂ ಏನು, ಎಂಬುದಾಗಲೀ ಕೊನೇ ಗಳಿಗೆಯವರೆಗೂ ನನಗೆ ಗೊತ್ತಾಗಲಿಲ್ಲ. ಅದನ್ನ ಹಾಗೇ ನೇತಾಡಲು ಬಿಟ್ಟಿದ್ದೆ. ಆದರೆ ಯಾವಾಗ ನನ್ನ ಮೆಲ್‌ಕ್ವೈಡೆಸ್ ಬರೀತಾ ನಾನಾಗ ಯೋಚಿಸುತ್ತಿದ್ದೆ: "ಅವನು ಏನನ್ನ ಬರೀತಾ ಇದಾನೆ ಅಂತ ನಾನ್ಯಾವಾಗ ಅರ್ಥಮಾಡಿಕೊಳ್ಳುವುದು?" ಅಂತ. ಈ ಪ್ರಶ್ನೆಗೆ, ನಾನು ಅವನ ಬರವಣಿಗೆ ಬಗ್ಗೆ ಏನನ್ನೇ ಹೇಳಿದರೂ ಅದು ದುರ್ಬಲವಾಗೇ ಇರತ್ತೆ, ಅದರಲ್ಲಿರುವ ರಹಸ್ಯಕ್ಕಿಂತ ಇದು ಕೆಟ್ಟದಾಗಿರುತ್ತೆ, ನಾನು ಅದನ್ನ ಹೇಗೆ ವಿಶದೀಕರಿಸಿದ್ರೂ, ಅದರಲ್ಲಿ ನಿಜವಾಗಿ ಏನು ಬರೆಯಲ್ಪಟ್ಟಿದೆ 'ಅಂತ ಕೊನೇವರೆಗೂ ತಿಳಿಯೋದಿಲ್ಲ' ಅಂತ ನನಗೆ ನಾನೇ ಉತ್ತರ ಹೇಳಿಕೊಳ್ತಾ ಇದ್ದೆ. ಆದರೆ, ಪುಸ್ತಕದ ಕೊನೆಯನ್ನ ತಲುಪಿದಾಗ, ಆ ಮೂಲಾಗ್ರವಾಗಿ ಆ ಪುಸ್ತಕವನ್ನೊಮ್ಮೆ ಓದಿದಾಗ, ಮತ್ತೆ ಈ ಪ್ರಶ್ನೆ ಧುಪ್ಪನೇ ಎದುರಾಯ್ತು. "ನನಗೆ ನಾನೇ ಕೇಳಿಕೊಂಡೆ, 'ಮೆಲ್‌ಕ್ವೈಡೆಸ್ ಏನನ್ನ ಬರೀಬಹುದಿತ್ತು?' ಅಂತ ನನಗೆ ಚೆನ್ನಾಗಿ ನೆನಪಿದೆ, ಮಧ್ಯರಾತ್ರಿಯಲ್ಲೊಮ್ಮೆ ನಾನು ಎದ್ದುಕುಳಿತಿದ್ದೆ. "ಆಹ್! ಮೆಲ್‌ಕ್ವೈಡೆಸ್ ಏನನ್ನ ಬರೀತಾ ಇದಾನೆ ಅಂತ ನನಗೆ ಗೊತ್ತು! ಮೆಲ್‌ಕ್ವೈಡೆಸ್ ಸಧ್ಯಕ್ಕೆ ನಾನು ಬರೀತಾ ಇರೋ ಪುಸ್ತಕವನ್ನೇ ಬರೀತಾ ಇದಾನೆ. ದೊಡ್ಡ ಬಿರುಗಾಳಿ ಎದ್ದು ಮ್ಯಾಕೆಂಡೋ ಈ ಭೂಮಿಯಿಂದ್ಲೇ ಅಳಿಸಿಹಾಕಲ್ಪಡ್ತಾನೆ ಅಂತ ಮೆಲ್‌ಕ್ವೈಡೆಸ್‌ಗೆ ಸಹ ಚೆನ್ನಾಗಿ ಗೊತ್ತು". ಈ ಘಟನೆ, ೧೯೫೫ ರಲ್ಲಿ ಬರೆದ, ಅಂದರೆ ೧೦ ವರ್ಷ ಮುಂಚಿತವಾಗಿ ಬರೆದಿದ್ದ 'An evil hour'ನಲ್ಲಿ ಪ್ರಸ್ತಾಪಗೊಂಡಿದೆ. ಆದರೆ ಆ ರೀತಿಯಲ್ಲೇ ಅದನ್ನ ಮುಗಿಸಲಿಕ್ಕೆ ಟಿಪ್ಪಣಿಗಳ ಭಾಷೆಯನ್ನ ಮೊದಲು ಅರ್ಥಮಾಡಿಕೊಳ್ಳಬೇಕಿತ್ತು. ಆ ಓಲೆಗರಿಗಳಲ್ಲಿದ್ದುದ್ದನ್ನ ಹೇಗಾದರೂ ಅರ್ಥಮಾಡಿಕೊಳ್ಳಲೇಬೇಕು ಅಂತ ನಿರ್ಧರಿಸಿದ ಮೇಲೆ ನನಗನ್ನಿಸಿದ್ದು, ಮೆಲ್‌ಕ್ವೈಡೆಸ್ ಒಬ್ಬ ಅಲೆಮಾರಿಯಾಗಿದ್ದರಿಂದ, ಆ ಟಿಪ್ಪಣಿಗಳು ಸಂಸ್ಕೃತ ಭಾಷೆಯಲ್ಲಿರಬೇಕಿತ್ತು ಅಂತ. ಇದು, ಒಬ್ಬ ಲೇಖಕನ ಪಾಕಶಾಲೆ ಇರುವ ಸ್ಥಿತಿ—ಅಲ್ಲಿ ಯಾವ ಓದುಗ ಕೂಡ ಇಣಿಕಿಹಾಕಲಿಕ್ಕೆ ಅವಕಾಶ ಇರೋಲ್ಲ. ಆದರೆ ನಾನೀಗ

ಮಾತನಾಡ್ತಾ ಇರೋದು ಆ ವಿಷಯದ ಅಂಚನ್ನ ಮುಟ್ಟಿದ್ದರಿಂದ ನಾನು ಹೇಳಿದ್ದೆಲ್ಲ ಬಿಚ್ಚುಮನಸ್ಸಿನ ಲೇಖಕನೊಬ್ಬನ ಪ್ರಾಮಾಣಿಕ ಅನಿಸಿಕೆಗಳು ಅಂತ ಧಾರಾಳವಾಗಿ ಹೇಳಬಲ್ಲೆ....

ಹಾ! ಇವೆಲ್ಲದರಿಂದಾಗಿ, ನಾನು ಆ ಪುಸ್ತಕವನ್ನ ಮುಗಿಸುವ ಪರಿಯನ್ನೇ ಕಾಣದಾಗಿದ್ದೆ. ಆದರೆ ಈಗ, ನಾನದರ ಕೊನೆಯನ್ನ ತುಂಬಾ ಇಷ್ಟಪಡ್ತೀನಿ. ಬೇರೊಂದು ರೀತಿಯಲ್ಲಿ ಅದನ್ನ ಮುಗಿಸುವುದನ್ನ ಕಲ್ಪಿಸಿಕೊಳ್ಳಲಿಕ್ಕೂ ಕಷ್ಟವಾಗುತ್ತೆ ಈಗ. ಆ ಪುಸ್ತಕ ಈಗ ಸಾಂದ್ರವಾಗಿದೆ, ನಿಬಿಡವಾಗಿದೆ. ಸ್ಪಷ್ಟಬಂಧವೊಂದು ಸಿಕ್ಕಿದೆ ಅದಕ್ಕೆ.

ವಿದಾಯ ಹೇಳಲಿಕ್ಕೆ ಸಮಯ ಬಂತು ಅನಿಸುತ್ತೆ. ಈ ಭೇಟಿಯನ್ನ ನಾನು ತುಂಬಾ ಆಸ್ವಾದಿಸಿದೆ. ನಾನು ಹೇಳಿದ್ದರಲ್ಲಿ ಎಷ್ಟೋ ವಿಷಯಗಳು ಮೊದಲೇ ಪ್ರಸ್ತಾಪಗೊಂಡಿದ್ದರೂ, ಈ ರೀತಿ ಹೇಳುತ್ತಿರುವುದು ಇದೇ ಪ್ರಥಮ. ತುಂಬಾ ಆರಾಮದಾಯಕವಾದ, ನಿಜವಾದ ಮಾತುಕತೆಯೆಂದರೆ, ಇದು. ಹಳೆಯ ಎಷ್ಟೋ ವಿಷಯಗಳನ್ನ ನಾಸಿಲ್ಲಿ ನೆನಪಿಸಿಕೊಂಡೆ. ಎಷ್ಟೋ ವೇಳೆ ಅವುಗಳನ್ನೆಲ್ಲಾ ನೆನಪಿಸಿಕೊಳ್ಳೋಕೆ ಸಮಯಾವಕಾಶವೇ ಇರೋಲ್ಲ, ಅಷ್ಟೊಂದು ವೇಗವಾಗಿ ನಮ್ಮ ಬದುಕು ಸಾಗ್ತಾ ಇದೆ. ಒಂದು ರೀತೀಲಿ ಇದು, ವಯಸ್ಸಾದ ಮುದುಕನೊಬ್ಬ ಹಳೆಯದನ್ನ ಮೆಲುಕು ಹಾಕಿದಂತೆ 'ಒಬ್ಬ ಅಜ್ಜನಂತೆ ಮಾತಾಡ್ತಾ ಇದೀನಿ' ಅಂತ ತಟಕ್ಕನೇ, ನನ್ನ ಕಲ್ಪನೆಯಲ್ಲಿ ನನ್ನನ್ನ ನಾನೇ ಕಂಡುಕೊಂಡಂತೆ.

ಅನುವಾದ: ನಂದಾ

ಯಾವನು ಕಾನೂನಿಗೆ ಪೂರ್ಣ ಮರ್ಯಾದೆ ಕೊಡುವನೋ ಅವನು ಕಾನೂನು ಭಂಗ ಚಳವಳಿಗೆ ಅತ್ಯಂತ ಅರ್ಹ.

ಗಾಂಧೀಜಿ

‘ದಿ ಆಟಮ್ ಆಫ್ ದಿ ಪೇಟ್ರಿಯಾರ್ಕ್’— ಒಂದು ಪರಿಚಯ

ಸುಜ್ಞನ್ ಡ್ಯಾನಿಯಲ್

‘ದಿ ಆಟಮ್ ಆಫ್ ದಿ ಪೇಟ್ರಿಯಾರ್ಕ್’ ಒಂದು ಅಪೂರ್ವ ಕೃತಿ. ಕಾದಂಬರಿಯು ಧ್ವನ್ಯರ್ಥಗಳಿಗೆ ತೆರೆದುಕೊಳ್ಳುತ್ತಾ ಹೋದಂತೆ ಅದರಾಳದಲ್ಲಡಗಿರುವ ಜೀವನಾನುಭವ ನಮ್ಮನ್ನು ದಂಗುಬಡಿಸುತ್ತದೆ. ಮಾರ್ಕ್ವೆಸ್‌ನದು ಸದಾ ಹೊಸ ಸಂವಾದಗಳನ್ನು ಹುಡುಕುತ್ತಾ ಹಿಗ್ಗುವ ಕಲೆ. ಪೂರ್ಣವಿರಾಮಗಳೇ ಇಲ್ಲದ, ಅಲ್ಪವಿರಾಮಗಳನ್ನೇ ಬಳಸಿ ವಾಕ್ಯದೊಳಗಿನ ವಾಕ್ಯಗಳು, ವಿವರಗಳೊಳಗಿನ ವಿವರಗಳಿಂದ ಉಕ್ಕಿ ಹರಿಯುವ ಇವರ ಶೈಲಿಯು ದಕ್ಷಿಣ ಅಮೆರಿಕೆಯ ವಾಚ್ಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಾ ಪಾಶ್ಚಾತ್ಯ ಕಾದಂಬರಿ ಸಾಧಿಸದೇ ಇದ್ದುದನ್ನು ಸಾಧ್ಯವಾಗಿಸಿದ್ದಾರೆ. ಈ ಅರ್ಥದಲ್ಲಿ ಈ ಕೃತಿಯನ್ನು ಕಾದಂಬರಿ ಎನ್ನುವುದಕ್ಕಿಂತ ನೀಳ್ಗತೆಯೆಂದು ಪರಿಗಣಿಸುವುದು ಹೆಚ್ಚು ಅರ್ಥಪೂರ್ಣ.

ಹೇಗೆಂದರೆ—ಬರವಣಿಗೆಯು ಒಂದು ಎಳೆ ಅನುಭವಗಳಲ್ಲಿ ಸಾಮ್ಯವನ್ನು ಸೃಷಿಸುವುದರ ಕಡೆ ಗಮನವಿದ್ದರೆ ಇನ್ನೊಂದೆಳೆ ಅದಕ್ಕೆ ಹೊಂದಿಕೊಂಡಿರುವ ವಿರೋಧಾಭಾಸಗಳನ್ನು ಹುಡುಕುವುದರ ಕಡೆ ಆಸಕ್ತಿ ವಹಿಸುತ್ತದೆ. ಇಲ್ಲಿ ನಾವು ಕಾಣುವುದು ಲೇಖಕನ ಲೀಲಾವತಾರ; ಸತ್ಯ ಅಸತ್ಯಗಳು ವಾಸ್ತವ ಮಿಥ್ಯೆಗಳು, ವರ್ತಮಾನ ಭೂತಗಳನ್ನು, ನೆನಪು ಕನವರಿಕೆಗಳ ಮುಖಾಂತರ ಕಾಣಿಸಿಕೊಳ್ಳುವ ಇವರ ಕಾವ್ಯ ಚರಿತ್ರೆಯ ದೃಷ್ಟಿ ಕೋನವನ್ನೂ ನಮ್ಮ ಮುಂದೆ ತಂದಿಡುತ್ತದೆ. ಚರಿತ್ರೆ ಎಂದರೂ ತಪ್ಪಾದೀತೇನೋ. ದಕ್ಷಿಣ ಅಮೆರಿಕೆಯ ಯಾವ ಜನಾಂಗಗಳಲ್ಲೂ ಬರವಣಿಗೆಯ ಅರಿವಿಲ್ಲದಾಗ ಅವರ ಕುರಿತಾದ ನಮ್ಮ ತಿಳುವಳಿಕೆಯು ಕೇವಲ ಹಳೆಯುಳಿಕೆಗಳಿಂದ ಮಾತ್ರ. ತಾವೇ ನೇಮಿಸಿದ ವೃತ್ತಾಂತಕರು ಚರಿತ್ರೆಯ ಸೋಗಿಲ್ಲದೆ ತಮ್ಮ ಸಂಸ್ಕೃತಿ

ಯನ್ನು ಒಂದು ತಲೆಹೊರೆಯಿಂದ ಇನ್ನೊಂದಕ್ಕೆ ವಹಿಸಿದ್ದರಿಂದ ಎಷ್ಟೋ ವಿಷಯಗಳು ಊಹಾಪೋಹಗಳ ಪಾಲಾಗಿವೆ. ಮುಂದೆ ಆ ಖಂಡವನ್ನು ಆಕ್ರಮಿಸಿದ ಸ್ಪಾನಿಯಾರ್ಡ್‌ಗಳು ಸ್ಥಳೀಯರ ಬಗ್ಗೆ ಕುತೂಹಲ ಆಸಕ್ತಿಗಳನ್ನು ವಹಿಸಿ ಅನೇಕ ವಿಚಾರಗಳನ್ನು ದಾಖಲು ಮಾಡಿದ್ದಾರೆ. ಆದಾಗ್ಯೂ ಪರದೇಶದಲ್ಲಿ ತಮ್ಮ ಇರವನ್ನು ಸಮರ್ಥಿಸುವ ಕಾರ್ಯದಲ್ಲಿ ತಮ್ಮ ಮತವಾದ ಕ್ರಿಶ್ಚಿಯನ್ ಮತದ ಚೌಕಟ್ಟಿನಲ್ಲಿ ಸ್ಥಳೀಯರ ಸಂಸ್ಕೃತಿಯನ್ನು ಅರ್ಥೈಸುವುದು ಅನಿವಾರ್ಯವಾಯಿತು. ಈ ಕಲಬೆರಕೆಯ, ಅಸ್ಪಷ್ಟ ವಿವರಗಳೇ ಮಾರ್ಕ್ವೆಸ್‌ನ ಭಾಷೆಯ ಶ್ರೀಮಂತಿಕೆಗೆ ಕಾರಣವೆಂದರೆ ಆಶ್ಚರ್ಯವೇನಿಲ್ಲ. ಕಾವ್ಯ ಮತ್ತು ಮಿಥ್ಯಗಳನ್ನು ಅವಲಂಬಿಸಿರುವ ಇವರ ಬರವಣಿಗೆ ಲ್ಯಾಟಿನ್ ಅಮೆರಿಕೆಯ ಜನರ ಪರ್ವವಾಗಿ ನಾವು ನೋಡಬಹುದು. ಆದರೆ ಗ್ರೀಕ್‌ರು, ಹಿಂದೂಗಳಲ್ಲಿರುವ ಬಹುದೇವತಾರಾಧನೆ ಅದಕ್ಕೆ ಸಂಬಂಧಿಸಿದ ಪುರಾಣ ಸಾಹಿತ್ಯ ಈ ರಾಷ್ಟ್ರಗಳಲ್ಲಿ ಕಾಣಸಿಗುವುದಿಲ್ಲ. ತಮ್ಮಲ್ಲೇ ಹುಟ್ಟಿ ಬೆಳೆದಿರುವ ಅಸಂಖ್ಯಾತ ಅತಿಮಾನವ ಶಕ್ತಿಯ ಕಥೆಗಳು, ಜನಪ್ರಿಯ ಅಥವಾ ಯಕ್ಷಿಣಿ ಕಥೆಗಳು ಹೆಚ್ಚು. ಪುರಾಣ ಸಾಹಿತ್ಯ, ದಂತಕಥೆ, ಜಾನಪದ—ಇವುಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸುವುದು ಕಷ್ಟ. ಈ ಅಸ್ಪಷ್ಟತೆಯನ್ನೇ ಮಾರ್ಕ್ವೆಸ್ ತನ್ನ ನಿರೂಪಣೆಯ ಶಕ್ತಿಯಾಗಿ ಬಳಸುತ್ತಾನೆಂಬುದು ಮುಖ್ಯವಾದ ಅಂಶ. ಮೌಲ್ಯಗಳನ್ನಾಧರಿಸಿದ ಖಚಿತತೆ ಬರವಣಿಗೆಯಲ್ಲಿ ಕಾಣದೆ ವಾಸ್ತವ ಮತ್ತು ಮಿಥ್ಯ ಇವುಗಳು ಕಥನ ಕ್ರಮವಾಗಿಯೂ, ಕಥೆಯ ವಸ್ತುವಾಗಿಯೂ, ಕಡೆಗೆ ಆಧ್ಯಾತ್ಮಿಕ ಚೌಕಟ್ಟಾಗಿಯೂ ಮಾರ್ಕ್ವೆಸ್‌ನ ಬರವಣಿಗೆ ಹೆಚ್ಚು ಸಂಕೀರ್ಣತೆಯನ್ನು ಪಡೆಯುತ್ತದೆ.

ಇನ್ನು ಕಥೆಯನ್ನು ಅರ್ಥ ಮಾಡಿಕೊಳ್ಳಲು ಒಂದು ಪ್ಲಾಟನ್ನು ಹುಡುಕಿದರೆ ನಮಗೆ ಸಿಗುವುದು ಮೂರು ಮುಖವಾಡಗಳು—ವ್ಯಕ್ತಿ ಸ್ವಾತಂತ್ರ್ಯ, ಪ್ರಜಾತಂತ್ರ ಇವೆರಡರ ಮಧ್ಯೆ ಪುಷ್ಟಿಗೊಳ್ಳುವ ಸರ್ವಾಧಿಕಾರ. ಸರ್ವಾಧಿಕಾರನ ಕ್ರೌರ್ಯದಿಂದ ತತ್ತರಿಸುವ ಜನ ಸ್ವಾತಂತ್ರ್ಯ ನಾಣ್ಯದ ಒಂದು ಮುಖವಾದರೆ ಇನ್ನೊಂದೆಡೆ ಇದೇ ಜನಗಳ ಸಂಚು, ಕಪಟ, ಕ್ರೋಧಗಳಿಂದ ರಕ್ಷಣೆಯ ಕವಚ ನೇಯ್ದುಕೊಳ್ಳುವ ಸರ್ವಾಧಿಕಾರನ ಕಾತರ. ಇವೆರಡೂ ಪರಸ್ಪರ ಕಾರಣ—ಉತ್ತರಗಳಾಗಿ ವರ್ತಿಸುತ್ತಾ ಬರಹಗಾರನಿಗೆ ಬಹಳಷ್ಟು ಹಾಸ್ಯದ ವಿನೋದದ ಪ್ರಸಂಗಗಳನ್ನು ಒದಗಿಸುತ್ತದೆ.

ಹತ್ತೊಂಬತ್ತನೇಯ ಶತಮಾನದಲ್ಲಿ ಸ್ಪೇನ್ ಮತ್ತು ಪೋರ್ಚುಗಲ್‌ಗಳಿಂದ ಸ್ವಾತಂತ್ರ್ಯ ಪಡೆದು ಪ್ರಜಾಪ್ರಭುತ್ವಕ್ಕೆ ನಡೆಸಿದ ಹೋರಾಟಗಳೆಲ್ಲವೂ ಸರ್ವಾಧಿಕಾರದಲ್ಲಿ ಕೊನೆಗೊಂಡದ್ದನ್ನು ನೆನಪಿಸಿಕೊಳ್ಳಬಹುದು. ಇದರಿಂದಲೇ ಶೀರ್ಷಿಕೆಯ ಪೇಟ್ರಿಯಾರ್ಕ್—ಕುಲಪಿತೃ ಈ ಯಾವುದೇ ರಾಷ್ಟ್ರದ ಪ್ರತಿನಿಧಿಯಾಗಿ ಕಾಣುತ್ತಾನೆ. ನಿರಂಕುಶ ಪ್ರಭುಗಳನ್ನು ಸೃಷ್ಟಿಸಿದ ಜನರನ್ನು ಮರೆಯುವಂತಿಲ್ಲ, ಬಹುಬೇಗ ತಮ್ಮ ಸಮತೋಲನವನ್ನು ಕಳೆದುಕೊಳ್ಳುವವರು ಅತಿರೇಕಕ್ಕೆ ಹೋಗುವವರು, ಗೆಲವಿನ ಉಲ್ಲಾಸದ ಮನೋಭಾವದವರೂ ಕ್ಷಣೋತ್ಸಾಹಿಗಳೂ ಆದ ಜನರು ಈ ರಾಜಕೀಯ ದುರವಸ್ಥೆಯ ಕರ್ತೃಗಳೆಂದರೂ ತಪ್ಪಾಗಲಾರದು.

ಕುಲಪಿತೃವಿನ ಇಳಿಗಾಲದ ಕಥೆಯು ಪ್ರಾರಂಭವಾಗುವುದು ಅವನ ಮರಣದಿಂದ. ಆದರೆ ಈ ಮರಣ ಹಿಂದೆಯೇ ಆದ ಮರಣ. ಸರ್ವಾಧಿಕಾರದ ದವಡೆಗಳಲ್ಲಿ ಸಿಕ್ಕ ಜನರು

ತನಗೆ ನೆನಪಿದ್ದಾಗಿನಿಂದಲೂ ಅಪೇಕ್ಷಿಸಿದ್ದು ಈ ಮರಣವನ್ನು. ಕುಲಪಿತೃವಿನ ಸಾವಿನಿಂದ ಶತಮಾನಗಳ ಆಲಸ್ಯ ನೀಗಿದಂತಾಗಿ ಜನರು ಅರಮನೆಯ ಕಡೆ ಧಾವಿಸುವರು. ಆಗಲೇ ಅವ್ಯವಸ್ಥೆಗೊಂಡಿದ್ದ ಅರಮನೆಯ ಕೋಣೆಗಳನ್ನು ದಾಟಿ ಶವವಿದ್ದಲ್ಲಿಗೆ ಬಂದಾಗ ಹದ್ದುಗಳು ಕುರೂಪಗೊಳಿಸಿದ ಶವ ಅವರಿಗೆ ಎದುರಾಗುತ್ತದೆ. ಭೂಸಲು ಪಾಚಿ ಬೆಳೆದು ಕೊಂಡಿದ್ದ ದೇಹ ಕುಲಪಿತನದೆಂದು ತೀರ್ಮಾನಿಸುವುದು ಹೇಗೆ. ಅಲ್ಲದೆ ಹಿಂದೊಮ್ಮೆ ಅವನು ಸತ್ತನೆಂದು ಸುದ್ದಿ ಹಬ್ಬಿದ ಮೇಲೂ ರಾಜ್ಯಭಾರವನ್ನು ನಿರ್ವಹಿಸಿಕೊಂಡು ಹೋಗಿದ್ದ—ಸರಳ ರೀತಿಯಲ್ಲಿ ಮನೆಯ ಕಾರುಬಾರಿನಂತೆ. ಇನ್ನು ಕುಲಪಿತೃವನ್ನು ಕಂಡವರಾರು? ಸರ್ವವ್ಯಾಪ್ತಿಯಾದ ಇವನ ದೇಹವಿದು ಎಂದು ಖಚಿತವಾಗಿ ತಿಳಿಸು ವವರು ಯಾರು. ಜನರ ಈ ಗೊಂದಲಕ್ಕೆ ಕಾರಣವಿತ್ತು. ಕುಲಪಿತೃವನ್ನು ಹೋಲುತ್ತಿದ್ದ ವನೊಬ್ಬ ಅವನ ಹೆಸರಿನಲ್ಲಿ ಜನರನ್ನು ವಂಚಿಸುತ್ತಿರಲು ಅರಮನೆಗೆ ಸುದ್ದಿ ತಿಳಿದು, ತನ್ನ ವಿಧಿ ಸಾಮಾನ್ಯನೊಬ್ಬನ ವಿಧಿಯನ್ನು ಹೋಲುವಂತಾಯಿತಲ್ಲ ಎನ್ನುವ ವ್ಯಥೆ ಯಿಂದ ಪೆಟ್ರೀಶಿಯೊ ಅರಗೊನೀಸನನ್ನು ತಿಂಗಳಿಗೆ ೫೦ ಪೀಸೊಗಳಂತೆ ಅಧಿಕೃತ ಠಕ್ಕನನ್ನಾಗಿ ನೇಮಿಸಲಾಯಿತು. ಠಕ್ಕನಿಗೆ ಕುಲಪಿತನ ಉಡುಪು, ಸೌಲಭ್ಯಗಳನ್ನು ಅಧಿಕಾರವಲ್ಲದ ಎಲ್ಲವನ್ನೂ ಕೊಟ್ಟು, ಕುಲಪಿತೃ ಸಂಚುಕೋರರಿಂದ ದೂರವಿರಲು ಸಾಧ್ಯವಾಯಿತು. ಒಂದು ಕಡೆ ಠಕ್ಕನ ಆಶ್ರಯವಿದ್ದರೆ ಇನ್ನೊಂದು ಕಡೆ ತನ್ನ ಆಪ್ತ ಸೇನಾನಿ ರೊಡ್ರಿಗೊ ಡಿ ಅಗ್ವಿಲಾರ್. ಇವರಿಬ್ಬರ ರಕ್ಷಣೆಯಲ್ಲಿ ತನ್ನ ಇಳಿವಯಸ್ಸಿನಲ್ಲೂ ಸಾವಿಗಂಜದೆ ಜನರ ಪ್ರೀತಿಯ ನಾಯಕನಾಗಿ ಮುಂದುವರಿಯಲು ಸಾಧ್ಯವಾಯಿ ತ್ತಾದರೂ, ತನ್ನ ಮನಸ್ಸಿನಾಳದ ಇಂಗಿತಗಳನ್ನು ಯಾರ ಮುಂದೆಯೂ ಹೇಳಲಾಗದೆ ಒಬ್ಬನೇ ಇದ್ದಾಗ 'Bright January moon' ಎಂದು ಹಾಡುತ್ತಾ, ಕಣಿ ಹೇಳಿದವರು ತನ್ನ ಭವಿಷ್ಯದಲ್ಲಿ ಗುರುತಿಸಿದ ಸಾವನ್ನು ನೆನೆದು ದುಃಖಿಸುತ್ತಿದ್ದನು. ಇಳಿವಯಸ್ಸಿನ ಆಲಸ್ಯ ಅವನನ್ನು ಮುತ್ತಿದರೂ ರಕ್ಷಣಾ ಪಡೆಯ ಸಂಖ್ಯೆ ಹೆಚ್ಚಿಸಿ, ಶಕುನಗಳನ್ನು ಅಭ್ಯಾಸ ಮಾಡಿ, ಹೇಗಾದರೂ ಮಾಡಿ ಈ ಅನಿಶ್ಚಿತತೆಯನ್ನು ಕೊನೆಗೊಳಿಸಬೇಕೆಂದು ಕೊರಗುತ್ತಾನೆ.

ಅದೃಷ್ಟವಶಾತ್ ತನ್ನ ಮರಣಾನಂತರದ ತನ್ನ ವೈರಿಗಳ ಪೆಟ್ರೀಶಿಯೊ ಅರಗೊನೀಸನಿಗೆ ಬೆರಸಿಕೊಟ್ಟ ವಿಷದಿಂದ ಅವನು ಬೋರಲು ಬಿದ್ದು ಇನ್ನೇನು ಸಾಯಲಿದ್ದಾನೆ. ಅಲ್ಲಿಗೆ ಬಂದ ಕುಲಪಿತೃವನ್ನು ನೋಡಿ ಮಾತನಾಡಲು ಧೈರ್ಯ ಮಾಡಿ—ಅನಾಥೆಯ ಈ ಬದುಕು ಕೊಟ್ಟ ನಿನಗೆ ಒಳ್ಳೆಯ ಸಾವು ಬರಲೆಂದು ನನ್ನ ಪ್ರಾರ್ಥನೆ. ನನ್ನ ಅಂತರಂಗದ ಸಂಕಟವನ್ನು ಅರಿತವನು ನೀನು ಮಾತ್ರ. ನಾನು ಸಾಯುವ ಮುಹೂರ್ತವನ್ನು ಉಪಯೋಗಿಸಿ ಬೇಗ ಸತ್ತುಬಿಡು ಎಂದು ಬುದ್ಧಿಹೇಳಿ ಸತ್ತನು. ಮಾರನೆಯ ದಿನ ಏರ್ಪಟ್ಟ ಈ ನಾಟಕದಲ್ಲಿ ಜನರು ತಮ್ಮ ಕುತೂಹಲ, ಗೌರವಗಳನ್ನು ತೋರಲು ಬಂದಾಗ ಬಾಗಿಲ ಸಂದಿನಿಂದ ನಿಂತು ನೋಡುತ್ತಿದ್ದ ಕುಲಪಿತೃ ಕಪಟಿಗಳ ಸಾಲುಗಳನ್ನು ನೋಡಿ, ತನ್ನ ಮೇಲೆ ಅತ್ಯಾಚಾರವೆಸಗಿದ ಅನುಭವವಾಗಿ ತನ್ನ ಗೆಳೆಯ ರೊಡ್ರಿಗೊವಿಗೆ ಹೇಳಿ ಆಜ್ಞಾಪಿಸಿ ಅವರನ್ನು ಕೊಲ್ಲುವನು. ಕೊಲೆಗಳು ಸಂಚುಕೋರರ ಶವಗಳನ್ನು ಹೊತ್ತುಕೊಂಡು ಹೋದ ಮೇಲೂ ತನ್ನ

ಇಳಿವಯಸ್ಸಿನ ಸೋನನ್ನು ನೆನೆದು ತನ್ನ ಕ್ರೌರ್ಯವನ್ನೆಲ್ಲಾ ಪ್ರದರ್ಶಿಸುವನು. ನಂತರ ತಾನೇ ಪಶ್ಚಾತ್ತಾಪಪಟ್ಟು, ಜನರು ತಪ್ಪು ದಾರಿಹಿಡಿಯದಿರಲು ಕವಿಗೋಷ್ಠಿಗಳನ್ನೂ ಸೌಂದರ್ಯ ಸ್ಪರ್ಧೆಗಳನ್ನು ಏರ್ಪಡಿಸಿದನು.

ಇನ್ನು ಮುಂದೆ ಸೈನ್ಯಾಧಿಕಾರಿಗಳ ಅಗತ್ಯವಿಲ್ಲ ಊಟಕ್ಕಿಡುವ ಕೈಯಿಗೆ ಉಗುಳುವವರು ಅವರು. ಮನೆ ಕೆಲಸಕ್ಕೆ ಇಬ್ಬರು ಹೆಂಗಸರು ಸಾಕು. ದನಕರುಗಳ, ಹಕ್ಕಿಗಳ ಮೇಲ್ವಿಚಾರಣೆ ನಾನೇ ನೋಡಿಕೊಳ್ಳುವೆ. ಇದು ರಾಷ್ಟ್ರಪತಿಭವನ, ಸೂಳೆಮನೆಯಲ್ಲ. ಬೇರೆಯವರಿಗೆ ಅಗತ್ಯವಿದ್ದರೆ ಅವರು ಸಾಯಲಿ. ನಾನಂತು ಇನ್ನೊಂದು ಧೂಮಕೇತು ಕಾಣಿಸಿಕೊಳ್ಳುವವರೆಗೂ ಆಳುತ್ತೇನೆ—ಒಂದಲ್ಲ ಹತ್ತುಭಾರಿ ಎಂದು ತನಗನ್ನಿಸಿದೆಲ್ಲವನ್ನು ಮಹಾಸೇನಾನಿ ರೊಡ್ರಿಗೊ ಅಗ್ವಿಲಾರ್‌ಗೆ ಒಪ್ಪಿಸುತ್ತಾನೆ. ಮರಣದಿಂದ ಪುನರುತ್ಥಾನ ಹೊಂದಿದವನಿಗೆ ಜಯವಾಗಲಿ, ಸರ್ವೋತ್ತಮನಿಗೆ ಜಯವಾಗಲಿ ಎಂದು ತನ್ನ ಮರಣವನ್ನು ಸಾರಲಿದ್ದ ಘಂಟೆಗಳು ಉತ್ಸಾಹದಿಂದ ಮೊಳಗಿದಾಗ, ನನ್ನ ಬಗ್ಗೆ ಜನರಿಗದೆಷ್ಟು ಪ್ರೀತಿ ಎಂದು ಸಮಾಧಾನದ ನಿಟ್ಟುಸಿರಿಟ್ಟನು.

ಮಾರ್ಕ್ವೆಸ್‌ನ ಶೈಲಿಯು ಒಂದು ರೀತಿಯ ವಶೀಕರಣದ ಶಕ್ತಿಯನ್ನು ಹೊಂದಿರುವುದರಿಂದ ಕ್ರಮೇಣ ಸತ್ಯ ಅಸತ್ಯಗಳ ನಡುವಿನ ಅಂತರವು ಮಾಯವಾಗುತ್ತಾ ನೈತಿಕತೆಗೆ ಅವಕಾಶವಿಲ್ಲದೆ, ಕಥೆಯು ಬೆಳೆಯುತ್ತದೆ.

ಹಾಗಿದ್ದರೆ ಸರ್ವಗ್ರಾಹಿ, ಸರ್ವವ್ಯಾಪ್ತಿ ಆದ ಕುಲಪಿತೃವನ್ನು ಗುರುತಿಸುವುದರ ಅಗತ್ಯವಾದರೂ ಏನಿದೆ? ಅವನು ನಿಜವಾಗಲೂ ಸತ್ತಿದ್ದಾನೆಯೆ ಎಂದು ತಿಳಿಯಲು ಮಾತ್ರವೆ ? ರಥದಿಂದ ಕಾಣಿಸುತ್ತಿದ್ದ ವೆಲ್ವೆಟ್ ಕೈಚೀಲದ ಕೈಗಳು ಇವನ್ನದಲ್ಲದಿದ್ದರೂ ತೆರೆಯ ಹಿಂದಿನಿಂದ ಬರುತ್ತಿದ್ದ ಹೊಸ ನಿಬಂಧನೆಗಳು ಅವನತ್ತ ಸದಾ ಬೆರಳು ಮಾಡುತ್ತಿದ್ದವು. ಈ ಪಿತಾಮಹನಿಗೆ ಸುಮಾರು ೧೫೦ ವರ್ಷವಾಗಿರಬೇಕೆಂದೂ, ಮೂರನೇಯ ಭಾರಿ ಇವನಿಗೆ ಹಲ್ಲುಗಳು ಹುಟ್ಟಿಕೊಂಡಿವೆಯೆಂದು ದಂತಕತೆಗಳೂ ಹಬ್ಬಿಕೊಂಡವು. ಶಾಲಾ ಪಠ್ಯಪುಸ್ತಕಗಳು ಅವನಲ್ಲಿದ್ದ ಅತಿಮಾನವ ಶಕ್ತಿಯನ್ನು ಪ್ರಶಂಸಿದವು. ಪಿತೃಭೂಮಿಯ ಒಡೆಯನಾದವನು ತಾಯ್ತನವನ್ನು ಕಡೆಗಾಣಿಸಿದನೆಂದು ತಿಳಿಯುವಂತಿಲ್ಲ. ತಂದೆಯನ್ನು ಅರಿಯದಿದ್ದವನು ತನ್ನ ತಾಯಿಗೆ ರಾಷ್ಟ್ರಮಾತೆ ಎಂಬ ಬಿರುದನ್ನು ಕೊಟ್ಟನು. ಇನ್ನು ತನ್ನ ಸೂಳೆಯರಿಗೆ ಹುಟ್ಟಿದ ಮಕ್ಕಳನ್ನು ಅವರಿಗೆ ಒಪ್ಪಿಸಿ ತಾಯಿತನವನ್ನು ಆ ಮೂಲಕ ಗೌರವಿಸಿದನು. ಆದರೆ ತಾಯಿಯ ಹಂಗನ್ನು ಮುರಿದವಳು ಮ್ಯಾನುವೆಲಾ ಸಾಂಚೆಸ್. ರಾಷ್ಟ್ರಪತಿಯ ಸಾವನ್ನು ಘೋಷಿಸುವ ಧೂಮಕೇತು ಕಾಣಿಸಿಕೊಂಡಾಗ ಅವಳ ಕೈ ಹಿಡಿದು ಧೂಮಕೇತುವಿನತ್ತ ಬೆರಳು ಮಾಡಿ ಕುಲಪಿತೃವನ್ನು ನೋಡಿ ದೀರ್ಘಾಯುಷಿಯಾದ ಗಂಡ ಸಿಕ್ಕರೆ ಶೂನ್ಯತೆಯ ಕೈಹಿಡಿದಂತೆ ಎಂದು ತನ್ನಲ್ಲೀ ಅಂದುಕೊಂಡಳು.

ಪಿತೃಭೂಮಿಯನ್ನು ದಾಟಿ ಹೋದ ಧೂಮಕೇತು ಚರಿತ್ರೆಯನ್ನು ಸುಳ್ಳು ಮಾಡಿತು. ಇನ್ನೊಂದು ಧೂಮಕೇತು ಕಾಣಿಸಿಕೊಳ್ಳುವ ತನಕ ಆಳುವ ಯೋಚನೆಯಲ್ಲಿದ್ದ ಕುಲಪಿತೃ, ಮ್ಯಾನುವೆಲಾ ದಿಢೀರನೆ ಮಾಯವಾದುದನ್ನು ಕಂಡು ಸಾಯುವ ಯೋಚನೆ ಮಾಡಿದ. ಕಣಿ ಹೇಳಿದವರು ಅಪಘಾತದ ಸಾವನ್ನು ಸೂಚಿಸಿರಲಿಲ್ಲವಾದ್ದ

ರಿಂದ ತನ್ನ ಜೀವವನ್ನು ತಾನು ತೆಗೆದುಕೊಳ್ಳಲಿಲ್ಲ. ಕಾಲಕ್ರಮೇಣ ಸಾವಿಲ್ಲದ ರಾಷ್ಟ್ರಪಿತನು ಪ್ರಜೆಗಳ ರಕ್ಷಕನಾಗಿ ಪ್ಲೇಗ್, ಪ್ರವಾಹ, ಕೊನೆಗೆ ಹೆಣ್ಣಿಗೂ ಬಲಿ ಬೀಳದೆ ರಾಷ್ಟ್ರವನ್ನು ಆಳುತ್ತಾ ಬಂದ fatherland means staying alive ಎಂದು ಪರಕೀಯನೊಬ್ಬನಿಗೆ ಹೇಳಿದ ಮಾತಿನ ಮೇರೆಗೆ ಬದುಕುಳಿದು ಆ ಮಾತಿನ ಅರ್ಥವನ್ನು ರುಜುವಾತು ಪಡಿಸಿದನು. ಯುದ್ಧಾನಂತರ ರಾಷ್ಟ್ರ ಪುನರ್ರಚನೆಯ ಕಾರ್ಯದಲ್ಲಿ ಮನೆಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ, ಗೋಪುರಗಳನ್ನು ಇನ್ನಷ್ಟು ಎತ್ತರಕ್ಕೆ ನದಿಯ ಜಾಡನ್ನು ಬದಲಿಸಿ ತನ್ನ ಶಕ್ತಿ ತನಗೆ ಅರಿವಾಗುತ್ತಿರಲು League of Nations ಇಂದ ತನ್ನ ಅಮಾನವೀಯ ಘಟನೆಗಳನ್ನು ಅಭ್ಯಾಸ ಮಾಡಲು ಬಂದ ತಂಡಕ್ಕೆ ಸಮಾಧಾನ ಮಾಡಿ ವಾಪಸ್ಸು ಕಳುಹಿಸಿದನು. ತನ್ನ ಮೋಸದ ಲಾಟರಿಯಲ್ಲಿ ಉಪಯೋಗಿಸಿದ ಮಕ್ಕಳಿಗೆ ಮಾತ್ರ ತಿಂಡಿ ತಿನಸುಗಳು ತುಂಬಳಿಗಳನ್ನು ಕಳುಹಿಸಿಕೊಡುತ್ತಾ ಒಂದು ರೀತಿಯ domestic insomniaಗೆ ಒಳಗಾಗುತ್ತಾನೆ.

ಒಂದು ದಿನ, ನಿಜವಾದ ಶತ್ರು ಮನಸ್ಸಿನಾಳದಲ್ಲಿ, ಆಪ್ತವಾದವರಲ್ಲಿ, ಎಂದು ಅರಿವಾಗಿ ತನ್ನ ಮನೆಯ ಉಪ್ಪು ತಿಂದೂ ದ್ರೋಹ ಬಗೆಯುವವರನ್ನು ಆಜ್ಞೆಯೊಂದರ ಮುಖಾಂತರ ನಿರ್ಮೂಲನ ಮಾಡಿದ ಹೊಸ ಪೀಳಿಗೆಯೊಂದನ್ನು ಅವರ ಜಾಗದಲ್ಲಿ ತುಂಬಿ, ದೇವರ ವಿರುದ್ಧ ದಂಗೆಯೆದ್ದವರ ಪಾಡೇನೆಂದು ಜನರು ತಿಳಿಯಲೆಂದು ರಸ್ತೆಯಲ್ಲಿ ಮೆರವಣಿಗೆಯಲ್ಲಿ ನಡೆಸಿದನು.

ಹೀಗಿದ್ದೂ ಅರಮನೆಯ ಹತ್ತಿರದ ಕೊಂಡೆಯಲ್ಲಿ ದಂಗೆ ಮಹಾಸ್ವಾಮಿ ಎಂದು ಸುದ್ದಿ ಬಂದಾಗ ತನ್ನ ಇಳಿವಯಸ್ಸಿನ ನೋವು, ಮೂತ್ರದ ಕಾಯಿಲೆಗಳು, ತನ್ನನ್ನು ಬಾಧಿಸುತ್ತಿದ್ದ ಹರ್ನಿಯಾಗಳ ಮಧ್ಯೆಯೂ ಧೈರ್ಯಗೆಡದೆ ಅವುಗಳ ಕಡೆ ಗಮನ ಹರಿಸಬೇಡಿ ಎಂದು ಸೈನಿಕರಿಗೆ ಸಮಾಧಾನ ಹೇಳಿ ಹಾಲು ಕರೆಯುವ ಕೆಲಸವಾದ ನಂತರ ಆರು ಹಾಲಿನ ಪಿಪಾಯಿಗಳಲ್ಲಿ ಧಂಗೆಕೋರರಿಗೆ ಡೈನಮೈಟ್ ತುಂಬಿ ಕಳುಹಿಸಿದ. ತನ್ನನ್ನು ಕೊಲ್ಲಲೆತ್ನಿಸಿದವನಿಗೆ, ತಾನೆ ಗುಂಡಿಕ್ಕಿ ಕೊಂದ ಕಥೆ ಅರಮನೆಯಲ್ಲೆಲ್ಲಾ ಹಬ್ಬಿತು. ತಂದೆಯ ವಿರುದ್ಧ ಧಂಗೆಯೆದ್ದವರ ಗತಿಯೇನೆಂದು ಜನರು ತಿಳಿಯಲೆಂದು ಅವನ ದೇಹವನ್ನು ತುಂಡರಿಸಿ ದೇಶದ ಬೇರೆ ಬೇರೆ ಭಾಗಗಳಲ್ಲಿ ಚೆಲ್ಲಿದರು. ಇನ್ನು ತನ್ನ ಆಪ್ತ ಸೇನಾನಿ ನಡೆಸಲೆತ್ನಿಸಿದ ಸಂಚಿನ ಸುದ್ದಿ ತಿಳಿದು ಸೇನೆಯ ಅಧಿಕಾರಿಗಳಿಗೆ ಏರ್ಪಡಿಸಿದ ವಾರ್ಷಿಕ ಭೋಜನ ಕೂಟದಲ್ಲಿ ಬೆಳ್ಳಿಯ ತಟ್ಟೆಯಲ್ಲಿ ಗಿಡಮೂಲಿಕೆಗಳ ಒಗ್ಗರಣೆಯಾಗಿ ಇಡಿಯಾಗಿ ಬೇಯಿಸಿ, ಹೂಕೋಸು, ಬಾಯಲ್ಲಿ ಸೊಪ್ಪು ಎದೆಯ ಮೇಲೆ ೫೦ ಪೌಂಡು ತೂಕದ ಸೇನಾನಿಯ ಮೆಡಲ್‌ಗಳೊಡನೆ, ನೆರೆದ ಸೇನಾಧಿಕಾರಿಗಳಿಗೆ 'ತಿನ್ನಿ ಜೆಂಟಲ್-ಮೆನ್'' ಎಂದು ರಕ್ಷಣಾಮಂತ್ರಿಯನ್ನು ಸಮಭಾಗ ಮಾಡಿ ಬಡಿಸಿದನು.

ಗ್ರಹಣಗಳು ಪ್ರವಾಹಗಳು ಧೂಮಕೇತುಗಳ ಪ್ರಭಾವವನ್ನು ತಪ್ಪಿಸಿ ಬದುಕಿ ಉಳಿದ ರಾಷ್ಟ್ರಪಿತೃವಿನ ದೇಹವನ್ನು ಕೆಡದಂತೆ ಉಳಿಸಲು ತಯಾರಿಗಳು ಒಂದು ಕಡೆಯಲ್ಲಿ ನಡೆಯುತ್ತಿದ್ದಾಗ್ಯೂ ಸೃಷ್ಟಿಯ ಕೊನೆಯಾದ ಈತನಿಗೆ ಸಾವಿಲ್ಲವೆಂದು ನಂಬಿದವರೇ ಹೆಚ್ಚು. ವರ್ತಮಾನ ಪತ್ರಿಕೆಗಳು ಇವನ ಅಮರತ್ವವನ್ನು ಘೋಷಿಸಿದವು.

ಮೂರನೆಯ ಧೂಮಕೇತುವನ್ನು ಕಳೆದುಳಿಯಬಹುದೆಂಬ ನಂಬಿಕೆ ಜನರಲ್ಲಿ ಪ್ರಬಲ ವಾಯಿತು. ಕುಲಪಿತನು ಸತ್ತಿದ್ದಾನೆ ಅದನ್ನು ಅವನಿಗೆ ತಿಳಿಸುವವರಾರು ಎಂದು ಜನ ತಮ್ಮಲ್ಲೇ ಗೇಲಿ ಮಾಡಿದಾಗ– ಈ ಮಾತು ನಿಜವೇ ಸುಳ್ಳೆ ಎಂದು ಕುಲಪಿತನಿಗೆ ತಿಳಿಯುತ್ತಿತ್ತೊ ಏನೊ. ತನ್ನ ಸ್ಮೃತಿಪಟಲದಲ್ಲಿ ಮಾಸದೆ ಉಳಿದ ಕೆಲವು ವಿಚಾರ ಗಳು ಅಪರ ವಯಸ್ಸಿನ ಈತನಿಗೂ ಹೊರಗಿನ ಪ್ರಪಂಚಕ್ಕೂ ಇದ್ದ ಸಂಬಂಧ ಇದರಲ್ಲಿ ಮುಖ್ಯವಾದದ್ದು. ಲೆಟೀಶಿಯೊ ನಾಜರೀನೊವಿನ ಮರಣ. ಅವಳ ಕಾಲಾನಂತರ ಹಕ್ಕಿಗಳು ತಮ್ಮ ಧ್ವನಿ ಕಳೆದುಕೊಳ್ಳುತ್ತಿವೆ ಎಂಬ ಭ್ರಮೆಯಲ್ಲಿ ತಾನೇ ಅವುಗಳಿಗೆ ಹಾಡುಗಳನ್ನು ಹೇಳಲಾರಂಭಿಸಿದನು. ಕಡೆಗೆ ಶಾಲಾಹುಡುಗಿಯರ ಮಾತು ಕೇಳಿಸದಾದಾಗ ತನಗೂ ವಾಸ್ತವ ಜಗತ್ತಿಗೂ ಇದ್ದ ಸಂಬಂಧ ನೆನಪುಗಳು ಮಾತ್ರವೆಂದು ಅವನಿಗೆ ಅರಿವಾಯಿತು. ತನ್ನನ್ನು ಸಾವಿನಿಂದ ರಕ್ಷಿಸಿದ ನೆನಪುಗಳನ್ನು ಬರೆದಿಡಲಾರಂಭಿಸಿದನು: "God damn it, he said to himself, teaming up the steep of papee, I'm me, he said to himself."

ಇಚ್ಛಾಮರಣಿಯಾದ ಕುಲಪಿತನ ವಿರುದ್ಧ ಕ್ರಮ ತೆಗೆದುಕೊಳ್ಳುವುದಾದರೂ ಹೇಗೆ. ಸರ್ಕಾರವನ್ನು ಇನ್ನೊಂದು ಕಟ್ಟಡಕ್ಕೆ ವರ್ಗಾಯಿಸಿದ ಮೇಲೂ ತನ್ನ ಸರ್ವಾಧಿ ಕಾರದ ಅರಮನೆಯಲ್ಲಿ ಒಂಟಿಯಾಗಿ ಕಾಲ ಕಳೆದನು. ನನ್ನ ಮರಣಾನಂತರ ನನ್ನನ್ನು ಜೆರೂಸಲೇಮಿಗೆ ಒಯ್ಯಬೇಡಿ ಎಂದು ತಮಾಷೆ ಮಾಡುತ್ತಾ ತನ್ನ ಆಳ್ವಿಕೆಯ ಹಿಂದಿನ ದಿನಗಳನ್ನು ಸ್ಮರಿಸುತ್ತಾ ತಾನು ಕೇಳಿದ ವಿಚಾರಗಳೊ ಅಥವಾ ಆಗಿದ್ದ ವಿಚಾರಗಳೊ ಎಂದು ತಿಳಿಯದೆ ಇದ್ದಾಗಲೂ ತನ್ನ ಒಬ್ಬಳೆ legitimate ಹೆಂಡತಿಯಾದ ಲೆಟೀಶಿಯಾ ನಾಜರೀನೊವನ್ನು ನೆನೆದುಕೊಳ್ಳುತ್ತಾ ಕಾಲ ಕಳೆಯುತ್ತಿದ್ದನು. ತನ್ನನ್ನು ಮಧ್ಯಾಹ್ನ ನಾಲ್ಕು ಗಂಟೆಗೆ ಮರದ ನೆರಳಲ್ಲಿ ಕೂರಿಸಿ ಓದು ಬರಹ ಕಲಿಸಿದ ಲೆಟೀಶಿಯಾ, ನಿಮ್ಮ ಬೂಟ್ಸನ್ನು ತೆಗೆದುಬಿಡಿ, ನನ್ನ ಬೆಡ್‌ಶೀಟ್‌ಗಳು ಕೊಳೆಯಾಗುತ್ತವೆ ಅಥವಾ ಸರ್ವಸಮವಸ್ತ್ರವನ್ನು ಬಿಚ್ಚಿ, ನಿಮ್ಮನ್ನು ಸ್ಪರ್ಶಿಸಬೇಕೆಂದು ಯಶಸ್ವಿಯಾಗಿ ಆಜ್ಞಾಪಿಸಿದ ಲೆಟೀಶಿಯಾ, ಇಷ್ಟರಲ್ಲೇ ತೃಪ್ತಿ ಪಡದೆ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಇಮಾನುವೆಲ್ ಎಂದು ಹೆಸರಿಟ್ಟು ಕೊನೆಗೆ ಮನಸ್ಸಿಲ್ಲದ ಈ ಪಿತನಿಗೆ ಮದುವೆಯ ವಿಚಾರವನ್ನು ಪ್ರಸ್ತಾಪಿಸಿ, ಬದಲಾವಣೆಯೆಂದರೆ ಸಾವು ಎಂದು ತಿಳಿದಿದ್ದ ಯುಗದಲ್ಲಿ ಅನೇಕಾನೇಕ ಬದಲಾವಣೆಗಳನ್ನು ತಂದಳು. ಇವಳಿಂದ ಸೃಷ್ಟಿಯಾದ ಹೊಸ ಯುಗ ದಲ್ಲಿ ಅವಳೂ ಅವನಂತೆ ಸರ್ವವ್ಯಾಪಿಯಾಗಿ, ರಾಜ್ಯಭಾರವನ್ನು ತನ್ನ ಕೈಗೆತ್ತಿ ಕೊಂಡು ಅವನ ನಿರಂಕುಶ ಪ್ರಭುತ್ವವನ್ನು ಇವಳು ಬೆಳಸಿದಳು. ಕುಲಪಿತೃವಿಗೆ ಅರಳು ಮರಳಿನ ಕಾಲ ಎನ್ನುವ ಶಂಕೆಗಳು ಪ್ರಬಲವಾದವು. ತನ್ನ ರಾಣಿಪಟ್ಟವನ್ನು ಲೆಟೀಶಿಯಾ ಎಷ್ಟು ಗಂಭೀರವಾಗಿ ಪರಿಗಣಿಸಿದಳೆಂದರೆ ರಾಷ್ಟ್ರಪಿತನಾದ ಅನೇಕ ವಿಷಯ ಗಳನ್ನು ಬೇರೆಯವರಿಂದ ತಿಳಿಯುವ ಪ್ರಸಂಗಗಳು ಬಂದವು. ಆದರೂ ಅವಳಿಲ್ಲದೆ ರಾಜ್ಯಾಡಳಿತವಿರಲಿಲ್ಲ. ಅವಳ ಕುಟುಂಬದವರೂ ಅವಳ ಮುಖಾಂತರ ಲಾಭಗಳನ್ನು ಪಡೆಯಲಾರಂಭಿಸಿದರು. ಭ್ರಷ್ಟರು ಬೆಳೆದು ಸಹಿಸಲಾಗದಾಗ ಸಂಚುಕೋರರು ಅವಳನ್ನು ಕೊಲ್ಲುವ ಸಿದ್ಧತೆ ನಡೆಸಿದರು. ಒಂದು ದಿನ ಅವಳನ್ನೂ ಅವಳ ಮಗನನ್ನೂ

ಮಾರುಕಟ್ಟೆಯಲ್ಲಿ ನಾಯಿಗಳು ತಿಂದುಹಾಕಿದವು. ಈ ಸುದ್ದಿಯಿಂದ ಕುಲಪಿತೃ ಕಂಗಾಲಾಗಿ ಸೇನ್ಸ್ ಡಿ ಲಾ ಬಾರಾಗೆ ಅಧಿಕಾರ ವಹಿಸಿದನು.

ಕುಲಪಿತನಿಲ್ಲದೆ ನಮ್ಮ ಗತಿಯೇನು ಎಂದು ಜನರು ಗೋಳಾಡಲು ಆರಂಭಿಸಿದರು. ಸೇನ್ಸ್ ಡಿ ಲಾ ಬಾರಾ ಕುಲಪಿತೃವಿನ ಶತ್ರುಗಳನ್ನು ನಿರ್ಮೂಲ ಮಾಡುವ ಹೊಣೆ ಹೊತ್ತು ಅವನು ನಡೆಸುತ್ತಿದ್ದ ಕೊಲೆಗಳಿಂದ ಸೈನಿಕರ ಸಂಖ್ಯೆಯನ್ನು ಮೀರಿದ ಶತ್ರುಗಳು ದೇಶದಲ್ಲಿ ಹುಟ್ಟಿಕೊಂಡಾಗ ಕುಲಪಿತೃ ನಾಶವಮಾಡಿದ ಜನರೇ ಇವನನ್ನೂ ಕಲ್ಲೇಟುಗಳಿಂದ ಕೊಂದರು ಎಂಬ ಸುದ್ದಿ ಎಲ್ಲೆಡೆ ಹರಡಿದಾಗ ನಮ್ಮನ್ನು ಕಟುಕನಿಂದ ರಕ್ಷಿಸಿದವನಿಗೆ ಜಯವಾಗಲಿ ಎಂದು ಕುಲಪಿತೃವನ್ನು ಕೊಂಡಾಡಿದರು. ಈ ಎಲ್ಲಾ ಯಶಸ್ಸಿನ ಗುಟ್ಟು ಒಂದು ಅಂಶವನ್ನವಲಂಭಿಸಿತು. ಎಲ್ಲಾ ವಿಷಯದಲ್ಲೂ ಜನರ ತಿಳುವಳಿಕೆ ಕಡಿಮೆಯಾದಷ್ಟು ಅವರ ಭೀತಿ ಭಕ್ತಿಗಳು ಹೆಚ್ಚುತ್ತವೆ ಎಂಬ ಅಂಶ ಕಾಲಕ್ರಮೇಣ ಸಾರ್ವಜನಿಕರಂಗದ ಎಲ್ಲಾ ಚಟುವಟಿಕೆಗಳು ಸಮಾರಂಭಗಳು ಕುಲಪಿತನಿಲ್ಲದೆಯೆ ನಡೆಯಿತು. ಪ್ರತಿಯೊಂದು ಸಂದರ್ಭಕ್ಕೂ ಪತ್ರಿಕೆಯವರು ಬೇರೆ ಬೇರೆ ಉಡುಪು ಧರಿಸಿದ ಹೊಸ ಚಿತ್ರಗಳನ್ನು ಸೃಷ್ಟಿಸುತ್ತಿದ್ದರು. ತನ್ನನ್ನು ಅಮರವಾಗಿಸುವ ಕಾರ್ಯ ಮುಗಿದಂತಿತ್ತು. ಲೆಟೀಶಿಯಾಳ ನೆನಪು ಕಾಲದ ಮೋಡಿಯಲ್ಲಿ ಮಾಯವಾದರೂ ತಾಯಿ ಬೆನಡಿಶಿಯೊ ಅಲ್ವಾರಾಡೊವಿನ ನೆನಪು ಉಳಿಯುವಂತೆ ಮಾಡಲು ತೀರ್ಮಾನಿಸಿದ ಕುಲಪಿತೃ ಒಂಟಿಯಾಗಿ ಸಾಯುತ್ತಿದ್ದ ಅವಳ ಶಿಶ್ರೂಷೆಯನ್ನು ತಾನೇ ವಹಿಸಿ, ಕೊಳೆತು ನಾರುತ್ತಿದ್ದ ಅವಳ ಶರೀರವನ್ನು ತನ್ನ ಕೈಗಳಿಂದಲೇ ಉಪಚರಿಸಿದ. ಅವಳ ಮರಣಾನಂತರ ಅವಳನ್ನು ರಾಷ್ಟ್ರ ಮಾತೆಯೆಂದೂ ಹಕ್ಕಿಗಳನ್ನು ಕಾಪಾಡುವವಳೆಂದೂ (ತನ್ನ ಬಡತನದ ದಿನಗಳಲ್ಲಿ ಜೀವನೋಪಾಯಕ್ಕೆ ಹಕ್ಕಿಗಳನ್ನು ಮಾರುತ್ತಿದ್ದಳು) ಸಂತಳೆಂದೂ ಘೋಷಿಸಲಾಯಿತು. ಅವಳು ಸಾಧಿಸಿದ ಪವಾಡಗಳ ಪಟ್ಟಿಯನ್ನು ಅಧಿಕೃತವಾಗಿಯೇ ನಿರ್ಮಿಸಲಾಯಿತು. ಬಡವಳಾದ ಈಕೆಯ ಮಗನ ಹುಟ್ಟಿನ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಕೇಳಿ ಬಂದಾಗ್ಯೂ ಶಾಲಾ ಪಠ್ಯಪುಸ್ತಕಗಳಲ್ಲಿ ಬೆನಡಿಶಿಯೊ ಅಲ್ವಾರಾಡೊ ಕನ್ಯಾ ಮಾತೆಯೆಂದೂ ಕುಲಪಿತೃವಿನ ಅತಿಮಾನವ ಹುಟ್ಟಿನ ಪ್ರಶಂಸೆಯ ಮಾತುಗಳನ್ನೂ ಸೇರಿಸಲಾಯಿತು. ಇಷ್ಟೆಲ್ಲ ಆದ ಮೇಲೂ ರೋಮಿನಿಂದ ತಕರಾರು ಬಂದಾಗ ಬೆನಡಿಶಿಯೊ ಅಲ್ವಾರಾಡೊವನ್ನು ಸಿವಿಲ್ ಕಾಯಿದೆಯ ಪ್ರಕಾರವೇ ಸಂತ ಪದವಿಯೊಡನೆ ಉಳಿಸಲಾಯಿತು. ಜನರಲ್ಲೂ ಅನೇಕರು ಅವಳ ಮರಣದಿಂದ ಲಾಭ ಪಡೆದರು ಮಾತೆಯ ಕೂದಲು, ಮಾತೆಯ ಉಗುರು, ಮಾತೆಯ ಚರ್ಮವೆಂದು ಪವಾಡ ಸ್ತ್ರೀಯನ್ನು ಮಾರುಕಟ್ಟೆಗಳಲ್ಲಿ ಮಾರಲಾಯಿತು. ಹೀಗೆ ಇತಿಹಾಸವಿಲ್ಲದ ಜನರು ಇತಿಹಾಸವನ್ನು ನಿರ್ಮಿಸಿದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಚರ್ಚಿನ ಅಧಿಕಾರ ವರ್ಗ, ಕನ್ಯಾಸ್ತ್ರೀಯರು ಪಾದ್ರಿಗಳನ್ನು ಚರ್ಚುಗಳ ಜೊತೆಯಲ್ಲೇ ಕೆಡವಿ ಹಾಕಲಾಯಿತು.

ತನ್ನ ಮರಣದ ಹಿಂದಿನ ರಾತ್ರಿಯು ಸಾವಿನ ಯೋಚನೆಯನ್ನು ದೂರವಿಟ್ಟು 'bright january moon' ಎಂದು ಹಾಡಿದ ಕುಲಪಿತೃ, ಹನ್ನೊಂದು ಗಂಟೆಯ ವೇಳೆಯಲ್ಲಿ ದೀಪ ಹಿಡಿದು ಒಂದು ಕಡೆಯಿಂದ ಬಾಗಿಲುಗಳನ್ನು ಹಾಕುತ್ತಾ ಗೋಡೆಗಳಲ್ಲಿ

ನೇತುಹಾಕಿದ ಕನ್ನಡಿಗಳಲ್ಲಿ ಒಂದಲ್ಲ ಹದಿನಾಲ್ಕು ಸೇನಾನಿಗಳ ಪ್ರತಿಬಿಂಬ ಅವನಿಗೆ ಎದುರಾಗಲು ತನ್ನ ಕೋಣೆಗೆ ಹಿಂದುರುಗಿ ನಿತ್ಯದ ಪ್ರಾರ್ಥನೆಯನ್ನು ನೆನಪು ಮಾಡಿಕೊಳ್ಳುತ್ತಾನೆ. ಇಹಲೋಕದಲ್ಲಿರುವ ತಂದೆಯೆ, ಸರ್ವಶಕ್ತನೆ ವಾಯುಮಂಡಲದಲ್ಲಿ ಏರೋಪ್ಲೇನ್‌ಗಳನ್ನು ಸಮುದ್ರದ ಮೇಲೆ ಹಡಗುಗಳನ್ನು ಬರಮಾಡುವವನೇ ಎಂದು. ಎರಡು ಗಂಟೆಯಾಗಿ ಹತ್ತು ನಿಮಿಷಕ್ಕೆ ಯಾರೊ ತನ್ನನ್ನು ನಿದ್ದೆಯಲ್ಲಿ ಕರೆದಂತೆ ಅನ್ನಿಸಲು, ತನ್ನ ಕೋಣೆಗೆ ಹಾಕಿದ ಬಾಗಿಲ ಸರಳುಗಳನ್ನು ಸರಿಸಿ ಒಳಗೆ ಬರಲು ಶಕ್ತಿ ಸಾವಿಗೆ ಮಾತ್ರವೆಂದು ಅವನಿಗೆ ಮನವರಿಕೆಯಾಯಿತು. ನೋಡುತ್ತಿದ್ದಂತೆಯೆ ನಾರುಬಟ್ಟೆಯ ಅಂಗಿ ತೊಟ್ಟು ಕೈಯಲ್ಲಿ ಕೊಕ್ಕೆಯುಳ್ಳ ಉದ್ದನೆಯ ಕೋಲು ಹಿಡಿದು, ಬುರುಡೆಯಿಂದ ಬೆಳೆದು ನಿಂತಿದ್ದ ಆರ್ಕ್ಗಿ ಭೂವಿಃಯ ಹೂಗಳು ಎಲುಬಿನ ಸಂದಿಗಳಲ್ಲಿ ಕಾಲದ ಪರಿವಿಲ್ಲದ ಬೆರಗಿನ ಕಣ್ಣು ಗುಡ್ಡೆಗಳನ್ನು ನೋಡಿ, ಇವುಗಳು ತನ್ನನ್ನು ನಿಕಾನರ್ ನಿಕಾನರ್ ಎಂದು ಕರೆದಳೆಂದೂ, ಸಾವಿನ ಸಂದರ್ಭದಲ್ಲಿ ಮನುಷ್ಯಮಾತ್ರದವರಿಗೆ ಬಳಸುವ ಹೆಸರಿದೆಂದು ನೆನಪುಮಾಡಿ, ಇಲ್ಲ ಸಾವೇ ಸಾಯುವ ವೇಳೆ ಬಂದಿಲ್ಲ. ಕಣಿ ಹೇಳಿದವರ ಪ್ರಕಾರ ನಿದ್ದೆಯಲ್ಲಿ ಆಫೀಸಿನ ನೆರಳಲ್ಲಿ ಸಾವು ಸಂಭವಿಸಬೇಕು ಎನ್ನಲು ಅವಳು, ಇಲ್ಲಿ ಸೇನಾನಿ, ನೀನು ಉಟ್ಟಿರುವ ಭಿಕ್ಷುಕನ ವೇಷದಲ್ಲಾಗಬೇಕು ಎಂದು ಹೇಳಿದಳು. ಆದರೆ ಅವನ ಶವವನ್ನು ನೋಡಿದವರು ಡೆನಿಮ್ ಯೂನಿಫಾರಂ ಧರಿಸಿ ಕಣಿ ಹೇಳಿದವರ ಮಾತಿನಂತೆ ಎಡ ಹಿಮ್ಮಡಿಯಲ್ಲಿ ಚಿನ್ನದ ಮುಳ್ಳನ್ನು ಕಂಡದಾಗಿಯೂ ಹೇಳಿಕೊಂಡರು.

ಇನ್ನು ತನ್ನ ಮರಣದಿಂದ ದೂರವಿರಲು ಸಾಧ್ಯವಿಲ್ಲವೆಂದು ತಿಳಿದ ಕುಲಪಿತನು ಇಷ್ಟು ವರ್ಷಗಳ ಕಾಲ ಗೊಡ್ಡು ಭ್ರಮೆಗಳನ್ನು ಹಿಂಬಾಲಿಸಿದಕ್ಕಾಗಿ ವ್ಯಥೆ ಪಡುತ್ತಾನೆ. ಭಗವಂತ ಎಲ್ಲಾ ಉಪಯುಕ್ತ ದೊಡ್ಡ ಜೀವಗಳೂ ಬದುಕುವ ವಿಧಾನವನ್ನು ಕಲಿಯುತ್ತಿರುತ್ತವೆ. ಇದನ್ನು ತಿಳಿಯದೆ ಪ್ರೀತಿಯ ಕೊರತೆಯನ್ನು ಅಧಿಕಾರದಿಂದ ತುಂಬಲು ಹೊರಟೆನಲ್ಲ ನನ್ನ ಚಿತೆಯನ್ನು ನಾನೇ ಏರಿದನಲ್ಲ ಎಂದು ದುಃಖಿಸುತ್ತಾನೆ.

ತನ್ನ ಮೆಚ್ಚಿಗೆ ಪಡೆಯಲೆಂದೇ ತನ್ನ ಆರಾಧಕರು ಬಲವಂತದಿಂದ ತಂದ ಜನಸಮೂಹ, ಅವರ ಜಯಾಕಾರಗಳು ತನ್ನ ಕಿವಿಗೆ ಸುಳ್ಳಾಗಿ ಕೇಳಿದರೂ, ಅನೇಕ ವೇಳೆ ಸುಳ್ಳುಗಳು ಅನುಮಾನಕ್ಕಿಂತ ಹೆಚ್ಚು ಉಪಯುಕ್ತವೆಂದು ತಿಳಿದು ಅದಕ್ಕೆಲ್ಲ ತಲೆದೂಗಿದನು. ಆ ಶೀಮರ್ಷಾನದಂತೆ ಸತ್ಯಕ್ಕಿಂತ ದೀರ್ಘಾಯುಷಿಯಾಗಿರುವುದು ಮುಖ್ಯವಾಯಿತು. ಅಧಿಕಾರವಿಲ್ಲದೆ ಆಜ್ಞಾಪಿಸುವವನಾಗಿ, ವೈಭವವಿಲ್ಲದೆ ಕೀರ್ತಿಗೆ ಅಧಿಕಾರವಿಲ್ಲದ ವಿಧೇಯತೆಯನ್ನು ಬೆಂಬಲಿಸುತ್ತಾ ಬಂದನು. ಈಗ ತನ್ನ ಇಳಿವಯಸ್ಸಿನಲ್ಲಿ ವ್ಯತಿರಿಕ್ತದಲ್ಲೇ ಇದೆಲ್ಲವನ್ನೂ ತಿಳಿಯುವ ತನ್ನ ಜಾಯಮಾನದ ಬಗ್ಗೆ ಬೇಸರ ಪಡುತ್ತಾ ನಿಜವಾದ ಬದುಕು ಬಡಜನರದು ಎಂದು ಅವನಿಗೆ ಅರಿವಾಗಿ ಅವನ ಅಧಿಕಾರ ಕೇವಲ ಸಂಧಿ ಬಿರುಕಗಳ ಇಣುಕು ನೋಟವಾಗಿ ಅವನಿಗೆ ಕಾಣಿಸಿ ತನ್ನ ತುಟಿಗಳ ಅಸ್ಪಷ್ಟ ಉಸಿರು ವೆಲ್ವೆಟ್ ಕೈಚೀಲಗಳಲ್ಲಿ ಆಡಿಸುತ್ತಿದ ಕೈಗಳು ಇವಾವುದೂ ಅವನಿಗೆ ಒಂದು ವ್ಯಕ್ತಿತ್ವವನ್ನು ಕೊಡಲು ಅಸಮರ್ಥವಾದ ರೀತಿ ನೋಡಿ, ಎಷ್ಟೇ ಕಷ್ಟವಾದರೂ ತನಗಿಂತ ತಮ್ಮ ಬದುಕಿನ ಮೇಲೆ ಮಮತೆ ಇಟ್ಟವರು ಈ ಬಡಜನರೆಂದು ಅವರಿಗೆ ಪರಕೀಯನಾಗಿ ತಾನಿದ್ದನೆಂದು ತಿಳಿದು ಸತ್ತನು. ಕುಲಪಿತೃವಿನ ಮರಣೋತ್ಸವದಲ್ಲಿ

ಹುಚ್ಚೆದ್ದು ಕುಣಿದ ಬಡಜನರನ್ನು ಅರಿಯದೆ ಅವರು ಹಾಡಿದ ಸ್ವಾತಂತ್ರ್ಯ ಗೀತೆಗಳಿಗೂ ಪರಕೀಯನಾಗಿ, ಶೂನ್ಯದತ್ತ ತನ್ನ ಇಳಿವಯಸ್ಸಿನ ತರಗೆಲೆಗಳನ್ನು ಎಳೆಯುತ್ತಾ ಪರಕೀಯನಾಗಿಯೇ ಸತ್ತನು.

ಬಹುಶಃ ಚರಿತ್ರೆಯ ಒಳಾರ್ಥಗಳನ್ನು ಇಷ್ಟು ಸುಂದರವಾಗಿ ಸೃಷ್ಟಿಸಿದ ಕಥೆಗಾರರು ಬೇರೆ ಇಲ್ಲ. ಯಾವ ಸಿದ್ಧಾಂತಗಳನ್ನು ಪ್ರತಿಪಾದಿಸದೆಯೆ ಬಡವ-ಬಲ್ಲಿದನ ಆಳುವ ಆಳಲ್ಪಡುವವರ ಮಧ್ಯೆ ಕಾಣುವ ಘರ್ಷಣೆಗಳು ಅದರಿಂದ ಉದ್ಭವಿಸುವ ಸುಂದರ ನಾಟಕಗಳು, ನಾಟಕದಾಳದಲ್ಲಿ ಕಾಣಿಸಿಕೊಳ್ಳುವ ದುರಂತದ ಪ್ರಸಂಗಗಳು ಹಾಸ್ಯದ ಪ್ರಸಂಗಗಳು ಶಕ್ತಿಯುಕ್ತಿಗಳ ಕಲ್ಪನೆಗಳು—ಹೀಗೆ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಪ್ರಾರಂಭದಲ್ಲಿ ಈ ಕಾದಂಬರಿಯನ್ನು ನೀಳ್ಗತೆಯೆಂದು ಕರೆದ. ನಾಟಕವೆಂದೇ ಕಾವ್ಯವೆಂದರೂ ತಪ್ಪಾಗಲಾರದು. ಯಾವುದೇ ಪ್ರಾಕಾರದಲ್ಲಿ ಇದನ್ನು ಅರ್ಥ ಮಾಡಿಕೊಂಡರೂ ಓದಿದ ಮೇಲೆ ಈ ಅದ್ಭುತ ಕೃತಿಯನ್ನು ನಮಗೆ ಕೊಟ್ಟ ಮಾರ್ಕ್ವೆಸ್‌ಗೆ ನಾವು ಚಿರಋಣಿಗಳಾಗಿರುತ್ತೇವೆ.

ದೇವರು ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿ ! ನಮ್ಮ ಎಷ್ಟು ತಪ್ಪುಗಳನ್ನು, ಎಂಥೆಂಥ ಮೋಸಗಳನ್ನು ಸಹಿಸುತ್ತಾನೆ.

ಹಿಂಸೆಯಿಂದ ಹಿಂಸೆಯೇ ಪ್ರಾಪ್ತವಾದೀತೆ ಹೊರತು, ಅಹಿಂಸೆಯಲ್ಲ, ಶಾಂತಿಯಲ್ಲ.

ಗಾಂಧೀಜಿ

ಬಾಲ್ತಜಾರ್‌ನ ಒಂದು ಅದ್ಭುತ ಮಧ್ಯಾಹ್ನ

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್

ಪಂಜರ ಸಿದ್ಧವಾಗಿತ್ತು. ಅಭ್ಯಾಸದಂತೆ ಬಾಲ್ತಜಾರ್ ಅದನ್ನು ಸೂರಿಗೆ ಸಿಕ್ಕಿಸಿದ. ಆತ ಊಟ ಮುಗಿಸಿ ಬರುವ ವೇಳೆಗೆ ಪಂಜರವನ್ನು ಅನೇಕರು ನೋಡಿದ್ದರು. ನೋಡಿದವರೆಲ್ಲರೂ ಜಗತ್ತಿನಲ್ಲಿಯೇ ಅದೊಂದು ಸುಂದರವಾದ ಪಂಜರವೆಂದು ಹೇಳಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಸುದ್ದಿ ಹರಡಿ ಜನ ಒಬ್ಬೊಬ್ಬರಾಗಿ ಆ ಕಡೆ ಬರತೊಡಗಿದರು. ಕ್ರಮೇಣ ಅದೊಂದು ದೊಡ್ಡ ಗುಂಪೇ ಆಯಿತು. ಬಾಲ್ತಜಾರ್ ಜನಸಂದಣಿ ಹೆಚ್ಚಾಗುತ್ತಿದ್ದುದ್ದನ್ನು ಗಮನಿಸಿ, ಪಂಜರವನ್ನು ತೆಗೆದು ಒಳಗಿಟ್ಟು ಬಾಗಿಲು ಹಾಕಿದ.

'ಶೇವ್ ಮಾಡಿಕೋ ಒಳ್ಳೇ ಕರಡಿ ಹಾಗೆ ಕಾಣಿಸುತ್ತೀಯೆ' ಅವನ ಹೆಂಡತಿ ಉರ್ಸುಲಾ ಹೇಳಿದಳು.

'ಊಟವಾದ ಮೇಲೆ ಶೇವ್ ಮಾಡಲು ಬೇಜಾರು' ಬಾಲ್ತಜಾರ್ ರಾಗವೆಳೆದ. ಎರಡು ವಾರಗಳ ಬೆಳೆ ಅವನ ಮುಖದ ಮೇಲಿತ್ತು. ಗಟ್ಟಿಯಾದ ಕುರುಚಲು ಗಡ್ಡ ಮುಳ್ಳು ಹಂದಿಯ ನೆನಪು ತರುತ್ತಿತ್ತು. ಮುಖಭಾವ ಹೆದರಿದ ಹುಡುಗನ ಹಾಗೆ ಕಾಣಿಸುತ್ತಿತ್ತು. ಆದರೆ ಅದು ನಿಜವಾಗಿರಲಿಲ್ಲ. ಈ ಫೆಬ್ರವರಿಗೆ ಮೂವತ್ತು ತುಂಬುತ್ತಿದ್ದ ಬಾಲ್ತಜಾರ್ ಕಳೆದ ನಾಲ್ಕು ವರ್ಷಗಳಿಂದಲೂ ಉರ್ಸುಲಾ ಜೊತೆಗಿದ್ದಾನೆ. ಅವರಿಬ್ಬರೂ ಮದುವೆಯಾಗದಿದ್ದರೂ ಒಟ್ಟಿಗಿದ್ದಾರೆ. ಇನ್ನೂ ಮಕ್ಕಳಿಲ್ಲ. ಅಂತಹ ಯಾವುದೇ ಗಂಭೀರ ಸಮಸ್ಯೆಗಳಿಲ್ಲದೆ ಸಂತೋಷವಾಗಿದ್ದಾರೆ. ಅವನ ಬದುಕಿನ ಮೂವತ್ತು ವಸಂತಗಳು ಬದುಕಿನಲ್ಲಿ ಅವನಿಗೆ ಎಚ್ಚರಿಕೆಯ ಪಾಠ ಹೇಳಿವೆಯೆನ್ನುವುದು ನಿಜವಾದರೂ, ಹೆದರುವಂಥ ಕಾರಣಗಳೇನಿಲ್ಲ. ಹಾಗೆ ನೋಡಿದರೆ ಯಾವುದರ ಬಗ್ಗೆಯೂ ಆತ ಹೆಚ್ಚು ಚಿಂತಿಸಿದವನಲ್ಲ. ಈಗ ತಾನೇ ಮಾಡಿ ಮುಗಿಸಿರುವ ಪಂಜರ ಕೆಲವರ ಪ್ರಕಾರ ಜಗತ್ತಿನಲ್ಲಿಯೇ ಅತ್ಯಂತ ಸುಂದರವಾದುದೆಂಬ

ಹೊಗಳಿಕೆ ಸಹ ಅವನ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಚಿಕ್ಕಂದಿನಿಂದಲೂ ಪಂಜರಗಳನ್ನು ಮಾಡುತ್ತಿದ್ದ ಅವನಿಗೆ ಇದೂ ಒಂದು ಅಂಥದೇ ಮತ್ತೊಂದು ಪಂಜರ ಅಷ್ಟೆ.

'ಹಾಗಾದರೆ ಸ್ವಲ್ಪ ವಿಶ್ರಾಂತಿಯನ್ನಾದರೂ ತೆಗೆದುಕೊಳ್ಳಬಾರದೇ' ಉರ್ಸುಲಾ ಹೇಳಿದಳು. 'ನಿನ್ನ ಆ ಗಡ್ಡವನ್ನಿಟ್ಟುಕೊಂಡು ಹೊರಗೆ ಹೇಗೆ ಹೋಗುತ್ತೀಯೋ!'

ಬಾಲ್ತಜಾರ್ ಜೋಲಿಯಲ್ಲಿ ಮಲಗಿದ. ಆದರೆ ವಿಶ್ರಾಂತಿ ತೆಗೆದುಕೊಳ್ಳಲಾಗಲಿಲ್ಲ. ನೆರೆಹೊರೆಯವರಿಗೆ ಪಂಜರ ತೋರಿಸಲೆಂದು ಅನೇಕ ಬಾರಿ ಎದ್ದು ಬರಬೇಕಾಯಿತು. ಅಲ್ಲಿಯವರೆಗೆ ಉರ್ಸುಲಾ ಆ ಪಂಜರದ ಕಡೆಗೆ ಅಷ್ಟಾಗಿ ಗಮನ ಕೊಟ್ಟಿರಲಿಲ್ಲ. ಹಾಗೆ ನೋಡಿದರೆ ಆ ಪಂಜರದ ಬಗ್ಗೆ ಅವಳಿಗೆ ತುಂಬ ಅಸಮಾಧಾನವೇ ಇತ್ತು. ಪಂಜರದ ಕೆಲಸದಿಂದಾಗಿ ಆತ ಅಂಗಡಿಯ ಉಳಿದ ಕೆಲಸಗಳ ಬಗ್ಗೆ ಅಷ್ಟಾಗಿ ಗಮನ ಕೊಟ್ಟಿರಲಿಲ್ಲ. ಎರಡು ವಾರಗಳ ಕಾಲ ಸಂಪೂರ್ಣವಾಗಿ ಅದರ ತಯಾರಿಯಲ್ಲಿಯೇ ನಿರತನಾಗಿದ್ದ. ಊಟ ನಿದ್ದೆಗಳೂ ಆತನಿಗೆ ಬೇಕಿರಲಿಲ್ಲ. ಶೇವ್ ಕೂಡ ಮಾಡಿಕೊಂಡಿರಲಿಲ್ಲ. ಮಲಗಿದಾಗಲೂ ಪಂಜರದ ಬಗ್ಗೆಯೇ ಕನವರಿಸುತ್ತಿದ್ದ. ಆದರೆ ಈಗ ಪಂಜರವನ್ನು ನೋಡುತ್ತಿದ್ದಂತೆ ಉರ್ಸುಲಾಳ ಅಸಮಾಧಾನವೆಲ್ಲ ಕರಗಿ ಹೋಯಿತು. ಗಂಡನ ಕೆಲಸದ ಬಗ್ಗೆ ಅಭಿಮಾನವೆನ್ನಿಸಿತು. ಅವನು ಏಳುವ ವೇಳೆಗೆ ಪ್ಯಾಂಟ್ ಶರ್ಟುಗಳನ್ನು ಇಸ್ತ್ರಿ ಮಾಡಿ ಆತ ಮಲಗಿದ್ದ ಜೋಲಿಯ ಬದಿ ಸಿಕ್ಕಿಸಿದಳು. ಪಂಜರವನ್ನು ತೆಗೆದು ಡೈನಿಂಗ್ ಟೇಬಲ್ ಮೇಲಿಟ್ಟು, ಅದನ್ನು ಮತ್ತೆ ಮತ್ತೆ ನೋಡುತ್ತಾ ಮೌನದಲ್ಲಿಯೇ ತನ್ನ ಮೆಚ್ಚುಗೆ ವ್ಯಕ್ತಪಡಿಸಿದಳು.

'ಇದಕ್ಕೆ ಎಷ್ಟು ಬೆಲೆ ಹೇಳುತ್ತೀಯೆ ?' ಉರ್ಸುಲಾ ಕೇಳಿದಳು.

'ಎಷ್ಟು ಹೇಳಬೇಕೊ ತಿಳಿಯುತ್ತಿಲ್ಲ. ಮೂವತ್ತು ಪೆಸೋಗಳನ್ನು ಹೇಳುತ್ತೇನೆ ಇಪ್ಪತ್ತು ಕೊಡಬಹುದು'

'ನೀನು ಐವತ್ತು ಪೆಸೋಗಳನ್ನು ಕೇಳು. ಈ ಎರಡು ವಾರಗಳು ಇದಕ್ಕಾಗಿ ಎಷ್ಟೊಂದು ಕಷ್ಟಪಟ್ಟಿದ್ದೀಯೆ. ಅಲ್ಲದೆ ತುಂಬ ದೊಡ್ಡ ಪಂಜರ ಬೇರೆ. ಇಷ್ಟೊಂದು ದೊಡ್ಡ ಪಂಜರವನ್ನು ನನ್ನ ಜೀವಮಾನದಲ್ಲೇ ನಾನು ನೋಡಿಲ್ಲ' ಉರ್ಸುಲಾ ಒತ್ತಿ ಹೇಳಿದಳು.

ಬಾಲ್ತಜಾರ್ ಶೇವ್ ಮಾಡಲು ತೊಡಗಿದ. 'ಅವರು ಐವತ್ತು ಪೆಸೋಗಳನ್ನು ಕೊಡಬಹುದು ಎನ್ನುತ್ತೀಯಾ ?'

'ಮಾಂಟಿಯಲ್‌ರಿಗೆ ಅದೇನೂ ದೊಡ್ಡ ಮೊತ್ತವಲ್ಲ ಬಿಡು. ಈ ಪಂಜರಕ್ಕೆ ಐವತ್ತು ಪೆಸೋಗಳು ಜಾಸ್ತಿಯೇನೂ ಅಲ್ಲ. ನೀನು ಕೇಳುವಾಗ ಮಾತ್ರ ಐವತ್ತು ಪೆಸೋಗಳನ್ನೇ ಕೇಳಬೇಡ, ಅರವತ್ತು ಕೇಳು.'

ಮನೆಯ ಮೇಲೆ ನೆರಳು ಆವರಿಸುತ್ತಿದ್ದರೂ ವಾತಾವರಣ ಉಸಿರುಗಟ್ಟಿಸುತ್ತಿತ್ತು. ಅದು ಏಪ್ರಿಲ್ ತಿಂಗಳ ಮೊದಲ ವಾರ. ಬಿಸಿಲು ಕೊಂಚ ಕಡಿಮೆಯಾಗಿದ್ದು ತಾಳಿಕೊಳ್ಳಬಹುದಾಗಿತ್ತು. ಬಾಲ್ತಜಾರ್ ಉಡುಪು ಧರಿಸಿದ. ಸೆಕೆಯೆನ್ನಿಸಿ ಬಾಗಿಲು ತೆರೆದ. ತಕ್ಷಣವೇ ಮಕ್ಕಳ ಗುಂಪೊಂದು ಡೈನಿಂಗ್ ಹಾಲ್‌ಗೆ ನುಗ್ಗಿತು.

ಪಂಜರದ ಸುದ್ದಿ ಬಹಳ ಬೇಗ ಎಲ್ಲ ಕಡೆ ಹರಡಿತು. ವೃದ್ಧ ವೈದ್ಯನಾದ ಡಾ॥ ಆಕ್ಟೇವಿಯೋ ಗೆರಾಲ್ಡೊ ತನ್ನ ಹೆಂಡತಿಯ ಜೊತೆ ಊಟ ಮಾಡುತ್ತಿದ್ದಾಗ ಪಂಜರದ ಸುದ್ದಿ ಬಂತು. ವೃತ್ತಿಯಲ್ಲಿ ಆತ ಸಾಕಷ್ಟು ಸುಸ್ತಾಗಿದ್ದರೂ ಬದುಕಿನ ಬಗೆಗಿನ ಆತನ ಉತ್ಸಾಹ ಕಡಿಮೆಯಾಗಿರಲಿಲ್ಲ. ಮಹಡಿಯ ಮೇಲಿನ ಒಳಾಂಗಣದಲ್ಲಿ ಕೆಲವು ಹೂಕುಂಡಗಳನ್ನೂ, ಹಾಡುವ ಹಕ್ಕಿಗಳಿದ್ದ ಎರಡು ಪಂಜರಗಳನ್ನೂ ಇಟ್ಟಿದ್ದರು. ಅವನ ಹೆಂಡತಿಗೆ ಹಕ್ಕಿಗಳೆಂದರೆ ತುಂಬ ಇಷ್ಟ. ಎಷ್ಟೊಂದು ಇಷ್ಟವೆಂದರೆ ಅವುಗಳನ್ನು ಬೆಕ್ಕು ತಿನ್ನುತ್ತದೆಂದು ಬೆಕ್ಕನ್ನು ಆವಳು ತೀವ್ರವಾಗಿ ದ್ವೇಷಿಸುತ್ತಿದ್ದಳು. ಮಧ್ಯಾಹ್ನದ ಮೇಲೆ ರೋಗಿಯೊಬ್ಬನನ್ನು ನೋಡಲು ಹೋಗಿದ್ದ ಗೆರಾಲ್ಡೊ, ಹಿಂತಿರುಗುವಾಗ ಹೆಂಡತಿಯ ನೆನಪಾಗಿ, ಪಂಜರವನ್ನು ನೋಡಲೆಂದು ಬಾಲ್ತಜಾರ್ ಮನೆಗೆ ಹೋದನು.

ಬಾಲ್ತಜಾರ್‌ನ ಮನೆಯ ಡೈನಿಂಗ್ ಹಾಲ್‌ನಲ್ಲಿ ಆಗಲೇ ಬಹಳಷ್ಟು ಜನ ಸೇರಿದ್ದರು. ಪಂಜರವನ್ನು ಮೇಜಿನ ಮೇಲೆ ಪ್ರದರ್ಶಿಸಲಾಗಿತ್ತು. ನಿಜಕ್ಕೂ ಅದೊಂದು ಅದ್ಭುತವಾದ ಪಂಜರವಾಗಿತ್ತು. ಗಟ್ಟಿಯಾದ ತಂತಿಯಿಂದ ಮಾಡಿದ್ದ ದೊಡ್ಡ ಗೋಪುರವಿದ್ದು, ಒಳಗೆ ಮೂರು ಅಂತಸ್ತುಗಳಿದ್ದವು. ಹಕ್ಕಿಗಳು ತಿನ್ನಲು, ಮಲಗಲು ಬೇರೆ ಬೇರೆ ವಿಭಾಗಗಳಿದ್ದು ರೆಕ್ಕೆ ಬಿಚ್ಚಿ ಆರಾಮವಾಗಿ ಕುಪ್ಪಳಿಸುವಷ್ಟು ವಿಶಾಲವಾದ ಜಾಗ ಒಂದು ಕಡೆಗಿತ್ತು. ನೋಡಲು ಅದೊಂದು ದೊಡ್ಡ ಐಸ್ ಫ್ಯಾಕ್ಟರಿಯ ಪುಟ್ಟ ಮಾದರಿಯಂತಿತ್ತು. ಗೆರಾಲ್ಡೊ ಅದನ್ನು ಮುಟ್ಟದೆ, ದೂರದಿಂದಲೇ ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಿದ. ನೋಡುತ್ತಿದ್ದಂತೆ ಡಾಕ್ಟರ್‌ಗೆ ಆ ಪಂಜರದ ಬಗ್ಗೆ ಅಭಿಮಾನ ಮೂಡತೊಡಗಿತ್ತು. ಜನ ಹೇಳುತ್ತಿದ್ದುದಕ್ಕಿಂತಲೂ ಆ ಪಂಜರ ಸುಂದರವಾಗಿತ್ತು. ತನ್ನ ಹೆಂಡತಿಗೆ ಈ ಪಂಜರಕ್ಕಿಂತ ಉತ್ತಮವಾದ ಮತ್ತೇನು ಕೊಡುವುದನ್ನು ಕಲ್ಪಿಸುವುದೂ ಗೆರಾಲ್ಡೊಗೆ ಕಷ್ಟವಾಯಿತು.

'ಈ ಪಂಜರ ಕಲಾವಿದನೊಬ್ಬನ ಕಲ್ಪನೆಯ ಪರಾಕಾಷ್ಠೆ' ಗೆರಾಲ್ಡೊ ಉದ್ಗರಿಸಿದ. ನಂತರ ಬಾಲ್ತಜಾರ್‌ನನ್ನು ಗುಂಪಿನಿಂದ ಸ್ವಲ್ಪ ದೂರ ಕರೆದು 'ನೀನೊಬ್ಬ ಅದ್ಭುತ ವಾಸ್ತುಶಿಲ್ಪಿಯಾಗಬಹುದಿತ್ತು' ಎಂದನು.

ಬಾಲ್ತಜಾರ್ ಕೆಂಪಾಗಿ, ವಂದನೆಗಳು ಎಂದನು.

'ನಾನು ಹೇಳುತ್ತಿರುವುದು ನಿಜವಯ್ಯ' ಗೆರಾಲ್ಡೊ ಒತ್ತಿ ಹೇಳಿದನು. ನುಣುಪಾದ ಮೈಯ ಸ್ಥೂಲ ಶರೀರದ ಡಾಕ್ಟರ್ ತನ್ನ ಯೌವನದಲ್ಲಿ ಸುಂದರಿಯಾಗಿದ್ದು ಈಗ ವಯಸ್ಸಾಗಿರುವ ಹೆಂಗಸಿನಂತೆ ಕಾಣಿಸುತ್ತಿದ್ದ. ಆತನ ಬೆರಳುಗಳು ಹೆಂಗಸರ ಬೆರಳಿನಂತೆಯೇ ತುಂಬ ನಾಜೂಕಾಗಿದ್ದುವು. ಧ್ವನಿ ಪಾದ್ರಿ ಲ್ಯಾಟಿನ್ ಹೇಳಿದಂತಿತ್ತು. ಡಾಕ್ಟರ್ ಪಂಜರವನ್ನು ಜನರ ಗುಂಪಿಗೆ ಎದುರಾಗಿ ಎತ್ತಿಹಿಡಿದು 'ಈ ಪಂಜರ ತನಗೆ ತಾನೇ ಸುಂದರವಾಗಿದೆ. ಹಕ್ಕಿಯಿಡದೆ ಹಾಗೇ ತೂಗುಹಾಕಿದರೂ ಸೊಗಸಾಗಿರುತ್ತದೆ. ಮರಕ್ಕೆ ತೂಗು ಹಾಕಿದರೆ, ಹಕ್ಕಿಯಿರಲೇಬೇಕಾಗಿಲ್ಲ, ಪಂಜರವೇ ಹಾಡುತ್ತದೆ' ಎಂದು ಹೇಳುತ್ತಾ ಮುಗುಳ್ನಕ್ಕನು. ಪಂಜರವನ್ನು ಪುನಃ ಮೇಜಿನ ಮೇಲಿಟ್ಟು, ಒಂದು ಕ್ಷಣ ಏನೋ ಯೋಚಿಸುವವನಂತೆ ಸುಮ್ಮನಿದ್ದು, ಪಂಜರವನ್ನೊಮ್ಮೆ ಪ್ರೀತಿಯಿಂದ ನೋಡಿ 'ಸರಿ, ನಾನಿದನ್ನು ತೆಗೆದುಕೊಂಡು ಹೋಗುತ್ತೇನೆ' ಎಂದನು.

'ಅದಾಗಲೇ ಮಾರಿಯಾಗಿದೆ' ಎಂದಳು ಉರ್ಸುಲಾ.

'ಅದು ಪೆಪೆ ಮೊಂಟಿಯಲ್ ಮಗನಿಗೆಂದು ಮಾಡಿದ್ದು. ಅದಕ್ಕಾಗಿಯೇ ಅವನು ವಿಶೇಷವಾಗಿ ಆರ್ಡರ್ ಕೊಟ್ಟಿದ್ದ' ಎಂದನು ಬಾಲ್ತಜಾರ್.

ಡಾಕ್ಟರ್ ಗೌರವಭಾವ ತಳೆದು 'ನಿನಗೆ ಅವನು ಪಂಜರದ ಮಾದರಿಯನ್ನು ನೀಡಿದ್ದನೇ?' ಎಂದನು.

'ಇಲ್ಲ, ಆದರೆ ದೊಡ್ಡ ಪಂಜರವೊಂದು—ಅಂದರೆ ಇಷ್ಟು ದೊಡ್ಡ ಪಂಜರ—ಗಿಳಿಗಳನ್ನು ಇಡಲುಬೇಕು' ಎಂದು ಹೇಳಿದ್ದನು.

ಡಾಕ್ಟರ್ ಪಂಜರವನ್ನು ಪರಿಶೀಲಿಸುವಂತೆ ನೋಡಿ 'ಆದರೆ ಇದು ಗಿಳಿಗಳಿಗಲ್ಲ' ಎಂದನು.

'ಇಲ್ಲ ಡಾಕ್ಟರ್, ಈ ಪಂಜರ ಗಿಳಿಗಳಿಗೆಂದೇ ಮಾಡಿದ್ದು' ಎಂದು ಹೇಳಿ ಬಾಲ್ತಜಾರ್ ಪಂಜರವನ್ನಿಟ್ಟ ಮೇಜಿನ ಬಳಿ ಬಂದ. ಮಕ್ಕಳು ಅವನನ್ನು ಮುತ್ತಿಕೊಂಡರು. ಬಾಲ್ತಜಾರ್ ಪಂಜರದ ಬೇರೆ ಬೇರೆ ವಿಭಾಗಗಳನ್ನು ತನ್ನ ತೋಳು ಬೆರಳಿನಿಂದ ತೋರಿಸುತ್ತ 'ನೋಡಿ, ಅಳತೆಗೆ ತಕ್ಕಂತೆ ಎಲ್ಲವನ್ನೂ ಯೋಚಿಸಿ ಮಾಡಿದ್ದೇನೆ' ಎಂದನು. ನಂತರ ಪಂಜರದ ಗುಮ್ಮಟಕ್ಕೆ ಕೈ ಬೆರಳಿನ ಗಿಣ್ಣಿನಿಂದ 'ಟಣ್' ಎಂದು ಹೊಡೆದನು. ಪಂಜರವಿಡೀ ಇನಿದಾದ ಸ್ವರಮೇಳದ ನಾದದಿಂದ ತುಂಬಿತು. 'ಸಿಗಬಹುದಾದ ಅತ್ಯಂತ ಗಟ್ಟಿಯಾದ ತಂತಿಯಿಂದ ಇದನ್ನು ಮಾಡಿದ್ದೇನೆ. ಒಳಹೊರಗೆಲ್ಲ ಲೋಹದ ಬೇಸುಗೆ ಹಾಕಲಾಗಿದೆ' ಎಂದು ವಿವರಿಸಿದ.

'ಆದರೂ ಗಿಳಿಗಳಿಗೆ ಇದು ತುಂಬಾ ದೊಡ್ಡದು' ಮಗುವೊಂದು ಮಧ್ಯೆ ಮಾತನಾಡಿತು.

'ಇರಬಹುದು' ಬಾಲ್ತಜಾರ್ ಹೇಳಿದನು.

'ಸರಿ, ಆದರೆ ಅವನು ನಿನಗೆ ನಿರ್ದಿಷ್ಟ ಮಾದರಿಯನ್ನೇನೂ ಕೊಟ್ಟಿರಲಿಲ್ಲ ಅಲ್ಲವೇ? ಗಿಳಿಯನ್ನಿಡಲು ಅನುಕೂಲವಾಗುವಂತಹ ಒಂದು ದೊಡ್ಡ ಪಂಜರ ಬೇಕು ಎಂದಿದ್ದನೇ ಹೊರತು ವಿವರಗಳನ್ನೇನೂ ನೀಡಿರಲಿಲ್ಲ, ಹೌದು ತಾನೇ?'

'ಹೌದು'

'ಹಾಗಾದರೆ ಸಮಸ್ಯೆಯಿಲ್ಲ ಬಿಡು. ಅವನಿಗೆ ಗಿಳಿಗಳನ್ನಿಡಲು ಒಂದು ದೊಡ್ಡ ಪಂಜರಬೇಕು. ಈ ಪಂಜರ ದೊಡ್ಡದಾಗಿದೆ. ಅಷ್ಟು ಹೋಲಿಕೆ ಬಿಟ್ಟರೆ ಇದೇ ಆತ ನಿನಗೆ ಮಾಡಲು ಹೇಳಿದ ಪಂಜರವೆನ್ನಲು ಏನು ಪುರಾವೆ?' ಡಾಕ್ಟರ್ ಉತ್ಸಾಹದಿಂದ ಹೇಳಿದ.

ಬಾಲ್ತಜಾರ್ ಈಗ ಗೊಂದಲಕ್ಕೊಳಗಾದ. 'ಇಲ್ಲ, ಇಲ್ಲ ಅವನು ಮಾಡಲು ಹೇಳಿದ ಪಂಜರ ಇದೇ. ಅವನು ಹೇಳಿದ್ದಕ್ಕೋಸ್ಕರವೇ ನಾನು ಮಾಡಿದ್ದು' ಎಂದನು.

ಡಾಕ್ಟರ್ ತನ್ನ ಮುಖದಲ್ಲಿ ಅಸಮಾಧಾನ ವ್ಯಕ್ತಪಡಿಸಿದ.

'ನೀನು ಇಂತಹ ಇನ್ನೊಂದು ಪಂಜರವನ್ನು ಮಾಡಬಹುದಲ್ಲವಾ?' ಎಂದು ತನ್ನ ಗಂಡನನ್ನು ನೋಡುತ್ತಾ ಹೇಳಿದ ಉರ್ಸುಲಾ ಡಾಕ್ಟರತ್ತ ತಿರುಗಿ 'ನಿಮಗೆ ಅಂತಹ ಅವಸರವೇನೂ ಇಲ್ಲ ಅಲ್ಲವೇ?' ಎಂದಳು.

'ಈ ಪಂಜರವನ್ನು ತರುತ್ತೇನೆಂದು ಮಧ್ಯಾಹ್ನ ನನ್ನ ಹೆಂಡತಿಗೆ ವಾಗ್ದಾನ ಮಾಡಿದ್ದೇನೆ.'

'ದಯವಿಟ್ಟು ಕ್ಷಮಿಸಿ ಡಾಕ್ಟರ್, ನಾನು ಈಗಾಗಲೇ ಬೇರೊಬ್ಬರಿಗೆ ಮಾರಿದ ವಸ್ತುವನ್ನು ನಿಮಗೆ ಕೊಡಲಾರೆ' ಎಂದನು ಬಾಲ್ತಜಾರ್.

ಡಾಕ್ಟರ್ ಭುಜ ಕುಣಿಸಿ, ಕರ್ಚೀಫಿನಿಂದ ಕತ್ತಿನ ಸುತ್ತವಿದ್ದ ಬೆವರನ್ನು ಒರೆಸಿಕೊಂಡ. ದಡದಲ್ಲಿ ನಿಂತ ವ್ಯಕ್ತಿ ದೂರದಲ್ಲಿ ಸಮುದ್ರದ ಮಧ್ಯೆ ತೇಲಿಹೋಗುತ್ತಿರುವ ಹಡಗನ್ನೇ ನೆಟ್ಟ ನೋಟದಿಂದ ನೋಡುತ್ತಿರುವಂತೆ ಡಾಕ್ಟರ್ ರೆಪ್ಪೆಯಲುಗಿಸದೆ ಪಂಜರವನ್ನೇ ನೋಡುತ್ತಿದ್ದ. ಆ ದೀರ್ಘನೋಟದ ಮೂಲಕ ಆತ ಪಂಜರವನ್ನು ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಿರುವಂತಿತ್ತು.

'ಈ ಪಂಜರಕ್ಕೆ ಅವರು ನಿನಗೆ ಎಷ್ಟು ಹಣ ಕೊಟ್ಟರು ?'

'ಬಾಲ್ತಜಾರ್ ಏನನ್ನೂ ಹೇಳದೆ ಉರ್ಸುಲಾಳ ಮುಖ ನೋಡಿದ.

'ಅರವತ್ತು ಪೆಸೋಗಳು' ಅವಳು ಹೇಳಿದಳು.

ಡಾಕ್ಟರ್ ಪಂಜರವನ್ನು ನೋಡುತ್ತಲೇ ಇದ್ದ. 'ತುಂಬ ಸುಂದರವಾದ ಪಂಜರ' ಎಂದು ನಿಟ್ಟುಸಿರು ಬಿಟ್ಟ. 'ತುಂಬ ತುಂಬ ಸುಂದರವಾಗಿದೆ' ಮಾತುಗಳು ಹೃದಯದಾಳದಿಂದ ಹೊರಬಿದ್ದವು. ಆ ನಂತರ ಕೈಗಳಿಂದ ಕಷ್ಟಪಟ್ಟು ಗಾಳಿ ಬೀಸಿಕೊಳ್ಳುತ್ತಾ ಬಲವಂತದ ನಗೆ ನಕ್ಕು ನಿಧಾನವಾಗಿ ಬಾಗಿಲಿನತ್ತ ಹೆಜ್ಜೆ ಹಾಕಿದ. ನಂತರ ಇಡೀ ಪ್ರಸಂಗವನ್ನು ಆತ ತನ್ನ ನೆನಪಿನಿಂದ ತೆಗೆದುಹಾಕಿದ.

'ಮಾಂಟಿಯಲ್ ತುಂಬ ಶ್ರೀಮಂತ' ಅವನು ಹೇಳಿದ.

ವಾಸ್ತವವಾಗಿ ಮಾಂಟಿಯಲ್ ಹೊರನೋಟಕ್ಕೆ ಕಾಣುವಷ್ಟು ಶ್ರೀಮಂತನಾಗಿರಲಿಲ್ಲ. ಆದರೆ ಶ್ರೀಮಂತನಾಗಲು ಏನು ಬೇಕಾದರೂ ಮಾಡುವಂಥ ಛಾತಿ ಅವನಲ್ಲಿತ್ತು. ಬಾಲ್ತಜಾರ್‌ನ ಮನೆಯಿಂದ ಸ್ವಲ್ಪ ದೂರದಲ್ಲಿಯೇ ಮಾಂಟಿಯಲ್‌ನ ಮನೆಯಿತ್ತು. ಮನೆತುಂಬ ಅನೇಕ ರೀತಿಯ ಉಪಕರಣಗಳು ತುಂಬಿದ್ದುವು. ಬಾಲ್ತಜಾರ್ ಮಾಡಿರುವ ಪಂಜರದ ಸುದ್ದಿ ಎಲ್ಲರ ಬಾಯಿಯಲ್ಲಿದ್ದರೂ ಮಾಂಟಿಯಲ್ ಮಾತ್ರ ಅದಕ್ಕೆ ಅಪರಿಚಿತನಾಗಿದ್ದ. ಅವನ ಮನೆಗೆಂದೇ ಸಿದ್ಧಪಡಿಸಿದ್ದ ಆ ಪಂಜರದ ಬಗ್ಗೆ ಮಾಂಟಿಯಲ್‌ಗೆ ಏನೂ ಗೊತ್ತಿರಲಿಲ್ಲ. ಆತನ ಹೆಂಡತಿಗೆ ಸಾವಿನ ವಿಚಿತ್ರಭಯ. ಹೀಗಾಗಿ ಕಿಟಕಿ ಬಾಗಿಲುಗಳನ್ನೆಲ್ಲ ಭದ್ರವಾಗಿ ಮುಚ್ಚಿ, ಗಂಡ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಆ ಸಮಯದಲ್ಲಿ ಅವಳೂ ಹಾಸಿಗೆಯ ಮೇಲೆ ಒರಗಿದ್ದಳು. ಅವಳ ತೆರೆದ ಕಣ್ಣುಗಳು ಶೂನ್ಯವನ್ನು ದಿಟ್ಟಿಸುತ್ತಿದ್ದವು. ಇದ್ದಕ್ಕಿದ್ದಂತೆ ಹೊರಗೆ ಗಜಿಬಿಜಿಯ ಗದ್ದಲ ಕೇಳಿಸಿದಾಗ ಎದ್ದು ಕುಳಿತಳು. ಬಾಗಿಲು ತೆರೆದು ನೋಡಿದರೆ ಹೊರಗೆ ಒಂದು ದೊಡ್ಡ ಗುಂಪೇ ಸೇರಿದೆ. ಆ ಗುಂಪಿನ ಮಧ್ಯೆ ಪಂಜರವನ್ನು ಹಿಡಿದು ಬಾಲ್ತಜಾರ್ ನಿಂತಿದ್ದ. ಚೆನ್ನಾಗಿ ಶೇವ್ ಮಾಡಿಕೊಂಡು ಶುಭ್ರವಾದ ಬಿಳಿಯ ಬಟ್ಟೆಯನ್ನು ತೊಟ್ಟು ಬಂದಿದ್ದ ಬಾಲ್ತಜಾರ್‌ನ ಮುಖದಲ್ಲಿ ಶ್ರೀಮಂತರನ್ನು ನೋಡಲು ಸಾಮಾನ್ಯನೊಬ್ಬ ಬರುವಾಗ ಇರಬಹುದಾದ ಭಾವವಿತ್ತು.

ಪಂಜರವನ್ನು ನೋಡಿದ ಮಾಂಟಿಯಲ್‌ನ ಹೆಂಡತಿ 'ಎಂತಹ ಅದ್ಭುತ ವಸ್ತು' ಎಂದು ಉದ್ಗರಿಸಿದಳು. 'ಇಂತಹ ವಸ್ತುವನ್ನು ಇದುವರೆಗೆ ನಾನು ನನ್ನ ಜೀವಮಾನ

ದಲ್ಲೇ ನೋಡಿಲ್ಲ'ವೆಂದು ಹೇಳಿ ಬಾಲ್ತಜಾರ್‌ನನ್ನು ಉತ್ಸಾಹದಿಂದ ಒಳಗೆ ಸ್ವಾಗತಿಸಿದಳು. ಬಾಗಿಲ ಬಳಿ ತುಂಬಿದ್ದ ಜನಸಂದಣಿಗೆ ಕಿರಿಕಿರಿಪಟ್ಟುಕೊಂಡು 'ಬೇಗ ಒಳಗೆ ಬಾ, ಇಲ್ಲದಿದ್ದರೆ ಈ ಜನ ಮನೆಯನ್ನು ಸಾರ್ವಜನಿಕ ಗ್ಯಾಲರಿ ಮಾಡಿಬಿಡುತ್ತಾರೆ' ಎಂದಳು.

ಬಾಲ್ತಜಾರ್ ಜೋಸ್ ಮಾಂಟಿಯಲ್‌ನ ಮನೆಗೆ ಅಪರಿಚಿತನೇನಲ್ಲ. ಅವನ ಕುಶಲ ಕೆಲಸ ಹಾಗೂ ನೇರ ನಡವಳಿಕೆಗಳಿಂದಾಗಿ ಆತ ಅನೇಕ ಬಾರಿ ಸಣ್ಣಪುಟ್ಟ ಮರಗೆಲಸಗಳಿಗಾಗಿ ಆ ಮನೆಗೆ ಬಂದಿದ್ದ. ಆದರೆ ಶ್ರೀಮಂತರ ಮನೆಗಳಲ್ಲಿ ಆತ ಸಹಜವಾಗಿರುವುದು ಸಾಧ್ಯವಾಗುತ್ತಿರಲಿಲ್ಲ. ಒಂದು ರೀತಿ ಉಸಿರುಗಟ್ಟಿದಂತಾಗುತ್ತಿತ್ತು. ಕೆಲವೊಮ್ಮೆಯಂತೂ ಅವರ ವಾದಿಸುವ ಕೆಟ್ಟ ಹೆಂಡತಿಯರು, ಅವರ ವಿಚಿತ್ರ ರೋಗಗಳು, ಶಸ್ತ್ರಚಿಕಿತ್ಸೆಗಳು—ಇವುಗಳನ್ನೆಲ್ಲ ನೋಡಿ ಅವರ ಬಗ್ಗೆ ಕನಿಕರವೆನ್ನಿಸುತ್ತಿತ್ತು. ಬಾಲ್ತಜಾರ್ ಒಳಗೆ ಬಂದ ತಕ್ಷಣ ಅವನ ನಡೆ ಸಹಜ ಗತಿಯನ್ನು ಕಳೆದುಕೊಂಡಿತು. ಕಾಲೆಳೆದುಕೊಂಡೇ ಒಳಗೆ ಬಂದ.

'ಪೆಪೆ, ಮನೆಯಲ್ಲಿದ್ದಾನಾ?' ಬಾಲ್ತಜಾರ್ ಕೇಳಿದ ಪಂಜರವನ್ನು ತಂದು ಟೇಬಲ್ ಮೇಲಿಡುತ್ತಾ.

'ಅವನು ಸ್ಕೂಲಿಗೆ ಹೋಗಿದ್ದಾನೆ, ತಡವಾಗಲಾರದು, ಬೇಗ ಬಂದು ಬಿಡುತ್ತಾನೆ ಎಂದು ಹೇಳಿದ ಅಡಿಲೇಡ್ 'ಮಾಂಟಿಯಲ್ ಸ್ನಾನ ಮಾಡುತ್ತಿದ್ದಾನೆ' ಎಂದೂ ಸೇರಿಸಿದಳು. ವಾಸ್ತವವಾಗಿ ಮಾಂಟಿಯಲ್‌ಗೆ ಸ್ನಾನ ಮಾಡುವಷ್ಟು ವ್ಯವಧಾನವಿರಲಿಲ್ಲ. ಹೊರಗಿನ ಸದ್ದುಗದ್ದಲ ಅವನಿಗೆ ಕುತೂಹಲವುಂಟುಮಾಡಿತ್ತು. ಹೀಗಾಗಿ ಅವನು ಸಾಧ್ಯವಾದಷ್ಟು ಬೇಗ ಹೊರಬರುವ ತಯಾರಿಯಲ್ಲಿದ್ದ. ಆತ ತುಂಬ ಎಚ್ಚರಿಕೆಯ ಮನುಷ್ಯನಾಗಿದ್ದ. ಮಲಗಿದ್ದಾಗ ಮನೆಯಲ್ಲಿನ ಚಟುವಟಿಕೆಗಳು, ಮಾತುಗಳು ಸ್ಪಷ್ಟವಾಗಿ ಕೇಳಿಸಲೆಂದು ಅವನು ವಿದ್ಯುತ್ ಫ್ಯಾನ್ ಸಹ ಹಾಕುತ್ತಿರಲಿಲ್ಲ.

'ಅಡಿಲೇಡ್, ಅಲ್ಲಿ ಏನು ನಡೆಯುತ್ತಿದೆ?'—ಅಲ್ಲಿಂದಲೇ ಕೂಗಿದ.

'ಬಂದು ನೋಡು, ಎಂಥ ಅದ್ಭುತ ವಸ್ತುವೊಂದು ಇಲ್ಲಿದೆ'—ಅಷ್ಟೇ ಜೋರಾಗಿ ಅವನ ಹೆಂಡತಿ ಉತ್ತರಿಸಿದಳು.

'ರೋಮಯುಕ್ತವಾದ, ಒರಟಾದ ಶರೀರದ ಮಾಂಟಿಯಲ್ ಬೆಡ್‌ರೂಮಿನ ಕಿಟಕಿಯ ಬಳಿ ಕಾಣಿಸಿಕೊಂಡ. ಅವನ ಕತ್ತಿನ ಸುತ್ತ ಟವಲ್ ಇಳಿಬಿದ್ದಿತ್ತು.

'ಏನದು?'

'ಪೆಪೆಯ ಪಂಜರ'—ಬಾಲ್ತಜಾರ್ ಹೇಳಿದ.

ಅಡಿಲೇಡ್ ಆಶ್ಚರ್ಯಚಕಿತಳಾಗಿ ಅವನತ್ತ ನೋಡಿ 'ಯಾರದು?' ಎಂದಳು.

'ಪೆಪೆಯದು' ಎಂದು ಉತ್ತರಿಸಿದ ಬಾಲ್ತಜಾರ್, ಜೋಸ್ ಮಾಂಟಿಯಲ್ ಕಡೆ ತಿರುಗಿ.

'ಪೆಪೆ ಇದಕ್ಕಾಗಿ ಆರ್ಡರ್ ಮಾಡಿದ್ದ' ಎಂದನು.

ವಾಸ್ತವವಾಗಿ ಆಗ ಏನೂ ನಡೆಯದಿದ್ದರೂ, ಬಾಲ್ತಜಾರ್‌ಗೆ ಬಾತ್‌ರೂಮಿನ ಬಾಗಿಲುಗಳನ್ನು ಅವನ ಮುಖದ ಮೇಲೆಯೇ ತೆರೆದಂತೆ ಅನುಭವವಾಯಿತು. ಮಾಂಟಿಯಲ್ ತನ್ನ ಒಳಉಡುಪಿನಲ್ಲಿಯೇ ಬೆಡ್‌ರೂಮ್ ಹೊರಗೆ ಕಾಣಿಸಿಕೊಂಡನು.

'ಪೆಪೆ'—ಜೋರಾಗಿ ಕಿರುಚಿದ ಮಾಂಟಿಯಲ್.

'ಅವನಿನ್ನೂ ಬಂದಿಲ್ಲ' ನಿಂತಲ್ಲಿಂದಲೇ ಮೆಲ್ಲಗೆ ಉತ್ತರಿಸಿದಳು ಅಡಿಲೇಡ್.

ಅದೇ ಸಮಯಕ್ಕೆ ಸರಿಯಾಗಿ ಪೆಪೆ ಬಾಗಿಲಲ್ಲಿ ಕಾಣಿಸಿಕೊಂಡನು. ಅವನಿಗೆ ಸುಮಾರು ಹನ್ನೆರಡು ವರ್ಷಗಳಿರಬಹುದು. ತಾಯಿಯಂತೆಯೇ ಬಾಗಿದ ಕಣ್ಣು ರೆಪ್ಪೆಗಳಿದ್ದ ಅವನು ಅವಳಂತೆಯೇ ಪೇಲವವಾಗಿದ್ದ.

'ಬಾ ಇಲ್ಲಿ' ಎಂದ ಮಾಂಟಿಯಲ್ 'ನೀನು ಇದಕ್ಕಾಗಿ ಆರ್ಡರ್ ಮಾಡಿದ್ದೆಯೊ ?' ಎಂದು ಕೇಳಿದನು.

ಹುಡುಗ ತಲೆತಗ್ಗಿಸಿದ. ಮಾಂಟಿಯಲ್ ತಲೆಗೂದಲನ್ನು ಹಿಡಿದೆತ್ತಿ, ತನ್ನತ್ತ ಮುಖಮಾಡಿ 'ಉತ್ತರ ಹೇಳು'—ಎಂದು ಅವನನ್ನೇ ದುರುಗುಟ್ಟಿ ನೋಡಿದನು. ಆ ಹುಡುಗ ಮಾತನಾಡದೆ ಸುಮ್ಮನೆ ನಿಂತು ತುಟಿ ಕಚ್ಚಿಕೊಳ್ಳುತ್ತಿದ್ದ.

'ಮಾಂಟಿಯಲ್'—ಅವನ ಹೆಂಡತಿ ಮೆಲ್ಲನೆ ಕರೆದಳು.

ಜೋಸ್ ಮಾಂಟಿಯಲ್ ಹುಡುಗನನ್ನು ಹೋಗಲು ಬಿಟ್ಟು, ಅತ್ಯಂತ ಕೋಪದಿಂದ ಬಾಲ್ತಜಾರ್‌ಕಡೆ ತಿರುಗಿದ. 'ಬಾಲ್ತಜಾರ್, ತಪ್ಪು ತಿಳಿಯಬೇಡ' ನೀನು ಈ ಪಂಜರವನ್ನು ಮಾಡುವ ಮೊದಲು ನನ್ನನ್ನು ಕೇಳಬೇಕಾಗಿತ್ತು. ಮಗುವಿನ ಮಾತು ಕೇಳಿ ಮಾಡಿದ್ದೀಯಲ್ಲ ?' ಎಂದನು. ಹಾಗೆ ಹೇಳುತ್ತಿದ್ದಂತೆ ಅವನ ಮುಖದಲ್ಲಿನ ಕೋಪ ಸಡಿಲಿ ಸಹಜ ಭಾವ ಮೂಡಿತು. ಆ ಪಂಜರವನ್ನು ನೋಡದೆಯೇ ಅದನ್ನೆತ್ತಿ ಬಾಲ್ತಜಾರ್‌ಗೆ ಹಿಂತಿರುಗಿಸಿದ.

'ಅದನ್ನು ಇಲ್ಲಿಂದ ತೆಗೆದುಕೊಂಡು ಹೋಗು, ಯಾರಿಗಾದರೂ ಮಾರಿಕೋ, ಮತ್ತೆ ಅದನ್ನು ತೆಗೆದುಕೊಂಡು ಈ ಕಡೆ ಬರಬೇಡ' ಎಂದು ಹೇಳಿ 'ಹ್ಞಾ ! ಈ ಬಗ್ಗೆ ಇನ್ನು ನನ್ನ ಬಳಿ ಹೆಚ್ಚು ಚರ್ಚೆ ಮಾಡಬೇಡ. ಡಾಕ್ಟರ್ ನನಗೆ ಕೋಪಗೊಳ್ಳದಿರಲು, ಹೆಚ್ಚು ಮಾತನಾಡದಿರಲು ಹೇಳಿದ್ದಾರೆ' ಅವನ ಬೆನ್ನು ತಟ್ಟುತ್ತಾ ಹೇಳಿದನು.

ಹುಡುಗ ಅಲ್ಲಿಂದ ಕದಲದೇ, ಕಣ್ಣುರೆಪ್ಪೆಯನ್ನು ಬಡಿಯದೆ ಪಂಜರವನ್ನೇ ನೋಡುತ್ತಾ ಹಾಗೇ ನಿಂತಿದ್ದ. ಗೊಂದಲಕ್ಕೊಳಗಾದ ಬಾಲ್ತಜಾರ್ ಹುಡುಗನನ್ನು ನೋಡಿದ. ತಕ್ಷಣ ಅವನು ನಾಯಿಯ ಅಳುವಿನಂತಹ ಶಬ್ದ ಮಾಡುತ್ತಾ ನೆಲದ ಮೇಲೆ ಬಿದ್ದು ಹೊರಳಾಡತೊಡಗಿದ.

ಜೋಸ್ ಮಾಂಟಿಯಲ್ ನಿರ್ಲಿಪ್ತನಾಗಿ ಅವನತ್ತ ನೋಡಿದ. ತಾಯಿ ಮಗುವನ್ನು ಸಮಾಧಾನ ಮಾಡಲು ಪ್ರಯತ್ನಿಸುತ್ತಿದ್ದಳು. 'ಎತ್ತಿಕೊಳ್ಳಬೇಡ, ಅಲ್ಲಿಯೇ ಬಿದ್ದಿರಲಿ'—ಮಾಂಟಿಯಲ್ ಕಟುವಾಗಿ ಹೇಳಿದ. ಅಡಿಲೇಡ್ ಮೌನವಾಗಿ ಅವನತ್ತ ನೋಡಿದಳು. 'ನೆಲದಲ್ಲಿ ಬಿದ್ದು ತಲೆ ಒಡೆದುಕೊಳ್ಳಲಿ ಸುಮ್ಮನಿರು, ಆ ನಂತರ ಅದಕ್ಕೆ ಕೊಂಚ ಉಪ್ಪನ್ನೂ, ನಿಂಬೆಹುಳಿಯನ್ನೂ ಹಾಕು, ಉರಿಸಿಲ್ಲುವವರೆಗೂ ಅಳುತ್ತಿರಲಿ.' ಹುಡುಗ ಇನ್ನೂ ಅಳುತ್ತಲೇ ಇದ್ದ. ಆದರೆ ಕಣ್ಣಿನಲ್ಲಿ ನೀರು ಬರುತ್ತಿರಲಿಲ್ಲ. ಅಡಿಲೇಡ್ ಅವನನ್ನು ಅಪ್ಪಿಕೊಂಡು ಸಂತೈಸುತ್ತಿದ್ದಳು.

'ಅವನ ಪಾಡಿಗೆ ಅವನನ್ನು ಬಿಟ್ಟು ಬಿಡು' ಮಾಂಟಿಯಲ್ ಗದರಿದ. ಮರಣೋನ್ಮುಖವಾಗಿರುವ ಪ್ರಾಣಿಯಂತೆ ಒದ್ದಾಡುತ್ತಿದ್ದ ಆ ಹುಡುಗನನ್ನು

ಬಾಲ್ತಜಾರ್ ಗಮನಿಸಿದ. ಆದಾಗಲೇ ಸಾಕಷ್ಟು ಗಂಟೆಯಾಗಿತ್ತು. ಆ ವೇಳೆಯಲ್ಲಿ ಅವನ ಮನೆಯಲ್ಲಿ ಉರ್ಸುಲಾ ಹಳೆಯ ಹಾಡೊಂದನ್ನು ಹಾಡುತ್ತಾ ಈರುಳ್ಳಿ ಕತ್ತರಿಸುತ್ತಿದ್ದಳು.

'ಪೆಪೆ'—ಬಾಲ್ತಜಾರ್ ಮೃದುವಾಗಿ ಕರೆದ.

ನಗುತ್ತಾ ಅವನು ಆ ಹುಡುಗನ ಸಮೀಪ ಬಂದು ಪಂಜರವನ್ನು ಆತನ ಬಳಿ ಹಿಡಿದ. ತನ್ನಷ್ಟೇ ಎತ್ತರವಿದ್ದ ಆ ಪಂಜರವನ್ನು ಹುಡುಗ ಹಾರಿಬಂದು ತೆಗೆದುಕೊಂಡು ಅಪ್ಪಿಕೊಂಡನು. ಪಂಜರದ ತಂತಿಗಳ ಮಧ್ಯೆ ಮುಖವಿಟ್ಟು, ಬಾಲ್ತಜಾರ್‌ನನ್ನೇ ನೋಡುತ್ತಾ ಏನು ಹೇಳಲೂ ತೋಚದೆ ಹಾಗೇ ನಿಂತುಕೊಂಡಿದ್ದನು. ಅವನ ಕಣ್ಣುಗಳಲ್ಲೀಗ ನೀರಿರಲಿಲ್ಲ.

'ಬಾಲ್ತಜಾರ್, ಆ ಪಂಜರವನ್ನು ತೆಗೆದುಕೊಂಡು ಹೋಗೆಂದು ನಾನಾಗಲೇ ನಿನಗೆ ಹೇಳಿದೆ.' ಮಾಂಟಿಯಲ್ ಸಾವಧಾನವಾಗಿ ಆದರೆ ದೃಢವಾದ ಧ್ವನಿಯಲ್ಲಿ ಹೇಳಿದ.

'ಅದನ್ನು ಕೊಟ್ಟುಬಿಡು'— ತಾಯಿ ಮಗನಿಗೆ ಮೆಲ್ಲಗೆ ಹೇಳಿದಳು.

'ನೀನೇ ಇಟ್ಟುಕೋ ಪೆಪೆ' ಎಂದು ಬಾಲ್ತಜಾರ್ ಹುಡುಗನಿಗೆ ಹೇಳಿ, ಜೋಸ್ ಮಾಂಟಿಯಲ್‌ನತ್ತ ತಿರುಗಿ 'ಪರವಾಗಿಲ್ಲ ಬಿಡಿ, ಈ ಪಂಜರವನ್ನು ನಾನು ಅವನಿಗೆಂದೇ ಮಾಡಿದ್ದು' ಎಂದನು.

'ಮೂರ್ಖನ ಹಾಗೆ ಮಾತನಾಡಬೇಡ. ನಿನ್ನ ಈ ಮರಗೆಲಸದ ತುಂಡನ್ನು ತೆಗೆದುಕೊಂಡು ಹೋಗು. ದಡ್ಡನಂತೆ ನಡೆದುಕೊಳ್ಳುವುದರಲ್ಲಿ ಅರ್ಥವಿಲ್ಲ. ನಿನಗೆ ಇದಕ್ಕಾಗಿ ನಾನು ಒಂದು ಸೆಂಟ್ ಸಹ ಕೊಡುವುದಿಲ್ಲ.' ಬಾಲ್ತಜಾರ್ ಎದುರು ಅವನಿಗೆ ಅಡ್ಡಲಾಗಿ ನಿಂತು ಮಾಂಟಿಯಲ್ ಹೇಳಿದ.

'ಪರವಾಗಿಲ್ಲ. ಹಾಗೇ ಆಗಲಿ. ಇದಕ್ಕೆ ಹಣವನ್ನೇನೂ ನಾನು ನಿರೀಕ್ಷಿಸಿಲ್ಲ. 'ಪೆಪ್'ಗೆ ಉಡುಗೊರೆ ಕೊಡಲೆಂದೇ ನಾನಿದನ್ನು ಮಾಡಿದ್ದು' ಎಂದು ಬಾಲ್ತಜಾರ್ ನಿರ್ಲಿಪ್ತನಾಗಿ, ಪೆಪೆ ಕಡೆಗೊಮ್ಮೆ ನೋಡಿ, ಹೇಳಿದ. ಹಾಗೆ ಹೇಳಿದವನೇ ಜನಸಂದಣಿಯ ನಡುವೆ ದಾರಿಮಾಡಿಕೊಳ್ಳುತ್ತಾ ಹೊರಬಾಗಿಲಿನತ್ತ ಹೋಗುತ್ತಿದ್ದಾಗ ನಡುವ ನೆಯಲ್ಲಿ ನಿಂತ ಮಾಂಟಿಯಲ್ ಜೋರಾಗಿ ಕೂಗಾಡುತ್ತಿದ್ದ. ಅವನ ಮುಖ ಕಳಾಹೀನವಾಗಿತ್ತು. ಕಣ್ಣುಗಳು ಕೆಂಡದುಂಡೆಗಳಂತೆ ಕೆಂಪಗಾಗಿದ್ದುವು.

'ಈಡಿಯಟ್'—ಆತ ಜೋರಾಗಿ ಕಿರುಚಿದ. ನಿನ್ನ ಈ ದರಿದ್ರ ಪಂಜರವನ್ನು ಇಲ್ಲಿ ಬಿಡಬೇಡ, ತೆಗೆದುಕೊಂಡು ಹೋಗು. ಇನ್ನುಮೇಲೆ ನೀನು ಈ ಮನೆಗೆ ಯಾವ ಕೆಲಸಕ್ಕೂ ಬರಬೇಡ 'ದರಿದ್ರ ಸೋಮಾರಿ ಮಗನೇ!' ಮಾಂಟಿಯಲ್ ಮಾತಾಡುತ್ತಲೇ ಇದ್ದ.

'ಪೂಲ್ ಹಾಲ್'ನಲ್ಲಿ ಬಾಲ್ತಜಾರ್‌ನನ್ನು ಎಲ್ಲರೂ ಉತ್ಸಾಹದಿಂದ ಸ್ವಾಗತಿಸಿದರು. ಇದುವರೆಗೆ ಆತ ಬೀರೊಂದು ಲೋಕದಲ್ಲಿಯೇ ಇದ್ದ. ತಾನು ಅತ್ಯಂತ ಸುಂದರವಾದ ಪಂಜರವೊಂದನ್ನು ಮಾಡಿದ್ದೇನೆ. ಅದನ್ನು ಜೋಸ್ ಮಾಂಟಿಯಲ್ ಮಗನಿಗೆ ಕೊಡುತ್ತೇನೆ. ಅದರಿಂದ ಆತನ ಕಣ್ಣುಗಳಲ್ಲಿ ಆನಂದ ತುಳುಕುತ್ತದೆ ಇತ್ಯಾದಿ ಆಲೋಚನೆಗಳಲ್ಲಿ ಆತ ಮುಳುಗಿದ್ದ. ಉಳಿದ ಯಾವುದೂ ಆತನಿಗೆ ಮುಖ್ಯವೆನ್ನಿಸಿರಲಿಲ್ಲ.

ಆದರೆ ಈಗ ಅವನ ಮನಸ್ಸು ಬೇರೆಯೇ ಆಗಿತ್ತು. ಬದುಕಿನಲ್ಲಿ ಒಬ್ಬೊಬ್ಬರಿಗೆ ಒಂದೊಂದು ಮುಖ್ಯವಾಗುತ್ತದೆಂಬ ಅರಿವು ಅವನ ಮನೋಭಾವವನ್ನು ಬದಲಿಸಿತ್ತು. ಗೆಳೆಯರೊಡನೆ ಆತ ಬಲವಂತದ ಉತ್ಸಾಹ ತಂದುಕೊಂಡು ಒಂದಾದ.

'ಅವರು ನಿನಗೆ ಆ ಪಂಜರಕ್ಕೆ ಐವತ್ತು ಪೆಸೋ ಕೊಟ್ಟಿರಬೇಕಲ್ಲ ?'

'ಇಲ್ಲ, ಅರವತ್ತು' ಎಂದ ಬಾಲ್ತಜಾರ್.

'ನಿನ್ನ ಅದೃಷ್ಟವೇ ಅದೃಷ್ಟ ಕಣಯ್ಯ,' ನೀನೊಬ್ಬನೇ ಆ ಮಾಂಟಿಯಲ್ ನಿಂದ ಅಷ್ಟೊಂದು ಹಣ ಪಡೆದಿರುವವನು. ಆ ಸಂತೋಷವನ್ನು ನಾವೀಗ ಆಚರಿಸಲೇ ಬೇಕು.'

ಅವರು ಬಿಯರನ್ನು ತಂದರು. ಬಾಲ್ತಜಾರ್ ಉತ್ಸಾಹದಿಂದ ಎಲ್ಲರಿಗೂ ಹಂಚಿದ. ಇದೇ ಮೊದಲ ಬಾರಿಗೆ ಆತ ಹೊರಗೆ ಕುಡಿಯುತ್ತಿದ್ದುದು. ಸೂರ್ಯ ಮುಳುಗುವ ವೇಳೆಗೆ ಆತ ಸಂಪೂರ್ಣ ಬಿಯರ್‌ನಲ್ಲಿ ಮುಳುಗಿಹೋಗಿದ್ದ. ಈಗ ಅವನು ಸಾವಿರ ಪಂಜರಗಳನ್ನು ತಯಾರಿಸುವ ಭಾರೀ ಯೋಜನೆಯ ಬಗ್ಗೆ ಮಾತನಾಡುತ್ತಿದ್ದ. ಪ್ರತಿಯೊಂದಕ್ಕೂ ಅರವತ್ತು ಪೆಸೋಗಳು. ಅಂತಹ ಒಂದು ಮಿಲಿಯನ್ ಪಂಜರಗಳನ್ನು ಮಾಡಬೇಕು. ಒಟ್ಟು ೬೦ ಮಿಲಿಯನ್ ಪೆಸೋಗಳು....ಹೀಗೇ ಸಾಗಿತ್ತು ಅವನ ಮಾತುಗಳು. 'ಶ್ರೀಮಂತರೆಲ್ಲ ಸಾಯುವುದರೊಳಗೆ ಅನೇಕ ವಸ್ತುಗಳನ್ನು ನಾವು ತಯಾರುಮಾಡಿ ಅವರಿಗೆ ಮಾರಬೇಕು. ಅವರೆಲ್ಲ ರೋಗಿಗಳು. ಖಂಡಿತ ಬೇಗ ಸಾಯುತ್ತಾರೆ. ಅವರು ದುರ್ಬಲರು, ಶಕ್ತಿಹೀನರು. ಕೋಪಿಸಿಕೊಳ್ಳುವುದೂ ಅವರಿಗೆ ಸಾಧ್ಯವಿಲ್ಲ' ಮತ್ತಿನಲ್ಲಿ ಮಾತನಾಡುತ್ತಿದ್ದ. ಸುಮಾರು ಎರಡು ಗಂಟೆಗಳ ಕಾಲ ಜೂಕ್‌ಬಾಕ್ಸ್ ಮುಂದೆ ನಿಂತು ಅದಕ್ಕೆ ಎಡೆಬಿಡದೆ ಹಣ ಹಾಕುತ್ತಿದ್ದ. ಅದು ನಿರಂತರವಾಗಿ ಹಾಡುತ್ತಿತ್ತು. ಎಲ್ಲರೂ ಬಾಲ್ತಜಾರ್‌ನ ಅದೃಷ್ಟವನ್ನು ಹೊಗಳುತ್ತಿದ್ದರು. ಶ್ರೀಮಂತರ ಸಾವಿನ ಬಗ್ಗೆಯೂ ಚರ್ಚೆ ನಡೆಯಿತು. ಆದರೆ ಊಟದ ವೇಳೆಯಾಗುತ್ತಲೇ ಎಲ್ಲರೂ ಅವನೊಬ್ಬನನ್ನೇ 'ಪೂಲ್‌ಹಾಲ್'ನಲ್ಲಿ ಏಕಾಂಗಿಯಾಗಿ ಬಿಟ್ಟು ಹೊರಟುಹೋದರು.

ಉರ್ಸುಲಾ ಹುರಿದ ಮಾಂಸಕ್ಕೆ ಈರುಳ್ಳಿ ಚೂರುಗಳನ್ನು ಹದವಾಗಿ ಬೆರಸಿ ಸೊಗಸಾದ ತಿಂಡಿ ಮಾಡಿಟ್ಟುಕೊಂಡು ಬಾಲ್ತಜಾರ್‌ನಿಗಾಗಿ ಎಂಟು ಗಂಟೆಯವರೆಗೂ ಕಾದಳು. ಯಾರೋ ಬಂದು, ಅವಳ ಗಂಡ ಸಂತೋಷದಿಂದ ಉನ್ಮತ್ತನಾಗಿ 'ಪೂಲ್‌ಹಾಲ್'ನಲ್ಲಿ ಎಲ್ಲರಿಗೂ ಬಿಯರ್ ಕೊಡಿಸುತ್ತಿದ್ದಾನೆಂದು ಹೇಳಿದರು. ಆದರೆ ಅದನ್ನವಳು ನಂಬಲಿಲ್ಲ. ಏಕೆಂದರೆ ಬಾಲ್ತಜಾರ್ ಎಂದೂ ಹೊರಗೆ ಕುಡಿದವನಲ್ಲ. ಮಧ್ಯರಾತ್ರಿಯವರೆಗೂ ಕಾದು ಆಕೆ ಹಾಸಿಗೆಯ ಮೇಲೆ ಉರುಳಿಕೊಳ್ಳುವ ವೇಳೆಗೆ ಬಾಲ್ತಜಾರ್ ಮಂದವಾದ ಬೆಳಕಿದ್ದ ಕೊಠಡಿಯಲ್ಲಿ ಮೇಜು ಕುರ್ಚಿಗಳ ಮಧ್ಯೆ ಕುಳಿತಿದ್ದ. ಚಿಕ್ಕ ಮೇಜುಗಳು, ಪ್ರತಿಯೊಂದು ಮೇಜಿನ ಸುತ್ತ ನಾಲ್ಕು ಕುರ್ಚಿಗಳು. ಸ್ವಲ್ಪ ದೂರದಲ್ಲಿ ಒಂದು ವೇದಿಕೆಯಿತ್ತು.

ಬಾಲ್ತಜಾರ್ ಶಕ್ತಿಹೀನನಾಗಿದ್ದ. ಮುಖ ಕಳಾಹೀನವಾಗಿತ್ತು. ಒಂದು ಹೆಜ್ಜೆ ಮುಂದಿಡುವುದೂ ಅವನಿಗೆ ಸಾಧ್ಯವಿಲ್ಲವೆನ್ನಿಸುತ್ತಿತ್ತು. ಈಗಿಂದೀಗಲೇ ಒಂದೇ ಹಾಸಿಗೆಯಲ್ಲಿ ಇಬ್ಬರು ಹೆಂಗಸರೊಡನೆ ಮಲಗಬೇಕೆಂದು ಆತ ಕುಡಿದ ಮತ್ತಿನಲ್ಲಿ ಯೋಚಿಸು

ತ್ತಿದ್ದ. ಗೆಳೆಯರಿಗಾಗಿ ಆತ ವಿಪರೀತ ಹಣ ಖರ್ಚುಮಾಡಿದ್ದ. ಹಣ ಸಾಲದೆ ಗಡಿಯಾರವನ್ನು ಅಡವಿಟ್ಟು, ಮಾರನೇ ದಿನ ಬಿಡಿಸಿಕೊಳ್ಳುತ್ತೇನೆಂದು ಹೇಳಬೇಕಾಯಿತು. ಕೆಲವು ಕ್ಷಣಗಳ ನಂತರ 'ಪ್ರೂಲ್‌ಹಾಲ್' ಹೊರಗೆ ಆತ ರಸ್ತೆಯಲ್ಲಿ ಅಸ್ತವ್ಯಸ್ತ ಮಲಗಿದ್ದ. ಪಾದರಕ್ಷೆಗಳನ್ನು ಯಾರೋ ಕಳಚಿಕೊಳ್ಳುತ್ತಿರುವುದು ಗೊತ್ತಾದರೂ, ತಾನು ಕಾಣುತ್ತಿದ್ದ ಸುಂದರ ಕನಸಿಗೆ ಭಂಗ ಬರುತ್ತದೆನ್ನಿಸಿ ಹಾಗೇ ಮಲಗಿದ. ಮುಂಜಾನೆ ಐದು ಗಂಟೆಗೆ ಪ್ರಾರ್ಥನೆಗಾಗಿ ಆ ದಾರಿಯಲ್ಲಿ ಹೋಗುತ್ತಿದ್ದ ಹೆಂಗಸರು, ಆತ ಸತ್ತಿರಬಹುದೆಂದು ಭಾವಿಸಿ, ಅವನತ್ತ, ನೋಡಲು ಭಯಪಟ್ಟು, ಆ ಕಡೆ ತಿರುಗದೆ ಹಾಗೇ ಹೋಗುತ್ತಿದ್ದರು.

ಅನುವಾದ : ನರಹಳ್ಳಿ ಬಾಲಸುಬ್ರಹ್ಮಣ್ಯ

ದೈಹಿಕ ಸಖ್ಯದ ಮೂಲಕ ಆತ್ಮ ಸಖ್ಯವನ್ನು ಸಾಧಿಸುವುದೇ ವಿವಾಹದ ಗುರಿ.

ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ?

ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೇ ಹಳೆಯವು.

ಗಾಂಧೀಜಿ

ಕಲ್ಯೂರ್ ಹಕ್ಕಿಗಳ ರಾತ್ರಿ

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್

ನಾವು ಮೂರು ಜನ ಟೇಬಲ್ ಸುತ್ತ ಕುಳಿತಿದ್ದೆವು. ಯಾರೋ ಸ್ಲಾಟ್ ನೊಳಕ್ಕೆ ನಾಣ್ಯ ತೂರಿಸಿದರು. ರಾತ್ರಿಯೆಲ್ಲಾ ಹಾಡುತ್ತಿದ್ದ ರೆಕಾರ್ಡ್ ಮತ್ತೆ ಹಾಡಲು ತೊಡಗಿತು. ಮುಂದಿನದ್ದೆಲ್ಲಾ ಎಷ್ಟು ಬೇಗ ಘಟಿಸಿತ್ತೆಂದರೆ ನಮಗೆ ಸಮಯವಿರಲಿಲ್ಲ. ನಾವು ಎಲ್ಲಿದ್ದೇವೆಂದು, ಯಾವ ಸ್ಥಳದಲ್ಲಿ ಕುಳಿತಿದ್ದೇವೆಂಬ ಅರಿವು ಮೂಡುವುದರೊಳಗೇ ಎಲ್ಲಾ ನಡೆದುಹೋಗಿತ್ತು. ನಮ್ಮಲ್ಲೊಬ್ಬ ತಡಕಾಡುತ್ತಾ ಕೌಂಟರಿನಲ್ಲಿ ಕೈಯಿಟ್ಟ. ಕೈ ಕಾಣಿಸುತ್ತಿರಲಿಲ್ಲ. ಶಬ್ದ ಮಾತ್ರ ಕೇಳಿಸುತ್ತಿತ್ತು. ಕೈ ಗಾಜಿಗೆ ತಗುಲಿದ ಶಬ್ದ. ಎರಡೂ ಕೈಯನ್ನು ಗಡಸು ಮೇಲ್ಮೈಮೇಲೆ ಇಟ್ಟ ಶಬ್ದ. ನಂತರ ಎಲ್ಲಾ ನೀರವ. ನಾವು ಮೂವರೂ ಒಬ್ಬರನ್ನೊಬ್ಬರು ಹುಡುಕುತ್ತಾ, ತಡಕುತ್ತಾ ಅಲ್ಲಿಗೇ ತಲುಪಿದೆವು. ಕೌಂಟರಿನಲ್ಲಿ ಒಂದರಮೇಲೆ ಒಂದು ನಮ್ಮ ಮೂವತ್ತು ಬೆರಳುಗಳು.

ನಮ್ಮಲ್ಲೊಬ್ಬ ಹೇಳಿದ

'ಹೋಗೋಣ ನಡೆಯಿರಿ'

ನಾವು ಏನೂ ಆಗಿಲ್ಲವೆಂಬಂತೆ ಹೊರಟೆವು. ತಲೆ ಕೆಡಿಸಿಕೊಳ್ಳಲು ನಮಗೆ ಸಮಯವಿರಲಿಲ್ಲ.

ನಾವು ಸಾಗಿದಂತೆ ಹಾಲ್‌ನಲ್ಲಿ ಸಂಗೀತ ಎಳೆಎಳೆಯಾಗಿ ನಮ್ಮತ್ತ ಹರಿಯುತ್ತಿತ್ತು. ಕಾಯುತ್ತಾ ಕುಳಿತಿದ್ದ ಹೆಣ್ಣುಗಳ ವಾಸನೆ. ಬಾಗಿಲಕಡೆ ಹೆಜ್ಜೆ ಹಾಕಿದಂತೆ ಹಾಲ್‌ನ ಉದ್ದಕ್ಕೂ ಖಾಲಿತನ ನಮ್ಮೆದುರು ನಿಂತ ಅನುಭವ. ಮತ್ತೊಂದು ವಾಸನೆ, ಬಾಗಿಲಬಳಿ ಕುಳಿತಿದ್ದ ಹೆಂಗಸಿನ ಸಿಂಡು ವಾಸನೆ ನಮ್ಮನ್ನು ಎದುರುಗೊಂಡಿತು.

ನಾವು ಹೇಳಿದೆವು:

'ನಾವಿನ್ನು ಬರುತ್ತೇವೆ'

ಹೆಂಗಸು ತುಟಿ ಬಿಚ್ಚಲಿಲ್ಲ. ಅವಳು ಎದ್ದುನಿಂತಾಗ ಮೇಲೇರಿದ ಊಗಲು ಕುರ್ಚಿ ಕಿರುಗುಟ್ಟಿದ ಶಬ್ದ ಕೇಳಿಬಂತು. ಹಲಗೆಯ

ಮೇಲೆ ಹೆಜ್ಜೆ ಇಟ್ಟ ಶಬ್ದ. ಹೆಂಗಸು ಮರಳಿ ಬಂದ ಶಬ್ದ. ಬಾಗಿಲ ತಿರುಗಣೆ ಕಿರ್ರೆಂದಿತು. ಹಿಂದೆಯೇ ಬಾಗಿಲು ಹಾಕಿದ ಶಬ್ದ.

ನಾವು ಹೊರಬಂದೆವು. ಆಗಲೇ ನಮ್ಮ ಹಿಂದೆಯೇ ಕಾಣದ ಮುಂಜಾವಿನ ಕೊರೆಯುವ ಚಳಿಗಾಳಿ. ಒಂದು ಧ್ವನಿ ನುಡಿಯಿತು.

'ದಾರಿಬಿಟ್ಟು ಅರುಗಾಗಿ, ನಾನು ಆ ಕಡೆಗೇ ಬರುತ್ತಿದ್ದೇನೆ' ನಾವು ಪಕ್ಕಕ್ಕೆ ಸರಿದೆವು. ಧ್ವನಿ ಮತ್ತೆ ಹೇಳಿತು.

'ನೀವು ಬಾಗಿಲು ಬಿಟ್ಟು ಹೋಗೇ ಇಲ್ಲ'

ನಾವು ಎಲ್ಲಾ ದಿಕ್ಕಿಗೂ ಸರಿದೆವೆ. ಎಲ್ಲಾ ಕಡೆಯೂ ಧ್ವನಿ. ಆಗ ಮಾತ್ರ ಅಂದೆವು.

'ನಾವು ಇಲ್ಲಿಂದ ಹೋಗಲು ಸಾಧ್ಯವಿಲ್ಲ. ಕಲ್ಯಾರ್ ಹಕ್ಕಿಗಳು ನಮ್ಮ ಕಣ್ಣು ಕುಕ್ಕಿವೆ.

ಆಗ ಅನೇಕ ಬಾಗಿಲುಗಳು ತೆರೆದದ್ದು ಕೇಳಿಸಿತು. ನಮ್ಮಲ್ಲೊಬ್ಬ ಉಳಿದವರ ಕೈ ಬಿಡಿಸಿಕೊಂಡು ಕತ್ತಲಲ್ಲಿ ಕಾಲೆಳೆಯುತ್ತಾ, ನಮ್ಮ ಸುತ್ತಮುತ್ತ ಇದ್ದ ವಸ್ತುಗಳಿಗೆ ಡಿಕ್ಕಿಹೊಡೆಯುತ್ತಾ ಸಾಗಿದ್ದು ಕೇಳಿಸಿತು. ಅವನು ಎಲ್ಲಿಂದಲೊ ಕತ್ತಲಲ್ಲಿ ಹೇಳಿದ.

'ಇಲ್ಲೆಲ್ಲೊ ಪೇರಿಸಿದ ಪೆಟ್ಟಿಗೆಗಳ ವಾಸನೆ ಬರುತ್ತಿದೆ. ನಾವೆಲ್ಲಾ ಒಟ್ಟಿಗೆ ಇರಬೇಕು.'

ನಮಗೆ ಮತ್ತೆ ಅವನ ಕೈ ಸ್ಪರ್ಶಿಸಿದ ಅನುಭವ. ಗೋಡೆಗೊರಗಿಕೊಂಡೆವು. ಅಷ್ಟುಹೊತ್ತಿಗೆ ಎದುರುಗಡೆಯಿಂದ ಮತ್ತೊಂದು ಧ್ವನಿ ಮೊರೆಯಿತು.

'ಅವು ಶವ ಪೆಟ್ಟಿಗೆಗಳಿರಬೇಕು.'

ಕಾಲೆಳೆದುಕೊಂಡು ನಮ್ಮಿಂದ ದೂರ ಮೂಲೆಗೆ ಹೋಗಿ ಮತ್ತೆ ಬಂದು ಈಗ ನಮ್ಮ ಪಕ್ಕದಲ್ಲೇ ಇದ್ದವನು ಹೇಳಿದ.

'ಅವು ಪೆಟ್ಟಿಗೆಗಳೇ. ನನಗೆ ನಾನು ಚಿಕ್ಕವನಾಗಿದ್ದಾಗಿಲಿಂದಲೇ ಪೆಟ್ಟಿಗೆಯಲ್ಲಿಟ್ಟ ಬಟ್ಟೆಗಳ ವಾಸನೆಯನ್ನು ಗುರುತಿಸುವ ಶಕ್ತಿ ಇದೆ.'

ಆಗ ಆ ದಿಕ್ಕಿಗೆ ನಡೆದೆವು. ನೆಲ ನುಣುಪಾಗಿ, ಮತ್ತೆಗೆ ಇತ್ತು. ಜನ ಓಡಾಡಿ ಸವೆದು ನುಣುಪಾದ ನೆಲ ಅದು. ಯಾರೋ ಕೈ ಚಾಚಿದರು. ಎದುರಿಗೆ ಗೋಡೆಯ ಬದಲು ಉದ್ದನೆಯ, ಬೆಚ್ಚನೆಯ ಚರ್ಮ ಸ್ಪರ್ಶಿಸಿದ ಅನುಭವ.

'ಹೆಣ್ಣು' ಎಂದೆವು.

'ಅವಳು ಮಲಗಿರಬಹುದೆಂದು ಕಾಣಿಸುತ್ತದೆ'

ಇನ್ನೊಬ್ಬ, ನಮಗೆ ಪೆಟ್ಟಿಗೆಗಳ ಬಗ್ಗೆ ಹೇಳಿದವ ಅಂದ.

ನಮ್ಮ ಕೈಗೆ ತಗುಲಿದ ದೇಹ ಅಲ್ಲಾಡಿತು, ನಡುಗಿತು. ಅದು ಕೈಯಿಂದ ಜಾರಿ ಹೋದಂತೆ ಅನ್ನಿಸಿತು. ನಮ್ಮ ಕೈಗೆ ಸಿಕ್ಕದಂತಾಗಿ ದೂರ ಹೋದಂತೆ ಅಲ್ಲ. ಅದು ಅಲ್ಲಿರಲೇ ಇಲ್ಲ ಎಂಬಂತೆ. ಆದರೂ ಒಂದು ಕ್ಷಣ ನಾವು ಸೆಟೆದು, ಒಬ್ಬರ ಭುಜಕ್ಕೊಬ್ಬರು ಒರಗಿ, ನಿಶ್ಚಲರಾಗಿ ನಿಂತೆವು. ಆಮೇಲೆ ಹೆಂಗಸಿನ ಧ್ವನಿ ಕೇಳಿಸಿತು.

'ಯಾರದು?'

'ನಾವು' ಎಂದೆವು ಕದಲದೆ.

ಕಿರ ಗುಟ್ಟಿದ, ಹಾಸಿಗೆಯಿಂದ ಎದ್ದ ಶಬ್ದ. ಕತ್ತಲೆಯಲ್ಲಿ ಚಪ್ಪಲಿಗಾಗಿ ತಡಕಾಡಿದ ಹೆಜ್ಜೆಗಳ ಶಬ್ದ. ನಾವು ಎದ್ದು ಕುಳಿತು ನಮ್ಮ ಕಡೆ ನೋಡುತ್ತಿದ್ದ ಹೆಂಗಸಿನ ಚಿತ್ರವನ್ನು ಕಲ್ಪಿಸಿಕೊಂಡೆವು. ಆಗ ಅವಳಿನ್ನೂ ಪೂರ್ಣ ಎಚ್ಚರಗೊಂಡಿದ್ದಳೊ ಇಲ್ಲವೊ.

'ಇಲ್ಲೇನ್ಮಾಡ್ತಾ ಇದೀರ?' ಎಂದಳು.

'ನಮಗೆ ಗೊತ್ತಿಲ್ಲ. ಕಲ್ಯೂರ್ ಹಕ್ಕಿಗಳು ನಮ್ಮ ಕಣ್ಣು ಕುಕ್ಕಿವೆ' ನಾವೆಂದೆವು.

ಅವಳು ಆ ಬಗ್ಗೆ ಕೇಳಿದ್ದಾಳೆಂದು ಧ್ವನಿ ಹೇಳಿತು. ಒಂದು ಅಂಗಳದಲ್ಲಿ ಮೂರುಜನ ಕುಡಿಯುತ್ತಾ ಕುಳಿತಿದ್ದರಂತೆ. ಅಲ್ಲಿ ಐದಾರು ಕಲ್ಯೂರ್‌ಗಳು ಇದ್ದವಂತೆ. ಏಳು ಕಲ್ಯೂರ್‌ಗಳು ಕುಡಿಯುತ್ತಿದ್ದವರಲ್ಲಿ ಒಬ್ಬರು, ಕಲ್ಯೂರ್‌ಗಳನ್ನು ಅನುಕರಿಸಿ ಹಾಡಲು ತೊಡಗಿದರಂತೆ ಎಂದು ಪೇಪರ್ ಸುದ್ದಿ.

'ತೀರಾ ಅನ್ಯಾಯ ಅಂದ್ರೆ ಅವನು ಒಂದು ಗಂಟೆ ಹಿಂದಿದ್ದ. ಅಂದರೆ ಹಕ್ಕಿಗಳು ಟೆಬಲ್‌ನ ಮೇಲೆ ಹಾರಿ ಅವರ ಕಣ್ಣುಗಳನ್ನು ಕುಕ್ಕಿದಾಗ' ಅವಳೆಂದಳು. ಪೇಪರ್‌ನಲ್ಲಿ ಹಾಗೆ ಬಂದಿತ್ತು. ಆದರೆ ಯಾರು ಅದನ್ನು ನಂಬಲಿಲ್ಲ.

'ಜನ ಅಲ್ಲಿಗೆ ಹೋಗಿದ್ರೆ ಅವರಿಗೆ ಕಲ್ಯೂರ್‌ಗಳು ಕಾಣುತ್ತಿದ್ದವು.'

ನಾವು ಅಂದೆವು. ಹೆಂಗಸು ಮತ್ತೆ ಹೇಳಿದಳು.

ಜನ ಹೋಗಿದ್ರು ಮರುದಿನ ಅಂಗಳದ ತುಂಬಾ ಜನ ತುಂಬಿದ್ರು. ಆದರೆ ಅಷ್ಟು ಹೊತ್ತಿಗಾಗಲೆ ಆ ಹೆಂಗಸು ಕಲ್ಯೂರ್‌ಗಳನ್ನೆಲ್ಲ ಬೇರೆ ಕಡೆಗೆ ಸಾಗಿಸಿದ್ದಳು.

ಅವನು ತಿರುಗಿದಾಗ ಹೆಂಗಸು ಮಾತು ನಿಲ್ಲಿಸಿದಳು. ಮತ್ತೆ ಅಲ್ಲಿ ಗೋಡೆಯಿತ್ತು. ಸುಮ್ಮನೆ ತಿರುಗಿದರೆ ಸಾಕು ಗೋಡೆ ಸಿಗುತಿತ್ತು. ನಮ್ಮನ್ನು ಸುತ್ತುವರೆದಿತ್ತು. ಒಬ್ಬ ಮತ್ತೆ ಕೈಬಿಡಿಸಿಕೊಂಡು ಹೋದ. ಅವನು ತೆವಳುತ್ತಿದ್ದುದು ಕೇಳಿಸುತ್ತಿತ್ತು. ನೆಲವನ್ನು ಮೂಸಿ ನೋಡುತ್ತಾ ಅವನು ಹೇಳಿದ.

'ಈಗ ಪೆಟ್ಟಿಗೆಗಳೆಲ್ಲಿವೆಯೋ ನನಗೆ ಗೊತ್ತಿಲ್ಲ. ನಾವು ಬೇರೊಂದು ಜಾಗಕ್ಕೆ ಬಂದಿದ್ದೇವೆ' ಎಂದು ಅನ್ನಿಸುತ್ತದೆ.

'ನಾವು ಹೇಳಿದೆವು!'

'ಇಲ್ಲಿ ಬಾ ನಮ್ಮ ಪಕ್ಕದಲ್ಲಿ ಯಾರೋ ಇದ್ದಾರೆ.'

ಅವನು ಹತ್ತಿರ ಬರುವುದು ಕೇಳಿಸಿತು. ನಮ್ಮ ಪಕ್ಕದಲ್ಲಿ ಬಂದು ನಿಂತ ಅನುಭವ ನಮ್ಮ ಮುಖಕ್ಕೆ ಬೀಸಿದುಸಿರು ತಾಗಿದ ಅನುಭವ.

'ಆ ಕಡೆ ನಡಿ ನಮ್ಮ ಪರಿಚಿತರೊಬ್ಬರು ಅಲ್ಲಿದ್ದಾರೆ' ಎಂದೆವು.

ಅವನು ಅಲ್ಲಿಗೆ, ನಾವು ಸೂಚಿಸಿದ ಜಾಗದ ಕಡೆ ಹೋಗಿರಬೇಕು. ಏಕೆಂದರೆ ಮತ್ತೊಂದು ಕ್ಷಣದಲ್ಲಿ ಬಂದು ನಮಗೆ ಹೇಳಿದ.

'ನನಗನ್ನಿಸುತ್ತದೆ. ಅಲ್ಲಿರುವುದು ಒಬ್ಬ ಹುಡುಗ.'

ನಾವೆಂದೆವು:

'ತುಂಬಾ ಒಳ್ಳೆಯದು ನಾವು ಅವನಿಗೆ ಗೊತ್ತೋ ಕೇಳು.'

ಅವನು ಕೇಳಿದನು. ನಮಗೆ ಆ ಹುಡುಗನ ನಿರ್ಭಾವನೆಯ ಸರಳ ಧ್ವನಿ ಕೇಳಿಸಿತು. ಹುಡುಗ ಹೇಳಿದ:

‘ಹೌದು ನಾನು ನಿಮ್ಮನ್ನು ಬಲ್ಲೆ. ಕಲ್ಯೂರ್‌ಗಳು ನಿಮ್ಮ ಮೂವರ ಕಣ್ಣುಗಳನ್ನು ಕುಕ್ಕಿವೆ.’

ಆ ಮೇಲೆ ದೊಡ್ಡವರೊಬ್ಬರು ಹೇಳಿದರು. ಧ್ವನಿ ಹೆಂಗಸಿನದು, ಮುಚ್ಚಿದ ಬಾಗಿಲ ಹಿಂದಿನಿಂದ ಬಂದಂತೆ ಅನ್ನಿಸಿತು.

‘ನೀನು ಮತ್ತೆ ಒಬ್ಬನೆ ಮಾತಾನಾಡಿಕೊಳ್ಳುತ್ತಿದ್ದೀಯೆ’ ಎಂದಳು.

ಹುಡುಗನ ಧ್ವನಿ ಹೇಳಿತು.

‘ಇಲ್ಲ ಕಲ್ಯೂರ್‌ಗಳ ಕಣ್ಣು ಕುಕ್ಕಿದ ಜನ ಮತ್ತೇ ಇಲ್ಲಿಗೆ ಬಂದಿದ್ದಾರೆ. ಬಾಗಿಲಿನ ಕೀಲಿನ ಶಬ್ದ, ದೊಡ್ಡವರ ಧ್ವನಿ ಈಗ ಮೊದಲಿಗಿಂದ ಹತ್ತಿರದಿಂದ.

‘ಅವರನ್ನೂ ಮನೆಗೆ ತಲುಪಿಸು ಹೋಗು.’

ಹುಡುಗ ಹೇಳಿದ. ‘ಅವರ ಮನೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ.

‘ನೀಚತನ ತೋರಿಸಬೇಡ. ಕಲ್ಯೂರ್‌ಗಳು ಆ ರಾತ್ರಿ ಅವರ ಕಣ್ಣು ಕುಕ್ಕಿದಾಗಲಿಂದ ಅವರ ಮನೆ ಎಲ್ಲಿದೆ ಅಂತ ಎಲ್ಲರಿಗೂ ಗೊತ್ತು.’

ಮತ್ತೆ ಅವಳು ನಮ್ಮನ್ನುದ್ದೇಶಿಸಿ ಹೇಳಿದಂತೆ ಬೇರೆ ಧಾಟಿಯಲ್ಲಿ ಮುಂದುವರೆಸಿದಳು.

‘ಏನಾಗಿದೆ ಅಂದ್ರೆ, ಅದನ್ನು ನಂಬಲು ಯಾರೂ ತಯಾರಿಲ್ಲ. ಪೇಪರ್‌ಗಳು ತಮ್ಮ ಪ್ರಸಾರ ಹೆಚ್ಚಿಸ್ಕೊಳ್ಳೋಕೆ ಪ್ರಕಟಿಸಿದ ಸುಳ್ಳುಸುದ್ದಿ ಅದು ಅಂತ ಹೇಳ್ತಿದ್ದಾರೆ. ಕಲ್ಯೂರ್‌ಗಳನ್ನು ನೋಡ್ದವ್ರು ಯಾರೂ ಇಲ್ಲ.’

‘ನಾನು ಇವರನ್ನು ರಸ್ತೇಲಿ ಕರ್ಕೊಂಡು ಹೊರಟ್ರೆ ಆ ಮೇಲೆ ನನ್ನನ್ನು ಯಾರೂ ನಂಬಲ್ಲ’ ಹುಡುಗ ಹೇಳಿದ.

ನಾವು ಕದಲಲಿಲ್ಲ. ಗೋಡೆಗೊರಗಿ ಅವಳ ಮಾತನ್ನು ಆಲಿಸುತ್ತಾ ನಿಂತೆ ಇದ್ದೇವು. ಹೆಂಗಸು ಹೇಳಿದಳು :

‘ಇವನು ನಿಮ್ಮನ್ನು ಕರೆದೊಯ್ಯುವುದಾದರೆ ಅದು ಬೇರೆ ಮಾತು. ಹಾಗೆ ನೋಡಿದರೆ ಹುಡುಗ ಹೇಳಿದ್ದಕ್ಕೆ ಯಾರೂ ಹೆಚ್ಚು ಗಮನ ಕೊಡುವುದಿಲ್ಲ.’

ಹುಡುಗನ ಧ್ವನಿ ಮಧ್ಯೆ ಬಾಯಿ ಹಾಕಿತು.

‘ನಾನು ಇವರೊಟ್ಟಿಗೆ ರಸ್ತೆಯಲ್ಲಿ ನಡೆದರೆ, ಮತ್ತು ಕೂಲ್ಯೂರ್‌ಗಳು ಕಣ್ಣು ಕುಕ್ಕಿದ ಜನ ಇವರೇ ಅಂತ ಹೇಳಿದ್ರೆ ಹುಡುಗರು ನನಗೆ ಕಲ್ಲಲ್ಲಿ ಹೊಡೀತಾರೆ. ಬೀದೀಲಿ ಇರೋ ಪ್ರತಿಯೊಬ್ಬರು ಇದು ನಡೆದಿರೋದೆ ಸುಳ್ಳು ಅಂತಾರೆ.’

ಒಂದು ಕ್ಷಣ ಮೌನ. ಮತ್ತೇ ಬಾಗಿಲು ಮುಚ್ಚಿತು. ಹುಡುಗ ಹೇಳಿದ :

ಅದು ಅಲ್ಲದೆ ಈಗ ನಾನು ‘ಟೆರ್ರಿ ಮತ್ತು ಕಡಲ್ಗಳ್ಳರು’ ಓದುತ್ತಿದ್ದೇನೆ.

ನಮ್ಮ ಕಿವಿಯಲ್ಲಿ ಯಾರೋ ಹೇಳಿದ್ರು.

‘ಅವನನ್ನು ನಾನು ಒಪ್ಪಿಸುತ್ತೇನೆ.’

ಅವನು ಧ್ವನಿ ಬಂದ ಕಡೆಗೆ ತೆರಳಿದ.

‘ಅದು ಸಂಗೆ ಇಷ್ಟ. ಕಡೆ ಪಕ್ಷ ಈ ವಾರ ಟೆರ್ರಿಗೆ ಏನಾಯಿತು ಅಂತ ಹೇಳು’ ಅವನೆಂದ.

ಹುಡುಗನ ವಿಶ್ವಾಸ ಗಳಿಸಲು ಅವನು ಯತ್ನಿಸುತ್ತಿದ್ದಾನೆಂದು ಅಂದುಕೊಂಡೆವು. ಆದರೆ ಹುಡುಗ ಹೇಳಿದ :

'ನಂಗೆ ಅದು ಇಷ್ಟ ಇಲ್ಲ. ಬಣ್ಣಗಳನ್ನು ಕಂಡ್ರೆ ಮಾತ್ರ ನಂಗೆ ಇಷ್ಟ.'

'ಟೆರ್ರಿ ಚಕ್ರವ್ಯೂಹದಲ್ಲಿ ಸಿಕ್ಕಿದ್ದಾನೆ' ನಾವೆಂದೆವು.

ಮತ್ತೆ ಹುಡುಗ ಹೇಳಿದ :

'ಅದು ಆಗಿದ್ದು ಶುಕ್ರವಾರ. ಇವತ್ತು ಭಾನುವಾರ. ನನಗೆ ಬಣ್ಣಗಳು ಮಾತ್ರ ಇಷ್ಟ' ನಿರ್ಭಾವದ, ನಿರಾಶಕ್ತಿ ಮತ್ತು ಬೇಕಾಬಿಟ್ಟಿಯಾ ಭಾವವನ್ನು ಸೂಚಿಸುವ ಧ್ವನಿ ಹುಡುಗನದು.

ಆ ಇನ್ನೊಬ್ಬ ವಾಪಸ್ಸು ಬಂದ. ನಾವು ಹೇಳಿದೆವು.

'ನಾವು ದಾರಿ ತಪ್ಪಿ ಹೆಚ್ಚು ಕಡಿಮೆ ಮೂರು ದಿನಗಳಾದವು. ಒಂದು ಕ್ಷಣ ಕೂಡ ವಿಶ್ರಾಂತಿ ಇಲ್ಲ.'

ಒಬ್ಬ ಹೇಳಿದ.

'ಆಗಲಿ ಸ್ವಲ್ಪ ಹೊತ್ತು ವಿಶ್ರಮಿಸೋಣ. ಆದರೆ ಒಬ್ಬರ ಕೈ ಒಬ್ಬರು ಬಿಡಬಾರದು. ನಾವು ಕುಳಿತುಕೊಂಡೆವು. ಕಾಣದ ಸೂರ್ಯನ ಶಾಖದಿಂದ ಹೆಗಲು ಬೆಚ್ಚಗಾಗ ತೊಡಗಿದವು. ಆದರೆ ಸೂರ್ಯ ಇದ್ದಾನೆ ಎನ್ನುವುದು ಕೂಡ ನಮ್ಮಲ್ಲಿ ಆಶಕ್ತಿ ಹುಟ್ಟಿಸಲಿಲ್ಲ. ಅದರ ಅನುಭವ ಅಲ್ಲಿ ಇಲ್ಲಿ ಎಲ್ಲ ಕಡೆ ಆಗುತ್ತಿತ್ತು. ಕಾಲ ದೇಶ ದೂರಗಳ ಕಲ್ಪನೆ ಹೊರಟು ಹೋಗಿತ್ತು. ಎಷ್ಟೋ ಧ್ವನಿಗಳು ನಮ್ಮನ್ನೂ ಹಾದು ಹೋದವು.

'ಕಲ್ಯೂರ್‌ಗಳು ನಮ್ಮ ಕಣ್ಣು ಕುಕ್ಕಿವೆ' ಎಂದುವು.

ಒಂದು ಧ್ವನಿ ಹೇಳಿತು :

'ಇವರು ಪೇಪರ್‌ನಲ್ಲಿ ಬಂದಿದ್ದನ್ನ ನಿಜ ಅಂತ ಅದ್ಕೊಂಡುಬಿಟ್ಟಿದ್ದಾರೆ. ಧ್ವನಿಗಳು ಮರೆಯಾದವು. ನಾವು ಹಾಗೆ ಹೆಗಲಿಗೆ ಹೆಗಲುಕೊಟ್ಟು ಕುಳಿತೆ ಇದ್ದೇವು. ಕಾಯುತ್ತಾ ಹಾದುಹೋದ ಧ್ವನಿಗಳ ಮಧ್ಯೆ, ಆಕೃತಿಗಳ ಮಧ್ಯೆ. ನಮಗೆ ಪರಿಚಿತವಾದ ವಾಸನೆಗಾಗಿ, ಧ್ವನಿಗಾಗಿ ಸೂರ್ಯ ಇನ್ನಷ್ಟು ಶಾಖ ತಟ್ಟಿಸುತ್ತಾ ನೆತ್ತಿಯ ಮೇಲೆ ಬಂದಿದ್ದ. ಯಾರೋ ಹೇಳಿದರು.

ಮತ್ತೆ ಗೋಡೆಯ ಕಡೆ ಹೋಗೋಣ.'

ಉಳಿದವರು ನಿಶ್ಚಲರಾಗಿ, ಕಾಣದ ಬೆಳಕಿನತ್ತ ತಲೆ ಎತ್ತಿ ಅಂದರು.

'ಈಗಲೇ ಬೇಡ ಸೂರ್ಯ ನಮ್ಮ ಮುಖದ ಮೇಲೆ ಉರಿಯಲಿ ಅಲ್ಲಿಯ ತನಕ ಸುಮ್ಮನೆ ಕಾಯೋಣ.

ಅನುವಾದ : ವಿ. ಎನ್. ಲಕ್ಷ್ಮೀನಾರಾಯಣ

ನನ್ನ ಬರಹಕ್ಕೆ ಇರುವ ಸಾಹಿತ್ಯಕ ವಾತಾವರಣ

ಡಾ|| ಬಿ. ಸಿ. ರಾಮಚಂದ್ರ ಶರ್ಮ

ಸುಮಾರು ಇಪ್ಪತ್ತು ವರ್ಷಗಳವರೆಗೆ ಪರದೇಶಗಳಲ್ಲಿದ್ದ ನನಗೆ ತಿಂಗಳಿಗೊಮ್ಮೆಯಾದರೂ ಬೀಳುತ್ತಿದ್ದ ಕನಸು ನನಸಾದದ್ದು ೧೯೮೨ರ ಕೊನೆಗೆ—ನಾನು ಸ್ವದೇಶಕ್ಕೆ ಹಿಂದಿರುಗುವ ನಿರ್ಧಾರ ಮಾಡಿದೆ. ಅಷ್ಟರಲ್ಲಾಗಲೇ ನಮ್ಮ ಮೂರು ಮಕ್ಕಳೂ ಸ್ವ-ಇಚ್ಛೆಯಿಂದ ಇಂಡಿಯಾಕ್ಕೆ ಬಂದು ನೆಲೆಸಿಬಿಟ್ಟಿದ್ದು ಎಷ್ಟರ ಮಟ್ಟಿಗೆ ನಮ್ಮ ನಿರ್ಧಾರವನ್ನು ರೂಪಿಸಿತೋ ಅನ್ನುವದನ್ನು ಹೇಳುವುದು ಕಷ್ಟ. ಆ ನಿರ್ಧಾರಕ್ಕೆ ಮೊದಲು ನನ್ನ ಹೆಂಡತಿ ಹಾಗೂ ನಾನು ಕೂತು ನಮ್ಮ ಬ್ಯಾಂಕ್ ಲೆಕ್ಕಗಳಲ್ಲಿದ್ದ ಹಣದ ಜೊತೆಗೆ ಯುನೆಸ್ಕೋದಿಂದ ರಿಪ್ಯಾಟ್ರಿಯೇಷನ್ ರೂಪದಲ್ಲಿ ಎಷ್ಟು ಬರಬಹುದೆಂದು ಲೆಕ್ಕಹಾಕಿ, ಕೂಡಿ, ಶೇಕಡ ಹತ್ತರಂತೆ ಬಡ್ಡಿ ಕೊಟ್ಟು, ಆ ಬಡ್ಡಿಯ ಮೇಲೆ ಮಾನವಾಗಿ ಬದುಕುವುದು ಸಾಧ್ಯವೇ ಎಂದು ಯೋಚಿಸುತ್ತ ರಾತ್ರಿಗಳನ್ನು ಕಳೆದದ್ದು ನೆನಪಾಗುತ್ತಿದೆ. ವಾಪಸ್ಸು ಬಂದು ನೆಲಸುವ ಅತೀವ ಆಸೆಯ ಜೊತೆ ಜೊತೆಗೇ ಎಂಥದೋ ಆತಂಕ. “ಹುಟ್ಟಿಲ್ಲೊ ಅಲ್ಲೇ ಸಾಯುವುದೆ ಸ್ವರ್ಗ” ಅನ್ನುವ ಸಾಲನ್ನು ನಾನೇ ಒಂದು ಕವನದಲ್ಲಿ ಬರೆದಿದ್ದರೂ, ಎಂಥದೋ ಅಳುಕು....

ಕನ್ನಡ ಸಾಹಿತ್ಯ ಎಷ್ಟರಮಟ್ಟಿಗೆ ನನ್ನ ತೋಳು ಹಿಡಿದೆಳೆಯಿತು? ಪರದೇಶಗಳಲ್ಲಿದ್ದಾಗ ಬರೆಯುವುದು ಕಷ್ಟವಾಗಿತ್ತು. ಅದರಲ್ಲೂ ಇಂಗ್ಲೆಂಡಿನಲ್ಲಿದ್ದ ಹನ್ನೆರಡು ವರ್ಷ. ವ್ಯವಹಾರಕ್ಕೆ ಇಂಗ್ಲಿಷ್ ಅನಿವಾರ್ಯವಾಗಿ, ಹಗಲಿಡೀ ಅದರಲ್ಲಿ ಮುಳುಗಿರುತ್ತಿದ್ದೆ. ಹೆಂಡತಿಯ ಕನ್ನಡ ಮಾತಲ್ಲದೇ ಬೇರೆಯವರಿಂದ ನಾಲ್ಕು ಕನ್ನಡದ ಮಾತು ಕೇಳಬೇಕಾಗಿದ್ದರೆ ನಲವತ್ತು ಮೈಲಿ ಪ್ರಯಾಣ ಮಾಡಬೇಕಾಗಿತ್ತು. ಇಂಗ್ಲಿಷ್ ಬರದ ನನ್ನ ತಾಯಿ ನಮ್ಮ ಜೊತೆಗೆ ೬೪ರಿಂದ ೬೯ರವರೆಗೆ ಇದ್ದದ್ದು ನನ್ನ ಪಾಲಿಗೆ ವರವಾಯಿತು. ಸುಮಾರು ಕತೆಗಳನ್ನೂ ಕವನಗಳನ್ನೂ ಬರೆದೆ.

೬೯ರಲ್ಲಿ ಇಂಡಿಯಾಕ್ಕೆ ನನ್ನ ಪಿ.ಎಚ್.ಡಿ.ಗೆ ಸಂಬಂಧಿಸಿದ ಹಾಗೆ ಬಂದಾಗ "ಹೇಸರಗತ್ತೆ" ಕವನ ಸಂಕಲನ ಹೊರಬರುವುದು ಸಾಧ್ಯವಾಯಿತು.

ಆ ಪರದೇಶದ ವರ್ಷಗಳಲ್ಲಿ ನಾವು ಸುಮಾರು ಹತ್ತು ಬಾರಿಯಾದರೂ ಬೆಂಗಳೂರಿಗೆ ಬಂದು ತಿಂಗಳವರೆಗೆ ಇದ್ದು ಹೋಗುತ್ತಿದ್ದೆವು. ಹಾಗೆ ಬಂದಾಗ ನನ್ನ ಬಹುಪಾಲು ಕಾಲವನ್ನು ಸಾಹಿತಿಗಳ ಸಹವಾಸದಲ್ಲಿ ಕಳೆಯುತ್ತಿದ್ದೆ. ಕಿವಿ ತುಂಬ ಕನ್ನಡವನ್ನಲ್ಲದೇ ನಮ್ಮ ಸಾಹಿತ್ಯ ಕ್ಷೇತ್ರದ ಜಗಳಗಳನ್ನೂ ತುಂಬಿಕೊಂಡು ಆಮೇಲೆ, ನನ್ನ ಪರದೇಶದ ಏಕಾಂತಕ್ಕೆ, ಒಳಗಿನ ಒತ್ತಾಯ ಅದಮ್ಯವಾದಾಗ ಬರಹಕ್ಕೆ, ಹಿಂದಿರುತ್ತಿದ್ದೆ.

ಅದಕ್ಕೆ ಮೊದಲು ಎರಡು ಸಲ ಬಂದಿದ್ದರೂ, ೬೯ರಲ್ಲಿ ಆರು ತಿಂಗಳ ವಾಸ್ತವ್ಯಕ್ಕೆ ಬಂದಾಗ ಕಂಡ ಬದಲಾವಣೆಗಳು ನನ್ನನ್ನು ಬುಡಮುಟ್ಟ ಹಿಡಿದು ಅಲ್ಲಾಡಿಸಿದವು ಅನ್ನಬಹುದೇನೋ. ನನ್ನ ಕಣ್ಣ ಮುಂದೇ ಬೆಳೆದ ಅನಂತಮೂರ್ತಿ "ಸಂಸ್ಕಾರ"ವೇ ಕಾರಣವಾಗಿ ತುಂಬ ಬೆಳೆದಿದ್ದರು. ಕನ್ನಡ ನಾಟಕದ Angry young man ಆಗಿದ್ದ ಲಂಕೇಶ. ಕಣ್ಣಾಚೆಗೆ ಹೋದವನು ಮನಸ್ಸಿನಿಂದಲೂ ದೂರವೆನ್ನುವಂತೆ ನಾನು. ಅವರ ಕೀರ್ತಿಯ ಬಗ್ಗೆ ಹೊಟ್ಟೆಯುರಿ. ನನ್ನ ಕ್ರತುಶಕ್ತಿಯ ಬಗ್ಗೆ ಸಂದೇಹ ಕಾಡಿದ್ದು ಆಗ. ನಾನು ಬರೆದಿದ್ದರಲ್ಲೂ ವಸ್ತುವಾಗಿದ್ದದ್ದು ನನ್ನ ಪರದೇಶದ ಅನುಭವಗಳು—ಅವರಿಬ್ಬರ ಬಾಲ್ಯದ ಸಮೃದ್ಧ ಗ್ರಾಮೀಣ ಅನುಭವಗಳ ಎದುರಿಗೆ ಯಾವುದೋ ಅಸಂಗತವಾದ ವಿಷಯಗಳ ಬಗ್ಗೆ ಬರೆಯುತ್ತಿದ್ದೇನೋ ಅನ್ನುವ ಅಳುಕು. ನನ್ನ "ಅಯೋಧ್ಯೆ" ಕವನವನ್ನು ಬರೆಯಲೇಬೇಕಾಗಿ ಬರೆದದ್ದು ಆಗ: ಅನಂತಮೂರ್ತಿಯ ಸರಸ್ವತಿಪುರಂ ಮನೆಯಲ್ಲಿ. ಈ ಸಾಲು ಕೆಲವರಿಗಾದರೂ ನೆನಪಾಗಬಹುದು: "ರಾಮ ಭೂಗತ, ಗೆದ್ದವನು ಲಂಕೇಶ." ಆ ಚರಣದ ಮೂರನೇ ನಾಲ್ಕನೇ ಸಾಲುಗಳಲ್ಲಿ ಬಂದ ಘೋಷ, ಆವೇಶಗಳಷ್ಟೇ ಲಂಕೇಶ ಬರುವದಕ್ಕೆ ಕಾರಣವಾಗಿರಲಿಲ್ಲ ಅನ್ನುವದನ್ನು ಬಿಡಿಸಿ ಹೇಳಬೇಕೇ ?

ಆ ಕವನ ನನಗಂತೂ ಪ್ರಿಯವಾದದ್ದು ಅಷ್ಟೇ ಪ್ರಿಯವಾದದ್ದು ಅದೇ ಕಾಲಕ್ಕೆ ಬರೆದ "ಜೆಸ್ಟರ್ಸ್" ಅನ್ನುವ ಪದ್ಯ. ಅದರಲ್ಲಿ ಬರುವ ಒಂದು ಸಾಲು: "ಹಾಲಿಗೂ ಮುಂಚೆ ಹೊಡೆದೆಬ್ಬಿಸಿದ ಸಂಸ್ಕಾರ". ಬೆಳಿಗ್ಗೆ ಏಳು ಗಂಟೆಗೆ ಮೈಲಿಗಳಾಚೆಯಿದ್ದ ಯಾವುದೋ ಚಿತ್ರಮಂದಿರದಲ್ಲಿ "ಸಂಸ್ಕಾರ" ಸಿನಿಮಾದ ಕರಡು ಪ್ರತಿ ನೋಡಿ ಬಂದಾದ ಮೇಲೆ ಕೆಲವೇ ದಿನಗಳಲ್ಲಿ ಬರೆದ ಅವನ.... ಇಂಗ್ಲೆಂಡಿನ ಚಳಿಯಲ್ಲಿ, ಏಕಾಂತದಲ್ಲಿ, ಅನಂತಮೂರ್ತಿ ಲಂಕೇಶ ಕಣ್ಣೆದುರಿಗೇ ನಿಂತ ಪೆಡಂಭೂತಗಳಾಗಿ ಕಾಡುವುದು ಸಾಧ್ಯವಿರಲಿಲ್ಲ.

ಆ ಸಲದ ಭೇಟಿ ನನ್ನಲ್ಲಿ ಮರೆಯಾಗದ ಒಂದು ಅನುಭವವಾಗಿ ಉಳಿದಿರುವುದಕ್ಕೆ ಹಲವಾರು ಕಾರಣಗಳಿವೆ. ನನ್ನ ಜೊತೆಗೆ ಇಂಡಿಯಾಕ್ಕೆ ಬಂದ ನನ್ನ ತಾಯಿ ಮತ್ತೆ ಇಂಗ್ಲೆಂಡಿಗೆ ಬರುವುದಿಲ್ಲವೆಂದಿದ್ದು; ನನ್ನ ಓರಗೆಯವರ ಮುಖದಲ್ಲಿದ್ದ ಮುಪ್ಪಿನ ಛಾಯೆ ಕಂಡು ನನಗೆ ನಲವತ್ತು ದಾಟಿದ ಅನುಭವ ಮೊದಲ ಬಾರಿಗೆ ಬಂದದ್ದು; ಲಂಕೇಶನ ಜೊತೆಗೆ ಧಾರವಾಡಕ್ಕೆ ಹೋಗಿ ಗೆಳೆಯ ಶಾಂತಿನಾಥ ದೇಸಾಯಿ ಅವರ

ಮನೆಯಲ್ಲಿ, ಚಂಪಾ, ಗಿರೀಶ್ ಕಾರ್ನಾರ್ಡ್ ಹಾಗೂ ಕೆ. ರಾಘವೇಂದ್ರರಾವ್ ಅವರ ಜೊತೆಯಲ್ಲಿ ಕೂತು ಮಾತಾಡುತ್ತಿದ್ದಾಗ ಬ್ರಾಹ್ಮಣ–ಶೂದ್ರರ ಮಾತು ಬಂದು ಬೆಳಗಿನ ಝಾವದ ಗಾಳಿ ಬಿಸಿಯೇರಿದ್ದು. ಸಾಹಿತ್ಯಕ್ಕೆ ಸಂಬಂಧಪಟ್ಟ ಹಾಗೆ ಅಂತಹ ಮಾತು ಬಂದದ್ದು ಅದೇ ಮೊದಲಲ್ಲದಿದ್ದರೂ ನನಗೆ ಆ ರಾತ್ರಿಯ ಬಿರುಸು ತುಂಬ ಘಾಸಿ ಮಾಡಿದ್ದು ಇವೊತ್ತಿಗೂ ನೆನಪಿದೆ. ಧಾರವಾಡದಿಂದ ಹೆಗ್ಗೋಡಿಗೆ, ಸುಬ್ಬಣ್ಣ ಅವರ ಮನೆಯ ಆತಿಥ್ಯ, ಧಾರವಾಡದಲ್ಲಿ ನಡೆದದ್ದನ್ನು ಮರೆಯುವ ಪ್ರಯತ್ನ, ಸಾಗರದ ಬೀದಿಗಳಲ್ಲಿ ಗಿರೀಶ್ "ಹೀರೋ" ತರಹ ನಡೆಯುವಾಗ ಘೇರಾಯಿಸಿದ ಜನ ಇತ್ಯಾದಿ, ಇತ್ಯಾದಿ....

೭೨ರಲ್ಲಿ ಬಂದಾಗ ಘನೀಭೂತವಾಗತೊಡಗಿದ್ದ ಬ್ರಾಹ್ಮಣ–ಶೂದ್ರರ ಸಮಸ್ಯೆ. ೭೪—೭೫ರಲ್ಲಿ ಬಂದಾಗ ನಡೆದ ಒಕ್ಕೂಟದ ಸಮ್ಮೇಳನ....

ಹುಟ್ಟಿಂದ ಬ್ರಾಹ್ಮಣನಾದರೂ ನಂಬಿಕೆಯಿಂದ ಯಾವ ಒಂದು ಜಾತಿಗೂ ಸೇರದ ನನಗೆ ಮೊದಲ ಬಾರಿಗೆ ಲಂಕೇಶನ ಜಾತಿ ಯಾವುದೆಂದು ತಿಳಿದಿದ್ದು. ಮಾತು ಮಾತಿಗೆ ಜಾಣ ಬ್ರಾಹ್ಮಣನೆಂದು ಕರೆಸಿಕೊಂಡಿದ್ದರ ಜೊತೆಗೆ ನಾನು ಇಂಡಿಯಾ ಬಿಟ್ಟು ಇಥಿಯೋಪಿಯಾಕ್ಕೆ ಹೋಗಬೇಕಾದದ್ದು ನನ್ನ ಬ್ರಾಹ್ಮಣ್ಯವೇ ಅಲ್ಲವೇ ಅನ್ನುವ ನೆನಪು ಮತ್ತೆ ಮತ್ತೆ ಬಂದು ಗೊಂದಲವನ್ನುಂಟುಮಾಡಿದ್ದು ...

ಇಷ್ಟೆಲ್ಲ ನೆನಪುಗಳನ್ನು ಹೊತ್ತು ಇಂಡಿಯಾಕ್ಕೆ ಬರುವ ನಿರ್ಧಾರ ಮಾಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ಮತ್ತೆ ನನ್ನನ್ನು ಸ್ಥಾಪಿಸಿಕೊಳ್ಳುವ ನಿರ್ಧಾರ ಮಾಡಿ ಇಂಡಿಯಾದ ನೆಲಕ್ಕೆ ಮರಳಿದೆ.

೨

ನಾನು ದೇಶಕ್ಕೆ ಹಿಂದಿರುಗುವ ಮೂರೇ ದಿನಗಳ ಹಿಂದೆ ನನ್ನ ತಾಯಿ ಹಾರ್ಟ್ ಅಟ್ಯಾಕ್ ಆಗಿ ಆಸ್ಪತ್ರೆಗೆ ಹೋಗಿದ್ದರು. ತಿಂಗಳವರೆಗೆ ಅಲ್ಲಿದ್ದು, ಆರೋಗ್ಯ ಸುಧಾರಿಸಿ ಮನೆಗೆ ಬಂದ ಮೇಲೆ ನನಗೆ ಮತ್ತೆ ಸಾಹಿತ್ಯದ ಕಡೆಗೆ ಗಮನ ಕೊಡುವ ಅವಕಾಶ. ಮೊದಲ ಅನುಭವ ಶಿರ್ಶಿಯ ಸಮ್ಮೇಳನ. ಸಮ್ಮೇಳನದ ಅಂಗವಾಗಿ ನಡೆದ ವಿಚಾರ ಸಂಕಿರಣಗಳಿಗಿಂತಲೂ ವೈಯಕ್ತಿಕವಾಗಿ ನನಗೆ ಹೆಚ್ಚು ಲಾಭದಾಯಕವಾದದ್ದು ಕನ್ನಡದ ಸುಪ್ರಸಿದ್ಧ ಕಾದಂಬರಿಗಾರ ಶಾಂತಿನಾಥರೊಡನೆ ಕಳೆದ ದಿನಗಳು, ನಡೆಸಿದ ಚರ್ಚೆ.

ಬಂಡಾಯ ಸಾಹಿತ್ಯದ ಧ್ವಜ ಗಾಳಿಯಲ್ಲಿ ಕಣ್ಣು ಕೋರೈಸುವ ಹಾಗೆ ಹಾರುತ್ತಿದ್ದ ದಿನಗಳು ಅವು. ನವ್ಯ ಸಾಹಿತ್ಯದ ಕೊನೆಯ ದಿನಗಳಿವು ಅಂತ ಕೆಲವರನ್ನುತ್ತಿದ್ದರೆ, ಇನ್ನು ಕೆಲವರು ಆಗಲೇ ಅದರ ಮೃತ್ಯುಪ್ರಕಟನೆಯನ್ನು ಬಹಿರಂಗಪಡಿಸಿದ್ದ ದಿನಗಳು. ಆ ಸಮ್ಮೇಳನದಿಂದ ನನ್ನಲ್ಲುಳಿದಿರುವ ಎರಡೇ ಎರಡು ಮಾತುಗಳು: ೧. ನಾನು ಮತ್ತೆ ಜನರ ಗಮನಕ್ಕೆ ಬರಬೇಕಾದರೆ ಪ್ರಯತ್ನ ಪೂರ್ವಕವಾಗಿಯಾದರೂ ಸಾಮಾಜಿಕ ಆಯಾಮವನ್ನು ನನ್ನ ಕಾವ್ಯಕ್ಕೆ, ಕತೆಗಳಿಗೆ ತರಬೇಕೆಂಬ ನನ್ನ ಕಾದಂಬರಿಗಾರ–ಸ್ನೇಹಿತನ ಬುದ್ಧಿವಾದ; ೨. ರಾಜಮಾರ್ಗದಲ್ಲಿ ನಡೆಯುತ್ತಿದ್ದ ಕನ್ನಡ ಕಾವ್ಯ

ಅಡ್ಡದಾರಿ ಹಿಡಿಯುವಂತೆ ಮಾಡಿದ್ದೇ ನವ್ಯ ಕಾವ್ಯವೆನ್ನುವ ಅರ್ಥವನ್ನೊಳಗೊಂಡ ಕಮಲ ಹಂಪನಾ ಅವರ ಮಾತು....

೩

ನನ್ನ ಹುಟ್ಟನ್ನು ನನ್ನ ಆಯ್ಕೆಗೆ ಯಾರೂ ಬಿಟ್ಟಿರಲಿಲ್ಲ, ಅದರ ಬಗ್ಗೆ ನಾಚುವ ಕಾರಣವಿಲ್ಲ ಅನ್ನುವ ತೀರ್ಮಾನಕ್ಕೆ ಬಂದಿದ್ದ ಹಾಗೆ ನಾನು ೭೮ರಲ್ಲಿ "ಬಾಹ್ಮಣ ಹುಡುಗ" ಕವನ ಸಂಕಲವನ್ನು ಪ್ರಕಟಿಸಿ ದೇಶಕ್ಕೆ ಬಂದಿದ್ದೆನಾದರೂ, ಬಂದ ಮೇಲೆ ಜಾಣ ಬ್ರಾಹ್ಮಣ ಅಂತ ಬ್ರಾಹ್ಮಣರಲ್ಲದ ನನ್ನ ಸ್ನೇಹಿತರು ಕರೆದ ನೆನಪಿಲ್ಲ. ನನ್ನ ಜಾಣತನ ಹೋಗಿದ್ದರಿಂದ ಹಾಗೆ ಕರೆಯುತ್ತಿಲ್ಲವೇನೋ ಅನ್ನುವ ಅನುಮಾನ ನನ್ನನ್ನು ಆಗ ಈಗ ಬಾಧಿಸಿದೆ.

ದೇಶಕ್ಕೆ ಬಂದ ಮೇಲೆ ನಾನು ಮುಖ ತೋರಿಸದೇ ಹೋದ ಸಾಹಿತ್ಯಕ ಕೂಟಗಳು ಕೆಲವೇ ಕೆಲವು. ಸೆಮಿನಾರುಗಳಲ್ಲಿ ಕೃತಿಕಾರ ಎಷ್ಟೇ ದೊಡ್ಡವನಾಗಿರಲಿ. ಅವನ ಸ್ಥಾನಮಾನಗಳನ್ನು ಗಣನೆಗೆ ತೆಗೆದುಕೊಳ್ಳದೇ, ವಸ್ತು ನಿಷ್ಠೆಯಿಂದ, ನಿರ್ಭಿಡೆಯಾಗಿ, ಅವನ ಕೃತಿಗಳ ವಿಮರ್ಶೆಗೆ ನಮ್ಮ ಕೆಲವು ತರುಣ ವಿಮರ್ಶಕರು ತೊಡಗಿದ್ದನ್ನು ಕಂಡು ಸಂತೋಷ ಪಟ್ಟಿದ್ದೇನೆ. ನವ್ಯ ಸಾಹಿತ್ಯದ ಮೊದಲ ದಿನಗಳಲ್ಲಿ ಅದರ ಉದ್ದೇಶ. ಹೊಸ ತನಗಳ ಬಗ್ಗೆ ಧೈರ್ಯದ ಮಾತುಗಳನ್ನಾಡಿ ನವೋದಯ ಸಂಪ್ರದಾಯದ ಘಟಾನುಘಟಿಗಳನ್ನು ಎದುರಿಸಿದ ಅವೊತ್ತಿನ ವಿಮರ್ಶಕ ವೀರರು ಇವತ್ತು ಕೇವಲ ಔಪಚಾರಿಕ ಮಾತುಗಳನ್ನಾಡಿ, ಯಾರ ಮನಸ್ಸನ್ನೂ ನೋಯಿಸದೇ ಇರುವ ಕ್ಷೇಮದ ಜಾಡು ಹಿಡಿದದ್ದನ್ನು ಕಂಡು ಕೊರಗಿದ್ದೇನೆ. ಅರವತ್ತರಾಚೆಯ ಇವರ ಸಭ್ಯತನ ನನ್ನದಾಗದ ಹಾಗಾಗಲಿ ಅಂದುಕೊಂಡಿದ್ದೇನೆ. ಇಂಥವರ, ಸನ್ನಡತೆಗಿಂತ ನಮ್ಮ ತರುಣ ವಿಮರ್ಶಕರ ವಿಗ್ರಹಭಂಜಕ ಮನೋಭಾವದಿಂದ ಸೃಜನಶೀಲ ಲೇಖಕರು ಹೆಚ್ಚು ಕಲಿಯುವುದಿದೆ ಯೆಂದುಕೊಂಡು ಅವರ ಸಂಸಾರ ಬೆಳೆಯಲಿ ಅಂತ ಹರಸಿದ್ದೇನೆ.

ನಾನು ಗಮನಿಸಿರುವ ಇನ್ನೊಂದು ವಿಷಯ: ಯಾವನಾದರೂ ಪ್ರತಿಷ್ಠಿತ ಸಾಹಿತಿಯನ್ನು—ವೈಯಕ್ತಿಕವಾಗಲ್ಲ, ಅವನ ಕೃತಿಗಳನ್ನು—ಟೀಕಿಸಿದಾಗ ಸಿಟ್ಟು ಆ ಸಾಹಿತಿಗೆ ಬಂದಿರುವ ಸಂದರ್ಭಗಳು ಕಡಿಮೆ. ಸಿಟ್ಟು ಬಂದಿರುವುದು ಸಾಹಿತಿಯ ಚೇಲರಿಗೆ. ದೊರೆಯ ನಿಷ್ಠಾವಂತ ಭಟರಾಗಿ ಕೆಂಡಕಾರಿ ಮೈಮೇಲೆ ಹರಿಹಾಯುವವರು ಅವನ ಯೋಗ್ಯತೆಯಿಲ್ಲದ "ಮೂಲಕ ಮಹಾಶಯರು". ಇದು ಕನ್ನಡ ಸಾಹಿತ್ಯಕ್ಕೆ ಅಥವಾ ಈಚಿನ ದಿನಗಳಿಗೆ ಮಾತ್ರಾ ವಿಶಿಷ್ಟವಾದದ್ದಲ್ಲವೇನೋ. ಪುಟ್ಟಪ್ಪನವರು ತಟಸ್ಥರಾಗಿದ್ದರೂ, ಮುವ್ವತ್ತು ವರ್ಷಗಳ ಹಿಂದೆ, ಅವರ ಪರವಾಗಿ ಎದೆ ಸಟೆಸಿ ನಿಂತವರ ನೆನಪು ಮಾಡಿಕೊಂಡಾಗ, ದೇವರ ಹೆಸರಲ್ಲಿ ಇತಿಹಾಸದುದ್ದ ನಡೆದು ಬಂದಿರುವ ಹೋರಾಟಗಳೂ ನೆನಪಾಗುತ್ತವೆ.

೪

ನನ್ನ ಸಾಹಿತ್ಯಕವಾದ ಒಲವು ವಿಶೇಷವಾಗಿ ಕಾವ್ಯದತ್ತ ಹರಿಯುವವರಿಂದ ಇವೊತ್ತಿನ ಕನ್ನಡ ಕಾವ್ಯದ ಬಗ್ಗೆ ಮಾತಾಡುವ ಆಸೆಯನ್ನು ಹತ್ತಿಕ್ಕಲಾರೆ. ಕನ್ನಡದ

6

ನವೋದಯ ಆರಂಭವಾದಂದಿನಿಂದ ಕಂಡು ಬಂದ ಚಳವಳಿಗಳು ಪ್ರಧಾನವಾಗಿ ಮೂರು. ನವೋದಯ ಪ್ರಗತಿಶೀಲ ಹಾಗೂ ನವ್ಯ ಚಳವಳಿಗಳು. ಅವುಗಳ ಹಿಂದಿನ ಮನೋಧರ್ಮವನ್ನು ಪ್ರತಿನಿಧಿಸುವ ಕವಿಗಳು ಇವೊತ್ತಿನ ದಿನಗಳಲ್ಲಿಯೂ ಬರೆಯುತ್ತಿರುವುದು ಒಂದು ವಿಶೇಷ. ಬೇಂದ್ರೆ ಹಾಗೂ ಇತ್ತೀಚೆಗೆ ಮಾಸ್ತಿ ತೀರಿಕೊಂಡು, ಪುಟ್ಟಪ್ಪನವರು ಕಾವ್ಯರಚನೆಯನ್ನು ಬಿಟ್ಟುಕೊಟ್ಟಿದ್ದರೂ, ನಮ್ಮ ಮಧ್ಯೆ ಪು.ತಿ.ನ., ಮುಗಳಿ ಅಂತಹವರಿದ್ದಾರೆ, ಕವನಗಳನ್ನು ಬರೆಯುತ್ತಿದ್ದಾರೆ. ಜೊತೆಗೆ ನವೋದಯ ಮನೋಧರ್ಮದ ಪ್ರಭಾವ ಅಷ್ಟು ಸುಲಭವಾಗಿ ಮರೆಯಾಗುವಂತಹದಲ್ಲ ಅನ್ನುವುದನ್ನು ಸಾಬೀತುಪಡಿಸುವ ಹಾಗೆ, ಅದನ್ನು, ಕೊಂಚ ವ್ಯತ್ಯಾಸ ಮಾಡಿಕೊಂಡು, ಬರೆಯುತ್ತಿರುವ ವೆಂಕಟೇಶಮೂರ್ತಿ. ನವ್ಯಕಾವ್ಯದಲ್ಲಿ ಭಾವ ತೆರೆಮರೆಗೆ ಹೋಯಿತು, ಬುದ್ಧಿಯೊಂದೇ ರಂಗಮಧ್ಯದಲ್ಲಿ ರಾರಾಜಿಸಿತು ಅನ್ನುವ ಸ್ಫುರಣೆಯಿಂದ ಭಾವಲೋಕದ ಬಾಗಿಲನ್ನು ಮತ್ತೆ ತೆರೆಯುವ ಪ್ರಯತ್ನದಲ್ಲಿ ತೊಡಗಿರುವ ನಾಡಿಗ. ಮದುವೆಯಾಚೆಗೆ ಸಂಬಂಧವೊಂದನ್ನು ಕುದುರಿಸಿಕೊಂಡು, ಆ ಸಂಬಂಧದಿಂದ ಸುಖ ಪಡೆದರೂ ನೆನೆಗುದಿಗೆ ಸಿಕ್ಕಿ ಮನೆಗೆ ಬಂದಿರುವ ನರಸಿಂಹಸ್ವಾಮಿ.

ಎಲ್ಲಕ್ಕಿಂತ ಹೆಚ್ಚಾಗಿ, ಆ ಕಾಲದಲ್ಲಿದ್ದಂತೆ ಕಾವ್ಯಕ್ಕೂ ಸಂಗೀತಕ್ಕೂ ಅಂಟಿ ಬರುತ್ತಿರುವ ನಂಟು. ಕೆಸೆಟ್ಟುಗಳ ಕಟ್ಟಿಂದ ಉಕ್ಕುವ ಸುಗಮ ಸಂಗೀತ: ಚಂದ್ರ, ಮೋಡ, ಹೂವು, ಮುಳ್ಳು, ದೇಹ ಬೇಡದ ಸ್ನೇಹ, ಇತ್ಯಾದಿ. 'ಒತ್ತಕ್ಷರಗಳಿದ್ದರೆ ಹಾಡುವವರಿಗೆ ಕಷ್ಟ'ವೆಂದು ಹಗುರವಾಗಿರುವ ಮಾತುಗಳ ಹೆಣಿಗೆ, ಅಪ್ಯಾಯಮಾನವೆನ್ನಿಸುವ ಪ್ರಾಸಗಳು. ಲಕ್ಷ್ಮೀನಾರಾಯಣಭಟ್ಟ, ಲಕ್ಷ್ಮಣರಾವ್, ವೆಂಕಟೇಶಮೂರ್ತಿ, ವ್ಯಾಸರಾವ್, ದೊಡ್ಡರಂಗೇಗೌಡ, ಇತ್ತೀಚೆಗೆ ತಿರುಮಲೇಶ್....ದಾಸಪಂಥದ ದೊಡ್ಡ ಬಳಗವೇ ಇದೆ. ಸೀರಿಯಸ್ ಕವಿಗಳೆಂದುಕೊಂಡವರಿಗೆ ಈ ತರಹದ ರಚನೆಗಳನ್ನು ಬಿಟ್ಟುಕೊಡಲಾಗದ ಪರಿಸ್ಥಿತಿ. ಗಟ್ಟಿ ಧ್ವನಿಯಲ್ಲಿ ತಾವು ಬರೆಯುತ್ತಿರುವುದನ್ನು ಸಮರ್ಥಿಸಿಕೊಳ್ಳುವಾಗಲೂ ಒಳಗೊಳಗೇ ಅಳುಕು. ತಮ್ಮ ರಚನೆಗಳು ಹಾಡುಗಳು, ಕಾವ್ಯದ ಅಂಶಗಳಿದ್ದರೂ, ಅವನ್ನು ಕಾವ್ಯವೆಂದು ಪರಿಗಣಿಸಬೇಕಾಗಿಲ್ಲ, ಅನ್ನುವ ವಾದವನ್ನು ಭಟ್ಟರು ಮಂಡಿಸಿದರೆ, ನನ್ನದು ಮುಕ್ತಮನಸ್ಸು, ಎಲ್ಲ ವಸ್ತುಗಳಿಗೂ ಕಾವ್ಯದಲ್ಲಿ ಅವಕಾಶವಿರಬೇಕಾದಂತೆ ಎಲ್ಲ ಪ್ರಕಾರಗಳಿಗೂ ನಾನು ಒಡ್ಡಿಕೊಂಡಿದ್ದೇನೆ ಅನ್ನುವ ತಿರುಮಲೇಶರ ವಾದ.

ಈ ಕವಿಗಳು ತಮ್ಮ ಕೆಸೆಟ್ಟುಗಳ ಮೂಲಕ ಜನಪ್ರಿಯರಾಗಿದ್ದಾರೆ. ಜನಕ್ಕೆ ಕಾವ್ಯವನ್ನು ಕರೆದೊಯ್ಯುತ್ತಿದ್ದೇವೆ, ಜನ ನಿಧಾನವಾಗಿಯಾದರೂ ಸೀರಿಯಸ್ ಕಾವ್ಯದ ಕಡೆಗೆ ಬರುತ್ತಾರೆ ಅನ್ನುವ ಇವರ ಮಾತುಗಳು ರ್‍ಯಾಷನಲೈಸೇಷನ್ ಮಾದರಿಯವು. ಅಥವಾ ಇವರು ಕಾವ್ಯ ಎಂದೆಂದಿಗೂ ಮೈನಾರಿಟಿಗೆ ಹೇಳಿದ ಕಲಾಪ್ರಕಾರವೆಂದು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲದ ರೊಮ್ಯಾಂಟಿಕ್ ಜನ.

ಇವರ ಜೊತೆ ನಾನು ವಾದ ಮಾಡಿ ಸೋತಿದ್ದೇನೆ. ಸೀರಿಯಸ್ ಕವಿಯಾದವನು ಇಂಥ ರಚನೆಗಳಿಗೆ ಮನಸೋತಾಗ ಅವನ ಸೃಷ್ಟಿ ಪ್ರಕ್ರಿಯೆಯೇ ವಿಕೃತವಾಗುವ ಸಂಭವವಿದೆ ಅನ್ನುವುದು ನನ್ನ ನಂಬಿಕೆ. ನನ್ನ ನಿಲುವು ಸರಿಯಿಲ್ಲದೇ ಇರಬಹುದು.

ಆದರೂ, ಒಮ್ಮೆ ಇವರಲ್ಲೊಬ್ಬರು "ರಾಜಕುಮಾರ್ ಹಾಡಲೊಪ್ಪಿರುವ ಕೆಸೆಟ್ ಒಂದಕ್ಕೆ ನಿಮ್ಮದೊಂದು ಕವನ ಬೇಕು. ಇನ್ನೆರಡು ಮೂರು ದಿನಗಳಲ್ಲಿ ಬರೆದುಕೊಡಿ." ಅಂದಾಗ, ಗಳಿಗೆ ಮೋಹಗೊಂಡು, ಆಮೇಲಿನ ಎರಡು ದಿನಗಳವರೆಗೆ ಹೂವು, ಮೋಡ, ಹೆಣ್ಣು, ಕಣ್ಣು, ಚಂದ್ರರನ್ನು ಪ್ರಾಸಬದ್ಧವಾದ ಒತ್ತಕ್ಷರಗಳಿಲ್ಲದ ಚಂದ ಮಾತುಗಳಲ್ಲಿ ಬೆಸೆಯುವ ಸ್ವಭಾವವಿರುದ್ಧವಾದ ಕಾರ್ಯಕ್ಕೆ ತೊಡಗುವದರಲ್ಲಿದ್ದೆ ಅನ್ನುವುದು ನೆನಪಾದಾಗ ಗಾಬರಿಯಾಗುತ್ತದೆ.

ಇವೊತ್ತಿನ ಬಂಡಾಯ ಸಾಹಿತ್ಯಕ್ಕೂ ಆಗಿ ಹೋದ ಪ್ರಗತಿಶೀಲ ಸಾಹಿತ್ಯಕ್ಕೂ ಇರಬಹುದಾದ ವ್ಯತ್ಯಾಸ ನನಗಂತೂ ಸ್ಪಷ್ಟವಾಗಿಲ್ಲ. ಗದ್ಯದಲ್ಲಿ ಒಂದಿಷ್ಟು ಗಮನಾರ್ಹ ವಾದದ್ದನ್ನು ಸಾಧಿಸಿದ ಪ್ರಗತಿಶೀಲ ಸಾಹಿತ್ಯ ಚಳವಳಿ ಇವೊತ್ತು ನಾವು ಕೃತಜ್ಞತೆಯಿಂದ ನೆನೆಯಬಹುದಾದ ಒಬ್ಬ ಕವಿಯನ್ನೂ ಕೊಡಲಿಲ್ಲವೆನ್ನುವುದು ನನ್ನ ಪಾಲಿಗೆ ಅರ್ಥ ಪೂರ್ಣವೆನ್ನಿಸಿದೆ. ಇವೊತ್ತು ಬಂಡಾಯ ಕಾವ್ಯದ ಹೆಸರಿನಲ್ಲಿ ಬರುತ್ತಿರುವ ಕವನ ಗಳಲ್ಲಿರುವ ಸ್ಥಾಯೀ ಭಾವವೆಂದರೆ ಸಿಟ್ಟು. ಶೋಷಣೆಯ ಬಗ್ಗೆ ಆಕ್ರೋಶ. ಉತ್ತಮ ಕಾವ್ಯಕ್ಕೆ ಅಷ್ಟು ಸಾಲದು. ಎಲ್ಲಕ್ಕಿಂತ ಹೆಚ್ಚಾಗಿ, ರೋಷದ ಮಾತುಗಳಿಗೆ ಗದ್ಯ ಕೆಲಸಕ್ಕೆ ಬರುವಂತೆ ಪದ್ಯ ಬರಲಾರದು. ಎಲ್ಲಿಯವರೆಗೆ ಒಂದು ಸಾಹಿತ್ಯಪ್ರಕಾರ ಬದುಕನ್ನು ಆಂಶಿಕವಾಗಿ ನೋಡುತ್ತದೆಯೋ ಅಲ್ಲಿಯವರೆಗೆ ಅದು ಅದ್ಭುತವಾದದ್ದನ್ನು ಸಾಧಿಸ ಲಾರದು. ಬದುಕನ್ನು ಹೀಗೆ ನೋಡುವುದು ಅನುಭವದ ಸರಳೀಕರಣದಲ್ಲಿ ಪರ್ಯಾವ ಸಾನವಾಗುತ್ತದೆ. ಇದೂ ಒಂದು ತರಹದ ರೊಮ್ಯಾಂಟಿಸಿಸಮ್—ಬೆಳವಣಿಗೆ ಯಾವುದೋ ಒಂದು ಘಟ್ಟಕ್ಕೆ ಬಂದು ಸ್ಥಗಿತಗೊಂಡಿದ್ದರ ಸೂಚನೆ.

ನವ್ಯ ಕಾವ್ಯದ ಮೂಲ ಪುರುಷರಾದ ಅಡಿಗರು ಈಗಲೂ ಬರೆಯುತ್ತಿದ್ದಾರೆ. ಅವರ ಇತ್ತೀಚಿನ ಕವನಸಂಗ್ರಹಗಳು ನಮ್ಮ ನಿರೀಕ್ಷಣೆಯ ಆಚೆಗೆ ನಿಲ್ಲುವ ಸಾಮರ್ಥ್ಯ ವನ್ನು ಹೊರಗೆಡಹದೇ ಹೋದರೂ, ಮುಂದಾಸನದ ಮೇಲೆ ಕೂತು ಎತ್ತರದಿಂದ ಜನಕ್ಕೆ ಉಪದೇಶಾಮೃತಗಳನ್ನು ಹಂಚುವ ಅವರ ಚಟ ಬೇಸರ ತಂದರೂ, ಅನಿರೀಕ್ಷಿತ ವಾದದ್ದನ್ನು ಗುಂಡಿನಂತಹ ಮಾತುಗಳಲ್ಲಿ ಕೊಡಬಲ್ಲ ಅಡಿಗರ ಕಾವ್ಯಸೃಷ್ಟಿಗೆ ಮಂಗಳ ಹಾಡುವುದು ಉದ್ಧಟತನವಾದೀತು.

ಇನ್ನು, ನವ್ಯೋತ್ತರ ಕಾವ್ಯವೆನ್ನುವ ಹೆಸರಿನಲ್ಲಿ ಕೆಲವರು ಮಾಡುತ್ತಿರುವ ಪ್ರಯತ್ನ. ನವ್ಯಕಾವ್ಯದ ಕತೆ ಮುಗಿಯಿತೆಂದು ಒಪ್ಪಿಕೊಳ್ಳದ ನನಗೆ ಅದರಲ್ಲಿ ಅಂತಹ ವಿಶಿಷ್ಟವಾದದ್ದೇನೂ ಕಂಡಿಲ್ಲ. ಹೇಳುವುದಕ್ಕೆ ಯುಕ್ತವಾದ ಕ್ರಮವನ್ನು ಹುಡುಕ ಬೇಕಾಗಿಲ್ಲ, ತುರ್ತಿದ್ದಾಗ ತನ್ನದೇ ಆದ ಛಂದಸ್ಸನ್ನು ಕಟ್ಟಿಕೊಂಡು ಅದು ಬರುತ್ತದೆಂದು ನಂಬಿರುವ ನನಗೆ ಇವೊತ್ತು ಮತ್ತೆ ಕನ್ನಡ ಕಾವ್ಯಕ್ಕೇ ಭಾಮಿನೀ ಷಟ್ಪದಿಯನ್ನು ತರುವ ಅಗತ್ಯ ಕಾಣುವುದಿಲ್ಲ. ಕತೆ ಹೇಳುವುದು ನನ್ನ ಉದ್ದೇಶವಾದರೆ ಕಾವ್ಯವಾಗಿ ಹೇಳಬೇಕಾ ಗಿಲ್ಲ, ನಿಜವಾದೊಂದು ಕವನಕ್ಕೆ ಸಂಗೀತದ ಆಸರೆ ಬೇಡವೆಂದೇ ನಂಬಿರುವ ನನಗೆ ಈಚಿನ ಕೆಲವು ಕವಿಗಳು ಮಾಡುತ್ತಿರುವವರ ಅರ್ಥ ಹೊಳೆಯುತ್ತಿಲ್ಲ. ಇಷ್ಟಾದರೂ ವೆಂಕಟೇಶಮೂರ್ತಿ, ಲಕ್ಷ್ಮಣರಾವ್ ಹಾಗು ಇತರರ ಕೆಲವು ಕವನಗಳು ನನಗೆ ಖುಷಿ ಕೊಟ್ಟಿವೆ. ಶಿವಪ್ರಕಾಶ್ ಏನಂಥದನ್ನೋ ಹೊಸದನ್ನು ಸಾಧಿಸಹೊರಟಿದ್ದಾರೆ ಅನ್ನಿಸಿದೆ.

ಈಚೆಗೆ ಕಣ್ಣಿಗೆ ಬಿದ್ದ ಸ. ರಘುನಾಥರ ಹಾಗೂ ವಿಜಯರಾಘವನ್ ಅವರ ಕೆಲವು ಕವನಗಳಲ್ಲಿನ ನಿಗೂಢತೆ ಕಾವ್ಯ ತನ್ನ ನವ್ಯಕಾವ್ಯದ ದಿನಗಳ ಸಂಕೀರ್ಣತೆಯನ್ನು ಬಿಟ್ಟುಕೊಡುತ್ತಿಲ್ಲವಲ್ಲ ಅನ್ನುವ ಸಮಾಧಾನ ತಂದಿದೆ.

ಈ ಮೂರು ವರ್ಷಗಳಲ್ಲಿ ಭಾರತದ ಎಲ್ಲ ಭಾಷೆಗಳಿಗೂ ಸಂಬಂಧಪಟ್ಟ ಸೆಮಿನಾರು ಗಳಲ್ಲಿ ಭಾಗವಹಿಸಿದಾಗ ಅನ್ನಿಸಿದ್ದು : ಕನ್ನಡ ಸಾಹಿತ್ಯ—ಎಲ್ಲ ಪ್ರಕಾರಗಳೂ ಸೇರಿದ ಹಾಗೆ—ಇವತ್ತು ಶ್ರೀಮಂತವಾಗಿದೆ. ನಾಚುವ ಬದಲು ತಲೆಯೆತ್ತಿ ನಡೆಯುವಷ್ಟು ಗುಣ ಪಡೆದಿದೆ.

೫

ನನ್ನ ಸಾಹಿತ್ಯ ವ್ಯವಸಾಯದಿಂದ ಆರಂಭವಾದ ಪ್ರಬಂಧ ನನ್ನ ಬಗೆಗಿನ ಮಾತುಗಳಿಂದಲೇ ಮುಗಿಯಬೇಕೇನೋ.

ಅನ್ನಿಸಿದ್ದನ್ನು ದಾಕ್ಷಿಣ್ಯವಿಲ್ಲದ ಹಾಗೆ ಹೇಳಬೇಕೆನ್ನುವ ಛಲ ತೊಟ್ಟು ಬಂದ ನಾನು ಆಡಿದ ಮಾತುಗಳು ಹಲವರಿಗೆ ಹಿಡಿಸಿಲ್ಲ. ನನಗೆ ಯಾವ ವ್ಯಕ್ತಿಯ ಬಗ್ಗೆಗೂ ದ್ವೇಷವಿಲ್ಲ, ಸಾಹಿತ್ಯಕವಾದ ನನ್ನ ನಿಲುವಿನಲ್ಲಿ ಜಾತಿ, ಮತಗಳಂತಹ ಕ್ಷುದ್ರ ಲೆಕ್ಕಾಚಾರ ಪಾತ್ರ ವಹಿಸಿಲ್ಲವೆಂದುಕೊಂಡಿದ್ದೇನೆ. ನನ್ನ ಸ್ನೇಹಿತರಾದ ಕೆಲವು ಸಾಹಿತಿಗಳು ತುಂಬ "ಸೆನ್ಸಿಟಿವ್" ಆಗಿ, ಅವರ ಕೃತಿಗಳ ಬಗ್ಗೆ ಬೇರೆಯವರು ಆಡಿದ್ದನ್ನು ಅವರ ಇಡೀ ಬದುಕಿನ ಬಗ್ಗೆ ಮಾಡಿದ ಮೌಲ್ಯಮಾಪನವೇನೋ ಅನ್ನುವಂತೆ ಪರಿಗಣಿಸಿ, ಒಬ್ಬರು ಇನ್ನೊಬ್ಬರಿಂದ ದೂರವಾಗುವದನ್ನು ಕಂಡು ಕೊರಗಿದ್ದೇನೆ. ಕವಿ ಕವನವೊಂದನ್ನು ಬರೆದು ಪ್ರಕಟಿಸಿದ ಮೇಲೆ ಅದಕ್ಕೆ ಅದರದೇ ಅಸ್ತಿತ್ವ ಪ್ರಾಪ್ತವಾಗುತ್ತದೆ. ನಾವು ಹುಟ್ಟಿಸಿ ಬೆಳೆಸಿದ ಮಕ್ಕಳ ಹಾಗೆ. ಅವರ ಸಮರ್ಥನೆಯನ್ನು ತಂದೆಯಾದವನು ಸದಾ ಮಾಡುವ ಅಗತ್ಯವಿರಬಾರದು.

ಪರಿಷತ್ತಿನಂತಹ ಸಂಸ್ಥೆಗಳ ಅವ್ಯವಹಾರಗಳು, ವೈಯಕ್ತಿಕ ರಾಗ ದ್ವೇಷಗಳ ಮೇಲೆ ಆಧಾರಿತವಾದ ವಿಮರ್ಶೆ, ಅಡಿಗರ "ಏನಾದರೂ ಮಾಡುತಿರು, ತಮ್ಮ" ಕವನವನ್ನು ಉದ್ದೇಶಪೂರ್ವಕವಾಗಿ ಅಪಾರ್ಥಮಾಡಿಕೊಂಡು ಕವಿ ಕ್ರೌರ್ಯವನ್ನು ಪ್ರತಿಪಾದಿಸುತ್ತಿದ್ದಾನೆಂದು ಬರೆದ ಪೋಲಂಕಿಯ ಮಾತುಗಳು, ಕನ್ನಡ, ಇಂಗ್ಲಿಷ್ "ಚಂದನ"ದ ಪುಟಪುಟಗಳಿಂದ ಎದ್ದು ನಿಲ್ಲುವ ನಿಸಾರ್ ಅಹಮದರ ಮುಖ. ಕೆಲವೊಮ್ಮೆ ಅಕಾರಣವಾಗಿಯಾದರೂ ಒಬ್ಬನ ನಡತೆಯ ಬಗ್ಗೆ ಬರೆಯುವಾಗ ಲಂಕೇಶ್ ಪತ್ರಿಕೆ ತಂದು ತುರುಕುವ "ಬ್ರಾಹ್ಮಣ" ಪದ, ಪರಸ್ಪರ ಬೆನ್ನು ತಟ್ಟಿ ಸಮಾಧಾನ ಪಟ್ಟುಕೊಳ್ಳುವ ಕೆಲವರ ರೀತಿ, ಕನ್ನಡಕ್ಕೆ ಗಜಲ್ ತಂದದ್ದು ನಾನು ಅನ್ನುವ ಲಕ್ಷ್ಮೀನಾರಾಯಣಭಟ್ಟ ಹಾಗೂ ಲಕ್ಷ್ಮಣರಾಯರ ಪೇಟೆಂಟಿಯ ಜಗಳ, ಕರ್ನಾಟಕ ಸ್ವತಂತ್ರ ರಾಜ್ಯವಾಗಬೇಕೆಂಬ ಚಿದಾನಂದಮೂರ್ತಿ ಅವರ ಹುಚ್ಚು ಮಾತು....

ಇವೆಲ್ಲದರ ಮಧ್ಯೆ ಬರೆಯುತ್ತಲೇ ಹೋಗಬೇಕು. ನಮಗೆ ನಾವೇ ಮೋಸ ಮಾಡಿಕೊಳ್ಳದ ಹಾಗೆ, ನಾವು ಆರಿಸಿಕೊಂಡ ಸಾಹಿತ್ಯ ಪ್ರಕಾರಕ್ಕೆ ಮೋಸ ಮಾಡದ ಹಾಗೆ, ಬದುಕಿಗೆ ಬರಹ ಅನಿವಾರ್ಯವೆನ್ನುವ ಹಾಗೆ, ಬರೆಯುತ್ತಲೇ ಹೋಗಬೇಕು.

ಐದು ಕವನಗಳು

ಡಾ|| ಬಿ. ಸಿ. ರಾಮಚಂದ್ರ ಶರ್ಮ

ಸಂಜೆ ಕಂಡ ಸ್ವಾಲೋ ಹಕ್ಕಿಗೆ

ಗುಟ್ಟು ಮುಚ್ಚಿಟ್ಟು ಮತ್ತೆ ಇಷ್ಟೇ ಇಷ್ಟು
ಮುಷ್ಟಿ ಸಡಲಿಸಿ ಕ್ಷಣದಿಣುಕನಷ್ಟನ್ನೇ
ಕರುಣಿಸಿ ಕಣ್ಣು ಚುಡಾಯಿಸುವ ಕೈಯಿ-
ಸೀಸಬೂದಿನ ಮೋಡವೊಟ್ಟಿದ ಸಂಜೆ ಆಕಾಶಕ್ಕೆ
ಗಕ್ಕನೆ ಬಂದು ಪ್ರತ್ಯಕ್ಷವಾದೊಂದು ಚಿಕ್ಕೆ,
ಚುಕ್ಕಿ ಹಕ್ಕಿ ಮೈಯಿ.

ಇಕ್ಕೆಲದ ರೆಕ್ಕೆಗಳ ವಿರಸವಿಲ್ಲದೆ ಬಡಿದು
ನಡುವಿನಕ್ಕರೆಯ ಪ್ರಾಣ
ಕ್ಷಣದಿಂದ ಕ್ಷಣಕ್ಕೆ ನಿಲ್ದಾಣದಿಂದ ನಿಲ್ದಾಣಕ್ಕೆ
ತೇಲುವ ಹಾಗೆ ಯಾನಯೋಗವ ಕೊಡುವ ನಿಗೂಢವೆ,
ಮೆಡಿಟರೇನಿಯನ್ನಿನ ಬೆಚ್ಚನೆಯ ನೀಲಿ
ಹರಡಿ ಕರೆಯುವ ಮೊದಲು ಲೆಬನನ್ನಲ್ಲಿ
ಮರಳ ಮಕ್ಕಳ ಗುಂಡು ಹಾರಿಸುವ ತಾಲೀಮಕ್ಕೆ
ಗುರಿ ಹಲಗೆಯಾದರೂ ಉಳಿದು ಬಾಳುವ ಪವಾಡವೇ.

ಹುಟ್ಟೂರ ಮುಟ್ಟಿ ಗೂಡು ಕಟ್ಟಿದರೇನೆ
ಪುನರುತ್ಥಾನವೆನ್ನುವ ಸತ್ಯ
ಸಾರುವ ಪ್ರವಾದಿ ಬಾನಾಡಿಯೇ,
ನಿರಾಕಾರ ನೀಲಿ ಸಾಕಾರವಾಗುವ ಹಾಗೆ
ಹತ್ತು ಚಿತ್ತಾರಗಳ ಬಿಡಿಸಿ
ಮುಂದೆ ಸಾಗುವ ಬಹುರೂಪಿ ಅಣುರೂಪಿ ಮೋಡವೇ.

ನಿಲ್ಲು, ಆರೆಗಳಿಗೆ ನಿಲ್ಲು
ಎದೆಯೊಳಗೆ
ನಿಂತು ನನ್ನೆದೆಗೆ ಮಾತಾಡು,
ಚಿಂವ್ ಚಿಂವ್‌ಗುಡು.

ಮಸಿ ಚೆಲ್ಲಿ ಚಿತ್ತಾದ ನೆನ್ನೆಗಳ
ಇನ್ನು ಬರೆಯದ ಹಾಳೆ ನಾಳೆಗಳ
ವಿಷಮ ರೆಕ್ಕೆಗಳ ಬಡಿದು ಕುಪ್ಪಳಿಸಿ
ಮುಕ್ಕಾದಂತೆ ಜೀವ. ಆಕಾಶಕ್ಕೆ ಕೈಯೆತ್ತಿ
ಅಂಗಲಾಚುವ ಹಾಗೆ ತೆಂಗಿನ ಸಾಲು,
ಗರಿಯಾಗದೇ ಹೋದ ಗರಿಕಾರಂಜಿಯಲ್ಲಿ
ನೆಟ್ಟಿರುವ ಕಣ್ಣು:
ಬಿಟ್ಟುಗೊಡದಂತೆ ಗಟ್ಟಿ ಮಣ್ಣು.

ಇನ್ನೇನು,
ಬೂದು ಕಪ್ಪಾಗಿ ಕಪ್ಪು ಹೆಪ್ಪಾಗುವುದು ರಾತ್ರಿ,
ಎರಗುವುದು ರಾತ್ರಿ—
ಹಕ್ಕಿ ಚಂದ್ರ ನಕ್ಷತ್ರಗಳ ಕಬಳಿಸುವ
ಮೋಡಗಳ ರಾತ್ರಿ,
ಅಂಗಾತ ಮಲಗಿ ಅಂಗಲಾಚುವ ನೆಲದ
ಬಸಿರ ಬಗೆಯುವ ರಾತ್ರಿ,

ಅಮ್ಮ

ಲಂಡನ್ನಿಂದ ಬೊಂಬಾಯಿನವರೆಗೆ
ರಾತ್ರಿಯುದ್ದ ವಿಮಾನದಲ್ಲಿ ಪ್ರಯಾಣ,
ತಲೆಗೆ ಎಂದಿನ ಸೀರೆ ಗಂಟಿರದೆ
ನಿನಗೋ ನಿದ್ದೆ ಬಂದಿರಲಿಲ್ಲ ಬಡಪೆಟ್ಟಿಗೆ.
ವಿಪುಲ ಸೊಂಟಕ್ಕೆ ಪಟ್ಟಿ ಕಟ್ಟಿ
ಮುಂಜಾವಿಗೆ ಕಾದು ಕೂತವಳ ದೃಷ್ಟಿ
ಶೂನ್ಯ. ತಾಳ್ಮೆ ಮೈವೆತ್ತ ನಿನ್ನ
ಮುಖದಲ್ಲಿ ತಾಳಿ ಬಾಳಿದ ನಮ್ಮ ನೆಲದ ಗುಣ
ಯತೇಚ್ಛ. ಸಹನೆ
ಹೆಣ್ಣು ತಾನೇ?

ಮಗ್ಗುಲಿಗಿದ್ದ ದಂದರಹಾಳಿ ನನ್ನ
ತಲೆ ತುಂಬ ತಲ್ಲಣ.
ಚೆಂಡಂತೆ ಪುಟಿಯುತ್ತ ಮೇಲೆದ್ದು ಬಂದು
ಕಾಡಿದನುಮಾನಗಳ ನಿಯಂತ್ರಣಕ್ಕೆ
ಒಂದಾದ ಮೇಲೊಂದು
ವಿಸ್ಕಿ. ಅಗ್ರಹಾರದ ನಮ್ಮ ಮನೆ
ಬಾಗಿಲಿಗೆ ನೀನು ಇಳಿಬಿಟ್ಟಿದ್ದ ತೋರಣದ ಹಾಗೆ
ಮುಂಜಾವಿನ ಮಂಜಲ್ಲಿ ಊರ ಸಾವಿರ ದೀಪ ಮಿಣಮಿಣನೆ
ಹೊಳೆದಾಗ, ನೆಲವೆದ್ದು ಬರಸೆಳೆದುಕೊಂಡಾಗ,
ನನ್ನ ಕುಡಿತದ ಬಗ್ಗೆ ನಿನ್ನ ಪ್ರಶ್ನೆ.

ಸದಾ ಮಗನ ಯೋಗಕ್ಷೇಮದ ಚಿಂತೆ. ಹೆತ್ತ
ಕರುಳ ವ್ಯಾಕುಲ ಚುಚ್ಚಿ ಎದೆ ತುಂಬಿ ನಿಂತ
ಕೃತಜ್ಞತೆಗೆ ಮಾತು ಸಿದ್ಧವಾಗುವ ಮೊದಲೆ
ನಿನ್ನ ಗೊಣಗು : ಗುಟುಕಿಗೊಂದು ರೂಪಾಯಿ, ಹತ್ತ
ದುಬಾರಿ. ದುಡ್ಡಂದರೇನು ? ನೆಲ ಕೊಟ್ಟ
ಪುಕಸಟ್ಟೆ ಫಸಲೇ ?

ಕೇಳಬೇಡವೇ ಹುಡಗಿ ಕೇಳಬೇಡ

ಕೇಳಬೇಡವೇ ಹುಡುಗಿ ಕೇಳಬೇಡ
ನೋಡಬೇಡವೇ ಹುಡುಗಿ ನೋಡಬೇಡ

ಎಲ್ಲಿ ಹೋಗಿದ್ದೆ ಎಲ್ಲಿಂದ ಬಂದೆ—
ಕೇಳಬೇಡವೇ ನೀನು ಕೇಳಬೇಡ
ಮಾತಿನಾಚೆ ಬೆಳಕಿರಲೆಬೇಕೆಂದು
ಕಣ್ಣಲ್ಲಿ ಕಣ್ಣಟ್ಟು ಹುಡುಕಬೇಡ
ನೋಡಬೇಡವೇ ಹುಡುಗಿ ನೋಡಬೇಡ

ಒಲವು ಚೆಲುವಲ್ಲಿ ಕರಗಿ ಸಾಗರದ
ಕಡೆಗೆ ಹರಿದೊಂದು ಕನಸ ಹಿಂದೆ
ಎಲ್ಲ ಮಕ್ಕಳಿಗೆ ಎಲ್ಲ ಬೊಂಬೆಗಳು
ಸಿಕ್ಕ ಹೊಂಗನಸ ಬೆನ್ನಟ್ಟಿ ಹೋದೆ.
ಕೇಳಬೇಡವೇ ಹುಡುಗಿ ಕೇಳಬೇಡ.

ಹೂದೋಟದಲ್ಲಿ ಬೀಸಿ ದಳಗಳನು
ಬಿಡಿಸಿ ನಿನಗಾಗಿ ಹುಡುಕಾಡಿದೆ.
ಅರೆಬಿರಿದ ಹೂವ ನವುರು ಕಂಪಾಗಿ
ಪ್ರೀತಿ ಮಾತುಗಳ ಪಿಸುಗುಟ್ಟಿದೆ
ಕೇಳಬೇಡವೇ ಹುಡುಗಿ ಕೇಳಬೇಡ.

ಮನೆ ಬಿಟ್ಟು ತೆರಳಿ ಮುದುಳಾದ ಗಾಳಿ
ನಿಟ್ಟುಸಿರ ಬಿಟ್ಟು ಹಿಂದಿರುಗಿದೆ.
ದಳ ಬಿದ್ದು ಸದ್ದು ಸುಳಿಯಾದ ಸುಯಿಲು—
ನೆಲೆಯಿರದ ಪ್ರೀತಿ ಹೊರಳಾಡಿದೆ.
ನೋಡಬೇಡವೇ ಹುಡುಗಿ ನೋಡಬೇಡ.

ಕನಸ ಕಳಕೊಂಡು ಸೋತು ಬಂದವನ
ಎದೆಗಾತು ನಿಲ್ಲು ತಣ್ಣಗೊರಗು.
ನೆನ್ನೆ ನೆನಪಿರಲಿ ನಾಳೆ ಕನಸಿರಲಿ
ಈ ಗಳಿಗೆಯಲ್ಲಿ ಕರಗಿಹೋಗು.

ಕೇಳಬೇಡವೇ ಹುಡುಗಿ ಕೇಳಬೇಡ
ನೋಡಬೇಡವೇ ಹುಡುಗಿ ನೋಡಬೇಡ.

ಈಚಿನ ಒಂದು ರಾತ್ರಿ

೧

ಗಾಳಿ ಬೀಸದೇ ತಟಸ್ಥ ನಿಂತ ಖಾಲಿ
ಖಾಲಿ ಮನಸ್ಸಲ್ಲಿ
ಅಲ್ಲೊಂದು ಇಲ್ಲೊಂದು ಅಬ್ಬೇಪಾರಿ ಮೋಡ.
ದೂರ ಊರಾಚೆಗಿರುವ ಕಾಡು ಗಿಡ
ಗೂಡು ಕೆರೆದಂತಾಗಿ ಗಕ್ಕನೆದ್ದು ತಬ್ಬಿಬ್ಬಾಗಿ ಕಾಗೆ
ನೇರ ಹಾರಿ ಮುಖಕ್ಕೆ ಬಡಿದರೂ ಆಕಾಶ ನಿರ್ವಿಕಾರ—
ಚಂದ್ರ ಕಣ್ಣಿಲ್ಲ; ಅದೊಂದು
ಒಡೆದ ಗಾಜಿನ ಗೋಲಿ.
ಹತ್ತ ಹತ್ತಿರದ ಕೂಸಿನಂತ್ಯ ಸಂಸ್ಕಾರಕ್ಕೆ ಬಂದು
ತಲೆ ತಗ್ಗಿಸಿದ ಎತ್ತರದ ಗಂಡಸರ ಹಾಗೆ
ಮನೆಮನೆಯ ತೆಂಗಿನ ಮರ.

೨

ಕಂಡಂತಾಗಿ ಕಂಪದ್ದು ಖಚಿತವಾಗುವ ಮೊದಲೆ
ಹರಿದು ಹರಡಿದ ಹಾಗೆ ಬೆಳುದಿಂಗಳು.
ಹಾಡು ಹಗಲಲ್ಲಿ ಕಾಡಿದ್ದ ಮೂರು ಮಾಟಗಾತಿಯರೀಗ
ಬಾವುಲಿಗಳಾಗಿ ಹಾರಿ ಕುಪ್ಪಳಿಸುವುದು ನೆರಳು.

ನಕ್ಷತ್ರವಲ್ಲ, ಆಕಾಶ ಹತ್ತಿಕ್ಕಿದಳಲು,
ಬೀಳದೇ ಹೊಳೆಹೊಳೆವ ಕಣ್ಣೀರ ತೊಟ್ಟು.
ಮಗುವಿನದು, ಇಲ್ಲ, ಮಗುವಂಥ ಕನಸಿನ ಕಣ್ಣ
ಯಾರು ಕಿತ್ತರೋ, ನಕ್ಷತ್ರ ಕಳಚಿ ಕೆಳಗೆ ಬಿತ್ತು.

ತಾನೆ ತಾನಾದ ತಾನೆ ಬಾನಾದ ಚಿಕ್ಕೆ ನೆಲ ಜಗ್ಗಿ
ಒಲವುಕ್ಕಿ ಮುಳುಗಲಿಲ್ಲ.
ಎದೆ ಹೊಕ್ಕು ಬಾಣ ಮುಕ್ಕಾದ ಪ್ರಾಣ—
ಬಿದ್ದಾಗ ನೆಲ ಅಲುಗಲಿಲ್ಲ.

ನೆನಪಾಗುವುದು ಯುಗದಾದಿ ಚೇತನದ
ಪ್ರೀತಿ ಪಾಲನೆಗೆ ಬಾಹಿರನಾದ ನನ್ನ ಪತನ.
ನೆನಪಾಗುವುದು ನನ್ನನ್ನು ಅಸ್ತಿತ್ವರಕ್ಕೆತ್ತಿ ಕೈಬಿಟ್ಟ
ಅಹಂಕಾರ—ಯಾವ ಪುರುಷಾರ್ಥಕ್ಕೆ ಮಂತ್ರಪಠಣ?

ತ್ರೊಳಸು ಬಳಸಿನ ಜಾಡು, ದಾರಿ ಬೆಳಗದ ತಾರೆ,
ಎಂಥ ಹುಟ್ಟಿನ ಕಡೆಗೆ ಇಂಥ ಪಯಣ?
ನಿಧಾನ ನಿಧಾನ ಕರಗಿದಂತಃಕರಣದಂತೆಯೇ
ಕ್ಷಯಿಸಿ ಕ್ಷಯವಾದ ಕೊರ್ಧನ.

೩

ಹಠಾತ್ತನೆ,
ಎಣ್ಣೆಗಾಣದ ಗೇಟೊಂದು ತೆರೆದು
ಮೇಲೆದ್ದು ಕೀರಲು ಸದ್ದು,
ಚ್ಯುತಿ ಬಂತು ಮೌನಕ್ಕೆ, ಗತಿ ಬಂತು
ನಿಶ್ಚಲ ನಿಂತ ಜಗತ್ತಿಗೆ.
ಹೆಣ್ಣೊಂದು ಹೊರಬಂದು
ನಗರಸಭೆ ಎಂದೋ ನೆಟ್ಟು
ಮರೆತ ಅನಾಥ ಸಾಲು ಮರಕ್ಕೆ

ನೀರೆರೆದಾಗ, ತೆಂಗು ತಲೆಯೆತ್ತಿ ಗರಿ ಮಿನುಗಿದಾಗ
ಕಣ್ಣು ಹೊಡೆಯಿತು ಚಿಕ್ಕೆ.
ಗಾಳಿ ತೆಳ್ಳಗೆ ಬೀಸಿ, ಎಲ್ಲೋ ಒಂದು ಮಗುವತ್ತು,
ಪಿಸು ಮಾತಾಡಿದೆಲೆ ಕಿಸಕ್ಕನೆ ನಕ್ಕು,
ಹರಿದು ಹಂಚಿ ಹೋಗಿದ್ದ ಮೋಡದ ತುಣುಕು
ಇನ್ನೊಂದರತ್ತ ತೆವಳಿದಂತೆ—
ದಬ್ಬಾಳಿಕೆಯ ವಿರುದ್ಧ ಒಗ್ಗಟ್ಟಾದ
ವಿರೋಧಪಕ್ಷಗಳಂತೆ,
ಆಕಾಶದಲ್ಲಿ ನೆರೆದ ಸಂತೆ.

ಮಗು, ಹೆಣ್ಣು, ತೆಂಗು, ನಕ್ಷತ್ರಗಳನ್ನಷ್ಟು
ನನ್ನೊಡಲ ಒಳಗಿಟ್ಟು
ಕಾಯುತ್ತೇನೆ, ಕಾಯುತ್ತೇನೆ,
ಅಂಗುಲಂಗುಲವಾಗಿ ಸಾಯುತ್ತಲೇ ಕಾಯುತ್ತೇನೆ
ಆ ಮೊದಲ ಬೆಳಕಿಗೆ,
ಜಡ ಕತ್ತಲನ್ನೆಂದು ಹಿಡಿದು ಝಾಡಿಸಿದ ಆ ಚಳುಕಿಗೆ.

ಪ್ರಭು

ಮೊದಲಿಗೂ ಮೊದಲು ಪ್ರಭು ನಾನು ಸೃಷ್ಟಿಸಿದೆರಡು
ಜಗತ್ತುಗಳ ಗಡಿಯಲ್ಲಿ ಸೆರೆಯಾಳು ಚಿತ್ತ.
ನೆತ್ತಿಗೆ ನಾಕ ; ತಲಾತಲದ ಮೋರೆಗೆ ಕಪ್ಪು:
ಲೋಕ ನಿರಾಕಾರ ; ಶೂನ್ಯ ಸುತ್ತ.

ಕರಿ ನೀರ ಮೇಲೆ ಚೇತನವಾಡಿ ಬೆಳಕಿರಲಿ
ಎಂದಾಗ ಸಣ್ಣಗುರಿದಿತ್ತೊಂದು ಸೊಡರು.
ಕಣ್ಣು ತಂಪಾದರೂ ಒಳಗೆ ಜಿಗಿಯುವ ನೆರಳು—
ಬೆಳಕು ಕತ್ತಲು ಕೊಡುವ ಕೊಸರು.

ಎರಡನೆಯ ದಿನ ನೀರೊಡೆದು ಎರಡಾದಂತೆ
ಪದರಗಳ ನಡುವೆ ಹಾಸಿತ್ತು ಬಾಂದಳ.
ಶಾಂತ ಸಾಗರ ಮೇಲೆ, ಅಲ್ಲೋಲಕಲ್ಲೋಲ
ತಳಕ್ಕೆ, ನೀರು ಕುದ್ದಂತೆ ತಳಮಳ.

ಜಲ ಕಲೆತು ಕಡಲಾಗಿ ಉಳಿದದ್ದು ನೆಲವಾಗಿ
ಹತ್ತು ಕಡೆ ತಲೆಯೆತ್ತಿ ನಕ್ಕ ಹುಲ್ಲಿನೆಸಳು.
ನೆನ್ನೆ ನಾಳೆಗಳನ್ನು ತನ್ನೊಳಗೆ ಒಳಗೊಂಡ
ಗಿಡವೆದ್ದು ನಿಲ್ಲುವ ಮೊದಲ ಮೂರನೆಯ ಇರುಳು.

ಬೇರಿನೊತ್ತಾಯವಷ್ಟೇ ಸಾಕೆ ಗಿಡಕ್ಕೆ?
ನಾಲ್ಕನೆಯ ಹಗಲು ರವಿ ಕಣ್ಣು ತೆರೆದ.
ಜಾಣ ತರ್ಕ ಕುತರ್ಕವಾಗದ ಹಾಗೆ ಚಂದ್ರ
ಎರಡನೇ ಕಣ್ಣಾಗಿ ಪ್ರೀತಿ ಸುರಿದ.

ಮೂರನೆಯ ಮುಂಜಾವು ಹರಿದಿತ್ತು ಬಹುರೂಪಿ
ಪ್ರಾಣ: ನೀರಲ್ಲಿ ಮೀನು, ಬಾನಲ್ಲಿ ಹಕ್ಕಿ;
ಹುಳ ಹಾವು ನೆಲಕ್ಕೆ, ನೊಲೆ ತಿಮಿಂಗಲಕ್ಕೆ—
ಎಲ್ಲಕ್ಕು ಎಡೆಯಾಯ್ತು ಪ್ರೀತಿಯುಕ್ಕಿ.

ಆರನೆಯ ದಿನ ಕವನಮಧ್ಯಕ್ಕೆ ನನ್ನದೇ
ಪ್ರತಿರೂಪವೊಂದಿಟ್ಟು ಪರಾಂಬರಿಸಿದೆ.
ಸುದೂರ ನಿಂತ್ಕೆ; ನೆಮ್ಮದಿಯೆನಿಸಿ ನಿನ್ನ ಸಂತತಿ
ಬೆಳೆದು ನೂರಾಗಲೆಂದೆ, ಹರಸಿದೆ.

ತುಂಬ ದಣಿವಾಗಿತ್ತು; ತಣಿದಿರಲು ನನ್ನೆದೆ
ಏಳನೆಯ ಹಗಲಿಡೀ ನಿದ್ದೆ ಹೋದೆ.

ನಮ್ರತೆಯೂ ಅಹಿಂಸೆಯ ಒಂದು ಅಂಗ.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

೯. ಹಿಂದೋಳ ಲೀಲೆ

ಹಿಂದೋಳ ಎಂದರೆ ಉಯ್ಯಾಲೆ. ಕನ್ನಡ ಪದವನ್ನೇ ಬಳಸಬಹುದಾಗಿತ್ತು. ಆದರೆ ಹಿಂದೋಳ ನನಗೆ ಪ್ರಿಯವಾದ ರಾಗವೊಂದರ ಹೆಸರು ; ಆದ್ದರಿಂದ ಆ ಪದ ಮೊದಲು ನೆನಪಿಗೆ ಬಂತು. ಪೂರ್ವ ಪಶ್ಚಿಮಗಳ, ನಂಬಿಕೆ ಅಪನಂಬಿಕೆಗಳ, ಸಂಪ್ರದಾಯ ಸಂಶಯಗಳ ನಡುವೆ ಉಯ್ಯಾಲೆ ಆಡುತ್ತಿರುವವನ ಚಿತ್ತವೃತ್ತಿ, ಇಲ್ಲಿ ನಾನು ಚಿತ್ರಿಸಹೊರಟಿರುವುದು. ಈಗ ಉಯ್ಯಾಲೆ ಆಡ ಹೊರಟರೆ ನನಗೆ ತಲೆಸುತ್ತು ಬರುತ್ತದೆ. ಆಗ, ನಾನು ಯೌವನಕ್ಕೆ ಕಾಲಿಡುತ್ತಿದ್ದ ಕಾಲದಲ್ಲಿ, ಉಯ್ಯಾಲೆ—ಮಾನಸಿಕ ಉಯ್ಯಾಲೆ ಕೂಡ—ಹಿತವಾಗಿಯೇ ಇತ್ತು. ಹಿಂದೋಳ ರಾಗ ಮಂದ್ರದಿಂದ ತಾರಕ್ಕೆ, ತಾರದಿಂದ ಮಂದ್ರಕ್ಕೆ ಏರುವಾಗ ಇಳಿಯುವಾಗ ಕಂಠ ಸ್ವರದ ಬಾಗುಬಳುಕುಗಳು—ಬಳುಕಿಗಿಂತ ಹೆಚ್ಚಾಗಿ ಬಾಗು!—ಯಾವ ಆನಂದವನ್ನು ಕೊಡುತ್ತದೆಯೋ ಅದೇ ಆನಂದವನ್ನು ನನ್ನ ಮನಸ್ಸಿನ ತೂಗಾಟ ನನಗೆ ಕೊಟ್ಟಿತು. ಅದು 'ತಳಮಳ' ಎನ್ನಿಸಲಿಲ್ಲ. ಮನಸ್ಸಿನ ಚಟುವಟಿಕೆ ಉಲ್ಲಾಸವಾಗಿ ಪರಿಣಮಿಸುತ್ತದೆ.

ನಾನು ಮೈಸೂರಿಗೆ ಬಂದು ಸ್ಕೂಲಿಗೆ ಸೇರಿದ್ದು ೧೯೧೩ರಲ್ಲಿ; ನಮ್ಮ ಸಂಸಾರವೆಲ್ಲ ಮೈಸೂರಿನಲ್ಲಿ ನೆಲಸಿದ್ದು ೧೯೧೬ರಲ್ಲಿ ಎಂದು ನೆನಪು. ಆಮೇಲೂ ರಜ ಬಂದಾಗಲೆಲ್ಲ ಅಕ್ಕಿಹೆಬ್ಬಾಳಿಗೆ ಓಡಿಹೋಗುತ್ತಿದ್ದೆ. ಸುಮಾರು ೫–೬ ವರ್ಷಗಳ ಕಾಲ ಇತ್ತ ಮೈಸೂರಿನ ಆಕರ್ಷಣೆ, ಅತ್ತ ನಮ್ಮೂರಿನ ವ್ಯಾಮೋಹ. "ನಮ್ಮ ಹಳ್ಳಿಯಲ್ಲಿ ಜಮೀನು ನೋಡಿಕೊಳ್ಳುವುದಕ್ಕೆ ಒಬ್ಬರು ಅಲ್ಲಿರಬೇಕು; ನರಸಿಂಹಮೂರ್ತಿಯನ್ನು ಅಲ್ಲಿ ನಿಲ್ಲಿಸೋಣ"

ಎಂದು ಹಿರಿಯರು ಯೋಚಿಸುತ್ತಿದ್ದರು ಎಂಬುದನ್ನು ಹಿಂದೆಯೇ ಕಾಣಿಸಿದ್ದೇನೆ. ಆ ಯೋಚನೆ ನನಗೆ ಸ್ವಲ್ಪಕಾಲ ಹಿತವಾಗಿಯೇ ಕಂಡಿತ್ತು. ಪ್ರಾಚೀನ ಭಾರತ ಇಂದಿನದಕ್ಕಿಂತ ಉತ್ತಮ ಎಂದು ಹೇಗೆ ನಂಬಿದ್ದೆನೋ, ಸಿರಿವಂತಿಕೆಗಿಂತ ಬಡತನ ಒಳ್ಳೆಯದು ಎಂದು ಹೇಗೆ ಭಾವಿಸಿದ್ದೆನೋ, ಹಾಗೇ ಹಳ್ಳಿಯ ಜೀವನ ನಗರಜೀವನಕ್ಕಿಂತ ಒಳ್ಳೆಯದು ಎಂದು ನಂಬಿದ್ದೆ. ಆ ನಂಬಿಕೆಗೆ ಆಲೋಚನೆಯ, ಅನುಭವದ, ಆಧಾರವೇನೂ ಇರಲಿಲ್ಲ. ನನಗೆ ಚೆನ್ನಾಗಿ ಪರಿಚಿತವಾಗಿದ್ದದ್ದು ಬ್ರಾಹ್ಮಣಕೇರಿಯ ಜೀವನ ಮಾತ್ರ ಎಂದು ಹಿಂದೆ ಹೇಳಿದೆನಷ್ಟೆ. ಆ ಜೀವನದಲ್ಲಿ ಲಲಿತಕಲೆಗಳ ಪ್ರಭೆ ಅಷ್ಟಾಗಿ ಕಾಣದಿದ್ದರೂ ಅವರದ್ದು (ಜಾತಿಪದ್ಧತಿಯ ಮಿತಿಯಲ್ಲಿ) ಒಳ್ಳೆಯ ಸುಸಂಸ್ಕೃತ ಜೀವನ. ಸಹನೆ, ಮಾನವದಯಾವೃತ, ಇತರರೊಡನೆ ಹೊಂದಿಕೊಂಡು ಹೋಗುವ ಮನೋವೃತ್ತಿ, ಸಮಾಜದ ಕಟ್ಟುಪಾಡುಗಳನ್ನು ಮುರಿದವರ ವಿಷಯದಲ್ಲಿ ಔದಾರ್ಯ, ಇವನ್ನೆಲ್ಲ—ಸಣ್ಣತನಗಳೊಡನೆ—ನಾನು ಕಂಡಿದ್ದೆ, ನಿಜ. ಆದರೆ ಆ ಸಂಸ್ಕೃತಿಯ ಸೊಗಸು ನನಗೆ ಅರ್ಥವಾದದ್ದು ಕೆಲವು ವರ್ಷಗಳು ಕಳೆದ ಮೇಲೆ; ಅದು ಅಂದಿನ ಅನುಭವವಲ್ಲ. ಅಂದ ಮೇಲೆ ನನಗೆ ಆಗ ಇದ್ದ ಹಳ್ಳಿಯ ಅನುಭವ ಎಷ್ಟು ಮಟ್ಟಿನದು? ಹೊಳೆಯಲ್ಲಿ ಈಜಾಡುವುದು, ತಿರುಗಾಟ, ತೋಟಗಳಿಗೋ ಕಬ್ಬಿನ ಗದ್ದೆಗೋ ಹೋಗಿ ಎಳನೀರು ಕುಡಿಯುವುದು, ಬಿಸಿಬೆಲ್ಲ ತಿನ್ನುವುದು—ಇಷ್ಟೇ, ಹಳ್ಳಿಯ ಜೀವನದ ವಿಷಯದಲ್ಲಿ ನನಗಿದ್ದ ಕಲ್ಪನೆ. ಭತ್ತದ ಗಾಡಿಯ ಮೇಲೆ ಕೂತು ಮೈಸೂರು–ಅಕ್ಕಿಹೆಬ್ಬಾಳುಗಳ ನಡುವೆ ಪ್ರಯಾಣ ಮಾಡುವುದೂ ಹಳ್ಳಿಯ ಜೀವನದ ಅಂಗ; ಅದರಿಂದಲೂ ನಾನು ಆನಂದವನ್ನು ಸೆಳೆದುಕೊಂಡಿದ್ದೆ. ಶಿಂಗನಹಳ್ಳಿಯ ಬಳಿ ಭೋರ್ಗರೆಯುತ್ತ ಹರಿಯುವ ಎಂಭಯ್ಯನ ಹಳ್ಳ, ಗದ್ದೆಗಳಿಂದ ಹೊರಟು ಬರುವ ಸೀಳುನಾಲೆಗಳು, ರಸ್ತೆಯ ಇಕ್ಕೆಲದಲ್ಲೂ ಹಸುರು ಹಾಸು, ಹೊಸ ಅಗ್ರಹಾರದ ರಸ್ತೆಯಲ್ಲಿ ಎಡಗಡೆ ಹೊಳೆಯುವ ಕೆರೆಯ ವಿಸ್ತಾರ, ಎಡತೊರೆಯ (ಈಗಿನ ಕೃಷ್ಣರಾಜನಗರದ) ಸೇತುವೆಯ ಮೇಲಿಂದ ನೋಡಿದರೆ ಕಾವೇರಿಯ ಬಂಡೆಯೊಂದರ ಮೇಲೆ ಬಿಸಿಲುಕಾಯಿಸುತ್ತ ಮಲಗಿರುವ ಮೊಸಳೆ, ಇವೆಲ್ಲದರ ಸೊಬಗನ್ನು—ವಾಸ್ತವವಾಗಿ ಇದ್ದ ಮತ್ತು ನನ್ನ ರೊಮ್ಯಾಂಟಿಕ್ ಮನೋವೃತ್ತಿ ಕಲ್ಪಿಸಿದ ಸೊಬಗನ್ನು—ಕುರಿತು ಈಗಲೂ ಒಂದೆರಡು ಘಂಟೆ ಉಪನ್ಯಾಸ ಬಿಗಿಯಬಲ್ಲೆ, ನತದೃಷ್ಟ ಶ್ರೋತೃಗಳು ಸಿಕ್ಕಿದರೆ! ಆ ಪ್ರಯಾಣದ ಸೊಬಗನ್ನು ಸವಿಯುವ ಬಯಕೆ "ಗಾಡಿಯ ಮೇಲೆ ಹೋದರೆ ಪ್ರಯಾಣದ ಅನುಭವ ಸಂಪೂರ್ಣವಾಗಿ ಆಗುವುದಿಲ್ಲ, ನಡೆದೇ ಹೋಗಬೇಕು" ಎನ್ನುವಷ್ಟು ತೀವ್ರವಾಗಿತ್ತು. ಬಹುಶಃ ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿಸಿಕೊಂಡ ಮೇಲೆ, ನಾನು ಮತ್ತು ಇಬ್ಬರು ಸ್ನೇಹಿತರು (ಓಣಿಮನೆ ಕೃಷ್ಣಮೂರ್ತಿ, ಆಚ್ಚೆಸಾಣಿಕಿಟ್ಟ, ಈ ಹೆಸರುಗಳನ್ನು ನೆನೆಯುವುದೂ ನನಗೆ ಹಿತ!) ಅಕ್ಕಿಹೆಬ್ಬಾಳಿಗೆ ನಡೆದೇ ಹೋಗಬೇಕೆಂದು ನಿಶ್ಚಯಿಸಿದೆವು. ಒಂದು ಪಂಚೆ ಒಂದು ಬನೀನು, ಇವನ್ನು ಕೈಚೀಲದಲ್ಲಿ ತುರುಕಿಕೊಂಡು ಹೋಟಲಿನಲ್ಲಿ ತಿಂಡಿ ಕಟ್ಟಿಸಿಕೊಂಡು ಸಂಜೆ ನಾಲ್ಕು ಘಂಟೆಗೆ ಮೈಸೂರಿಂದ ಹೊರಟು ಬೆಳಗ್ಗೆ ಹತ್ತಕ್ಕೊ ಹನ್ನೊಂದಕ್ಕೊ ಊರು ಸೇರಿದೆವು!

ಈ ಅಲೆಮಾರಿ ಜೀವನಕ್ಕೂ ಬೇಸಾಯಗಾರನ ಜೀವನಕ್ಕೂ ಬೇಕಾದಷ್ಟು ಅಂತರವಿದೆಯೆಂದು ನನಗೆ ತಿಳಿಯದು. ಸ್ಕೂಲಿಗೆ ಸೇರಿದ ಮೇಲೆ ಒಂದೆರಡು ವರ್ಷ

ಕಳೆಯುವವರೆಗೂ ಅಕ್ಕಿಹೆಬ್ಬಾಳಿನಲ್ಲಿ ನೆಲಸಬಹುದು ಎಂಬ ಯೋಚನೆಯಿತ್ತು. ಮೈಸೂರಿನಲ್ಲಿ ಈಗಿರುವಂತೆ ಮನೆಯಲ್ಲೂ ಹೊರಗೂ ನಾಗರಿಕತೆಯ ಸೌಕರ್ಯಗಳು ಬೇಕಾದ ಹಾಗೆ ಇದ್ದಿದ್ದರೆ ಹಳ್ಳಿಯ ವ್ಯಾಮೋಹ ಕೆಲವು ತಿಂಗಳಲ್ಲೇ ಕರಗಿಹೋಗುತ್ತಿತ್ತೇನೊ. ಅಂಥ ಸೌಕರ್ಯಗಳು ಮನೆಯಲ್ಲಂತೂ ಇರಲಿಲ್ಲ. ಅಯ್ಯನ ಮನೆಯಲ್ಲಾಗಲಿ ನಾವು ಕಟ್ಟಿದ ಮನೆಯಲ್ಲಾಗಲಿ ಇಲೆಕ್ಟ್ರಿಕ್ ದೀಪ ಇರಲಿಲ್ಲ; ನೀರಿಗೆ ನಲ್ಲಿ ಇರಲಿಲ್ಲ. ಸ್ನಾನಕ್ಕೆ ಬಾವಿಯಿಂದ ಸೇದಿದ ನೀರು, ಕುಡಿಯುವುದಕ್ಕೆ ಬೀದಿಯ ನಲ್ಲಿಯಿಂದ ತಂದು ತುಂಬಿದ ನೀರು. ಅಕ್ಕಿಹೆಬ್ಬಾಳಿನ ಮನೆಯ ನೆಲ ವಜ್ರಗಾರೆಯದು. ಮೈಸೂರಿನ ಮನೆಯ ನೆಲ ಮಣ್ಣಿನದು. ದಿನಾ ಸಾರಿಸಿ ಸಾರಿಸಿ ಗಟ್ಟಿಮಾಡಿದ್ದು. ನಲ್ಲಿ ದೀಪಗಳು ನಮ್ಮ ಮನೆಗೆ ಬಂದದ್ದು ೧೯೧೮ರಲ್ಲಿ ಎಂದು ನೆನಪು. ಮೈಸೂರಿನಲ್ಲಿ ಹೊಳೆಯಿಲ್ಲ. ಹೇಮಾವತಿಯ ಮಡುವಿನಲ್ಲಿ ಈಜಿದವನಿಗೆ ಕುಕ್ಕನಹಳ್ಳಿ ಕೆರೆ ಹೇಗೆ ರುಚಿಸೀತು!

ಇಷ್ಟಾದರೂ ನನ್ನ ಅರಿವಿಲ್ಲದೆಯೇ ಹಳ್ಳಿಯ ವ್ಯಾಮೋಹ ಕಡಮೆಯಾಗುತ್ತಿದ್ದಿರಬೇಕು. ಬದಲಾವಣೆ ಇಂಥ ದಿನ ಆರಂಭವಾಯಿತು ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ನಾನು ಹಿಂದಿನದನ್ನು ಸವಿಯುತ್ತಲೂ ಇದ್ದೆ, ಹೊಸದಕ್ಕೆ ಕೈಚಾಚುತ್ತಲೂ ಇದ್ದೆ. ಅದು ಸಾವಧಾನವಾಗಿ ಕ್ರಮೇಣ ನಡೆದ ಕ್ರಿಯೆ. ಆದರೆ ಯಾವುದಾದರೂ ಒಂದು ದಿನವನ್ನು ಗೊತ್ತುಮಾಡಿ ಹೇಳಲೇಬೇಕು ಎಂದರೆ, "ರಂಗಯ್ಯ ನನ್ನಿಂದ 'ಅರೇಬಿಯನ್ ನೈಟ್ಸ್' ಪುಸ್ತಕವನ್ನು ಓದಿಸಿದ ದಿನದಿಂದ ಬದಲಾವಣೆ ಆರಂಭವಾಯಿತು" ಎಂದು ಹೇಳಿಯೇನು. ಅದು ತೀವ್ರ ವೇಗದಿಂದ ಸಾಗಿದ್ದು ಮೈಸೂರಿನಲ್ಲಿ ಸಾರ್ವಜನಿಕ ಪುಸ್ತಕ ಭಂಡಾರ—ಪಬ್ಲಿಕ್ ಲೈಬ್ರರಿ—ಆರಂಭವಾದ ದಿನದಿಂದ, ಎನ್ನಬಹುದು. ಅಂದರೆ ನನ್ನಲ್ಲಿ ಪರಿವರ್ತನೆ ಆರಂಭವಾದದ್ದಕ್ಕೆ ಮುಖ್ಯಕಾರಣ ಬದುಕಿನ ಅನುಭವವಲ್ಲ, ಪುಸ್ತಕಗಳು ಒದಗಿಸಿದ ಅನುಭವ; ಬಾಹ್ಯಪ್ರಪಂಚದಲ್ಲಿ ಹಳ್ಳಿಗೂ ಪಟ್ಟಣಕ್ಕೂ ಇದ್ದ ವ್ಯತ್ಯಾಸವಲ್ಲ; ಓದಿನ ಫಲವಾಗಿ ಮನಸ್ಸಿನಲ್ಲೊಂದು ಹೊಸ ಪ್ರಪಂಚ ಸೃಷ್ಟಿಯಾದದ್ದು. "ಬದುಕಿಗೆ ಹೋಲಿಸಿದರೆ ಸಾಹಿತ್ಯ ರಕ್ತಹೀನ ಸತ್ವಹೀನ ವಸ್ತು, ಬದುಕಿನ ಕೆಲಸವನ್ನು ಅದು ಎಂದಿಗೂ ಮಾಡಲಾರದು" (Literature is a mighty bloodless substitute for life) ಎಂಬ ಮಾತು ಅಸತ್ಯವಲ್ಲ, ಸತ್ಯದ ಉತ್ಪ್ರೇಕ್ಷೆ. ನನ್ನಲ್ಲಾದ ಬದಲಾವಣೆಗೆ ಬದುಕಿನಿಂದ ಏನೂ ಸಹಾಯವಾಗಲಿಲ್ಲ ಎಂದರೆ ಅದು ಹುಚ್ಚು ಮಾತಾಗುತ್ತದೆ. ಬದುಕಿನ ಅನುಭವ ಜ್ಞಾನಸಾಮಗ್ರಿಯನ್ನು ಒದಗಿಸಿತು. ಓದು ಎರಡು ಕೆಲಸಗಳನ್ನು ಮಾಡಿತು: ೧. ಬದುಕಿನಲ್ಲಿ ನಿಲುಕದ್ದಕ್ಕೆ ಕೈಚಾಚಿ ಹಂಬಲಿಸುವುದನ್ನು (aspiration) ಕಲಿಸಿತು. ೨. ಬದುಕು ಒದಗಿಸಿದ ಜ್ಞಾನ ಸಾಮಗ್ರಿಯನ್ನು ಆಧಾರವಾಗಿಟ್ಟುಕೊಂಡು ಅದರಿಂದ ಪಾಠ ಕಲಿಯಲು, ತತ್ವಗಳನ್ನು ರೂಪಿಸಿಕೊಳ್ಳಲು, ಬೇಕಾದ ಬುದ್ಧಿಶಕ್ತಿಯನ್ನು ಅಲ್ಪಮತಿಯಲ್ಲಿ ಬೆಳಸಬಹುದಾದಷ್ಟು ಬೆಳಸಿತು. ಈ ಸಂದರ್ಭದಲ್ಲಿ ನನ್ನ ಗುರು ಡಿ. ಎನ್. ಮೂರ್ತಿಯವರೊಡನೆ ಚರ್ಚೆ ನಡೆಸಿದ್ದರಿಂದ ಆದ ಸಹಾಯಕ್ಕಾಗಿ ನಾನು ಅವರಿಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದು.

'ಅರೇಬಿಯನ್ ನೈಟ್ಸ್' ಬಹುಮಟ್ಟಿಗೆ ಜೀವನಕ್ಕೆ ವಿಮುಖವಾಗಿ ಓಡುವ ಸಾಹಿತ್ಯ, 'ಎಸ್ಕೇಪಿಸ್ಟ್' (escapist) ಸಾಹಿತ್ಯ. ಅದು ಕಾರ್ಯಕಾರಣ ನಿಯಮ

ಗಳನ್ನು ಮೆಟ್ಟಿ ಮೆರೆಯುವ ದಿವ್ಯಸುಂದರವಾದ ಸಾಹಸಪೂರ್ಣವಾದ ಕನಸಿನ ಪ್ರಪಂಚವೊಂದಕ್ಕೆ ಪ್ರವೇಶವನ್ನು ದೊರಕಿಸಿಕೊಟ್ಟಿತು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಎನ್ನಲಾರೆ. ಅದು ಓದುವ ಹುಚ್ಚು ಹಿಡಿಸಿತು. ನನ್ನ ಓದು ಅದಕ್ಕೆ ಸೀಮಿತವಾಗಿರಲಿಲ್ಲ. ಓದುತ್ತ ಓದುತ್ತ ಹಳ್ಳಿಯ ಜೀವನದಲ್ಲಿ ನಾನು ಹಿಂದೆ ಗಮನಿಸದಿದ್ದ, ಅಥವಾ ಗಮನಿಸಿದ್ದರೂ ಕಡೆಗಣಿಸಿದ್ದ ಕೊರತೆಗಳು ಕಾಣಿಸಲಾರಂಭಿಸಿದವು.

ಅಕ್ಕಿಹೆಬ್ಬಾಳಿಗೆ ಸಲ್ಲಬೇಕಾದ ಹೊಗಳಿಕೆಯನ್ನು ಸಲ್ಲಿಸಿದ್ದೇನೆ. ಅಲ್ಲಿ ಹೊಗಳಬೇಕಾದದ್ದಿತ್ತು ಎಂದು ಒಪ್ಪಿದ ಮೇಲೂ ಈ ಪ್ರಶ್ನೆ ಕಾಡುತ್ತಿದೆ : ಆ ವಾತಾವರಣದಲ್ಲಿ ಬೆಳೆದ ಜೀವ ಗರಿಗೆದರಿ ಹಾರಲಾದೀತೆ ? ಅಲ್ಲಿ ನಾವು ಮಾಡುತ್ತಿದ್ದದ್ದಕ್ಕಿಂತ ಮಾಡದೆ ಇದ್ದದ್ದೇ—ಮಾಡಬಾರದೆ ಇದ್ದದ್ದೇ—ಹೆಚ್ಚೇನೊ ! ಅಲ್ಲಿಯದು 'ಬೇಡ ಬೇಡ' ಎನ್ನುವುದೇ ಪ್ರಧಾನವಾದ ಜೀವನ. "ಇವತ್ತು ಮಂಗಳವಾರ, ಕ್ಷೌರ ಮಾಡಿಸಿಕೊಳ್ಳಬೇಡ; ನಾಳೆ ಬುಧವಾರ ದಕ್ಷಿಣದಿಕ್ಕಿಗೆ ಪ್ರಯಾಣ ಮಾಡಬಾರದು; ಅಡಿಗೆಮನೆ ದೇವರ ಮನೆಗೆಲ್ಲ ಷರ್ಟು ಹಾಕಿಕೊಂಡು ಬರಬೇಡ; ಇವತ್ತು ಮಂದೇವರ ಹಬ್ಬ, ಬೆಳಗ್ಗೆ ಏನೂ ತಿನ್ನಬೇಡ; ಅವರು ಲಂಡನ್ ಪಾರ್ಟಿಯವರು, ಅವರ ಪಂಕ್ತಿಯಲ್ಲಿ ಊಟಕ್ಕೆ ಕೂತುಕೊಳ್ಳಬೇಡ; ಅಯ್ಯೋ ಶನಿಮುಂಡೇದೆ, ಮೈಲಿಗೆ ನೀರು ಹಾರಿಸಿಬಿಟ್ಟೆಯಲ್ಲೊ ! ಮಂಡ್ಯದ ಮಗು (ಆ ಪ್ರಾಣಿ ಯಾರೋ ಇವತ್ತೂ ನನಗೆ ಗೊತ್ತಿಲ್ಲ) ಸತ್ತುಹೋದನಂತೆ, ನಮಗೆಲ್ಲ ಸೂತಕ, ಹಾಸಿಗೆ ಗೀಸಿಗೆ ಮುಟ್ಟಬೇಡ—ಇತ್ಯಾದಿ ಇತ್ಯಾದಿ. "ಬೇಡ ಬೇಡ ಬೇಡ", "ಬಾರದು ಬಾರದು ಬಾರದು"! ನಮ್ಮ ಸುತ್ತ ಈ ನಿಷೇಧಗಳ ಗೋಡೆಯನ್ನು ಎಬ್ಬಿಸಿಕೊಂಡು ನಡುವಿನ ಬಂದೀಖಾನೆಯಲ್ಲಿ ನಮ್ಮ ಬದುಕನ್ನು ಸಾಗಿಸಬೇಕು— ಸಾಗಿಸುವುದೆಲ್ಲಿಬಂತು ! ನಿಂತ ನೀರಿನಂತೆ ಹಸುರುಗಟ್ಟಲೆಂದು ಬದುಕನ್ನು ಅಲ್ಲಿ ನಿಲ್ಲಿಸಬೇಕು. ನಾವು ಕೈಕಾಲು ನೀಡುವಂತಿಲ್ಲ; 'ಬೇಡ'ಗಳ ಗೋಡೆ ಬಡಿಯುತ್ತದೆ ! ಈ ಬಂದೀಖಾನೆಯೊಳಗೆ ಕೂತು ಮಾಡುವುದೇನು ? ಬೇಡಗಳ ಜೊತೆಗೆ 'ಬೇಕು' ಗಳೇನಾದರೂ ಉಂಟೊ ? ಉಂಟು : ಸಂಧ್ಯಾವಂದನೆ, ಮಾಧ್ಯಾಹ್ನಿಕ, ಮತ್ತೆ ಸಂಧ್ಯಾವಂದನೆ, ಪ್ರತಿ ಸಲವೂ ನೂರೆಂಟು ಗಾಯತ್ರಿ. (ನಾನು ಹೇಳುತ್ತಿರುವುದು ಹುಡುಗರ ಮಾತು. ದೊಡ್ಡವರಿಗೆ ಬೇರೆ ಕೆಲಸಗಳಿದ್ದವು.) ಈ ಕಲಾಪ ಎಲ್ಲಾ ಮತಗಳಲ್ಲೂ ಒಂದಲ್ಲ ಒಂದು ರೂಪದಲ್ಲಿರುತ್ತದೆ; ಅದು ಅನಿವಾರ್ಯ; ಮತದಲ್ಲಿ ಭಕ್ತಿಯಿದ್ದರೆ ಕಲಾಪದಲ್ಲೂ ಭಕ್ತಿಯಿರಬೇಕು. ಅದನ್ನು ಆಸ್ಥೆಯಿಂದ ನಡೆಸುವವರನ್ನು —ಮೇಧಾವಿಗಳಾದ, ಆಲೋಚನಾಪರರಾದ ಕರ್ಮನಿಷ್ಠರನ್ನು—ನೋಡಿದ್ದೇನೆ, ಅವರ ಶ್ರದ್ಧೆಯನ್ನು ಗೌರವಿಸಿಯೂ ಇದ್ದೇನೆ. ಆದರೆ ನನಗೆ ಆ ಶ್ರದ್ಧೆ ಬರಲಿಲ್ಲ !

ನನಗೆ ಈ ಬೇಸರದ ಪ್ರಕ್ರಿಯೆಗಿಂತ ಬೇರೆಯಾದದ್ದು ಏನೋ ಒಂದು ಬೇಕು ; ಅದೇನು ಎಂಬುದು ಸ್ಪಷ್ಟವಾಗಿರಲಿಲ್ಲ. ಹುಡುಗತನದ ಬೇಜವಾಬ್ದಾರಿ ವಿನೋದಗಳಿಂದಾಗಿ 'ನನಗೆ ಬೇಕಾದದ್ದೇನು' ಎಂಬುದರ ಯೋಚನೆಯೇ ಬಂದಿರಲಿಲ್ಲ. ಕರ್ಮದ ವಿಷಯದಲ್ಲಿ ಅನಾದರವಿತ್ತೇ ಹೊರತು ಅದರ ಮೌಲ್ಯವನ್ನು ಕುರಿತ ಪ್ರಶ್ನೆಗಳನ್ನೇನೂ ನಾನು ಹಾಕಿಕೊಂಡಿರಲಿಲ್ಲ. ಮೈಸೂರಿಗೆ ಬಂದು ಸ್ವಲ್ಪ ಕಾಲ ಕಳೆದಮೇಲೆ ಪ್ರಶ್ನೆಗಳು ಬರಲಾರಂಭಿಸಿದವು. ಅದಕ್ಕೆ ಕಾರಣ ಯಾವುದೊಂದು ಘನವಾದ ತತ್ವದ ದಾಳಿಯಲ್ಲ.

ಕೇವಲ ಹೊಸ ಅನುಭವಗಳ ಬಯಕೆ; ಹೊಸ ಅನುಭವಗಳನ್ನು ನಿಷೇಧಿಸುವ ಸಂಪ್ರದಾಯದ ವಿಷಯದಲ್ಲಿ ಅಸಹನೆ. ನನಗೆ ಹಳೆಯ ಕಾಲದ ವಿದ್ಯಾಭ್ಯಾಸ ಮಾತ್ರ ದೊರೆತಿದ್ದರೆ, ಅಥವಾ ವಿದ್ಯೆಯೇನೂ ಇಲ್ಲದೆ ನನ್ನ ಬದುಕು ಹಳ್ಳಿಯಲ್ಲೇ ಸಾಗಿದ್ದರೆ, ಈ ಅಸಹನೆ ಅಷ್ಟು ತೀವ್ರವಾಗುತ್ತಿರಲಿಲ್ಲ. ಹೊಸ ತರದ ವಿದ್ಯಾಭ್ಯಾಸದಿಂದಾಗಿ, ಮತ್ತು ನಾಲ್ಕಾರು ವಿಷಯಗಳನ್ನು ಕುರಿತ ಪುಸ್ತಕಗಳನ್ನು ಓದಿದ್ದರಿಂದಾಗಿ, ನಾನು ಎಂಟ್ರೆನ್ಸ್ (ಈಗಿನ ಮೊದಲನೆಯ ಪಿ.ಯು.ಸಿ) ಪ್ಯಾಸಾಗುವ ವೇಳೆಗೆ ಪ್ರಶ್ನೆಗಳ ಸುರಿಮಳೆ ಬಂತು; ನನ್ನಲ್ಲಿ ಗೊಂದಲ ಎಬ್ಬಿಸಿತು. ನನ್ನ ಮನಃಪಟಲದ ಮೇಲೆ ಹೊಸದೊಂದು ಪ್ರಪಂಚದ ಚಿತ್ರಮೂಡಿತ್ತು. ಅದು ನಿಜವಾದರೆ ಹಿಂದಿನ ವಿಧಿನಿಷೇಧಗಳಲ್ಲಿ ಏನೋ ಐಬು ಇರಬೇಕು. ಆದರೆ ನನ್ನ ಬದುಕೆಲ್ಲ ಅದುವರೆಗೆ ಆ ವಿಧಿನಿಷೇಧಗಳೊಡನೆ ಹೇಗೋ ಹೊಂದಿಕೊಂಡು ಬೆಳೆದದ್ದು. ನನ್ನಲ್ಲೇನೋ ಅವುಗಳ ಹಿಡಿತ ಕಡಮೆಯಾಗಿದೆ. ಆದರೆ ಅವನ್ನು ಉದ್ದೇಶ ಪೂರ್ವಕವಾಗಿ ಕಿತ್ತೊಗೆಯುವುದು ಒಳ್ಳೆಯದೆ? ನನ್ನ ಗೊಂದಲ ಈ ಬಗೆಯದಿದ್ದಿರ ಬಹುದು. ಅದನ್ನು ಸ್ಪಷ್ಟವಾಗಿ ಚಿತ್ರಿಸಲಾರೆ. ನನ್ನ ಮೇಲೆ ಎರಗಿ ಬಂದ ಪ್ರಶೆಗಳಲ್ಲಿ ಕೆಲವನ್ನು ಯಾವ ಕ್ರಮಕ್ಕೂ ಒಳಪಡಿಸದೆ ನೆನಪಿಗೆ ಹೇಗೆ ಬರುತ್ತದೆಯೋ ಹಾಗೇ ಇಲ್ಲಿ ಕಾಣಿಸಿದ್ದೇನೆ. ಮೊದಲು ನಿಷೇಧಗಳು (ಸಂ = ಸಂಪ್ರದಾಯತೆ; ಪ್ರ = ಪ್ರಶ್ನೆ) ಆಮೇಲೆ ನನ್ನ ಪ್ರತಿಕ್ರಿಯೆ:

ಸಂ: "ಸಮುದ್ರಯಾನ ನಿಷಿದ್ಧ. ವಿಲಾಯಿತಿಗೂ, ಸಮುದ್ರದಾಚೆ ಇರುವ ಇತರ ದೇಶಗಳಿಗೂ ಹೋದವರು ಜಾತಿ ಕೆಡುತ್ತಾರೆ."

ಪ್ರ: ಹಾಗಾದರೆ ನಾನು ಮಾರ್ಟಿನ್ ಕ್ಯಾಟ್ಲರ್ (ಅದೇ ಹೆಸರಿನ ಕಾದಂಬರಿಯ ನಾಯಕ)ನಂತೆ ಬ್ರೆಸಿಲ್‌ನ ಕಾಡುಗಳಲ್ಲಿ ಅಲೆಯುವಂತಿಲ್ಲ? ರಾಲ್ಫ್ ರೋವರ್‌ನಂತೆ ('ಹವಳದ ದ್ವೀಪ'ದ ನಾಯಕ) ಪೆಸಿಫಿಕ್ ದ್ವೀಪಗಳಲ್ಲಿ ವಿಹರಿಸುವಂತಿಲ್ಲ? ಆಮುಂಡ್‌ಸೆನ್‌ನಂತೆ ಧ್ರುವಪ್ರದೇಶದ ಧವಳ ವಿಸ್ತಾರವನ್ನು ನೋಡುವಂತಿಲ್ಲ? ಆರೋರ ಬೋರಿಯಾಲಿಸ್‌ನ ದಿವ್ಯ ದೃಶ್ಯವನ್ನು ನೋಡುವಂತಿಲ್ಲ? ಜಾತಿಯ ಹೆಸರು ಹೇಳಿ ಇದೆಲ್ಲ ಆನಂದ ವನ್ನು ನನ್ನಿಂದ ಏಕೆ ಕಸಿದುಕೊಳ್ಳುತ್ತೀರಿ? (ನನ್ನಲ್ಲಿ ದೇಶ ನೋಡುವ, ಪ್ರಕೃತಿ ಸೌಂದರ್ಯವನ್ನು ಮನಸ್ಸಿಗೆ ತುಂಬಿಕೊಳ್ಳುವ ಬಯಕೆ ಇನ್ನೂ ಹಿಂಗಿಲ್ಲ!)

ಸಂ: "ನೀನು ತಿರುಪತಿಗೆ ಹೋಗಬಾರದು. ನಮ್ಮ ಮನೆದೇವರು ನರಸಿಂಹ ನಾದ್ದರಿಂದ ವೆಂಕಟರಮಣನಿಗೆ ನಾವು ಕಳ್ಳ ಒಕ್ಕಲು. ತಿರುಪತಿಗೆ ಹೋದರೆ ವಿಪತ್ತು ತಟ್ಟೀತು."

ಪ್ರ: ಹಾಗೇ? ಆದರೆ ವೆಂಕಟರಮಣ, ನರಸಿಂಹ, ಇಬ್ಬರೂ ವಿಷ್ಣುವಿನ ರೂಪಗಳು ಎಂದಲ್ಲವೆ, ನೀವು ಹೇಳುವುದು? ನಾವು ಕಳ್ಳ ಒಕ್ಕಲು

ಹೇಗೆ ಆದೇವು ? ವಿಷ್ಣುವಿನ ಒಂದು ರೂಪಕ್ಕೆ ಪೂಜೆ ಸಲ್ಲಿಸಿದರೆ ಇನ್ನೊಂದು ರೂಪಕ್ಕೆ ಕೋಪವೇಕೆ ?

ಸಂ : "ದೇವರು ಸಜ್ಜನರ ಕೈಬಿಡುವುದಿಲ್ಲ, ರಕ್ಷಿಸುತ್ತಾನೆ. ಅಂಜಿಕಿನ್ಯಾತಕಯ್ಯ, ಸಜ್ಜನರಿಗೆ...."

ಪ್ರ : ಮುದ್ದೆಭಟ್ಟರ ಮನೆಯವರೆಲ್ಲ ಒಳ್ಳೆಯವರು, ಭಗವದ್ಭಕ್ತರು ಎಂದು ಪ್ರಸಿದ್ಧರಾಗಿದ್ದರಲ್ಲವೆ? ಕಾಲರ ಬಂದು ಎರಡೇ ದಿನಗಳಲ್ಲಿ ಅವರ ಮನೆಯವರೆಲ್ಲ ಸತ್ತುಹೋದರಲ್ಲ? ಅಯ್ಯನ ಮೊಮ್ಮಗ ಗುಂಡ ಸಿಡುಬಿನಿಂದ ನರಳಿ ಎರಡು ಕಣ್ಣುಗಳನ್ನು ಕಳೆದುಕೊಂಡನಲ್ಲ? ದೇವರು ಈ ಅನಾಹುತಗಳನ್ನೆಲ್ಲ ತಪ್ಪಿಸಲಿಲ್ಲವೇಕೆ ?

ಸಂ : "ಅನ್ಯಾಯಾರ್ಜಿತಂ ವಿತ್ತಂ ಅಷಡ್ಢಾಳೇ ವಿನಶ್ಯತಿ." (ಇದು ನಮ್ಮೂರಿನ ಜನರ ಬಾಯಿಂದ ಆಗಾಗ ಹೊರಡುತ್ತಿದ್ದ ಮಾತು. ಅವರ ಮಾತಿನ ವ್ಯಾಕರಣ ಛಂದಸ್ಸು ಇತ್ಯಾದಿಗಳನ್ನು ಬೆದಕಿ ನೋಡಬಾರದು, ಅವರೇನು ಪಂಡಿತರು ಕೆಟ್ಟುಹೋದರೆ !)

ತ : ಹೌದೆ? ಟೌಟ್‌ನ 'ಹಿಸ್ಟರಿ ಆಫ್ ಇಂಗ್ಲೆಂಡ್'ನಲ್ಲಿ ಹೆನ್ರಿ VIII ಸನ್ಯಾಸಿ ಮಠಗಳನ್ನು ಲೂಟಿ ಮಾಡಿದ್ದನ್ನು ಓದುತ್ತಾ ಇದ್ದೆ. ಆಗ ಅವನಿಗೆ ಲೂಟಿಯಲ್ಲಿ ಸಹಾಯಕನಾಗಿದ್ದ ಶ್ರೀಮಂತ ಸರದಾರನೊಬ್ಬ ತಾನೂ ಅಪಾರ ಹಣ ಗಿಟ್ಟಿಸಿಕೊಂಡ. ಅವನ ಮನೆತನದವರು ಇಂದಿಗೂ ೪ ಶತಮಾನ ಕಳೆದ ಮೇಲೂ ಶ್ರೀಮಂತರಾಗಿಯೇ ಇದ್ದಾರಂತೆ. ಅವರ ಐಶ್ವರ್ಯ 'ಅನ್ಯಾಯಾರ್ಜಿತ'. ಅದು 'ಅಷಢ್ಢಾಳೇ ವಿನಶ್ಯತಿ' ಆಗಲಿಲ್ಲವಲ್ಲ?

ಸಂ : "ವೇದಗಳಲ್ಲಿ ಪ್ರಪಂಚದ ಜ್ಞಾನವೆಲ್ಲ ಅಡಗಿದೆ. ಅವು ಅಪೌರುಷೇಯ. ಅವೇ ಸತ್ಯ, ಮತ್ತಾವುದೂ ಅಲ್ಲ."

ಪ್ರ : ಕ್ರೈಸ್ತರು ಬೈಬಲ್‌ನ ವಿಷಯದಲ್ಲೂ ಮಹಮ್ಮದೀಯರು ಕೊರಾನಿನ ವಿಷಯದಲ್ಲೂ ಅದೇ ಮಾತು ಹೇಳುತ್ತಾರೆ: ಆ ಪುಸ್ತಕಗಳಲ್ಲಿರುವುದೇ ಸತ್ಯ, ಮತ್ತಾವುದೂ ಅಲ್ಲ, ಎಂದು ನಾನು ಯಾರನ್ನು ನಂಬಬೇಕು ? ಅವರ ಪ್ರಕಾರ ವೇದ ಸತ್ಯವಲ್ಲ, ನಮ್ಮ ಪ್ರಕಾರ ಅವರ ಗ್ರಂಥ ಸತ್ಯವಲ್ಲ !

ಸಂ : "ಬ್ರಾಹ್ಮಣರಿಗೆ ಮಾತ್ರ ವೇದಾಧಿಕಾರ ; ಇತರರಿಗಿಲ್ಲ. ಬ್ರಾಹ್ಮಣರಲ್ಲೂ ಹೆಂಗಸರಿಗಿಲ್ಲ."

ಪ್ರ : ಅದೇಕೆ ? ಬ್ರಾಹ್ಮಣೇತರರು ಮನುಷ್ಯರಲ್ಲವೇ ? ಹೆಂಗಸರು ಮನುಷ್ಯರಲ್ಲವೆ?

ಸಂ : "ಎಲ್ಲ ಮತಗಳೂ ಒಂದೇ."

ಪ್ರ : ಹೌದೆ? 'ಯೇಸು ಮಾನವರೆಲ್ಲರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊಂಡು ಶಿಕ್ಷೆಯನ್ನು ಅನುಭವಿಸಿ ನಮ್ಮನ್ನೆಲ್ಲ ನರಕದಿಂದ ಪಾರುಮಾಡಿದ' ಎಂದು ಕ್ರೈಸ್ತರು ನಂಬುತ್ತಾರೆ. ನಾವು ಅದನ್ನು ನಂಬುವುದಿಲ್ಲ. ಇವೆರಡು ಮತಗಳೂ ಹೇಗೆ ಒಂದಾದವು ?

ಇಂಥ ಪ್ರಶ್ನೆಗಳೆಷ್ಟೋ ! ಅವು ಇತರರಿಗೆ ಹಾಕಿದ ಪ್ರಶ್ನೆಗಳಲ್ಲ, ನನ್ನ ಮನಸ್ಸಿನಲ್ಲೇ ಎದ್ದ ಸಂದೇಹಗಳು. ನಮ್ಮ ಸಂಪ್ರದಾಯ ಸಂಸ್ಕೃತಿ ಮತಧರ್ಮಗಳಿಗಿಂತ ಭಿನ್ನವಾದ ಸಂಪ್ರದಾಯ ಮತಧರ್ಮಗಳ ಪರಿಚಯವಾದದ್ದು ಈ ಸಂದೇಹಗಳಿಗೆ ನೇರವಾದ ಕಾರಣ. ಅವನ್ನು ಹಿರಿಯರೊಡನೆ ಚರ್ಚಿಸುವಂತಿಲ್ಲ. ಆಗ ಹಿರಿಯರಿಗೂ ಕಿರಿಯರಿಗೂ ಸಲಿಗೆ ಇರಲಿಲ್ಲ. ಅಲ್ಲದೆ ಅವರ ದೃಷ್ಟಿಯಲ್ಲಿ ಇವೆಲ್ಲ ಚರ್ಚಿಸುವ ವಿಷಯಗಳಲ್ಲ. ಸಂಪ್ರದಾಯ ಮತಧರ್ಮಗಳು ಹೇಳಿದ್ದನ್ನು ನಂಬಿ ಆಚರಣೆಗೆ ತರುವುದೆಷ್ಟೋ ಅಷ್ಟೇ ನಮ್ಮ ಕೆಲಸ. ಅವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಧಾರ್ಷ್ಟ್ಯ! ಮೈಸೂರಿನಲ್ಲೇ ಹಿರಿಯರೊಬ್ಬರು—ಅವರ ಹೆಸರು ನೆನಪಿಲ್ಲ, ಅವರ ಪರಿಚಯವೂ ನನಗಿರಲಿಲ್ಲ—ಮತ್ತೊಬ್ಬರಿಗೆ ಹೇಳುತ್ತಿದ್ದದ್ದು ಅಕಸ್ಮಾತ್ ಕಿವಿಗೆ ಬಿತ್ತು : ಅವನಿಗೆ ವೇದದ ಅರ್ಥ ಹೇಳಬೇಕಂತೆ! ಆಂಜನೇಯ ನವವ್ಯಾಕರಣ ಪಂಡಿತ; ಅವನಿಗೇ ವೇದ ಅರ್ಥವಾಗಲಿಲ್ಲವಂತೆ ; ಇವನಿಗೆ ಅರ್ಥವಾಗುತ್ತೋ ?" ಸುತ್ತ ಇದ್ದವರೆಲ್ಲ ಈ ಮಾತನ್ನು ಮೆಚ್ಚಿ ತಲೆದೂಗಿದರು, ನಕ್ಕರು, ಆಂಜನೇಯನ ನವವ್ಯಾಕರಣ ಪಾಂಡಿತ್ಯವಾಗಲಿ ಅವನಿಗೆ ವೇದ ಅರ್ಥವಾಗದಿದ್ದದ್ದಾಗಲಿ ನನಗೆ ತಿಳಿಯದ ವಿಷಯ. ನನಗೆ ಹೀಗನ್ನಿಸಿತು : ವೇದ ಅರ್ಥವಾಗುವುದು ಸಾಧ್ಯವೇ ಅಲ್ಲವಾದರೆ ಅದನ್ನು ಕಟ್ಟಿಕೊಂಡು ನಮಗೆ ಆಗಬೇಕಾದ್ದೇನು ?

ಆಂಜನೇಯನ ಉದಾಹರಣೆ ಕೊಟ್ಟ ಆ ಹಿರಿಯರು ಬಹುಶಃ ವಿದ್ವಾಂಸರಲ್ಲ. ನಿಜವಾಗಿ ವಿದ್ವಾಂಸರು ಚರ್ಚೆಗೆ ಕುಳಿತಾಗ ನಿರ್ದಾಕ್ಷಿಣ್ಯವಾಗಿ ಪ್ರಶ್ನೆಗಳನ್ನು ಹಾಕುತ್ತಿದ್ದರೆಂಬುದು ಆಗ ನನಗೆ ತಿಳಿಯದು. ಪ್ರಶ್ನೆ ಹಾಕುವುದು ನಮ್ಮ ಪುರಾತನ ಸಂಪ್ರದಾಯಕ್ಕೆ ವಿರುದ್ಧವಲ್ಲ. ಆದರೆ ಜನಸಾಮಾನ್ಯರಲ್ಲಿ ಹಳ್ಳಿಯಲ್ಲಿ ಮಾತ್ರವಲ್ಲದೆ ಪಟ್ಟಣಗಳಲ್ಲಿ ಕೂಡ "ಮತಧರ್ಮ ಸಂಪ್ರದಾಯಗಳು ಚರ್ಚೆ ಮಾಡತಕ್ಕ ವಿಷಯವಲ್ಲ ; ನಂಬಿ ಶ್ರದ್ಧೆಯಿಂದ ಅನುಸರಿಸುವುದಷ್ಟೇ ನಮ್ಮ ಕೆಲಸ" ಎಂಬ ಭಾವನೆ ಹರಡಿತ್ತೆಂಬುದು ನಿಜ. ಇದೇ ಮನೋಭಾವ ಯೂರೋಪಿನಲ್ಲೂ 'ಅಂಧಕಾರ ಯುಗ' (The dark age) ಎಂದು ಕರೆಯುವ ಮಧ್ಯಮ ಯುಗದಲ್ಲಿ ಸರ್ವಸಾಧಾರಣವಾಗಿತ್ತು. ಈಗಲೂ ಎಷ್ಟೋ ಜನರಲ್ಲಿ ಇದೆ! ಅಂಧಶ್ರದ್ಧೆ ಭಾರತವೊಂದರ ಸ್ವತ್ತಲ್ಲ, ಹಿಂದೂಮತವೊಂದರ ಸ್ವತ್ತಲ್ಲ. ಯೂರೋಪಿನಲ್ಲಿ ಮತಧರ್ಮ ಸಂಪ್ರದಾಯಗಳನ್ನು ಕುರಿತು ಪ್ರಶ್ನೆಹಾಕಿದ, ನಂಬಲೊಲ್ಲದ, ನೂರುಗಟ್ಟಲೆ ಜನರನ್ನು ಇನ್‌ಕ್ವಿಸಿಷನ್ ಜೀವಸಹಿತ ಸುಡಿಸಿತು ! ಎಂಟ್ರೆನ್ಸ್ ಕ್ಲಾಸಿಗೆ ಬರುವ ವೇಳೆಗೆ ಇದು ನನಗೆ ತಿಳಿದಿತ್ತು. "ಅವರ ಅಂಧಶ್ರದ್ಧೆಯಂತೆ ನಮ್ಮ ಅಂಧಶ್ರದ್ಧೆ. ನಮ್ಮಲ್ಲಿ ಇನ್‌ಕ್ವಿಸಿಷನ್ ಸಂಸ್ಥೆ ಹುಟ್ಟಿಕೊಳ್ಳದಿದ್ದದ್ದು ನಮ್ಮ ಪುಣ್ಯ" ಎಂದುಕೊಂಡೆ. ಈ ವಿಷಯದಲ್ಲಿ ನಾವು ಅವರಿಗಿಂತ ಎಷ್ಟೋ ಪಟ್ಟು ವಾಸಿ !

ಮುಂದುವರಿಯುವುದು

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ

ಪ್ರೊ|| ದೇಜಗೌ



'ಮಗುವನ್ನೇತಕ್ಕೆ ಒಳಕೆ ಕೊಂಡೊಯ್ದಿದ್ದಾರೆ?' ಎಂದವನು ಮೊದಲಕ್ಷಣ ಆಲೋಚಿಸಿದನು. 'ಕೂಸು?....ಎಂಥ ಕೂಸಿರಬಹುದು? ಒಳಗೊಂದು ಮಗು ಇದೆಯಲ್ಲ, ಏಕೆ? ಅಥವಾ ಕೂಸಿನ ಜನನವಾಗಿರಬಹುದೆ?'

ಕೂಡಲೇ ಅವನು ಆ ಹಲುಬಿನ ಒಸಗೆಯ ಅರ್ಥವನ್ನು ಗ್ರಹಿಸಿದನು. ಕಣ್ಣೀರು ಅವನ ಉಸಿರು ಕಟ್ಟಿಸಿದುವು. ಕಿಟಕಿಯ ಜಗಲಿಮೇಲೆ ಮೊಳಕೈಯೂರಿ, ಹಸುಗೂಸಿನಂತೆ ರೋದಿಸತೊಡಗಿದನು. ಬಾಗಿಲು ತೆರೆಯಿತು. ತೋಳನ್ನೆತ್ತಿ ಸಿಕ್ಕಿಸಿಕೊಂಡಿದ್ದ, ಕೋಟಿಲ್ಲದ, ನಿಸ್ತೇಜದ, ನಡುಗುವ ದವಡೆಯ ವೈದ್ಯ ಹೊರಗೆ ಬಂದನು. ಆಂಡ್ರೂ ಅವನ ಕಡೆಗೆ ಕಣ್ಣು ಹೊರಳಿಸಿದನು. ವೈದ್ಯನ ವಿಹ್ವಲದೃಷ್ಟಿಯೇ ಅವನಿಗೆ ಸಿಕ್ಕಿದ ಉತ್ತರ. ವೈದ್ಯ ಮಾತಿಲ್ಲದೆ ಮುಂದೆ ನಡೆದ. ಸ್ತ್ರೀಯೊಬ್ಬಳು ಕೋಣೆಯ ಹೊರಗೆ ನುಗ್ಗುತ್ತಿರುವಲ್ಲಿ. ಆಂಡ್ರೂವನ್ನು ಕಂಡು, ಹೊಸಿಲ ಬಳಿಯೇ ಸಂದಿಗ್ಧಮನಸ್ಸಿನಿಂದ ನಿಂತುಕೊಂಡಳು. ಅವನು ಸತಿಯ ಕೋಣೆಯೊಳಗೆ ಪ್ರವೇಶಿಸಿದನು. ಐದು ನಿಮಿಷಗಳ ಹಿಂದೆ ಯಾವ ಭಂಗಿಯಲ್ಲಿ ಮಲಗಿದ್ದಳೋ ಅದೇ ಭಂಗಿಯಲ್ಲವಳು ಸತ್ತು ನಿದ್ರಿಸುತ್ತಿದ್ದಳು. ನೆಟ್ಟಕಣ್ಣು, ಬಿಳಿಚಿಕೊಂಡಿದ್ದ ಕೆನ್ನೆಗಳನ್ನು ಬಿಟ್ಟರೆ, ನವುರಾದ ಕಪ್ಪುನವಿರುಳ್ಳ ಮೇಲ್ತುಟಿಯಿಂದ ಕೂಡಿದ ಹಸುಗೂಸಿನಂಥ ಅವಳ ಸುಂದರ ಮುಖದ ಮೇಲೆ ಅದೇ ಭಾವ ಅಭಿವ್ಯಕ್ತಗೊಂಡಿತ್ತು. 'ನಾನು ನಿಮ್ಮೆಲ್ಲರನ್ನು ಪ್ರೀತಿಸುತ್ತೇನೆ. ಯಾರಿಗೂ ನಾನೂ ತೊಂದರೆ ಮಾಡಿಲ್ಲ. ನೀವು ನನಗೆ ಮಾಡಿರುವುದೇನು?' ಎಂಬುದಾಗಿ ಕರುಣಾಜನಕವೂ, ಚಿತ್ತಾಕರ್ಷಕವೂ ಆದ ಅವಳ ಮೃತವದನ ಹೇಳುವಂತಿತ್ತು.

ಕೋಣೆಯ ಒಂದು ಮೂಲೆಯಲ್ಲಿ ಕೆಂಪನೆಯ ಸೂಕ್ಷ್ಮ ಜೀವಿಯೊಂದು ಗುರುಗುಟ್ಟುತ್ತಿತ್ತು; ಮೇರಿ ಬೊಗ್ದಾನೋವ್ನಳ ಕಂಪಿಸುತ್ತಿದ್ದ ಬಿಳಿಯ ಕೈಗಳಲ್ಲಿ ಚೀರುತ್ತಿತ್ತು.

ಎರಡು ಗಂಟೆಗಳ ನಂತರ ರಾಜಕುಮಾರ ಆಂಡ್ರೂ ಮೆಲ್ಲಗೆ ಹೆಜ್ಜೆ ಹಾಕುತ್ತಾ, ತಂದೆಯ ಕೋಣೆಗೆ ಹೋದನು. ಆ ಮೊದಲೇ ಮುದುಕನಿಗೆ ಸರ್ವಸ್ವವೂ ತಿಳಿದುಹೋಗಿತ್ತು. ಅವನು ಬಾಗಿಲ ಬಳಿ ನಿಂತಿದ್ದನು. ಅದು ತೆರೆದ ಕೂಡಲೇ ಅವನ ಒರಟು ಮುದಿದೋಳುಗಳು ಬಡಗಿಯ ತಿರುಡಿಯಂತೆ ಮಗನ ಕೊರಳನ್ನು ಬಿಗಿಯಾಗಿ ತಬ್ಬಿಹಿಡಿದುಕೊಂಡುವು. ಮಾತಿಲ್ಲದೆಯೆ ಅವನು ಮಗುವಿನಂತೆ ದುಃಖಿಸತೊಡಗಿದನು.

* * *

ಮೂರು ದಿನಗಳ ನಂತರ ಕಿರಿಯ ರಾಣಿಯನ್ನು ಸಮಾಧಿ ಮಾಡಲಾಯಿತು. ಅವಳಿಗೆ ಬೀಳ್ಕೊಡಿಗೆಯ ಮುತ್ತು ಕೊಡುವ ಸಲುವಾಗಿ ರಾಜಕುಮಾರ ಆಂಡ್ರೂ ಶವಸಂಪುಟವಿದ್ದ ಸೋಪಾನದ ಬಳಿಗೆ ಹೋದನು. ಕಣ್ಣು ಮುಚ್ಚಿದ್ದರೂ, ಅದೇ ಮುಖವನ್ನವನು ಶವಸಂಪುಟದಲ್ಲಿ ಕಂಡನು. 'ಹಾ, ನೀವು ನನಗೇನು ಮಾಡಿದ್ದೀರಿ?' ಎಂದು ಆ ವದನವಿನ್ನೂ ಹೇಳುತ್ತಿದ್ದಂತೆ ಅವನಿಗೆ ಕಂಡಿತು. ತನ್ನ ಆತ್ಮದಲ್ಲಿ ಏನೊ ದಾರಿ ತಪ್ಪಿದ್ದಂತೆ, ತಾನು ಸರಿಪಡಿಸಲಾಗದ ಅಥವಾ ಮರೆಯಲಾಗದ ಪಾಪವನ್ನೆಸಗಿದ್ದಂತೆ ಅವನಿಗೆ ಭಾಸವಾಯಿತು. ಅಳಬೇಕೆಂದರೂ ಅಳು ಬರಲಿಲ್ಲ. ಮುದುಕ ಸಹ ಸಂಪುಟದ ಬಳಿ ಬಂದು, ಅವಳ ಎದೆಯ ಮೇಲೆ ಒಂದರ ಮೇಲೊಂದರಂತೆ ಹಿಡಿಸಿದ್ದ

ಸಪುರ ಮೆದು ಕೈಗಳನ್ನು ಚುಂಬಿಸಿದನು. 'ಹಾ, ನನಗೆ ನೀವೇನು ಮಾಡಿದ್ದೀರಿ, ಏಕೆ?' ಎಂಬುದಾಗಿ ಅವಳ ಮುಖ ತನ್ನನ್ನು ಪ್ರಶ್ನಿಸುತ್ತಿದ್ದಂತೆ ಮುದುಕನಿಗೆ ಭಾಸವಾಯಿತು. ಅವನು ಕೋಪದಿಂದ ಮರಳಿದನು.

* * *

ತರುವಾಯ ಐದು ದಿನ ಕಳೆದುವು. ಎಳೆಯ ರಾಜಕುಮಾರ ನಿಕೋಲಾಸ್ ಆಂಡ್ರೀವಿಚ್‌ನಿಗೆ ದೀಕ್ಷಾ ಸ್ನಾನವಾಯಿತು. ಮೊಲೆಯೂಡುವ ದಾದಿ ತನ್ನ ಗಲ್ಲದಿಂದ ಕೂಸಿನ ಹೊದಿಕೆಯನ್ನು ಅದುಮಿಕೊಂಡಿದ್ದಳು. ಪುರೋಹಿತ ಮಗುವಿನ ಸುಕ್ಕು ಹಿಡಿದ ಕೆಂಪನೆಯ ಅಂಗೈ ಮತ್ತು ಅಂಗಾಲುಗಳಿಗೆ ಹೆಬ್ಬಾತಿನ ಗರಿಯಿಂದ ಎಣ್ಣೆ ಹಚ್ಚಿದನು.

ಮಗುವಿನ ಧರ್ಮಪಿತನಾದ ಅವನ ತಾತ ಎತ್ತಿಕೊಂಡಿದ್ದ ಕೂಸನ್ನು, ಎಲ್ಲಿಯಾದರೂ ಕೆಡವಿ ಬಿಟ್ಟೇನೆಂಬ ಭಯದಿಂದ ಕಂಪಿಸುತ್ತ, ತವರದ ಪವಿತ್ರೋದಕ ಪಾತ್ರೆಯ ಸುತ್ತ ಪ್ರದಕ್ಷಿಣೆ ಮಾಡಿ, ಧರ್ಮಮಾತೆ ರಾಜಕುಮಾರಿ ಮೇರಿಯ ಕೈಗೆ ಕೊಟ್ಟನು. ತೀರ್ಥೋದಕದಲ್ಲಿ ಕೂಸು ಆಕಸ್ಮಾತ್ತಾಗಿ ಮುಳುಗಿ ಹೋದೀತೆಂಬ ಭಯದಿಂದ ನಡುಗುತ್ತ ರಾಜಕುಮಾರ ಆಂಡ್ರ್ಯೂ ಬೇರೊಂದು ಕೋಣೆಯಲ್ಲಿ ದೀಕ್ಷಾವಿಧಿಗಳ ಮುಗಿತಾಯಕ್ಕಾಗಿ ಕಾದು ಕುಳಿತನು. ದಾದಿ ಕೂಸನ್ನು ತನ್ನ ಬಳಿಗೆ ತಂದಾಗ, ಅವನು ಅತ್ಯಂತ ಆನಂದದಿಂದ ಅದರ ಮೇಲೆ ಕಣ್ಣಾಡಿಸಿದನು; ಮಗುವಿನ ಕೂದಲನ್ನಂಟಿಸಿದ್ದ ಮೇಣ ಮುಳುಗದೆ ತೇಲಾಡಿತೆಂದು ದಾದಿ ಹೇಳಿದಾಗ, ಅವನು ಸಮಾಧಾನದಿಂದ ತಲೆದೂಗಿದನು.

ಅಧ್ಯಾಯ ೧೦

ದೋಲೊಖೊವ್ – ಬೆಜುಖೋವ್‌ರ ದ್ವಂದ್ವಯುದ್ಧದಲ್ಲಿ ರೊಸ್ತೋವ್‌ನ ಪಾತ್ರವೂ ಇತ್ತೆಂಬ ವಾರ್ತೆ ಹಿರಿಯ ಶ್ರೀಮಂತನ ಶ್ರಮಪೂರ್ವಕ ಪ್ರಯತ್ನದಿಂದಾಗಿ ಮುಚ್ಚಿಹೋಗಿತ್ತು. ಅವನ ನಿರೀಕ್ಷೆಯಂತೆ ಅದೇನಾದರೂ ಪ್ರಕಟಗೊಂಡಿದ್ದರೆ ಮಗನಿಗೆ ಹಿಂಬಡ್ತಿ ದೊರೆಯುತ್ತಿದ್ದುದರಲ್ಲಿ ಸಂದೇಹವಿರಲಿಲ್ಲ. ಆದರೆ ರೊಸ್ತೋವ್ ಮಾಸ್ಕೊ ನಗರದ ಮಂಡಲಾಧಿಪತಿಯ ಸಹಾಯಾಧಿಕಾರಿಯಾಗಿ ನೇಮಕಗೊಂಡನು. ಆ ಕಾರಣದಿಂದಾಗಿ ಅವನು ತನ್ನ ಕುಟುಂಬದ ಜನರೊಡನೆ ಹಳ್ಳಿಗೆ ಹೋಗಲಾರದೆ, ನೂತನಾಧಿಕಾರದ ಜವಾಬ್ದಾರಿಯ ನಿರ್ವಹಣೆಗಾಗಿ ಅವನು ಇಡೀ ಬೇಸಗೆಯನ್ನು ಮಾಸ್ಕೋದಲ್ಲಿ ಕಳೆಯಬೇಕಾಯಿತು. ದೋಲೊಖೊವ್ ಚಿಕಿತ್ಸೆ ಪಡೆಯುತ್ತಿದ್ದಾಗ, ರೊಸ್ತೋವ್ ಅವನ ಆತ್ಮೀಯ ಮಿತ್ರನಾದನು. ತನ್ನನ್ನು ಅತ್ಯಂತ ವಾತ್ಸಲ್ಯದಿಂದ, ಭಾವವಶಳಾಗಿ ಪ್ರೀತಿಸುತ್ತಿದ್ದ ತನ್ನ ತಾಯಿಯ ಆರೈಕೆಯಲ್ಲಿ ದೋಲೊಖೊವ್ ಗುಣಮುಖನಾಗುತ್ತಿದ್ದನು. ಫೇದ್ಯನ ಆತ್ಮೀಯ ಗೆಳೆಯನಾದ್ದರಿಂದ ಮೇರಿ ಇವಾನೋವ್ನ ರೊಸ್ತೋವ್‌ನನ್ನು ತುಂಬ ಮೆಚ್ಚಿಕೊಂಡಿದ್ದಳು; ಆಗಾಗ್ಗೆ ಅವನ ಬಳಿ ತನ್ನ ಮಗನ ವಿಷಯ ಪ್ರಸ್ತಾಪಿಸುತ್ತಿದ್ದಳು.

‘ನೋಡಿ, ಶ್ರೀಮಂತರೆ, ನನ್ನ ಮಗನಂಥ ಪರಿಶುದ್ಧ ಉದಾತ್ತ ವ್ಯಕ್ತಿಗಳು ಇಂದಿನ ನೀತಿಭ್ರಷ್ಟ ಜಗತ್ತಿಗಲ್ಲ. ಈಗ ಯಾರಿಗೂ ಗುಣಶೀಲಗಳು ಬೇಕಿಲ್ಲ. ಅವು ಎಲ್ಲರಿಗೂ ಆಕ್ಷೇಪಕರವಾಗಿ ಕಾಣುತ್ತವೆ. ನಿಜ ಹೇಳಿ, ಶ್ರೀಮಂತರೆ, ಬೆಜುಖೋವ್‌ನ ವರ್ತನೆ ನಿಮಗೆ ಸರಿಯೆಂದು ತೋರಿತೆ? ಉದಾತ್ತ ಚೇತನನಾದ ಫೇದ್ಯ ಅವನನ್ನು ತುಂಬ ಪ್ರೀತಿಸುತ್ತಿದ್ದನು; ಈವೊತ್ತು ಸಹ ಅವನ ಬಗ್ಗೆ ಒಂದು ಕೆಟ್ಟ ಮಾತು ಆಡುವುದಿಲ್ಲ. ಪೀಟರ್ಸ್‌ಬರ್ಗ್‌ನಲ್ಲಿದ್ದಾಗ ಪೋಲೀಸ್ ಪೇದೆಯೊಡನೆ ಕುಚೇಷ್ಟೆ ನಡಸಿದರಲ್ಲವೆ? ಅದೆಲ್ಲ ಇಬ್ಬರೂ ಜತೆಯಲ್ಲಿ ನಡಸಿದ್ದು ತಾನೆ? ಆಮೇಲೇನಾಯಿತು? ಬೆಜುಖೋವ್ ಸಂಪೂರ್ಣವಾಗಿ ಮುಕ್ತನಾದ. ಎಲ್ಲ ಹೊರೆ ಫೇದ್ಯಾನ ಭುಜಗಳ ಮೇಲೆ ಬಿತ್ತು. ಅವನೆಷ್ಟು ಕಷ್ಟಪಡಬೇಕಾಯ್ತು ಗೊತ್ತೆ? ಅವನನ್ನು ಮತ್ತೆ ಸೇರಿಸಿಕೊಂಡರು, ನಿಜ. ಅವನನ್ನು ಸೇರಿಸಿಕೊಳ್ಳದಿರುವುದು ಸಾಧ್ಯವೆ? ಅವನಂಥ ಸಾಹಸಿಗಳು ಈ ನಾಡಿನಲ್ಲಿ ವಿರಳ! ಈಗ, ಈ ದ್ವಂದ್ವಯುದ್ಧ! ಈ ಜನಕ್ಕೆ ಮಾನ ಮರ್ಯಾದೆ ಕನಿಕರ ಬೇಡವೆ? ಒಬ್ಬನೇ ಮಗನೆಂದು ತಿಳಿದೂ ತಿಳಿದೂ, ಕಾಲ್ಕೆರೆದು, ಅವನ ಮೇಲೆ ನೇರವಾಗಿ ಗುಂಡು ಹಾರಿಸುವುದು ತರವೆ? ನಮ್ಮ ಮೇಲೆ ದೇವರ ದಯೆ ಇದ್ದದ್ದರಿಂದ ಏನೂ ಆಗಲಿಲ್ಲ. ಅದೆಲ್ಲ ಏತಕ್ಕಾಗಿ? ಈ ದಿನ ಗುಪ್ತ ಪ್ರಣಯದಲ್ಲಿ ತೊಡಗದವರಾರು? ಆ ಬಗ್ಗೆ ಅವನಿಗೆ ಸಹನೆ ಇರಲಿಲ್ಲವಾದರೆ, ಅದು ತಿಂಗಳುಗಟ್ಟಳೆ ಬೆಳೆಯಲು ಅವನೇಕೆ ಅವಕಾಶ ಕೊಟ್ಟ? ಫೇದ್ಯ ತನಗೆ ಸಾಲಕೊಡಬೇಕಾಗಿದ್ದುದರಿಂದ, ತನ್ನ ಜತೆ ಕಲಹ ಮಾಡುವುದಿಲ್ಲವೆಂದು ತಿಳಿದು ಅವನು ಕಾಲ್ಕೆರೆದು ಕರೆದನಲ್ಲವೆ? ಎಂಥ ನೀಚತನ! ಎಂಥ ಅಯೋಗ್ಯ! ಫೇದ್ಯನ ವಿಷಯ ನಿಮಗೀಗ ಅರ್ಥವಾಗಿದೆ, ಪ್ರಿಯ ಶ್ರೀಮಂತರೆ. ಆ ಕಾರಣದಿಂದಲೇ ನೀವು ನನಗೆ ಅಚ್ಚು ಮೆಚ್ಚಾಗಿದ್ದೀರಿ. ಕೆಲವೇ ಕೆಲವು ಜನ ಮಾತ್ರ ಅವನನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲರು. ಅವನದು ಉದಾತ್ತ ಸ್ವರ್ಗೀಯ ಚೇತನ!’

ದೋಲೊಖೊವ್ ಸಹ ಚೇತರಿಕೆಯ ಕಾಲದಲ್ಲಿ ರೊಸ್ತೋವ್‌ನೊಡನೆ ಯಾರೂ ನಿರೀಕ್ಷಿಸದ ರೀತಿಯಲ್ಲಿ ಮಾತಾಡಿದನು: ‘ನಾನು ಕೆಟ್ಟವನೆಂದು ಜನ ತಿಳಿದುಕೊಂಡಿದ್ದಾರೆಂಬುದು ನನಗೆ ಗೊತ್ತು. ತಿಳಿದುಕೊಂಡಿರಲಿ! ನಾನು ಪ್ರೀತಿಸುವವರು ವಿನಾ, ಉಳಿದವರನ್ನು ತೃಣಕ್ಕೆ ಕಡೆಯಾಗಿ ಕಂಡಿದ್ದೇನೆ. ನಾನು ಯಾರನ್ನು ಪ್ರೀತಿಸುತ್ತೇನೆಯೊ ಅವರಿಗೆ ನನ್ನ ಪ್ರಾಣ ಕೊಡಲು ಸಿದ್ಧವಾಗಿದ್ದೇನೆ. ಇತರರು ನನಗಡ್ಡ ಬಂದರೆಂದರೆ, ಅವರ ಕುತ್ತಿಗೆ ಹಿಸುಕಿಬಿಡುತ್ತೇನೆ. ನನಗೆ ಅಮೂಲ್ಯವಾದ ವಸ್ತುವೆಂದರೆ ನನ್ನ ಪೂಜ್ಯ ಮಾತೆ. ಜತೆಗೆ ಇಬ್ಬರು ಮೂವರು ಗೆಳೆಯರಿದ್ದಾರೆ. ಅವರಲ್ಲಿ ನೀನೂ ಒಬ್ಬ. ಅಪಕಾರಿಗಳೊ ಉಪಕಾರಿಗಳೊ ಎನ್ನುವುದನ್ನು ತಿಳಿದು ಇತರರ ಬಗ್ಗೆ ನಾನು ಲಕ್ಷ್ಯ ಕೊಡುತ್ತೇನೆ. ಅವರಲ್ಲಿ ಬಹಳಷ್ಟು ಮಂದಿ, ವಿಶೇಷವಾಗಿ ಸ್ತ್ರೀಯರು ತುಂಬ ಕೆಟ್ಟವರು. ನಿಜ, ಗೆಳೆಯ, ನನ್ನ ಮಾತು. ನಾನು ಉದಾತ್ತ ಸ್ವಭಾವದ, ನಿರ್ಮಲ ಮನಸ್ಸಿನ, ಆದರಣೀಯ ಪುರುಷರನ್ನು ಸಂಧಿಸಿದ್ದೇನೆ. ಆದರೆ ದುಷ್ಟರಲ್ಲದ ಸ್ತ್ರೀಯರನ್ನು—ಶ್ರೀಮಂತೆಯರಾಗಲಿ, ಅಡಗೆಯವರಾಗಲಿ—ಇನ್ನು ಕಾಣಬೇಕಾಗಿದೆ. ದೈವೀ ಪರಿಶುದ್ಧತೆಯ ಮತ್ತು ಶ್ರದ್ಧಾನಿಷ್ಠೆಯ ಸ್ತ್ರೀಯರನ್ನು ಈ ತನಕ ನಾನು ಕಂಡಿಲ್ಲ. ಅಂಥವರು ನನ್ನ

ಕಣ್ಣಿಗೆ ಬಿದ್ದಿದ್ದರೆ, ಅವರಿಗಾಗಿ ನನ್ನ ಪ್ರಾಣವನ್ನೆ ಸಮರ್ಪಿಸುತ್ತಿದ್ದೆ. ಆದರೆ ಅವರು!....' ಎಂದವನು ತಿರಸ್ಕಾರದ ಭಂಗಿಯನ್ನು ಪ್ರದರ್ಶಿಸಿದನು. 'ನನ್ನ ಮಾತನ್ನು ನಂಬುಗೆಳೆಯ, ನನಗೆ ಚೈತನ್ಯ ನೀಡುವ, ಆತ್ಮೋನ್ನತಿಯನ್ನುಂಟುಮಾಡುವ, ನನ್ನನ್ನು ಪವಿತ್ರಗೊಳಿಸುವ ದೈವೀ ಪ್ರಾಣಿಯೊಬ್ಬಳನ್ನು ಕಾಣಬಹುದೆಂಬ ಭರವಸೆಯಿಂದ ನನ್ನ ಜೀವವನ್ನುಳಿಸಿಕೊಂಡಿದ್ದೇನೆ, ನನ್ನ ಬದುಕಿಗೆ ಬೆಲೆ ಕೊಡುತ್ತಿದ್ದೇನೆ. ಆದರೆ ನಿನಗದು ಅರ್ಥವಾಗುವುದಿಲ್ಲ.'

'ನಿಜ ನಿಜ, ನನಗರ್ಥವಾಗುತ್ತದೆ.' ಎಂದು ಹೊಸಗೆಳೆಯನ ಪ್ರಭಾವಕ್ಕೊಳಗಾಗಿದ್ದ ರೊಸ್ಟೋವ್ ಉತ್ತರಿಸಿದನು.

ಶರದೃತುವಿನಲ್ಲಿ ರೊಸ್ಟೋವ್ ಕುಟುಂಬ ಮಾಸ್ಕೊ ನಗರಕ್ಕೆ ಹಿಂದಿರುಗಿತು. ಮಾಗಿಯ ಕಾಲದ ಪ್ರಾರಂಭದಲ್ಲಿ ಡೆನಿಸೋವನೂ ಮರಳಿ, ಅವರೊಡನೆಯೆ ನಿಂತನು. ನಿಕೊಲಾಸ್ ಮಾಸ್ಕೋದಲ್ಲಿ ಕಳೆದ ೧೮೦೬ ನೆಯ ಸಂವತ್ಸರದ ಹೇಮಂತ ಋತುವಿನ ಪ್ರಥಮಾರ್ಧ ಅವನಿಗೆ ಮಾತ್ರವಲ್ಲ, ಇಡೀ ಕುಟುಂಬಕ್ಕೆ ಅತ್ಯಂತ ಸುಖದಾಯಕವೂ ರಂಜನೀಯವೂ ಆದ ಕಾಲವಾಗಿತ್ತು. ನಿಕೋಲಾಸ್ ತಂದೆಯ ಮನೆಗೆ ಅನೇಕ ತರುಣರನ್ನು ಕರೆತರುತ್ತಿದ್ದನು. ವೇರ ಇಪ್ಪತ್ತು ವರ್ಷದ ಚೆಲುವೆ; ಮುಗುಳೊಡೆಯುವ ಹೂವಿನ ಮೋಹಕತ್ವವನ್ನು ಪಡೆದಿದ್ದ ಸೋನ್ಯ ಷೋಡಶಿ; ನತಾಷ ಒಮ್ಮೆ ಹರೆಯದವಳಂತೆ, ಚಿತ್ತಾಕರ್ಷಕವಾಗಿ ತೋರಿದರೆ ಮತ್ತೊಮ್ಮೆ ಮಗುವಿನಂತೆ ವಿನೋದವಾಗಿ ವರ್ತಿಸುತ್ತಿದ್ದಳು.

ಮೋಹಕ ತರುಣಿಯರಿರುವ ಎಲ್ಲ ಮನೆಗಳಂತೆ, ಆ ಕಾಲದ ರೊಸ್ಟೋವ್‌ರ ಮನೆ ಪ್ರಣಯ ವಾತಾವರಣದಿಂದ ರಂಜನೀಯವಾಗಿತ್ತು. ಆ ಮನೆಗೆ ಬರುತ್ತಿದ್ದ ಪ್ರತಿಯೊಬ್ಬ ತರುಣನೂ, ಪರಿಣಾಮಕಾರಿ ಮಂದಹಾಸದ ಪಡ್ಡೆಹುಡುಗಿಯರ ಎಳೆ ಮುಖಗಳನ್ನು ನೋಡುತ್ತ, (ಅವರು ನಗುತ್ತಿದ್ದುದು ಪ್ರಾಯಶಃ ತಮ್ಮ ಸುಖಕ್ಕಾಗಿ ಮಾತ್ರ), ತಮ್ಮ ಸುತ್ತಮುತ್ತಣ ಉತ್ಸಾಹಪೂರ್ಣವಾದ ಸಂಭ್ರಮವನ್ನು ಪರಿಭಾವಿಸುತ್ತ, ಗೀತ ಗಾನಗಳ ಆಮೋದ ಪ್ರಮೋದಗಳಲ್ಲಿ ಮೈಮರೆಯುತ್ತ, ಎಲ್ಲಕ್ಕೂ ಸಿದ್ಧವಾಗಿ, ಆಶಾವಾದಿಗಳಾಗಿ ಬಾಯಿಗೆ ಬಂದಂತೆ, ಆದರೆ ಸ್ನೇಹಪೂರ್ವಕವಾಗಿ ಗಳಹುತ್ತಿದ್ದ ಕೋರಿಯರ ಹರಟೆಯನ್ನು ಆಲಿಸುತ್ತ, ಏಕರೀತಿಯ ಸುಖಸಂಭ್ರಮವನ್ನನುಭವಿಸುತ್ತಿದ್ದರು. ಅಷ್ಟೇ ಅಲ್ಲ, ಆ ಕೋರಿಯರನ್ನು ಪ್ರೇಮಿಸಿ, ಸುಖವನ್ನು ಹಂಚಿಕೊಳ್ಳುವ ನಿರೀಕ್ಷೆಯೂ ಅವರದಾಗಿತ್ತು.

ರೊಸ್ಟೋವ್ ತನ್ನ ಮನೆಯವರಿಗೆ ಪರಿಚಯಿಸಿಕೊಟ್ಟ ಯುವಕರಲ್ಲಿ ಡೋಲೊಖೋವ್ ಮೊದಲನೆಯವನು. ನತಾಷ ಹೊರತಾಗಿ ಉಳಿದವರೆಲ್ಲರೂ ಅವನನ್ನು ಮೆಚ್ಚಿಕೊಂಡಿದ್ದರು. ನತಾಷ ಅವನನ್ನು ಕುರಿತು ತನ್ನ ಅಣ್ಣನೊಡನೆ ಜಗಳವಾಡಿದ್ದಳು. ಅವನು ಕೆಟ್ಟವನೆಂದು, ಬೆಜುಖೋವ್‌ನೊಡನೆ ನಡೆಸಿದ ದ್ವಂದ್ವದಲ್ಲಿ ಡೋಲೊಖೊವ್‌ನೆ ಹೊರತು ಪಿಯರಿ ತಪ್ಪಿತಸ್ಥನಲ್ಲವೆಂದೂ, ಜತೆಗೆ ಅವನು ಕೃತ್ರಿಮ ಹಾಗೂ, ಅಪ್ರಿಯ ವ್ಯಕ್ತಿಯೆಂದೂ ಅವಳು ವಾದಿಸಿದ್ದಳು. 'ಅವನನ್ನು ಅರ್ಥಮಾಡಿಕೊಳ್ಳಬೇಕಾದ್ದೇನೂ ಇಲ್ಲ.' ಎಂದವಳು ದೃಢ ಹಠದಿಂದ ಅಬ್ಬರಿಸಿದಳು. 'ಅವನು

ದುಷ್ಟ, ನಿರ್ದಯಿ. ನಿನ್ನ ಇನ್ನೊಬ್ಬ ಗೆಳೆಯನಿದ್ದಾನಲ್ಲ ಡೆನಿಸೋವ್ ಅವನು ಸ್ತ್ರೀಲಂಪಟನಾದರೂ ಅವನನ್ನು ಮೆಚ್ಚಿಕೊಂಡಿದ್ದೇನೆ. ನಿನಗೀಗಲಾದರೂ ಗೊತ್ತಾಯಿತಲ್ಲ, ನನಗೆಲ್ಲ ಅರ್ಥವಾಗುತ್ತದೆಂದು. ನಾನು ಹೇಗೆ ಹೇಳಬೇಕೊ ಗೊತ್ತಿಲ್ಲ ...ಅವನ ಲೆಕ್ಕಾಚಾರದ ಹಿಂದೆ ಏನೋ ಉದ್ದೇಶವಿರುವಂತಿದೆ. ಅದು ನನಗಿಷ್ಟವಿಲ್ಲ, ಆದರೆ ಡೆನಿಸೋವ್....'

'ಓ ಹಾಗೊ, ಡೆನಿಸೋವ್‌ನ ರೀತಿಯೇ ಬೇರೆ' ಎಂಬ ನಿಕೋಲಾಸ್‌ನ ಉತ್ತರದಲ್ಲಿ ದೋಲೊಖೊವ್‌ನೊಡನೆ ಹೋಲಿಸಿದರೆ ಡೆನಿಸೋವ್ ಏನೇನೂ ಇಲ್ಲವೆಂಬ ಭಾವನೆ ವ್ಯಕ್ತಗೊಂಡಿತು. 'ದೋಲೊಖೊವ್‌ನ ಹೃದಯ ಎಷ್ಟು ಮೃದುವಾದುದೆನ್ನುವುದನ್ನು ತಿಳಿಯಬೇಕಾದರೆ, ತನ್ನ ತಾಯಿಯೊಡನಿದ್ದಾಗ ಅವನನ್ನು ನೋಡಬೇಕು. ಅದೆಂಥ ಹೃದಯ!'

'ಅದೆಲ್ಲ ನನಗೆ ಗೊತ್ತಿಲ್ಲ. ಅವನ ಜತೆಯಲ್ಲಿದ್ದಾಗ ನನಗೆ ತುಂಬ ಮುಜುಗರವಾಗುತ್ತದೆ. ಅವನು ಸೋನ್ಯಾಳನ್ನು ಪ್ರೀತಿಸುತ್ತಿದ್ದಾನೆನ್ನುವುದು ನಿನಗೆ ತಿಳಿದಿರಲಿ.'

'ಎಂಥ ಹುಚ್ಚುಮಾತು.....'

'ಆ ಬಗ್ಗೆ ನನಗೆ ಖಾತರಿಯಿದೆ. ನೀನೇ ನೋಡುತ್ತೀಯೆ.'

ನತಾಷಳ ಭವಿಷ್ಯವಾಣಿ ನಿಜವಾಯಿತು. ಸ್ತ್ರೀಸಮಾಜವೆಂದರೆ ಹಿಡಿಸದ ದೋಲೊಖೊವ್ ಮೇಲಿಂದ ಮೇಲೆ ರೊಸ್ತೋವ್ ಮನೆಗೆ ಬರುತ್ತಿದ್ದನು. ಯಾರಿಗೋಸ್ಕರ ಅವನು ಬರುತ್ತಿದ್ದನೆಂಬುದು (ಆ ಬಗ್ಗೆ ಯಾರು ಸೊಲ್ಲೆತ್ತದಿದ್ದರೂ) ಬಹು ಬೇಗ ಸ್ಪಷ್ಟವಾಯಿತು. ಅವನು ಬರುತ್ತಿದ್ದುದು ಸೋನ್ಯಳಿಗಾಗಿ. ಆ ವಿಷಯವನ್ನು ರಟ್ಟುಮಾಡುವ ಧೈರ್ಯ ಸೋನ್ಯಳಲ್ಲಿಲ್ಲವಾದರೂ, ದೋಲೊಖೊವ್‌ನನ್ನು ಕಂಡಾಗಲೆಲ್ಲ ಅವಳ ಮುಖ ನಾಚಿಗೆಯಿಂದ ಕೆಂಪೇರುತ್ತಿತ್ತು.

ದೋಲೊಖೊವ್ ಹಲವುಸಲ ರೊಸ್ತೋವ್‌ರ ಮನೆಯಲ್ಲಿಯೇ ಊಟ ಮುಗಿಸುತ್ತಿದ್ದನು. ಆ ಕುಟುಂಬದವರು ಭಾಗವಹಿಸುತ್ತಿದ್ದ ಆಟಪಾಟ ವಿನೋದಗಳಲ್ಲಿ ತಪ್ಪದೆ ಹಾಜರಿರುತ್ತಿದ್ದನು. ಅಂಥ ಸಂದರ್ಭಗಳಲ್ಲೆಲ್ಲ ಅವನ ಗಮನ ಸೋನ್ಯಳಲ್ಲಿ ಕೇಂದ್ರೀಕೃತವಾಗುತ್ತಿತ್ತು. ತನ್ನ ಕಡೆಗೆ ಅವನು ಕುಡಿನೋಟ ಬೀರಿದಾಗಲೆಲ್ಲ ಅವಳ ಮುಖ ವಿವರ್ಣವಾಗುತ್ತಿತ್ತು. ಆ ನೋಟವನ್ನು ಗಮನಿಸಿದಾಗ ಹಿರಿಯ ಶ್ರೀಮಂತೆ ಮತ್ತು ನತಾಷರ ಮುಖಗಳೂ ವಿವರ್ಣವಾಗುತ್ತಿದ್ದುವು.

ಬೇರೊಬ್ಬನನ್ನು ಪ್ರೀತಿಸುತ್ತಿದ್ದ ನೀಲಿಗಣ್ಣಿನ ಬೆಡಗಿಯ ಅದಮ್ಯ ಪ್ರಭಾವಕ್ಕೆ ಈ ವಿಚಿತ್ರತರದ ಗಟ್ಟಿ ಮನುಷ್ಯ ಒಳಗಾಗಿದ್ದನೆಂಬುದು ಸ್ಪಷ್ಟವಾಗಿತ್ತು.

ದೋಲೊಖೊವ್ ಸೋನ್ಯರ ಬಾಂಧವ್ಯದಲ್ಲಿ ರೊಸ್ತೋವ್ ಹೊಸ ಬದಲಾವಣೆಯನ್ನು ಗಮನಿಸಿದನು. ಆದರೆ ಆ ಬದಲಾವಣೆಗಳ ಬಗ್ಗೆ ಅವನು ತಲೆ ಕೆಡಿಸಿಕೊಳ್ಳಲಿಲ್ಲ. 'ಅವರು ಯಾವಾಗಲೂ ಒಬ್ಬನಲ್ಲ, ಮತ್ತೊಬ್ಬನನ್ನು ಪ್ರೀತಿಸುತ್ತಾರೆ' ಎಂದವನು ಸೋನ್ಯ ಮತ್ತು ನತಾಷರ ಬಗ್ಗೆ ಎಣಿಕೆ ಹಾಕಿಕೊಂಡನು. ಆದರೆ ಅವನು ಮುನ್ನಿನಂತೆ ಸೋನ್ಯ ಮತ್ತು ದೋಲೊಖೊವ್‌ರ ಬಗ್ಗೆ ನಿರಾತಂಕವಾಗಿರಲಿಲ್ಲ; ಮನೆಯ ಹೊರಗೆಯೇ ಹೆಚ್ಚಾಗಿರುತ್ತಿದ್ದನು.

೧೮೦೬ ನೆಯ ಸಂವತ್ಸರದ ಶರತ್ಕಾಲದಲ್ಲಿ ಪ್ರತಿಯೊಬ್ಬರೂ ಕಳೆದ ಸಾಲಿಗಿಂತ ಹೆಚ್ಚು ಉತ್ಸಾಹದಿಂದ ನೆಪೋಲಿಯನ್ ಮೇಲಣ ಯುದ್ಧದ ವಿಷಯವಾಗಿ ಮಾತಾಡ ತೊಡಗಿದರು. ಪ್ರತಿ ಸಾವಿರಕ್ಕೆ ಹತ್ತು ಮಂದಿಯಂತೆ ಕ್ರಮಿಕ ಸೈನ್ಯಕ್ಕೂ, ಒಂಬತ್ತು ಮಂದಿಯಂತೆ ಪ್ರಜಾಸೈನ್ಯಕ್ಕೂ ಹೊಸಬರನ್ನು ಸೇರಿಸಿಕೊಳ್ಳತಕ್ಕದ್ದೆಂದು ಆಜ್ಞೆಗಳು ಪ್ರಕಟಗೊಂಡುವು. ಎಲ್ಲೆಲ್ಲಿಯೂ ಜನ ಬೋನಪಾರ್ಟ್‌ಗೆ ಶಾಪ ಹಾಕುತ್ತಿದ್ದರು. ಮಾಸ್ಕೋನಗರದಲ್ಲಂತು ಬರಲಿದ್ದ ಯುದ್ಧವೊಂದೆ ಸುದ್ದಿಯಾಗಿತ್ತು. ಯುದ್ಧ ಸಿದ್ಧತೆಯ ಬಗ್ಗೆ ರೊಸ್ತೋವ್ ಕುಟುಂಬಕ್ಕಿದ್ದ ಆಸಕ್ತಿಯೆಂದರೆ, ರೊಸ್ತೋವ್ ಮಾಸ್ಕೋ ನಗರವನ್ನು ಬಿಟ್ಟುಹೋಗಬೇಕಾಗಿದ್ದ ವಿಚಾರ. ಕ್ರಿಸ್‌ಮಸ್ ತರುವಾಯ, ಡೆನಿಸೋವ್‌ನ ರಜೆ ಮುಗಿದನಂತರ, ಅವನೊಡನೆ ರೊಸ್ತೋವ್ ಸಹ ತನ್ನ ದಳವನ್ನು ಸೇರಿಕೊಳ್ಳಬೇಕಾಗಿತ್ತು. ಸನ್ನಿಹಿತವಾಗುತ್ತಿದ್ದ ನಿರ್ಗಮನದಿಂದ ಅವನ ಆಮೋದ ಪ್ರಮೋದಗಳು ಕಡಿಮೆಯಾಗಲಿಲ್ಲ; ಅಷ್ಟುಮಾತ್ರವಲ್ಲ, ಅವನ ಸುಖಸಂತೋಷಗಳಿಗೆ ಹೊಸ ಹುರುಪು ಸಂಗಳಿಸಿತ್ತು. ಬಹುವೇಳೆ ಮನೆಯ ಹೊರಗಿದ್ದು ಔತಣಕೂಟ, ಸಮಾಜಗೋಷ್ಠಿ ಮತ್ತು ನೃತ್ಯಮೇಳಗಳಲ್ಲಿ ಅವನು ವಿನೋದವಾಗಿ ಕಾಲಕಳೆಯುತ್ತಿದ್ದನು.

ಅಧ್ಯಾಯ ೧೧

ಕ್ರಿಸ್‌ಮಸ್ ಹಬ್ಬ ಮುಗಿದ ಮೂರನೆಯ ದಿನ ನಿಕೊಲಾಸ್ ಅಪರೂಪವಾಗಿ ಮನೆಯಲ್ಲಿ ಊಟಮಾಡಿದನು. ಎಪಿಫೆನಿಯ ನಂತರ (ಕ್ರಿಸ್ತಪ್ರತ್ಯಕ್ಷದರ್ಶನದ ಹಬ್ಬ) ಅವನು ಮತ್ತು ಡೆನಿಸೋವ್ ದಳ ಸೇರುವುದಕ್ಕಾಗಿ ಮನೆ ಬಿಡುತ್ತಿದ್ದರಾದ್ದರಿಂದ ದೊಡ್ಡ ಪ್ರಮಾಣದಲ್ಲಿ ಬೀಳ್ಕೊಡಿಗೆ ಔತಣಕೂಟ ಏರ್ಪಾಡಾಗಿತ್ತು. ದೋಲೊಖೊವ್, ಡೆನಿಸೋವ್‌ರನ್ನೊಳಗೊಂಡು ಇಪ್ಪತ್ತು ಮಂದಿ ಕೂಟದಲ್ಲಿ ಹಾಜರಿದ್ದರು.

ಈ ರಜಾದಿನಗಳಲ್ಲಿದ್ದಂತೆ ಹಿಂದೆಂದೂ ರೊಸ್ತೋವ್ ಕುಟುಂಬದಲ್ಲಿ ಅಷ್ಟೊಂದು ಉತ್ಸಾಹದ ಪ್ರಣಯ ವಾತಾವರಣವಿರಲಿಲ್ಲ; ಪ್ರೇಮ ವ್ಯಾಪಾರ ಗಾಳಿ ಸುದ್ದಿಯಾಗಿರಲಿಲ್ಲ. ಸುಖದ ಕ್ಷಣಗಳನ್ನು ಹಾಳುಮಾಡಿಕೊಳ್ಳದೆ, ಭದ್ರವಾಗಿ ಹಿಡಿದುಕೊ! ಪ್ರೀತಿಸುವುದಕ್ಕಿದೆ, ಪ್ರೀತಿಗೂ ಪಾತ್ರನಾಗು. ಈ ಜಗತ್ತಿನಲ್ಲಿ ಅದೊಂದೇ ಸತ್ಯ, ಉಳಿದದ್ದೆಲ್ಲ ಮಿಥ್ಯ. ಇಲ್ಲಿ ನಾವು ಆಸಕ್ತಿವಹಿಸಬೇಕಾದ ವಿಚಾರವೆಂದರೆ ಇದೊಂದೇ!' ಎಂಬ ಜೀವನ ಮೀಮಾಂಸೆ ಸ್ಥಳದ ಮಹಿಮೆಯಿಂದ ಸುಸಂವೇದ್ಯವಾಗುತ್ತಿತ್ತು.

ಎರಡು ಜೋಡಿ ಕುದುರೆಗಳು ಸುಸ್ತಾದರೂ, ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದ ಎಲ್ಲ ಸ್ಥಳಗಳಿಗಾಗಲಿ, ಆಹ್ವಾನವಿದ್ದ ಎಲ್ಲ ಕಡೆಗಳಿಗಾಗಲಿ ರೊಸ್ತೋವ್ ಹೋಗಲಾಗಲಿಲ್ಲ. ಭೋಜನಕೂಟದ ಸಮಯಕ್ಕೆ ಮಾತ್ರ ಅವನು ಹಿಂದಿರುಗಿದ್ದನು. ಒಳಗೆ ಪ್ರವೇಶಿಸುತ್ತಿದ್ದಂತೆ ಅವನು ಮನೆಯಲ್ಲಿ ಪ್ರಣಯ ವಾತಾವರಣದ ಉದ್ವೇಗವನ್ನೂ, ಹಾಜರಿದ್ದ ಕೆಲವು ಮಂದಿಯ ವಿಚಿತ್ರ ಕಿರಿಕಿರಿಯನ್ನೂ ಗಮನಿಸಿದನು. ಸೋನ್ಯ ದೋಲೊಖೊವ್ ಮತ್ತು ಹಿರಿಯ ಶ್ರೀಮಂತೆಯರು ಬಹುಮಟ್ಟಿಗೆ, ನತಾಷ ತುಸುಮಟ್ಟಿಗೆ ಕಳವಳಗೊಂಡಿದ್ದರು. ಊಟಕ್ಕೆ ಮುಂಚೆ ಸೋನ್ಯ ಮತ್ತು ದೋಲ್‌ಖೊವ್‌ರ

ನಡುವೆ ಏನೋ ವಿಶೇಷ ನಡೆದಿರಬೇಕೆಂದು ಗ್ರಹಿಸಿದ ನಿಕೊಲಾಸ್ ತನ್ನ ಸಹಜ ದಯಾಪರತೆಯಿಂದಾಗಿ ಭೋಜನ ಸಮಯದಲ್ಲಿ ಅವರಿಬ್ಬರೊಡನೆ ಸೌಜನ್ಯದಿಂದಲೂ ಎಚ್ಚರಿಕೆಯಿಂದಲೂ ವರ್ತಿಸಿದನು. ಅಂದೇ ಸಂಜೆ, ರಜ ದಿನಗಳಲ್ಲಿ ತನ್ನ ಶಿಷ್ಯರಿಗಾಗಿ ನೃತ್ಯಗುರು ಆಯೊಗೆಲ್ ಏರ್ಪಡಿಸಿದ್ದ ನೃತ್ಯ ಮೇಳವೂ ಇತ್ತು.

'ನಿಕೊಲಾಸ್, ಆಯೊಗೆಲ್ ನೃತ್ಯಮೇಳಕ್ಕೆ ಬರ್ತೀಯಾ? ದಯಮಾಡಿ ಬಾ: ಆಯೊಗೆಲ್ ಸಹ ನಿನಗೆ ಆಹ್ವಾನ ನೀಡಿದ್ದಾರೆ. ವಸಿಲಿ ದಿಮಿತ್ರಿಚ್ (ಡೆನಿಸೋವ್) ಸಹ ಬರುತ್ತಿದ್ದಾರೆ' ಎಂದು ನತಾಷ ವಿನಂತಿಸಿಕೊಂಡಳು.

'ಶ್ರೀಮಂತೆ ಹುಕುಂ ಮಾಡಿದರೆ ನಾನೆಲ್ಲಿಗಾದರೂ ಹೋಗುತ್ತೇನೆ' ಎಂದು ಡೆನಿಸೋವ್ ನುಡಿದನು. ಅವನಾಗಲೆ ತಾನು ನತಾಷಳ ಕಾವುಕಲಿಯೆಂದು ತಿಳಿದುಕೊಂಡಿದ್ದ. 'ನಾನು ನರ್ತನದಲ್ಲಿ ಭಾಗವಹಿಸಲು ಸಹ ಸಿದ್ಧನಿದ್ದೇನೆ.'

'ಸಮಯವಿದ್ದರೆ ನೋಡ್ತೇನೆ. ಆದರೆ ಅರ್ಖಾರೋವರ ಕುಟುಂಬ ಏರ್ಪಡಿಸಿರುವ ಸಂತೋಷಕೂಟಕ್ಕೆ ಬರುವುದಾಗಿ ವಚನ ನೀಡಿದ್ದೇನೆ' ಎಂದು ನಿಕೊಲಾಸ್ ಉತ್ತರಿಸಿದನು.

'ನೀನೊ?' ಎಂದವನು ದೋಲೊಖೊವ್‌ನನ್ನು ಕೇಳಿದನು. ತಾನು ಆ ಪ್ರಶ್ನೆಯನ್ನು ಹಾಕಬಾರದಿತ್ತೆಂದು ಕೂಡಲೇ ದೋಲೊಖೊವ್‌ನ ಮುಖಭಾವದಿಂದ ಅವನಿಗರಿವಾಯಿತು.

'ಪ್ರಾಯಶಃ' ಎಂದು ದೋಲೊಖೊವ್ ಸೋನ್ಯಳ ಕಡೆಗೆ ಕಡಿನೋಟ ಬೀರುತ್ತ ಉದಾಸೀನವಾಗಿ, ಕೋಪದಿಂದ ನುಡಿದನು. ಕ್ಲಬ್ ಔತಣಕೂಟದಲ್ಲಿ ಪಿಯರಿಯ ಕಡೆಗೆ ಬೀರಿದ್ದ ಸಿಡುಕುನೋಟವನ್ನೆ ಮುಖಸಿಂಡರಿಸಿಕೊಂಡು ಅವನು ನತಾಷಳ ಕಡೆಗೆ ಹರಿಸಿದನು.

'ಇಲ್ಲೇನೊ ನಡೆದಿದೆ?' ಎಂದು ನಿಕೊಲಾಸ್ ಊಹಿಸಿದನು. ಭೋಜನ ಮುಗಿದ ಕೂಡಲೇ ದೋಲೊಖೊವ್ ಆ ಜಾಗವನ್ನು ಬಿಟ್ಟಾಗ ಅವನ ಊಹೆ ನಿಜವಾಗಿ ಕಂಡಿತು. ಅವನು ನತಾಷಳನ್ನು ಪಕ್ಕಕ್ಕೆ ಕರೆದು, ನಡೆದ ಸಂಗತಿಯೇನೆಂದು ವಿಚಾರಿಸಿದನು.

'ನಾನು ನಿನಗಾಗಿಯೇ ಕಾಯುತ್ತಿದ್ದೆ' ಎಂದು ನತಾಷ ಕರೆದ ಕೂಡಲೇ ಅಣ್ಣನ ಬಳಿಗೆ ಓಡಿದಳು. 'ನಾನು ನಿನಗೆ ಮೊದಲೇ ಹೇಳಿದೆ. ಆದರೆ ನೀನು ನನ್ನನ್ನು ನಂಬಲಿಲ್ಲ. ಅವನು ಸೋನ್ಯ ಜತೆ ಮದುವೆಯ ಪ್ರಸ್ತಾಪವೆತ್ತಿದ್ದಾನೆ' ಎಂದವಳು ವಿಜಯೋತ್ಸಾಹದಿಂದ ನುಡಿದಳು.

ಈಚೀಚೆಗೆ ನಿಕೊಲಾಸ್ ಸೋನ್ಯಳ ವಿಷಯವನ್ನು ಹೆಚ್ಚಾಗಿ ತಲೆಗೆಹಚ್ಚಿಕೊಂಡಿರಲಿಲ್ಲ. ಆದ್ದರಿಂದ ಆ ಸುದ್ದಿಯಿಂದಾಗಿ ಸಂಬಂಧದ ಎಳೆಯೊಂದು ಕಿತ್ತುಕೊಂಡು ಹೋಗುತ್ತಿದ್ದುದಾಗಿ ಅವನಿಗನ್ನಿಸಿತು. ಆಸ್ತಿಪಾಸ್ತಿಯಿಲ್ಲದ ಅನಾಥ ಹುಡುಗಿಗೆ ದೋಲೊಖೊವ್ ತಕ್ಕ ವರ ಮಾತ್ರವಲ್ಲ, ಅನೇಕಗವನು ಆಣೆ ಜೋಡಿಯೆಂದವನು ಯೋಚಿಸಿದನು. ಹಿರಿಯ ಶ್ರೀಮಂತೆಯು ಹಾಗೂ ಸಮಾಜದ ದೃಷ್ಟಿಯಿಂದ ಅವಳು ಅವನನ್ನು ತಿರಸ್ಕರಿಸಲಾರಳೆಂದು ತಿಳಿದನು. ಆ ಸಮಾಚಾರ ಕಿವಿಯ ಮೇಲೆ ಬೀಳುತ್ತ

ದ್ದಂತೆ ಸೋನ್ಯಳ ಬಗ್ಗೆ ನಿಕೊಲಾಸ್‌ನ ಮನಸ್ಸಿನಲ್ಲಿ ಮೊದಲು ಮೂಡಿದ್ದು ಕೋಪ.... 'ಭೇಷ್, ಇದೇ ಸರಿ. ಅವಳೀಗ ತನ್ನ ಮಗುತನದ ವಾಗ್ದಾನಗಳನ್ನು ಮರೆತು, ಮದುವೆಯ ಸಲಹೆಯನ್ನು ಒಪ್ಪಿಕೊಳ್ಳುತ್ತಾಳೆ' ಎಂದವನು ಮಾತು ಮುಗಿಸುವ ಮೊದಲೆ ನತಾಷ ಬಾಯಿ ಹಾಕಿದಳು: 'ಅದನ್ನೆಲ್ಲ ನಂಬುವುದೆ ಕಷ್ಟ! ಅವಳವನನ್ನು ಖಡಾಖಂಡಿತವಾಗಿ ತಿರಸ್ಕರಿಸಿದಳು.' ತುಸು ತಡೆದು 'ತಾನು ಬೇರೊಬ್ಬನನ್ನು ಪ್ರೇಮಿಸುವುದಾಗಿ ಅವನಿಗೆ ತಿಳಿಸಿಬಿಟ್ಟಳು' ಎಂದವಳು ನುಡಿದಳು.

'ಹೌದು, ನನ್ನ ಸೋನ್ಯ ಬೇರೇನನ್ನು ಮಾಡುವಂತಿರಲಿಲ್ಲ' ಎಂದು ನಿಕೊಲಾಸ್ ಯೋಚಿಸಿದನು.

'ಅಮ್ಮ ಬಲವಂತಮಾಡಿದರೂ ಅವಳು ಒಪ್ಪಲಿಲ್ಲ. ಒಮ್ಮೆ ಅಂದ ಮೇಲೆ ಅವಳೆಂದೂ ತನ್ನ ನಿಲುವು ಬದಲಾಯಿಸುವುದಿಲ್ಲ'.

'ಅಮ್ಮ ಬಲವಂತ ಮಾಡಿದರು!' ಎಂದು ನಿಕೊಲಾಸ್ ಆಕ್ಷೇಪಕ ರೀತಿಯಲ್ಲಿ ನುಡಿದನು.

'ನಿಜ! ನಾನು ಹೇಳುತ್ತೇನೆಂದು ನೀನು ಕೋಪಿಸಿಕೊಳ್ಳಬೇಡ, ನಿಕೊಲಾಸ್. ನೀನವಳನ್ನು ಮದುವೆಯಾಗುವುದಿಲ್ಲವೆಂಬುದು ನಿನಗೆ ಗೊತ್ತಿರದಿದ್ದರೂ, ನನಗೆ ಗೊತ್ತಿದೆ. ಅದೆಲ್ಲ ದೇವರಿಗೆ ಗೊತ್ತು. ನೀನು ಮದುವೆಯಾಗುವುದಿಲ್ಲವೆಂಬುದು ಮಾತ್ರ ನನಗೆ ಖಾತರಿ' ಎಂದು ನತಾಷ ಸ್ಪಷ್ಟಪಡಿಸಿದಳು.

'ನಿನಗೀಗ ಅದೆಲ್ಲ ತಿಳಿಯುವುದಿಲ್ಲ' ಎಂದು ನಿಕೊಲಾಸ್ ನುಡಿದನು. 'ಆದರೆ ನಾನವಳ ಜತೆಯಲ್ಲಿ ಮಾತಾಡಿ ನೋಡಬೇಕು. ಸೋನ್ಯ ಚಿನ್ನದಂಥ ಹುಡುಗಿ?' ಎಂದವನು ಮುಂದಹಾಸ ಬೀರಿದನು.

'ನಿಜ, ನಿಜ. ಅವಳು ಚಿನ್ನದಂಥ ಹುಡುಗಿಯೇ ನಿಜ. ಅವಳನ್ನೀಗಲೇ ನಿನ್ನ ಬಳಿಗೆ ಕಳಿಸುತ್ತೇನೆ' ಎಂದು ನುಡಿದು ನತಾಷ ತನ್ನ ಸೋದರನನ್ನು ಚುಂಬಿಸಿ ಓಡಿ ಹೋದಳು.

ಒಂದು ನಿಮಿಷದ ನಂತರ ಸೋನ್ಯ ಅವನಲ್ಲಿಗೆ ಬಂದಳು. ಅವಳ ನೋಟದಲ್ಲಿ ಭಯ, ಗಾಬರಿ ಮತ್ತು ಅಪರಾಧ ಮನೋಭಾವ ಪ್ರತಿಬಿಂಬಿಸುತ್ತಿತ್ತು. ನಿಕೊಲಾಸ್ ಅವಳ ಬಳಿ ಸರಿದು, ಅವಳ ಕೈಯನ್ನು ಚುಂಬಿಸಿದನು. ಅವನು ಹಿಂದಿರುಗಿದನಂತರ ಇಬ್ಬರೂ ಏಕಾಂತವಾಗಿ ಪ್ರೇಮದ ವಿಷಯ ಪ್ರಸ್ತಾಪಿಸಿದ್ದು ಇದೇ ಮೊದಲು.

'ಸೋಫಿ' ಎಂದವನು ಗಾಬರಿಯಿಂದ ಮಾತಿಗಾರಂಭಿಸಿದನು. ತುಸು ಹೊತ್ತಿನಲ್ಲಿಯೇ ಧೈರ್ಯ ತಂದುಕೊಂಡು 'ನಿನಗೆ ಒಳ್ಳೆಯ, ಅನುಕೂಲವಾಗುವ ಜೋಡಿಯನ್ನು, ಅತ್ಯುತ್ಕೃಷ್ಟ ವ್ಯಕ್ತಿಯನ್ನು ನೀನು ತಿರಸ್ಕರಿಸುವುದಾದರೆ....ಅವನು ನನ್ನ ಸ್ನೇಹಿತ ಬೇರೆ' ಎಂದವನು ಮಾತು ಮುಂದುವರಿಸುತ್ತಿದ್ದಂತೆ, ಸೋನ್ಯ ಮಧ್ಯೆ ಬಾಯಿ ಹಾಕಿದಳು.

'ನಾನಾಗಲೇ ನನ್ನ ಅಸಮ್ಮತಿ ನೀಡಿದ್ದಾಗಿದೆ' ಎಂದವಳು ತಳುವದೆ ನುಡಿದಳು.

'ನನಗೋಸ್ಕರ ನೀನು ತಿರಸ್ಕರಿಸಿದ್ದರೆ, ನಾನು ಒಪ್ಪುವುದು....'

ಸೋನ್ಯ ಮತ್ತೆ ಅಡ್ಡಯಿಸಿದಳು; ಅವನ ಕಡೆಗೆ ದೈನ್ಯದಿಂದೊಡಗೂಡಿದ ಅಳುಕು ನೋಟ ಹರಿಸಿದಳು. 'ನಿಕೊಲಾಸ್ ಅದೆಲ್ಲ ಹೇಳಬೇಡ'.

'ಹೇಳಬೇಕಾದ್ದನ್ನು ಹೇಳಲೇಬೇಕು. ನಾನು ಸೊಕ್ಕಿನವನೆಂದು ನೀನು ತಿಳಿದು ಕೊಂಡರೂ ಸರಿಯೆ, ಹೇಳಿಬಿಡುವುದೇ ಮೇಲು. ನನಗಾಗಿ ನೀನವನನ್ನು ತಿರಸ್ಕರಿಸುವು ದಾದರೆ, ನಿನಗೆ ನಿಜ ಹೇಳಿಬಿಡಲೇಬೇಕು. ನಾನು ನಿನ್ನನ್ನು ಪ್ರೀತಿಸುತ್ತೇನೆ. ಇತರರಿ ಗಿಂತ ಮಿಗಿಲಾಗಿ ನಾನು ನಿನ್ನನ್ನು ಪ್ರೀತಿಸುತ್ತೇನೆ ..'

'ನನಗಷ್ಟೇ ಸಾಕು' ಎಂದು ಸೋನ್ಯ ನುಡಿದಾಗ ಅವಳ ಮುಖ ಕೆಂಪೇರಿತು.

'ನಾನು ಸಾವಿರ ಸಲ ಪ್ರೀತಿಸಿದ್ದೇನೆ. ಮತ್ತೆ ಮತ್ತೆ ಪ್ರೀತಿಸುತ್ತೇನೆ. ನಿನ್ನಲ್ಲಿ ನನಗಿರುವ ಸ್ನೇಹ, ವಿಶ್ವಾಸ ಮತ್ತು ಪ್ರೇಮ ಬೇರೆಯಾರಲ್ಲಿಯೂ ಇಲ್ಲ. ಆದರೆ ನಾನಿನ್ನೂ ಸಣ್ಣವ. ಅಮ್ಮನಿಗೂ ಇಷ್ಟವಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ ನಾನು ನಿನಗೆ ಮಾತು ಕೊಡಲಾರೆ. ಡೋಲೊಖೊವ್‌ನ ವಚನವನ್ನು ಗಂಭೀರವಾಗಿ ಪರ್ಯಾಲೋಚಿಸಬೇಕೆಂದು ನಾನು ನಿನ್ನಲ್ಲಿ ವಿನಂತಿಮಾಡಿಕೊಳ್ಳುತ್ತೇನೆ' ಎಂದವನು ತನ್ನ ಗೆಳೆಯನ ಹೆಸರನ್ನು ಕಷ್ಟದಿಂದ ಉಚ್ಚರಿಸಿದನು.

'ಅದೆಲ್ಲ ನನಗೆ ಹೇಳಬೇಡಿ. ನನಗೇನೂ ಬೇಕಾಗಿಲ್ಲ. ನಾನು ನಿಮ್ಮನ್ನು ಸೋದರ ನಂತೆ ಪ್ರೀತಿಸುತ್ತೇನೆ—ಯಾವಾಗಲೂ ನನಗೆ ಬೇರೇನೂ ಬೇಡ'.

'ನೀನು ದೇವತೆ. ನಾನು ನಿನ್ನ ಗೌರವಕ್ಕರ್ಹನಲ್ಲ. ನಾನು ನಿನ್ನನ್ನು ತಪ್ಪುದಾರಿ ಗೆಳೆಯಲಾರೆ.'

ನಿಕೊಲಾಸ್ ಪುನಃ ಅವಳ ಕೈಯನ್ನು ಚುಂಬಿಸಿದನು.

ಅಧ್ಯಾಯ ೧೨

ಮಾಸ್ಕೋನಗರದಲ್ಲಿ ಅಯೊಗೆಲ್‌ನ ನೃತ್ಯಗೋಷ್ಠಿಯಂತೆ ಆನಂದವನ್ನು ನೀಡಬಲ್ಲ ಗೋಷ್ಠಿ ಮತ್ತೊಂದಿರಲಿಲ್ಲ. ಹೊಸದಾಗಿ ಕಲಿಯುವ ತಮ್ಮ ಸಣ್ಣ ಮಕ್ಕಳ ಕುಣಿತದ ಥಾಟಿಯನ್ನು ನೋಡುವಾಗ ತಾಯಂದಿರು ಹಾಗೆ ಹೇಳಿಕೊಳ್ಳುತ್ತಿದ್ದರು; ಸುಸ್ತಾಗುವ ತನಕ ಕುಣಿಯುತ್ತಿದ್ದ ತರುಣ ತರುಣಿಯರು ಹಾಗೆಂದೇ ಹೆಮ್ಮೆ ಪಡುತ್ತಿದ್ದರು; ಅನುಗ್ರಹ ಭಂಗಿಯಲ್ಲಿ ಬಂದು, ನೃತ್ಯವನ್ನು ನೋಡಿ ಸುಖಿಸಿದ ಹರೆಯದ ಜನ ಸಹ ಹಾಗೆಂದೇ ಪ್ರಶಂಸಿಸುತ್ತಿದ್ದರು. ಆ ವರ್ಷ ಈ ನೃತ್ಯಮೇಳಗಳ ಪರಿಣಾಮವಾಗಿ ಎರಡು ಮದುವೆಗಳು ನೆರವೇರಿದ್ದುವು. ಗೊರ್ಚ್ಕೊವ್ ಕುಟುಂಬಕ್ಕೆ ಸೇರಿದ ಇಬ್ಬರು ಎಳೆಯ ರಾಜಕುಮಾರಿಯರು ತಮ್ಮ ಗೆಳೆಕಾರರನ್ನಲ್ಲಿ ಸಂಧಿಸಿ, ಮದುವೆಯಾಗಿದ್ದರು. ಅದರಿಂದಾಗಿ ನೃತ್ಯಗೋಷ್ಠಿಯ ಕೀರ್ತಿ ಎಲ್ಲ ಕಡೆಯೂ ಪಸರಿಸಿತ್ತು. ಯಜಮಾನ ಯಜಮಾನಿಯರ ಗೈರು ಹಾಜರಿಯೇ ಅಲ್ಲಿಯ ವೈಶಿಷ್ಟ್ಯವಾಗಿತ್ತು. ಗಿರಾಕಿಗಳಿಂದ ಪ್ರವೇಶ ಚೀಟಿಗಳನ್ನು ತೆಗೆದುಕೊಳ್ಳುವಾಗ ತನ್ನ ಕಲೆಯ ನಿಯಮಾವಳಿಯಂತೆ ತಲೆ ತಗ್ಗಿಸಿ ಗೌರವ ತೋರಿಸುತ್ತ, ಗರಿಯಂತೆ ಹಾರಾಡುತ್ತ, ರಸಿಕರನ್ನು ಸ್ವಾಗತಿಸುತ್ತಿದ್ದ ಸತ್‌ಸ್ವಭಾವದ ಅಯೊಗೆಲ್‌ನ ವಿನಯ ಸೌಜನ್ಯಗಳು ಅದರ ಮತ್ತೊಂದು ವಿಶೇಷವಾಗಿತ್ತು. ಪೊಟ್ಟಮೊದಲಬಾರಿಗೆ ಉದ್ದನೆಯ ಉಡುಗೆಯನ್ನು ತೊಟ್ಟ ಹದಿಮೂರು ಹದಿನಾಲ್ಕು ವರ್ಷದ ಹುಡುಗಿಯರಂತೆ ಕುಣಿದು ಕುಪ್ಪಳಿಸಿ ವಿನೋದಿಸು ವುದಕ್ಕೆಂದೇ ಕೆಲವು ರಸಿಕರು ಅಲ್ಲಿಗೆ ಬರುತ್ತಿದ್ದರು. ಅತ್ಯಲ್ಪ ಸಂಖ್ಯೆಯ ಅಪವಾದಗಳು

ಹೊರತಾಗಿ, ಅಲ್ಲಿಗೆ ಬರುತ್ತಿದ್ದವರೆಲ್ಲ ಸುಂದರಿಯರು ; ಅವರ ನಗುವಿಗೆ ಮೈಮರೆಯದವರಿರಲಿಲ್ಲ, ಅವರ ಥಳಥಳನೆ ಹೊಳೆಯುವ ಕಣ್ಣುಗಳಿಗೆ ಮಾರುಹೋಗದವರಿರಲಿಲ್ಲ. ಕೆಲವೊಮ್ಮೆ ಶಿಷ್ಯೋತ್ತಮಳಾದ ಚಿನ್ನೆ ನತಾಷ ಆದೇಶಾನೆ ಜನಪ್ರಿಯವಾಗುತ್ತಿದ್ದ ಸ್ಕಾಟ್ಲೆಂಡ್, ಇಂಗ್ಲೆಂಡ್ ನೃತ್ಯಭಂಗಿಗಳನ್ನು ಸಹ ಪ್ರದರ್ಶಿಸುತ್ತಿದ್ದಳು. ಆಯೋಗೆಲ್‌ನ ಮೇಳದಲ್ಲಿ ರೊಸ್ಟೋವ್ ಕುಟುಂಬದ ಹುಡುಗಿಯರ ಜತೆಗೆ ಹಲವು ಅಪೂರ್ವ ಸುಂದರಿಯರಿದ್ದರು. ಅವರು ಉಲ್ಲಾಸ ಉತ್ಸಾಹಗಳ ಚಿಡಗಿಯರಾಗಿದ್ದರು. ಆ ಸಂಜೆ ದೋಲೊಖೊವ್‌ನ ಮದುವೆ ಸೂಚನೆ, ತನ್ನ ತಿರಸ್ಕಾರ ಮತ್ತು ನಿಕೊಲಾಸ್‌ನಿಗೆ ನೀಡಿದ ವಿವರಣೆಗಳಿಂದ ಉಬ್ಬಿಹೋದ ಸೋನ್ಯ ಮನೆ ಬಿಡುವ ಮುನ್ನ ಗಿರಗಿರನೆ ಸುತ್ತಿದಾಗ, ಅವಳ ಜಡೆ ಸಡಿಲಗೊಂಡಿತು, ಅವಳ ಮುಖದ ಮೇಲೆ ಆನಂದೋತ್ಸಾಹ ತುಂಬಿತುಳುಕುತ್ತಿತ್ತು.

ಮೊಟ್ಟಮೊದಲನೆಯ ಸಲ ತಾನು ತೊಟ್ಟಿದ್ದ ಉದ್ದನೆಯ ಉಡುಗೆಯಿಂದ ನೃತ್ಯ ಮೇಳದಲ್ಲಿ ದೊರೆತ ಅವಕಾಶದಿಂದ ನತಾಷಳ ಆನಂದಕ್ಕೆ ಪಾರವಿರಲಿಲ್ಲ. ಅವರಿಬ್ಬರೂ ಪಾಟಲವರ್ಣದ ರೇಷ್ಮೆಪಟ್ಟಿಗಳಿದ್ದ ಬಿಳಿಯ ಮಸ್ಲಿನ್ ಬಟ್ಟೆ ಧರಿಸಿದ್ದರು.

ನೃತ್ಯಮಂದಿರವನ್ನು ಪ್ರವೇಶಿಸಿದ ಕೂಡಲೇ ನತಾಷ ಪ್ರೇಮೋತ್ಕಂಠಿಯಾದಳು ಅವಳ ಪ್ರೇಮ ಯಾರೊಬ್ಬರಿಗೂ ಸೀಮಿತವಾಗದೆ, ಎಲ್ಲರೊಡನೆಯೂ ಏಕಪ್ರಕಾರ ವಾಗಿತ್ತು. ಯಾವ ವ್ಯಕ್ತಿಯನ್ನು ನೋಡಿದರೂ, ಆ ಕ್ಷಣದಲ್ಲಿವಳು ಅವನನ್ನು ಪ್ರೀತಿಸು ತ್ತಿದ್ದಳು.

'ಓಹ್, ಎಷ್ಟು ಮನೋಹರವಾಗಿದೆ!' ಎಂದವಳು ಸೋನ್ಯಳ ಸಂಗಡ ತನ್ನ ಸಂತೋಷವನ್ನು ಸೂಸುತ್ತಿದ್ದಳು.

ನಿಕೊಲಾಸ್ ಡೆನಿಸೋವ್ ಇಬ್ಬರು ನರ್ತಕಿಯರ ಕಡೆ ಅನುಗ್ರಹ ದೃಷ್ಟಿ ಬೀರುತ್ತ, ಅಡ್ಡಾಡುತ್ತಿದ್ದರು.

'ಅವಳೆಷ್ಟು ಮಧುರವಾಗಿದ್ದಾಳೆ—ನಿಜಕ್ಕೂ ಚೆಲುವೆಯೆಂದರೆ ಅವಳೇ ಸರಿ' ಎಂದು ಡೆನಿಸೋವ್ ನುಡಿಯುವಾಗ ಅವನ ಮುಖ ಅರಳಿತು.

'ಯಾರು?'

'ಶ್ರೀಮಂತೆ ನತಾಷ' ತುಸು ಮೌನವಾಗಿದ್ದು ಮತ್ತೆ 'ಅವಳ ನೃತ್ಯಗಳಂತು ಚಿತ್ತಾಕರ್ಷಕವಾಗಿವೆ! ಅದೇನು ಸೊಗಸು! ಅದೇನು ಉಲ್ಲಾಸ!' ಎಂದು ಡೆನಿಸೋವ್ ನುಡಿದನು.

'ನೀನು ಯಾರ ಬಗ್ಗೆ ಮಾತಾಡುತ್ತಿದ್ದೀಯೆ?'

'ನಿನ್ನ ತಂಗಿಯ ಬಗ್ಗೆ' ಎಂದು ಡೆನಿಸೋವ್ ತುಸು ಕಿನಿಸಿನಿಂದ ಘರ್ಜನುಸುರಿದನು.

ರೊಸ್ಟೋವ್ ಮುಗುಳು ನಗೆ ಬೀರಿದನು.

'ಪ್ರಿಯ ಶ್ರೀಮಂತ ಪುತ್ರ, ನನ್ನ ಶಿಷ್ಯರಲ್ಲೆಲ್ಲ ನೀನೇ ಉತ್ಕೃಷ್ಟನಾಗಿದ್ದೆ. ನೀನೀಗ ನೃತ್ಯಮಾಡಲೇಬೇಕು' ಎಂದು ನುಡಿಯುತ್ತ ಆಯೊಗೆಲ್ ನಿಕೊಲಾಸ್‌ನ ಬಳಿ ಸರಿದನು. 'ಅದೆಷ್ಟು ಜನ ಎಳೆಯ ಲಾವಣ್ಯವತಿಯರಿದ್ದಾರೆ' ಎಂದವನು ಹಿಂದೊಮ್ಮೆ ತನ್ನ ಶಿಷ್ಯನಾಗಿದ್ದ ಡೆನಿಸೋವ್‌ನ ಕಡೆಗೆ ತಿರುಗಿಕೊಂಡು, ಅದೇ ಬಿನ್ನಹವನ್ನು ಅವನ ಮುಂದಿಟ್ಟನು.

'ಇಲ್ಲ, ಇಲ್ಲ. ಅದು ಸಾಧ್ಯವಿಲ್ಲ ಗೆಣೆಯ. ನಾನು ಹೊರಚ್ಛಾಗಿ ನಿಂತು ನೋಡುವವನೆ ಹೊರತು ಕುಣಿಯುವವನಲ್ಲ. ನೀವು ಹೇಳಿಕೊಟ್ಟ ಪಾಠಗಳನ್ನು ನಾನು ಸರಿಯಾಗಿ ಕಲಿಯುತ್ತಿರಲಿಲ್ಲವೆಂಬುದು ನಿಮಗೆ ನೆನಪಿರಬೇಕಲ್ಲವೆ?' ಎಂದು ಡೆನಿಸೋವ್ ನುಡಿದನು.

'ಹಾಗೇನೂ ಇಲ್ಲ' ಎಂದು ಅಯೊಗೆಲ್ ಅವನಿಗೆ ಭರವಸೆ ನೀಡಿದನು. 'ನೀನು ಸ್ವಲ್ಪ ನಿರ್ಲಕ್ಷ್ಯದಿಂದಿದ್ದೆ. ನಿನಗೆ ಸಾಮರ್ಥ್ಯವಿದೆಯೆಂಬುದರಲ್ಲಿ ಸಂದೇಹವಿಲ್ಲ. ನಿಜಕ್ಕೂ ನಿನ್ನಲ್ಲಿ ಹುಟ್ಟುಸಾಮರ್ಥ್ಯವಿದೆ.'

ಹೊಸ ಪೋಲಿಷ್ ಸಂಗೀತವನ್ನು ವಾದ್ಯನುಡಿಸಿತು. ಅಯೊಗೆಲ್‌ನ ಮಾತು ಮೀರಲಾರದೆ, ನಿಕೊಲಾಸ್ ಸೋನ್ಯಳನ್ನು ನೃತ್ಯಕ್ಕೆ ಕರೆದನು. ತನ್ನ ಕುಡುಕತ್ತಿಯ ಮೇಲೆ ಬಾಗಿಕೊಂಡು, ಕಾಲಿನಲ್ಲಿ ತಾಳಹಾಕುತ್ತ ಮುದುಕಿಯರ ಬಳಿ ಕುಳಿತಿದ್ದ ಡೆನಿಸೋವ್ ತಮಾಷೆಯ ಸಂಗತಿಗಳಿಂದ ಅವರನ್ನು ವಿನೋದಗೊಳಿಸುತ್ತ, ತರುಣ ನರ್ತಕ ನರ್ತಕಿಯರ ನೃತ್ಯವನ್ನು ಈಕ್ಷಿಸುತ್ತಿದ್ದನು. ತನ್ನ ಪೆಮ್ಮೆಯ ಅತ್ಯುತ್ತಮ ಶಿಷ್ಯೆ ನತಾಷ ಮತ್ತು ಅಯೊಗೆಲ್‌ರ ಜೋಡಿ ಮುಂದಾಗಿತ್ತು. ಸದ್ದಿಲ್ಲದೆ, ಕೌಶಲ್ಯದಿಂದ ಪುಟ್ಟ ಹೆಜ್ಜೆಗಳನ್ನಿಡುತ್ತಿದ್ದ ಅಯೊಗೆಲ್ ಮೊದಲು ನತಾಷಳೊಡನೆ ಸಭಾಂಗಣದ ಮತ್ತೊಂದು ಕಡೆಗೆ ಸರಾಗವಾಗಿ ಹಾರಿಹೋದನು. ನತಾಷ ಲಜ್ಜಾನ್ವಿತೆಯಾದರೂ, ಹೆಜ್ಜೆಗಳಲ್ಲಿ ತನ್ನ ನೈಪುಣ್ಯವನ್ನು ಪ್ರದರ್ಶಿಸುತ್ತಿದ್ದಳು. ಡೆನಿಸೋವ್‌ನ ದೃಷ್ಟಿ ಸಮಸ್ತವೂ ಅವಳಲ್ಲಿಯೇ ನಾಟಿತ್ತು. ತನಗೆ ಸಾಧ್ಯವಿಲ್ಲದ್ದರಿಂದ ನೃತ್ಯದಲ್ಲಿ ಪಾಲ್ಗೊಂಡಿಲ್ಲವೆಂಬುದನ್ನು ಸೂಚಿಸುವಂತೆ ಅವನು ಕುಡುಗತ್ತಿಯಿಂದ ತಾಳಹಾಕುತ್ತಿದ್ದನು. ನೃತ್ಯದ ಸುತ್ತಿನಲ್ಲಿ ರೊಸ್ತೋವ್ ತನಗೆ ಹತ್ತಿರವಾದಾಗ ಡೆನಿಸೋವ್ ಸನ್ನೆಯ ಮೂಲಕ ಅವನ ಗಮನವನ್ನು ಸೆಳೆದು, 'ಇಷ್ಟೇ ಸರಿಯೆಂದು ತಿಳಿಯಬೇಡ. ಇದೆಂಥ ಪೋಲಿಷ್ ಮಜೂರ್ಕ! ಆದರೆ ಅವಳ ನೃತ್ಯ ಅದ್ಭುತವಾಗಿದೆ' ಎಂದು ನುಡಿದನು.

ಪೋಲೆಂಡಿನಲ್ಲಿ ಸಹ ಡೆನಿಸೋವ್ ಮಜೂರ್ಕ ಸಂಗೀತದ ನೃತ್ಯದಲ್ಲಿ ಅಗ್ರೇಸರನೆಂದು ಕೀರ್ತಿ ಗಳಿಸಿದ್ದನೆಂಬುದು ರೊಸ್ತೋವ್‌ಗೆ ತಿಳಿದಿತ್ತು. ರೊಸ್ತೋವ್ ನತಾಷಳ ಬಳಿ ಓಡಿಹೋಗಿ 'ಡೆನಿಸೋವ್‌ನನ್ನು ನೃತ್ಯಕ್ಕೆ ಕರೆ. ನಿಜವಾದ ನರ್ತಕನೆಂದರೆ ಅವನೊಬ್ಬನೇ. ಅದ್ಭುತವಾಗಿ ನರ್ತಿಸುತ್ತಾನೆ' ಎಂದನು.

ಜೊತೆಗಾರನನ್ನು ಆರಿಸಿಕೊಳ್ಳಬೇಕಾದ ಸರದಿ ತನಗೊದಗಿದಾಗ ನತಾಷ ಕಮಾನುಗಳಿಂದಲಂಕೃತವಾಗಿದ್ದ ಪುಟ್ಟ ಮೇಜುಗಳಲ್ಲಿ ಬೇಗ ಬೇಗ ಹಗುರ ಹೆಜ್ಜೆ ಹಾಕುತ್ತ, ಡೆನಿಸೋವ್ ಕುಳಿತಿದ್ದ ಮೂಲೆಯ ಕಡೆಗೆ ಅಳುಕುತ್ತ ಓಡಿದಳು. ಪ್ರತಿಯೊಬ್ಬರೂ ತನ್ನ ಕಡೆಗೆ ನೋಡುತ್ತ, ಕಾಯುತ್ತಿದ್ದರೆಂಬುದನ್ನವಳು ಗಮನಿಸಿದಳು. ಅವಳು ಮತ್ತು ಡೆನಿಸೋವ್ ವಾಗ್ವಾದದಲ್ಲಿ ತೊಡಗಿದ್ದರೆಂಬುದನ್ನು, ಡೆನಿಸೋವ್ ನಗುನಗುತ್ತ ಅವಳ ಬಿನ್ನಹವನ್ನು ತಿರಸ್ಕರಿಸುತ್ತಿದ್ದನೆಂಬುದನ್ನು ಗಮನಿಸಿದ ನಿಕೊಲಾಸ್ ಅವರ ಬಳಿ ನಡೆದನು.

'ವಸಿಲಿ ದಿಮಿತ್ರಿಚ್, ದಯೆಯಿಟ್ಟು ಬನ್ನಿ. ನನ್ನಮೇಲೆ ಕೃಪೆ ಮಾಡಿ' ಎಂದು ನತಾಷ ಗೋಗರೆಯುತ್ತಿದ್ದಳು.

'ಇಲ್ಲ, ಇಲ್ಲ, ನನ್ನನ್ನು ಬಿಟ್ಟುಬಿಡಿ, ಶ್ರೀಮಂತೆಯರೆ' ಎಂದು ಡೆನಿಸೋವ್ ಉತ್ತರಿಸುತ್ತಿದ್ದನು.

'ಏಳು, ವಾಸ್ಕ!' ಎಂದು ನಿಕೊಲಾಸ್ ನುಡಿದನು.

'ನಾನೊಂದು ಪರಚುವ ಕೂಸೆಂದು ತಿಳಿದು ಇವರೆಲ್ಲ ಮರುಳು ಮಾಡುತ್ತಿದ್ದಾರೆ' ಎಂದು ಡೆನಿಸೋವ್ ನಗೆಯಾಡಿದನು.

'ಇಡೀ ಸಂಜೆ ನಿಮಗಾಗಿ ಹಾಡುತ್ತೇನೆ' ಎಂದು ನತಾಷ ನುಡಿದಳು.

'ಓ, ಮೋಹಿನಿ! ಅವಳು ನನ್ನನ್ನು ಮರಳು ಮಾಡಬಲ್ಲ ಗಂಧರ್ವ ದೇವತೆ' ಎಂದು ಡೆನಿಸೋವ್ ತನ್ನ ಕತ್ತಿಯ ಕೊಕ್ಕೆ ಕಳಚಿದನು. ಅವನು ಕುರ್ಚಿಯನ್ನು ಹಿಂದಕ್ಕೆ ಸರಿಸಿ ಮುಂದೆ ಬಂದು, ತನ್ನ ಸಂಗಾತಿಯ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು, ತಲೆಯನ್ನು ಹಿಂದಕ್ಕೆ ಜಗ್ಗಿ, ವಾದ್ಯತಾಡನಕ್ಕಾಗಿ ಕಾದು, ಅಡಿಯನ್ನೆತ್ತಿ ಮುಂದೆ ಚಾಚಿದನು. ಕುದುರೆಯ ಮೇಲಿದ್ದಾಗ ಮತ್ತು ಮಜೂರ್ಕ ನೃತ್ಯದಲ್ಲಿದ್ದಾಗ ಮಾತ್ರ ಅವನ ಕುಬ್ಜಾಕೃತಿ ಗಣನೆಗೆ ಬಾರದೆ, ತಾನೊಬ್ಬ ಸುಂದರ ಪುರುಷನೆಂಬ ಅವನ ಕಲ್ಪನೆ ಇತರರ ಮನಸ್ಸಿಗೂ ಬರುವಂತಿತ್ತು. ಸಂಗೀತದ ತಾಳಗತಿಗನುಗುಣವಾಗಿ, ಸಂಭ್ರಮೋತ್ಸಾಹದಿಂದ ತನ್ನ ಸಂಗಾತಿಯ ಅಕ್ಕಪಕ್ಕಗಳನ್ನು ನೋಡಿ, ತತ್‌ಕ್ಷಣವೆ ಒಂದು ಪಾದವನ್ನು ಜಪ್ಪಿಸಿ, ಚೆಂಡಿನಂತೆ ನೆಲದಿಂದ ಪುಟನೆಗೆದು ಜತೆಗಾತಿಗಂಟಿಕೊಂಡೇ ಅವನು ಮಂದಿರದಲ್ಲೆಲ್ಲ ಹಾರಾಡಿದನು. ನೀರವವಾಗಿ ಒಂದೇ ಪಾದದಮೇಲೆ ಮಂದಿರದಲ್ಲುದ್ದಲಾಗಿ ಅರೆದೂರ ಜಾರಿದನು. ಕುರ್ಚಿಗಳು ಕಾಣಿಸಲಿಲ್ಲವೇನೊ ಎಂಬಂತೆ ಅವುಗಳಿಗೆ ಅಪ್ಪಳಿಸುವಷ್ಟರಲ್ಲಿ ಜೋದಕಗಳನ್ನು ಘಣ ಘಣರೆನಿಸಿ, ಕಾಲುಗಳನ್ನು ಹರಡಿ, ಹಿಮ್ಮಡಿಗಳಮೇಲೆ ತುಸು ನಿಂತು, ಜೋದಕಗಳು ಝಣಝಣವೆನ್ನುವಂತೆ ಪಾದವನ್ನು ನೆಲಕ್ಕಪ್ಪಳಿಸಿ, ಗಿರಗಿರನೆ ಸುತ್ತಿದನು; ಎಡ ಹಿಮ್ಮಡಿಯನ್ನು ಬಲ ಹಿಮ್ಮಡಿಗೆ ತಾಟಿಸಿ, ಮತ್ತೆ ವರ್ತುಲಾಕಾರದಲ್ಲಿ ಹಾರಾಡಿದನು. ಅವನ ಮನೋಗತ ನತಾಷಳಿಗರ್ಥವಾಯಿತು; ತನ್ನನ್ನವನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡು, ತನಗರಿವಿಲ್ಲದೆಯೇ ಅವನಿಗೆ ಸೆರೆಯಾದಳು. ಮೊದಲವನು ಒಮ್ಮೆ ಎಡಗಯ್ಯಲ್ಲಿ, ಮತ್ತೊಮ್ಮೆ ಬಲಗೈಯಲ್ಲಿ ಅವಳನ್ನು ಹಿಡಿದುಕೊಂಡು ಗಿರಗಿರನೆ ಸುತ್ತ ಸುತ್ತಿಸಿದನು. ಅನಂತರ ಒಂದು ಮಂಡಿಯ ಮೇಲೆ ಭಾರವೂರಿ, ಅವಳನ್ನು ಗಿರಕಿಹೊಡೆಸಿದನು. ಮತ್ತೆ ಪುಟ ನೆಗೆದೆದ್ದು, ಉಸಿರುಕಟ್ಟಿ, ಕೋಣೆಗಳ ಪಠಾರವುದ್ದಕ್ಕೂ ಮುನ್ನುಗ್ಗಿಬಿಡುವನೇನೋ ಎನ್ನುವಂತೆ ರಭಸದಿಂದ ಹಾಯ್ದನು. ಅಷ್ಟರಲ್ಲಿ ಹಠಾತ್ತನೆ ನಿಂತು, ಕೆಲವು ನೂತನವೂ ಅನಿರೀಕ್ಷಿತವೂ ಆದ ಹೆಜ್ಜೆವರಿಸೆಗಳನ್ನು ಪ್ರದರ್ಶಿಸಿದನು. ಕೊಟ್ಟಕೊನೆಗೆ ಅವನು ತನ್ನ ಪಾಲುಗಾತಿಯನ್ನು ಅವಳ ಕುರ್ಚಿಯ ಮುಂದುಗಡೆ ಬಿರುಸಾಗಿ ಸುತ್ತಿಸಿ, ಜೋದಕಗಳನ್ನು ಕಿಲಕಿಸಿ, ಅವಳನ್ನು ನಿಲ್ಲಿಸಿ, ಪ್ರಣಾಮಮಾಡಿದನು. ನತಾಷಳಿಂದ ಪ್ರತಿ ಪ್ರಣಾಮ ಬರಲಿಲ್ಲ. ಅವನನ್ನು ಗುರುತಿಸಲಿಲ್ಲವೇನೊ ಎಂಬಂತೆ, ಮುಗುಳುನಗೆ ಸೂಸುತ್ತ, ಬೆರಗಿನಿಂದ ತನ್ನ ಕಣ್ಣುಗಳನ್ನವನಲ್ಲಿಯೇ ಕೀಲಿಸಿದಳು.

'ಇದರರ್ಥವೇನು?' ಎಂದವಳು ಆಲೋಚಿಸಿದಳು.

ಅದು ನಿಜವಾದ ಮಜೂರ್ಕ ನೃತ್ಯವೆಂದು ಒಪ್ಪಿಕೊಳ್ಳಲು ಅಯೊಗೆಲ್ ತಯಾರಿರಲಿಲ್ಲ. ಆದರೂ ಡೆನಿಸೋವನ ಕೌಶಲ ಪ್ರತಿಯೊಬ್ಬರಿಗೂ ಮುದವನ್ನುಂಟು

ಮಾಡಿತು. ಅವನೇ ತಮಗೆ ಸಂಗಾತಿಯಾಗಬೇಕೆಂದು ಎಲ್ಲರೂ ಒತ್ತಾಯಿಸುತ್ತಿದ್ದರು. ಪೋಲೆಂಡಿನ ಹಾಗೂ ಹಳೆಯ ಕಾಲದ ಬಗ್ಗೆ ಮುದುಕರು ಅವನೊಡನೆ ಪ್ರಸ್ತಾಪಿಸಿದರು. ನೃತ್ಯದ ತರುವಾಯ ಕೆಂಪೇರಿದ ಹಾಗೂ ಬೆವರಿಡಿದ ಮುಖವನ್ನು ಡೆನಿಸೋವ್ ಕೈಚೌಕದಿಂದೊರಸಿಕೊಳ್ಳುತ್ತ ನತಾಷ ಬಳಿ ಕುಳಿತುಕೊಂಡನು ; ಸಂಜೆಯ ತನಕ ಅವಳಿಂದ ದೂರ ಸರಿಯಲಿಲ್ಲ.

ಅಧ್ಯಾಯ ೧೩

ಅದಾದ ಎರಡು ದಿನಗಳ ನಂತರ ರೊಸ್ತೋವ್ ತನ್ನ ಮನೆಯಲ್ಲಾಗಲಿ ಅವನ ಮನೆಯಲ್ಲಾಗಲಿ ದೋಲೊಖೊವ್‌ನನ್ನು ಕಾಣಲಿಲ್ಲ. ಮೂರನೆಯ ದಿನ ಅವನಿಗೆ ದೋಲೊಖೊವ್ ಕಡೆಯಿಂದೊಂದು ಪತ್ರ ಬಂತು :

'ಮತ್ತೆ ನಾನು ನಿಮ್ಮ ಮನೆಗೆ ಬರಬಾರದೆಂದುಕೊಂಡಿದ್ದೇನೆ. ಕಾರಣ ನಿಮಗೆ ಗೊತ್ತಿದ್ದದ್ದೇ. ನಾನು ಪುನಃ ನನ್ನ ದಳವನ್ನು ಸೇರಿಕೊಳ್ಳುತ್ತೇನೆ. ಈ ರಾತ್ರಿ ನನ್ನ ಗೆಳೆಯರಿಗೆ ನಾನೊಂದು ಔತಣಕೂಟವನ್ನು ಏರ್ಪಡಿಸಿದ್ದೇನೆ. ಇಂಗ್ಲಿಷ್ ಹೋಟಲಿಗೆ ಬನ್ನಿ.'

ಸುಮಾರು ಹತ್ತು ಗಂಟೆಯ ಸಮಯಕ್ಕೆ ರೊಸ್ತೋವ್ ನೃತ್ಯಮಂದಿರದಿಂದ ನೇರ ವಾಗಿ ಇಂಗ್ಲಿಷ್ ಹೋಟಲಿಗೆ ಹೋದನು. ಆ ಸಂಜೆ ಅವನು ಡೆನಿಸೋವ್ ಮತ್ತು ತನ್ನ ಕುಟುಂಬದೊಡನೆ ನೃತ್ಯಮಂದಿರಕ್ಕೆ ಹೋಗಿದ್ದನು. ರಾತ್ರಿಯ ಮಿಲನ ಸಮಾರಂಭಕ್ಕೆ ದೋಲೊಖೊವ್ ಗೊತ್ತುಪಡಿಸಿದ್ದ ಉತ್ತಮವಾದ ಕೋಣೆಗೆ ಅವನನ್ನು ಕರೆದೊಯ್ಯ ಲಾಯಿತು. ಮೇಜಿನ ಸುತ್ತ ಇಪ್ಪತ್ತು ಮಂದಿ ಆ ಕೂಟದಲ್ಲಿ ಸೇರಿದ್ದರು. ದೋಲೊಖೊವ್ ಎರಡು ಮೋಂಬತ್ತಿಗಳ ನಡುವೆ ಇದ್ದನು. ಮೇಜಿನ ಮೇಲೆ ಚಿನ್ನ ಕಾಗದಗಳ ಹಣದ ಗುಡ್ಡೆಯಿತ್ತು. ಜೂಜು ಹಣದ ಉಸ್ತುವಾರಿ ಅವನದು. ಅವನ ಮದುವೆ ಪ್ರಸ್ತಾಪ ಮತ್ತು ಸೋನ್ಯಳ ತಿರಸ್ಕಾರಗಳ ನಂತರ ರೊಸ್ತೋವ್ ಅವನನ್ನು ಸಂಧಿಸಿರಲಿಲ್ಲ. ಅವನನ್ನು ಭೇಟಿಮಾಡುವ ಯೋಚನೆ ಮನಸ್ಸಿನಲ್ಲಿ ಮೂಡಿದಾಗಲೆಲ್ಲ ಅವನಿಗೆ ಮುಜುಗರವಾಗುತ್ತಿತ್ತು.

ರೊಸ್ತೋವ್ ಬಾಗಿಲಲ್ಲಿ ಕಾಣಿಸಿಕೊಂಡ ಕೂಡಲೇ, ಬಹುದಿನಗಳಿಂದ ಇಬ್ಬರೂ ಸಂಧಿಸಿರಲಿಲ್ಲವೆಂಬ ರೀತಿಯಲ್ಲಿ, ದೋಲೊಖೊವ್ ಅವನ ಕಡೆಗೆ ನಿರುತ್ಸಾಹದಿಂದ ನೋಡಿದನು. 'ನಾವು ಸಂಧಿಸಿ ಬಹುದಿನಗಳಾದುವು. ನೀವು ಬಂದದ್ದಕ್ಕೆ ಧನ್ಯವಾದಗಳು. ಈಗ ಇಸ್ಪೀಟ್ ಎಲೆ ಹಾಕುತ್ತೇನೆ. ಅದು ಮುಗಿಯುವ ಹೊತ್ತಿಗೆ ಇಲ್ಯೂಷ್ಕ ತನ್ನ ಮೇಳದೊಡನೆ ಬರುತ್ತಾನೆ' ಎಂದವನು ನುಡಿದನು.

'ಒಂದೆರಡು ಸಾರಿ ನಿಮ್ಮ ಮನೆಗೆ ಬಂದಿದ್ದೆ' ಎಂದು ರೊಸ್ತೋವ್ ಕಣ್ಣು ಕೆಂಪಗೆ ಮಾಡಿಕೊಂಡು ರಾಗವೆಳೆದನು.

ದೋಲೊಖೊವ್ ಉತ್ತರಿಸಲಿಲ್ಲ. 'ನೀವು ಸಹ ಪಣವೊಡ್ಡಬಹುದಲ್ಲ.'

ಹಿಂದೊಮ್ಮೆ ದೋಲೊಖೊವ್‌ನೊಡನೆ ನಡೆಸಿದ್ದ ವಿಚಿತ್ರ ಸಂಭಾಷಣೆ ಆ ಸಂದರ್ಭದಲ್ಲಿ ರೊಸ್ತೋವ್‌ನಿಗೆ ನೆನಪಾಯಿತು. 'ಆಟದಲ್ಲಿ ದಡ್ಡರು ಮಾತ್ರ ಅದೃಷ್ಟ ವನ್ನು ನೆಮ್ಮಿಕೊಳ್ಳುತ್ತಾರೆ' ಎಂದು ದೋಲೊಖೊವ್ ಆಗ ನುಡಿದಿದ್ದ.

‘ನನ್ನೊಡನೆ ಜೂಜಾಡಲು ನಿಮಗೀಗ ಅಂಜಿಕೆಯೆ ?’ ಎಂದು ದೋಲೊಖೊವ್ ರೊಸ್ತೋವ್‌ನ ಮನಸ್ಸನ್ನು ಊಹಿಸಿಕೊಂಡವನಂತೆ ಪ್ರಶ್ನಿಸಿದನು.

ಕ್ಲಬ್ ಭೋಜನಕೂಟದಲ್ಲಿ ಹಾಗೂ ಇತರ ವೇಳೆಗಳಲ್ಲಿ ಅವನು ಪ್ರದರ್ಶಿಸಿದ್ದ ಮನೋಧರ್ಮವನ್ನು ರೊಸ್ತೋವ್ ಮತ್ತೆ ಅವನ ಹುಸಿನಗೆಯಲ್ಲಿ ಗುರುತಿಸಿದನು. ದಿನನಿತ್ಯದ ಜೀವನದಲ್ಲಿ ಆಗವನಿಗೆ ಬೇಸರವುಂಟಾಗಿದ್ದು, ಯಾವುದಾದರೂ ವಿಚಿತ್ರ ಹಾಗೂ ಕಠೋರ ಕ್ರಿಯೆಯ ಮೂಲಕ ಅದರಿಂದ ಪಲಾಯನ ಹೊಂದಲು ಸಿದ್ಧನಾಗಿದ್ದ ನೆಂಬುದು ರೊಸ್ತೋವ್‌ನಿಗೆ ನೆನಪಾಯಿತು.

ರೊಸ್ತೋವ್‌ನಿಗೆ ಮುಜುಗರವಾಯಿತು. ದೋಲೊಖೊವ್‌ನಿಗೆ ಉತ್ತರ ನೀಡುವ ಸಲುವಾಗಿ ಹಾಸ್ಯದ ಮಾತು ಬಳಸಬೇಕೆಂದವನು ಪ್ರಯತ್ನಿಸಿ, ವಿಫಲನಾದನು. ಅವನ ಮನದಲ್ಲಿ ಆ ಮಾತು ಹೊಳೆಯುವ ಮುನ್ನವೇ ದೋಲೊಖೊವ್ ಅವನ ಮುಖವನ್ನೆ ನೇರವಾಗಿ ನೋಡುತ್ತ, ಎಲ್ಲರಿಗೂ ಕೇಳಿಸುವಂತೆ, ನಿಧಾನವಾಗಿ ಉದ್ದೇಶಪೂರ್ವಕವಾಗಿ ‘ಹಿಂದೊಮ್ಮೆ ಇಸ್ಪೀಟಿನ ಬಗ್ಗೆ ನಾವು ಮಾತಾಡಿಕೊಂಡಿದ್ದು ನಿಮಗೆ ನೆನಪಿದೆಯೆ ?.... ಅದೃಷ್ಟ ನಂಬಿದವನು ದಡ್ಡ. ಇಲ್ಲಿ ಕೌಶಲ ಮುಖ್ಯ ; ನಾನು ಪರೀಕ್ಷಿಸಬೇಕೆಂದಿದ್ದೇನೆ’ ಎಂದು ನುಡಿದನು.

‘ಅದೃಷ್ಟ ಪರೀಕ್ಷೆಯೊ ? ಕೌಶಲವೊ ?’ ಎಂದು ರೊಸ್ತೋವ್ ಗೊಣಗಿಕೊಂಡನು.

‘ಹಾಗಾದರೆ, ನೀವು ಆಟಕ್ಕೆ ಬರಬೇಡಿ’ ಎಂದು ದೋಲೊಖೊವ್ ನುಡಿದು, ಇಸ್ಪೀಟೆಲೆಯ ಹೊಸಕಟ್ಟನ್ನು ಮುಂದೆಸೆದು ‘ಇಗೋ ಇಲ್ಲಿದೆ ಗುಡ್ಡೆ, ಮಿತ್ರರೆ’ ಎಂದನು.

‘ಹಣದ ಗುಡ್ಡೆಯನ್ನು ಮುಂದೆ ನೂಕಿ, ಎಲೆ ಹಾಕಲು ಶುರುಮಾಡಿದನು. ರೊಸ್ತೋವ್ ಅವನ ಬಳಿ ಕುಳಿತನು ; ಆಟವಾಡಲಿಲ್ಲ. ದೋಲೊಖೊವ್ ಆಗಾಗ್ಗೆ ಅವನ ಕಡೆಗೆ ಕಣ್ಣು ಮಿಟುಕಿಸುತ್ತಿದ್ದನು.

‘ನೀವೇಕೆ ಆಡಬಾರದು ?’ ಎಂದವನು ಪ್ರಶ್ನಿಸಿದನು.

ಇಸ್ಪೀಟಾಡದೆ ಬೇರೆ ದಾರಿಯಿಲ್ಲವೆಂದು ತಿಳಿದ ನಿಕೊಲಾಸ್, ಸಣ್ಣ ಬಾಜಿಕಟ್ಟಿ, ಆಡಲಾರಂಭಿಸಿ ‘ನನ್ನಲ್ಲಿ ಹಣವಿಲ್ಲ’ ಎಂದನು.

‘ನಿಮ್ಮಲ್ಲಿ ನನಗೆ ನಂಬಿಕೆಯಿದೆ.’

ರೊಸ್ತೋವ್ ಒಂದೆಲೆಗೆ ಐದು ರೂಬಲ್ ಪಣವೊಡ್ಡಿ, ಕಳೆದುಕೊಂಡನು ; ಮತ್ತೆ ಪಣ ಕಟ್ಟಿ ಸೋತನು. ರೊಸ್ತೋವ್‌ನ ಹತ್ತು ಎಲೆಗಳನ್ನು ದೋಲೊಖೊವ್ ಧ್ವಂಸ ಮಾಡಿದನು.

ತ ಸು ಹೊತ್ತು ಎಲೆ ಹಾಕಿದನಂತರ ‘ಮಿತ್ರರೆ, ಎಲೆಯ ಜತೆಯಲ್ಲಿಯೇ ಹಣ ಕಟ್ಟಿ ; ಇಲ್ಲವಾದರೆ ಲೆಕ್ಕ ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ’ ಎಂದು ನುಡಿದನು.

ತನ್ನನ್ನು ನಂಬಬಹುದೆಂದು ಆಟಗಾರರಲ್ಲೊಬ್ಬ ಹೇಳಿದನು.

‘ಇಲ್ಲಿ ನಂಬುವ ಪ್ರಶ್ನೆಯಿಲ್ಲ. ಲೆಕ್ಕ ಬೆರಸಿಕೊಳ್ಳುತ್ತವೆಂಬ ಭಯ ನನಗೆ. ನಿಮ್ಮ ಬಾಜಿಯ ಹಣ ಹೊರಗೆ ತೆಗೆಯಿರಿ’ ಎಂದು ದೋಲೊಖೊವ್ ಉತ್ತರಿಸಿದನು.

'ಜಿಪುಣತನ ಬೇಡಿ. ಕೊನೆಯಲ್ಲಿ ಫೈಸಲು ಮಾಡಿಕೊಳ್ಳೋಣ' ಎಂದವನು ರೊಸ್ತೋವ್ ಕಡೆಗೆ ತಿರುಗಿದನು.

ಆಟ ಮುಂದುವರಿಯಿತು, ಪರಿಚಾರಕ ಷಾಂಪೇನ್ ಸರಬರಾಜು ಮಾಡುತ್ತಿದ್ದನು.

ರೊಸ್ತೋವ್ ಒಂದೊಂದಾಗಿ ಎಲೆಗಳನ್ನು ಕಳೆದುಕೊಂಡನು. ಎಂಟುನೂರು ರೂಬಲ್ ಅವನ ಹೆಸರಿಗೆ ಸಾಲ ಸೇರಿತು. ಎಲೆಯೊಂದರ ಮೇಲೆ '೮೦೦ ರೂಬಲ್' ಎಂದು ಬರೆದನು. ಆದರೆ ಪರಿಚಾರಕ ತನ್ನ ಲೋಟವನ್ನು ತುಂಬುತ್ತಿದ್ದಂತೆ ಮನಸ್ಸನ್ನು ಬದಲಾಯಿಸಿ, ಇಪ್ಪತ್ತು ರೂಬಲ್ಲುಗಳಿಗೆ ಬದಲಾಯಿಸಿದನು.

'ಅವಲ್ಲೇ ಇರಲಿ' ಎಂದು ದೋಲೊಖೊವ್ ರೊಸ್ತೋವ್‌ನ ಕಡೆ ನೋಡದೆಂಯೆ ನುಡಿದನು. 'ಹೇಗೂ ಬೇಗ ಅದನ್ನೆಲ್ಲ ಹಿಂದಕ್ಕೆ ಗೆದ್ದುಕೊಳ್ಳಿರಿ. ಇತರರು ನನ್ನಿಂದ ಗೆದ್ದುಕೊಂಡರೆ, ನಾನು ನಿಮ್ಮಿಂದ ಗೆದ್ದುಕೊಳ್ಳುತ್ತೇನೆ. ನನ್ನನ್ನು ಕಂಡರೆ ನಿಮಗೆ ಹೆದರಿಕೆಯೆ?' ಎಂದವನು ಮತ್ತೆ ಪ್ರಶ್ನಿಸಿದನು.

ರೊಸ್ತೋವ್ ಸಮ್ಮತಿಸಿ, ಎಂಟುನೂರನ್ನು ಬದಲಿಸದೆ, ಮೂಲೆಮುರಿದಿದ್ದ ಆಟೀನು ಏಳನ್ನು ಕೈಗೆತ್ತಿಕೊಂಡನು. ಆ ಏಳನ್ನು ಕೊನೆಯತನಕ ನೆನಪಿನಲ್ಲಿಟ್ಟು ಕೊಂಡನು. ಸೀಮೆಸುಣ್ಣದಿಂದ '೮೦೦ ರೂಬಲ್ಸ್' ಎಂದು ಸ್ಪಷ್ಟವಾಗಿ ಬರೆದಿದ್ದುದು ಅದರ ಮೇಲೆಯೆ. ತನಗೆ ಕೊಟ್ಟಿದ್ದ ಷಾಂಪೇನ್ ಲೋಟವನ್ನು ಖಾಲಿಮಾಡಿ, ದೋಲೊಖೊವ್‌ನ ಮಾತುಗಳಿಗೆ ನಸು ನಕ್ಕು, ಕುಸಿದ ಧೈರ್ಯದಿಂದ, ಏಳನೆಯ ಎಲೆಗಾಗಿ ಕಾಯುತ್ತ, ಎಲೆಗಳ ಕಟ್ಟಿದ್ದ ದೋಲೊಖೊವ್‌ನ ಕೈಗಳನ್ನೆ ನೋಡು ತ್ತಿದ್ದನು. ಅವನ ಸೋಲು ಗೆಲವುಗಳೆಲ್ಲ ಆಟೀನ್ ಏಳನ್ನವಲಂಬಿಸಿತ್ತು. ಹಿಂದಿನ ಭಾನುವಾರ ಹಿರಿಯ ಶ್ರೀಮಂತ ತನ್ನ ಮಗನಿಗೆ ಎರಡು ಸಾವಿರ ರೂಬಲ್ ಕೊಟ್ಟಿದ್ದ. ಹಣದ ತೊಂದರೆಯ ಬಗ್ಗೆ ಸದಾ ಗೊಣಗುಟ್ಟಲಿಷ್ಟವಿಲ್ಲದೆ, ಈ ಸಾರಿ ಅದಷ್ಟು ಮಿತವ್ಯಯ ವಾಗಿ ಹಣವನ್ನು ಬಳಸಬೇಕೆಂದೂ, ಮುಂದಿನ ಮೇ ತಿಂಗಳ ತನಕ ಹಣ ಕೇಳಕೂಡ ದೆಂದೂ ಅವನು ಮಗನಿಗೆ ತಾಕೀತುಮಾಡಿದ್ದನು. ತನಗದು ಸಾಕೆಂದೂ, ವಸಂತಕಾಲದ ತನಕ ಒಂದು ಕಾಸು ಹೆಚ್ಚಾಗಿ ಕೇಳುವುದಿಲ್ಲವೆಂದೂ ಮಗ ಗೌರವದ ಮೇಲೆ ಆಣೆಯಿಟ್ಟು ನುಡಿದಿದ್ದನು. ಈಗ ಆ ಹಣದಲ್ಲಿ ಅವನ ಬಳಿ ಉಳಿದದ್ದು ಕೇವಲ ಒಂದು ಸಾವಿರದ ಇನ್ನೂರು ರೂಬಲ್. ಆಟೀನು ಏಳು ಕೈಕೊಟ್ಟಿದ್ದಾದರೆ ಒಂದು ಸಾವಿರದ ಆರುನೂರು ರೂಬಲ್ ಹೋಗುವುದಿರಲಿ, ತಂದೆಗೆ ನೀಡಿದ ವಚನಕ್ಕೆ ತಪ್ಪ ಬೇಕಾದೀತೆಂದೂ ಅವನು ಹೆದರಿದನು. ಕುಗ್ಗಿದ ಧೈರ್ಯದಿಂದ ಅವನು ದೋಲೊ ಖೊವ್‌ನ ಕೈಗಳನ್ನ ನೋಡುತ್ತಿದ್ದನು. 'ಈಗ ತ್ವರೆಮಾಡು, ಈ ಎಲೆ ನನಗೆ ಬರಲಿ! ನನ್ನ ಟೋಪಿಯನ್ನು ಸಿಕ್ಕಿಸಿಕೊಂಡು, ಮನೆಗೆ ಹೋಗಿ, ಡೆನಿಸೋವ್, ನತಾಷ ಮತ್ತು ಸೋನ್ಯರೊಡನೆ ಊಟಮಾಡುತ್ತೇನೆ, ಮುಂದೆಂದೂ ಮತ್ತೆ ಎಲೆಗಳನ್ನು ಖಂಡಿತ ಮುಟ್ಟುವುದಿಲ್ಲ' ಎಂದವನು ತನ್ನಲ್ಲಿಯೇ ಆಲೋಚಿಸಿಕೊಂಡನು. ತನ್ನ ಮನೆ ಬದುಕು, ಪೇಶ್ಯ ಜತೆಯ ತಮಾಷೆ, ಸೋನ್ಯಾಳೊಡನೆಯ ಮಾತುಕತೆ, ನತಾಷಳ ಸಂಗಡದ ಸಂಭಾಷಣೆ, ತನ್ನ ತಂದೆಯ ಭದ್ರ ಕಾವಲು, ಪೊವರಸ್ಕಾಯ ಮನೆಯಲ್ಲಿಯ ಅವನ ಸುಪ್ಪತ್ತಿಗೆ—ಆ ಸಂದರ್ಭದಲ್ಲಿ ಅವನ ಮನಸ್ಸಿನಲ್ಲಿ ಈ ಎಲ್ಲ ನೆನಪುಗಳ ಮೆರವಣಿಗೆ

ಯಾಯಿತು. ಆ ನಲಿವು ಸೊಗಸುಗಳೆಲ್ಲ ಗತಕಾಲದ ವೈಭವವಾಗಿ ಅವನಿಗೆ ಕಂಡುವು. ಆ ಏಳು ಎಡಕ್ಕೆ ಬೀಳುವುದರ ಬದಲು ಬಲಕ್ಕೆ ಬೀಳುವ ಒಂದು ಅನಿರೀಕ್ಷಿತ ಸಂಭವ, ತನ್ನ ಪಾಲಿಗೆ ಹೊಸದಾಗಿ ಒದಗಿ ಬಂದಿರುವ ಸುಖವನ್ನು ಹಾಳು ಮಾಡುವುದಲ್ಲದೆ, ತನ್ನನ್ನು ಅಜ್ಞಾತವೂ ಅನೂಹ್ಯವೂ ಆದ ವಿಪತ್ತಿನ ಪಾತಾಳಕ್ಕೆ ನೂಕಿಬಿಡುತ್ತ ದೆಂಬ ಊಹೆ ಅವನನ್ನು ಅಲುಬುತ್ತಿತ್ತು. ಅಂಥ ಸಂದರ್ಭವೊದಗಲಾರದೆಂದು ಅವನು ಸಮಾಧಾನ ಪಟ್ಟುಕೊಂಡರೂ, ಕುಸಿದ ಧೈರ್ಯದಿಂದ ದೋಲೊಖೊವ್‌ನ ಹಸ್ತಗಳ ಚಲನ ವನ್ನೆ ವೀಕ್ಷಿಸುತ್ತಿದ್ದನು. ಷರಟಿನ ಮುಂದೋಳೊಳಗಿಂದ ಕಾಣು ತ್ತಿದ್ದ ಮುಂಗೈ ಗೂದಲುಳ್ಳ ಆರಕ್ತ ವರ್ಣದ ಸುವಿಸ್ತಾರ ಹಸ್ತಗಳು ಎಲೆ ಕಟ್ಟನ್ನು ಕೆಳಗಿರಿಸಿ, ಪರಿಚಾರಕ ಕೊಟ್ಟ ಚುಂಗಾಣಿಯನ್ನು ಲೋಟವನ್ನು ಹಿಡಿದು ಕೊಂಡುವು.

'ಹಾಗಾದರೆ ನೀವು ನನ್ನೊಡನೆ ಆಟವಾಡಲು ಅಂಜುವುದಿಲ್ಲವಷ್ಟೆ?' ಎಂದು ದೋಲೊಖೊವ್ ಪ್ರಶ್ನಿಸಿ, ಒಳ್ಳೆಯ ಕತೆಯೊಂದನ್ನು ಹೇಳಲುದ್ಯುಕ್ತನಾದವನಂತೆ ಎಲೆ ಗಳನ್ನು ಕೆಳಗೆ ಹಾಕಿ, ತನ್ನ ಕುರ್ಚಿಗೊರಗಿಕೊಂಡು, ಉದ್ದೇಶಪೂರ್ವಕವಾದ ನಗುವಿ ನೊಡನೆ ಮಾತು ಶುರುಮಾಡಿದನು: 'ನೋಡಿ, ಮಿತ್ರರೆ, ನಾನೊಬ್ಬ ಮೋಸಗಾರನೆಂಬ ಗಾಳಿ ಸುದ್ದಿ ಮಾಸ್ಕೋದಲ್ಲೆಲ್ಲ ಹರಡಿದೆ. ನೀವು ಎಚ್ಚರಿಕೆಯಿಂದಿರುವುದೊಳ್ಳೆಯದೆಂದು ನಿಮಗೆ ತಿಳಿಸುತ್ತಿದ್ದೇನೆ, ಜೋಕೆ.'

'ಈಗ ಬನ್ನಿ ಎಲೆ ಹಾಕಿ!' ಎಂದು ರೊಸ್ತೋವ್ ಗರ್ಜಿಸಿದನು.

'ಓ, ಮಾಸ್ಕೋನಗರದ ಆ ಹರಟೆಮಲ್ಲರು!' ಎಂದು ನುಡಿಯುತ್ತ ದೋಲೊ ಖೊವ್ ಮಂದಹಾಸದೊಡನೆ ಎಲೆಗಳನ್ನು ಕೈಗೆತ್ತಿಕೊಂಡನು.

'ಆಹ!' ಎಂದು ರೊಸ್ತೋವ್ ತನ್ನೆರಡು ಕೈಗಳನ್ನು ತಲೆಯ ಮೇಲಕ್ಕೆತ್ತಿ ಕೊಂಡು ಕಿರಿಚಿಕೊಂಡನು. ತನಗೆ ಬೇಕಾದ ಏಳು ಎಲ್ಲಕ್ಕಿಂತ ಮೇಲೆ, ಕಟ್ಟಿನ ಮೊದಲನೆಯ ಎಲೆಯಾಗಿ ಬಿದ್ದಿತ್ತು. ಅವನಿಗಾದ ನಷ್ಟ ಅವನ ಶಕ್ತಿಯನ್ನು ಮೀರಿತ್ತು.

'ಈಗಲೂ ಜೋಕೆ, ನೀವು ಹಾಳಾಗಬೇಡಿ' ಎಂದು ದೋಲೊಖೊವ್ ಎಲೆಗಳನ್ನು ಹಂಚುತ್ತ, ರೊಸ್ತೋವ್ ಕಡೆಗೆ ಕುಡಿನೋಟ ಬೀರಿದನು.

ಅಧ್ಯಾಯ ೧೪

ಒಂದೂವರೆ ಗಂಟೆಯ ನಂತರ ಆಟಗಾರರ ಆಸಕ್ತಿ ಕ್ರಮೇಣ ನಂದುತ್ತಿತ್ತು.

ಎಲ್ಲರ ಆಸಕ್ತಿಯೂ ರೊಸ್ತೋವ್‌ನಲ್ಲಿ ಕೇಂದ್ರೀಕೃತವಾಗಿತ್ತು. ಒಂದು ಸಾವಿರದ ಆರುನೂರು ರೂಬಲ್ಲುಗಳಿಗೆ ಬದಲಾಗಿ ಅವನ ಹೆಸರಿನ ಅಂಕಣದಲ್ಲಿ ಅಂಕಿಗಳು ಹನುಮಂತನ ಬಾಲದಂತೆ ಬೆಳೆದಿದ್ದುವು. ಆ ಅಂಕಿಗಳನ್ನು ಕೂಡಿಸಿದಾಗ ಹತ್ತುಸಾವಿರ ದಷ್ಟಾಗುತ್ತಿತ್ತು. ಆ ಲೆಕ್ಕ ಹದಿನೈದು ಸಾವಿರಕ್ಕೇರಿದರೂ ಅಚ್ಚರಿಯಾಗದೆಂದು ಅವನು ಊಹಿಸಿಕೊಂಡನು. ವಾಸ್ತವವಾಗಿ ಆ ಮೊತ್ತ ಇಪ್ಪತ್ತು ಸಾವಿರವನ್ನು ಮೀರಿತ್ತು. ದೋಲೊಖೊವ್ ಕತೆ ಹೇಳುವುದರಲ್ಲಾಗಲಿ, ಕೇಳುವುದರಲ್ಲಾಗಲಿ ಆಸಕ್ತಿ ವಹಿಸಲಿಲ್ಲ.

ರೊಸ್ತೋವ್‌ನ ಕೈಗಳ ಪ್ರತಿಯೊಂದು ಚಲನೆಯನ್ನು ವೀಕ್ಷಿಸುತ್ತ, ಆಗಾಗ್ಗೆ ಅವನ ಹೆಸರಿನ ಲೆಕ್ಕದ ಕಡೆಗೆ ಕಣ್ಣು ಹೊರಳಿಸುತ್ತಿದ್ದನು. ಆ ಲೆಕ್ಕ ನಲವತ್ತುಮೂರು ಸಾವಿರದ ಗಡಿಮುಟ್ಟುವ ತನಕ ಆಡುವುದೆಂದವನು ನಿರ್ಧರಿಸಿಕೊಂಡನು. ತನ್ನ ವಯಸ್ಸನ್ನು ಸೋನ್ಯಳ ವಯಸ್ಸನ್ನು ಕೂಡಿಸಿದರೆ ಅಷ್ಟಾಗುತ್ತಿತ್ತು. ರೊಸ್ತೋವ್ ತನ್ನೆರಡು ಕೈಗಳಿಗೆ ತಲೆಯಾನಿಸಿಕೊಂಡು, ಅಂಕಿಗಳನ್ನು ಸಿಕ್ಕಾಬಟ್ಟೆ ಗೀಚಿದ್ದ, ಮಾದಕದ್ರವ್ಯ ಚೆಲ್ಲಿದ್ದ, ಎಲೆಗಳು ಚೆಲ್ಲಾಡುತ್ತಿದ್ದ, ಮೇಜಿನ ಮುಂದೆ ಕುಳಿತಿದ್ದನು. ಅವನನ್ನು ಹಿಂಸಿಸುತ್ತಿದ್ದ ಆಲೋಚನೆ ಮಾತ್ರ ಅವನಿಂದ ದೂರವಾಗಿರಲಿಲ್ಲ: 'ಷರಟಿನ ಮುಂದೋಳೊಳಗಿಂದ ಕಾಣುತ್ತಿದ್ದ ಮುಂಗೈ ಗೂದಲುಳ್ಳ ಆರಕ್ತ ವರ್ಣದ ದೊಡ್ಡ ಕೈಗಳು, ತಾನು ಮೊದಲು ಪ್ರೀತಿಸಿದ್ದ, ಅನಂತರ ದ್ವೇಷಿಸಿದ್ದ ಕೈಗಳು ತನ್ನನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿದ್ದುವು.'

'ಆರು ನೂರು ರೂಬಲ್, ಹಾಸು, ಮೂಲೆ, ಒಂಬತ್ತು....ಅದನ್ನು ಮತ್ತೆ ಗೆದ್ದು ಕೊಳ್ಳುವುದು ಕಷ್ಟ....ಓ! ಮನೆಯಲ್ಲಿಯೇ ಉಳಿದಿದ್ದರೆ ಎಷ್ಟು ಖುಷಿಯಾಗಿರಬಹು ದಿತ್ತು! ಕುತಂತ್ರಿ. ಸೋತ ಎರಡರಷ್ಟು ಕೊಡಬೇಕೆ? ಅಥವಾ ಏನೂ ಕೊಡಬೇಕಾ ಗಿಲ್ಲವೆ?....ಅದೂ ಸಾಧ್ಯವಾಗಲಾರದು....ಅವನು ನನ್ನನ್ನೇಕೆ ಇಷ್ಟು ಸತಾಯಿಸು ತ್ತಿದ್ದಾನೆ?' ಎಂದು ರೊಸ್ತೋವ್ ಆಲೋಚಿಸಿದನು. ರೊಸ್ತೋವ್ ದೊಡ್ಡ ಮೊತ್ತದ ಪಣ ಕಟ್ಟಿದಾಗ ದೋಲೊಖೊವ್ ಒಪ್ಪಿಕೊಳ್ಳಲಿಲ್ಲ; ಅವನೇ ಪಣ ನಿರ್ಧರಿಸಿದನು. ರೊಸ್ತೋವ್ ಒಪ್ಪಿಕೊಂಡದ್ದಾಯಿತು. ಎನ್ಸ್ ಸೇತುವೆಯ ರಣರಂಗದಲ್ಲಿ ದೇವರಿಗೆ ಪ್ರಾರ್ಥಿಸಿಕೊಂಡಿದ್ದಂತೆ ಅವನು ಮತ್ತೊಮ್ಮೆ ಈ ಸಂದರ್ಭದಲ್ಲಿ ದೇವರಿಗೆ ಮೊರೆ ಯಿಟ್ಟನು. ಮೇಜಿನ ಕೆಳಗೆ ಮುಡಿದು ಬಿದ್ದಿದ್ದ ಗುಡ್ಡೆಯಿಂದ ಮೊದಲು ಕೈಗೆ ಸಿಕ್ಕಿದ ಎಲೆ ತನ್ನನ್ನುಳಿಸಬಹುದೆಂದು ಅವನು ಊಹಿಸಿಕೊಂಡನು. ತನ್ನ ಕೋಟಿನ ಮೇಲಣ ರೇಷ್ಮೆ ಹುರಿಗಳನ್ನು ಎಣಿಸಿ, ಆ ಸಂಖ್ಯೆಯ ಎಲೆಯೊಂದನ್ನು ಕೈಗೆತ್ತಿಕೊಂಡನು; ತಾನೆಷ್ಟು ಸೋತಿದ್ದನೋ, ಅಷ್ಟೇ ಮೊತ್ತವನ್ನು ಪಣವಾಗೊಡ್ಡಿದನು; ಇತರ ಆಟಗಾರರ ಸಹಾಯಕ್ಕಾಗಿ ಸುತ್ತಮುತ್ತ ನೋಡಿದನು. ದೋಲೊಖೊವ್‌ನ ಉತ್ಸಾಹಹೀನ ಮುಖದ ಕಡೆಗೆ ಇಣುಕಿ ನೋಡಿ ಅವನ ಮನಸ್ಸನ್ನರಿಯಲು ಪ್ರಯತ್ನಿಸಿದನು.

'ಈ ನಷ್ಟ ನನ್ನ ಮೇಲೆ ಎಂಥ ಪರಿಣಾಮ ಬೀರುತ್ತದೆಂಬುದನ್ನು ಈತ ಬಲ್ಲ. ನನಗೆ ಹಾನಿಯಾಗುವುದು ಅವನಿಗಿಷ್ಟವಿರಲಾರದೆಂದು ನಾನಂದುಕೊಂಡಿದ್ದೇನೆ. ಅವನು ನನ್ನ ಗೆಳೆಯನಾಗಿರಲಿಲ್ಲವೆ? ಅವನನ್ನು ನಾನು ಮೆಚ್ಚಿಕೊಂಡಿದ್ದೆನಲ್ಲವೆ? ಆದರೆ ಇದು ಅವನ ತಪ್ಪಲ್ಲ. ಅಂಥ ಅದೃಷ್ಟ ಅವನಿಗಿರುವುದಾದರೆ, ಅದಕ್ಕೆ ಅವನೆಂತು ಹೊಣೆ ಯಾದಾನು?....ನಾನು ಸಹ ತಪ್ಪಿತಸ್ಥನಲ್ಲ' ಎಂದವನು ಒಳಗೊಳಗೆ ಗೊಣಗಿಕೊಂಡನು. 'ನಾನೇನೂ ತಪ್ಪುಮಾಡಿಲ್ಲ. ನಾನು ಯಾರನ್ನಾದರೂ ಕೊಂದಿದ್ದೇನೆಯೆ? ನಿಂದಿಸಿ ದ್ದೇನೆಯೆ? ಯಾರಿಗಾದರೂ ತೊಂದರೆ ಮಾಡಿದ್ದೇನೆಯೆ? ನನಗೇಕೆ ಇಂಥ ಭೀಕರ ಕಷ್ಟವೊದಗಿದೆ? ಅದೆಂದು ಪ್ರಾರಂಭವಾಯಿತು? ನೂರು ರೂಬಲ್ಲುಗಳನ್ನು ಗೆದ್ದು ಕೊಂಡು, ನಮ್ಮಮ್ಮನ ವಾರ್ಷಿಕ ನಾಮಕರಣೋತ್ಸವದ ಉಡುಗೊರೆಗಾಗಿ ರಜತ ಕರಂಡವನ್ನು ಕೊಂಡೊಯ್ಯುವ ಸಲುವಾಗಿ ಸ್ವಲ್ಪ ಹೊತ್ತಿಗೆ ಮುಂಚೆ ಈ ಮೇಜಿನ

ಮುಂದೆ ಕುಳಿತೆ. ನಾನೆಷ್ಟು ಸುಖಿಯಾಗಿದ್ದೆ, ಎಷ್ಟು ಸ್ವತಂತ್ರನಾಗಿದ್ದೆ! ನನ್ನ ಮನಸ್ಸೆಷ್ಟು ಹಗುರವಾಗಿತ್ತು! ಎಷ್ಟು ಸಂತೋಷವಾಗಿದ್ದೆನೆನ್ನುವುದೂ ನನಗಾಗ ಅನುಭವಕ್ಕೆ ಬರಲಿಲ್ಲ. ಅದು ಕೊನೆಯಾದದ್ದು ಯಾವಾಗ? ಇಂಥ ಭೀಕರ ಪರಿಸ್ಥಿತಿ ಒದಗಿದ್ದು ಯಾವಾಗ? ಈ ಬದಲಾವಣೆಗೆ ಕಾರಣಗಳೇನು? ಇಷ್ಟು ಹೊತ್ತು ಇದೇ ಮೇಜಿನ ಮುಂದೆ, ಇದೇ ಜಾಗದಲ್ಲಿ ಕುಳಿತೆ, ಎಲೆಗಳನ್ನು ನಾನೇ ಆಯ್ದಿರಿಸಿದೆ, ಇದೇ ರೀತಿಯಲ್ಲಿ ಆ ತುಂಬಿದೆಲುಬಿನ ಚುರುಕು ಕೈಗಳನ್ನು ನೋಡುತ್ತಿದ್ದೇನೆ. ಅದು ಯಾವಾಗ ನಡೆಯಿತು? ಏನಾಯಿತು? ನಾನು ಚೆನ್ನಾಗಿದ್ದೇನೆ, ಗಟ್ಟಿಯಾಗಿದ್ದೇನೆ. ಮೊದಲಿದ್ದಂತೆಯೇ ಅದೇ ಜಾಗದಲ್ಲಿದ್ದೇನೆ. ಇಲ್ಲ, ಹಾಗಿರಲಾರದು! ನಿಜಕ್ಕೂ ಎಲ್ಲ ಶೂನ್ಯದಲ್ಲಿ ಪರ್ಯವಸಾನವಾಗುತ್ತದೆ!'

ಕೋಣೆ ಶಾಖವಾಗಿಲ್ಲದಿದ್ದರೂ, ಕಾದ ರಕ್ತದಿಂದ ಅವನ ಮುಖ ಕೆಂಪೇರಿತು: ಬೆವರಿನ ಸ್ನಾನವಾಯಿತು. ಅವನ ಮುಖ ವಿವರ್ಣವಾಯಿತು; ಪ್ರಶಾಂತತೆಯನ್ನು ಪ್ರದರ್ಶಿಸಲು ಬಲವಂತವಾಗಿ ಪ್ರಯತ್ನಿಸಿತು. ಅದನ್ನು ನೋಡಿದಾಗ ಮರುಕ ಹುಟ್ಟುವಂತಾಯಿತು. ಅಂಕಗಳ ಅಂಕಣ ನಲವತ್ತುಮೂರು ಸಾವಿರವನ್ನು ಮುಟ್ಟಿ, ಭವಿಷ್ಯದ ಹಾನಿಯನ್ನು ಸೂಚಿಸುವಂತಿತ್ತು. ಮೂರು ಸಾವಿರವನ್ನು ದ್ವಿಗುಣಗೊಳಿಸುವ ಸಲುವಾಗಿ ಎಲೆಯ ಮೂಲೆಯೊಂದನ್ನು ಮುರಿದು ರೊಸ್ತೋವ್ ಸಿದ್ಧನಾದಾಗ, ಮತ್ತಷ್ಟು ಮೊತ್ತ ಅವನ ಹೆಸರಿನ ಅಂಕಣಕ್ಕೆ ಸೇರಿತು. ಕೂಡಲೇ ದೋಲೊಖೊವ್ ಎಲೆಗಳ ಕಟ್ಟನ್ನು ರಪ್ಪನೆ ಬಡಿದು, ಪಕ್ಕಕ್ಕೆ ಬಿಸಾಡಿದನು. ಬೇಗಬೇಗನೆ ರೊಸ್ತೋವ್‌ನ ಸಾಲದ ಅಂಕಿಗಳನ್ನು ಕೂಡಿದನು; ಮೊತ್ತದ ಅಂಕಿಗಳನ್ನು ಸ್ಪಷ್ಟವಾಗಿ, ದೊಡ್ಡದಾಗಿ ಬರೆಯುವಾಗ ಸೀಮೆಸುಣ್ಣ ಮುರಿದುಹೋಯಿತು.

'ಊಟ, ಊಟಕ್ಕೆ ಹೊತ್ತಾಯ್ತು; ಇಗೋ ಜಿಪ್ಸಿಗಳು ಸಹ ಬಂದಿದ್ದಾರೆ!'

ಶ್ಯಾಮಲ ವರ್ಣದ ಕೆಲವು ಹೆಂಗಸರು ಗಂಡಸರು ಹೊರಗಿನ ಚಳಿಯ ಬಸಿರಿಂದ ತಮ್ಮದೇ ಆದ ಉಚ್ಚಾರಣೆಯಲ್ಲಿ ಏನನ್ನೋ ಹೇಳಿಕೊಂಡು ಒಳಗೆ ಪ್ರವೇಶಿಸಿದರು. ಎಲ್ಲ ಮುಗಿಯಿತೆಂದು ನಿಕೊಲಾಸ್‌ನಿಗೆ ಗ್ರಹಿಕೆಯಾಯಿತು. ಅವನು ಉದಾಸೀನ ಧ್ವನಿಯಲ್ಲಿ 'ಸರಿ, ಈಗ ಮುಂದುವರಿಸುವುದಿಲ್ಲವೇನು? ಮೊದಲೇ ನನಗೊಂದು ಒಳ್ಳೆಯ ಎಲೆ ಸಿಕ್ಕಿತು' ಎಂದು ನುಡಿದನು. ಆಟದ ವಿನೋದವೊಂದೆ ತನಗೆ ಇಷ್ಟವಾದದ್ದೆಂಬಂತೆ ಅವನ ನುಡಿಮೋಡಿಯಲ್ಲಿ ಅಭಿವ್ಯಕ್ತವಾಗುತ್ತಿತ್ತು.

'ಎಲ್ಲ ಮುಗಿಯಿತು! ನಾನೂ ಮುಗಿದೆ!' ಎಂದವನು ಯೋಚಿಸಿದನು. 'ನನ್ನ ಮೆದುಳಿನಲ್ಲೊಂದು ಗುಂಡು ಹೊಕ್ಕಿದೆ. ನನಗುಳಿದಿರುವುದು ಅದೊಂದೇ!' ಎಂದವನು ಅದೇ ಧಾಟಿಯಲ್ಲಿ ಹರ್ಷದಿಂದ ನುಡಿದನು. 'ಈಗ ಬನ್ನಿ. ಕೊನೆಯದಾಗಿ ಇದೊಂದೇ ಸಣ್ಣ ಎಲೆ!'

'ಆಗಲಿ!' ಎಂದು ದೋಲೊಖೊವ್ ಸಂಕಲನ ಮುಗಿಸಿ ಕರೆದನು. 'ಆಗಲಿ, ಇಪ್ಪತ್ತೊಂದು ರೂಬಲ್, ತಿಳಿಯಿತೆ?' ಎಂದವನು ನಲವತ್ತುಮೂರುಸಾವಿರ ರೂಬಲ್ ಮೊತ್ತದ ಕಡೆಗೆ ರೊಸ್ತೋವ್‌ನ ಗಮನ ಸೆಳೆದು, ಇಸ್ಪೀಟ್ ಕಟ್ಟನ್ನು ಕೈಗೆತ್ತಿಕೊಂಡು, ಹಾಕತೊಡಗಿದನು. ರೊಸ್ತೋವ್ ತನ್ನ ಎಲೆಯ ಮೂಲೆಯನ್ನು ನೇರಮಾಡಿ, ತಾನು

ಉದ್ದೇಶಿಸಿದ ಆರು ಸಾವಿರಕ್ಕೆ ಬದಲಾಗಿ, ಇಪ್ಪತ್ತೊಂದು ಅಂಕಿಯನ್ನು ಜೋಪಾನವಾಗಿ ಬರೆದನು.

'ನನಗೆ ಅದೆಲ್ಲ ಒಂದೆ. ಈ ಹತ್ತನ್ನು ಗೆದ್ದುಕೊಳ್ಳಲು ಅವಕಾಶ ಕೊಡುವಿಯೋ ಅಥವಾ ಇದನ್ನು ಬಲಿಹಾಕುತ್ತೀಯೋ ನಾನೀಗ ನೋಡಬೇಕಾಗಿದೆ' ಎಂದವನು ನುಡಿದನು.

ದೋಲೊಖೊವ್ ಗಂಭೀರವಾಗಿ ಎಲೆ ಹಾಕಿದನು. ತನ್ನನ್ನು ಸೋಲಿಸಿದ್ದ, ಕೆಂಪನೆಯ ಮೋಟು ಬೆರಳಿನ, ಮಣಿಕಟ್ಟು ಕೂದಲಿನ ಆ ಕೈಗಳನ್ನು ರೊಸ್ತೋವ್ ಆ ಸಮಯದಲ್ಲಿ ಅಸಹ್ಯವಾಗಿ ನೋಡಿದನು....ಅವನಿಗೆ ಹತ್ತು ದಕ್ಕಿತು.

'ಶ್ರೀಮಂತರೆ, ನೀವು ನನಗೆ ನಲವತ್ತುಸಾವಿರ ಕೊಡಬೇಕಾಗಿದೆ' ಎಂದು ದೋಲೊಖೊವ್ ನುಡಿಯುತ್ತ, ಮೈಮುರಿಯುತ್ತ ಮೇಲೆದ್ದನು. 'ಇಷ್ಟು ಹೊತ್ತು ಕುಳಿತರೆ ಯಾರಿಗಾದರೂ ಸುಸ್ತಾಗ್ತದೆ' ಎಂದವನು ನುಡಿದನು.

'ಹೌದು, ನನಗೂ ಸುಸ್ತಾಗಿದೆ' ಎಂದು ರೊಸ್ತೋವ್ ಮೇಲೆದ್ದನು.

ಅದು ಅಣಕದ ಸಂದರ್ಭವಲ್ಲವೆಂಬುದನ್ನು ಜ್ಞಾಪಕಕ್ಕೆ ತಂದು ಕೊಡುವವನಂತೆ, ದೋಲೊಖೊವ್ ಅವನ ಮಾತನ್ನು ಅರೆಗಡಿದು 'ಹಣ ಯಾವಾಗ ಸಿಗುತ್ತದೆ, ಶ್ರೀಮಂತರೆ?' ಎಂದು ಪ್ರಶ್ನಿಸಿದನು.

ರೊಸ್ತೋವ್‌ಗೆ ಕಣ್ಣು ಕೆಂಪಗಾಯಿತು, ಪಕ್ಕದ ಕೋಣೆಗೆ ದೋಲೊಖೊವ್‌ನನ್ನು ಕರೆದೊಯ್ದನು. 'ಅದನ್ನೀಗಲೇ ನಿನಗೆ ಕೊಡಲಾರೆ. ಸಾಲದ ಪತ್ರ ಬರೆದುಕೊಟ್ಟರೆ ಸಾಲದೆ?' ಎಂದು ಕೇಳಿದನು.

ದೋಲೊಖೊವ್ ನಸುನಗುತ್ತ, ನಿಕೊಲಾಸ್‌ನ ಕಣ್ಣುಗಳಲ್ಲಿ ತನ್ನ ದೃಷ್ಟಿಯನ್ನು ಕೀಲಿಸಿ, 'ನಿಕೊಲಾಸ್, "ಪ್ರೇಮದಲ್ಲಿ ಅದೃಷ್ಟ, ಇಸ್ಪೀಟಿನಲ್ಲಿ ಅದೃಷ್ಟ ಹೀನ" ಎಂಬ ಗಾದೆ ನಿಮಗೆ ಗೊತ್ತಿದೆಯಷ್ಟೆ. ನಿಮ್ಮ ಸೋದರ ಸಂಬಂಧಿ ನಿಮ್ಮನ್ನು ಪ್ರೀತಿಸುತ್ತಿರುವುದು ನನಗೆ ಗೊತ್ತಿದೆ!' ಎಂದು ನುಡಿದನು.

'ಓ, ಇವನ ಪ್ರಭಾವದಲ್ಲಿರುವ ತನಕ ಭಯತಪ್ಪಿದ್ದಲ್ಲ' ಎಂದು ರೊಸ್ತೋವ್ ಕಳವಳಗೊಂಡನು. ಈ ನಷ್ಟದ ಸುದ್ದಿ ತನ್ನ ತಂದೆ ತಾಯಿಯರ ಮನಸ್ಸಿನ ಮೇಲೆ ಎಂಥ ಆಘಾತವನ್ನುಂಟುಮಾಡಬಹುದೆಂಬುದನ್ನು ಅವನು ಬಲ್ಲವನಾಗಿದ್ದನು. ಆ ಎಲ್ಲದರಿಂದ ತಪ್ಪಿಸಿಕೊಳ್ಳುವುದಾದರೆ ಮನಸ್ಸಿಗೆಷ್ಟು ಹಗುರವಾಗುತ್ತದೆಂಬ ಸಂಗತಿಯೂ ಅವನಿಗೆ ಗೊತ್ತಿದ್ದದ್ದೇ. ತನ್ನನ್ನು ದುಃಖಾವಮಾನಗಳಿಂದ ಪಾರುಮಾಡಬಲ್ಲೆನೆಂಬ ಅರಿವು ದೋಲೊಖೊವ್‌ಸಿಗಿರಬೇಕೆಂದೂ, ಇಲಿಯೊಡನೆ ಬೆಕ್ಕು ಚೆಲ್ಲಾಟವಾಡುವಂತೆ ಅವನು ತನ್ನನ್ನು ಕಾಡುತ್ತಿರುವನೆಂದೂ ರೊಸ್ತೋವ್ ಬಗೆದನು.

'ನಿಮ್ಮ ಸೋದರ ಸಂಬಂಧಿ....' ಎಂದು ದೋಲೊಖೊವ್ ಮಾತು ತೆಗೆಯುತ್ತಿದ್ದಂತೆ, ನಿಕೋಲಾಸ್ ಮಧ್ಯೆ ಬಾಯಿ ಹಾಕಿದನು: 'ನನ್ನ ಸೋದರ ಸಂಬಂಧಿಗೂ ಈ ವಿಷಯಕ್ಕೂ ಏನೇನೂ ಸಂಬಂಧವಿಲ್ಲ. ಅವಳ ಹೆಸರು ಸಹ ಇಲ್ಲಿ ಎತ್ತಬೇಕಾಗಿಲ್ಲ' ಎಂದವನು ತೀಕ್ಷ್ಣವಾಗಿ ನುಡಿದನು.

'ಅದು ಹೋಗಲಿ, ಯಾವಾಗ ಹಣ ನನಗೆ ಸಿಗುತ್ತದೆ?'

'ನಾಳೆ' ಎಂದು ರೊಸ್ತೋವ್ ಉತ್ತರಿಸಿ, ಕೋಣೆಯಿಂದ ಹೊರಬಿದ್ದನು.

ಅಧ್ಯಾಯ ೧೫

'ನಾಳೆ' ಎಂದು ಗಂಭೀರಧ್ವನಿಯಲ್ಲಿ ಹೇಳುವುದು ಅವನಿಗೆ ಕಷ್ಟವಾಗಲಿಲ್ಲ. ಆದರೆ ಒಂಟಿಯಾಗಿ ಮನೆಗೆ ಹೋಗಿ, ತಂಗಿಯರು, ತಮ್ಮ, ತಂದೆ ತಾಯಿಯರನ್ನು ಕಂಡು, ತನ್ನ ತಪ್ಪನ್ನೊಪ್ಪಿಕೊಂಡು, ಗೌರವದ ಮೇಲೆ ಆಣೆಯಿಟ್ಟು ಹೇಳಿದ್ದರೂ, ಮತ್ತೆ ಹಣ ಕೇಳುವುದು ಅವನಿಗೆ ತುಂಬ ಭೀಕರವಾಗಿ ತೋರಿತು.

ಮನೆಯಲ್ಲಿ ಯಾರೂ ಮಲಗಿಕೊಂಡಿರಲಿಲ್ಲ. ರಂಗಮಂದಿರದಿಂದ ಹಿಂದಿರುಗಿದ ನಂತರ ತರುಣ ತರುಣಿಯರು ಊಟ ಮುಗಿಸಿ, ತಂತಿವಾದ್ಯದ ಸುತ್ತ ಗುಂಪುಗೂಡಿದರು. ಅವನು ಪ್ರವೇಶಿಸುತ್ತಿದ್ದಂತೆ, ಚಳಿಗಾಲದಲ್ಲಿ ತಮ್ಮ ಕುಟುಂಬವನ್ನೆಲ್ಲ ವ್ಯಾಪಿಸಿಕೊಂಡಿದ್ದ ಪ್ರೇಮದ ಕಾವ್ಯಮಯ ವಾತಾವರಣ ತನ್ನನ್ನು ಆಲಿಂಗಿಸಿಕೊಂಡಂತೆ ಭಾಸವಾಯಿತು. ಗುಡುಗು ಮಳೆಗಳ ಮುಂಚಿನ ವಾಯುಮಂಡಲದಂತೆ, ದೋಲೊಖೊವ್‌ನ ಮದುವೆ ಪ್ರಸ್ತಾಪ ಮತ್ತು ಅಯೋಗೆಲ್‌ನ ನೃತ್ಯಗಳ ನಂತರ ಸೋನ್ಯ ಮತ್ತು ನತಾಷರ ಸುತ್ತ ಮುತ್ತ ಆ ವಾತಾವರಣ ದಟ್ಟವಾಗಿ ವೃದ್ಧಿಗೊಂಡಂತೆ ಕಾಣುತ್ತಿತ್ತು. ರಂಗಮಂದಿರದಲ್ಲಿ ಉಟ್ಟುಕೊಂಡಿದ್ದ ತೆಳುನೀಲಿ ಉಡುಪಿನಲ್ಲಿ ಸೋನ್ಯ ಮತ್ತು ನತಾಷರು ರಮಣೀಯ ವಾಗಿ ಕಾಣುತ್ತಿದ್ದರಲ್ಲದೆ, ತಮ್ಮ ರಮಣೀಯತೆಯ ಅರಿವೂ ಅವರಿಗಿತ್ತು. ಅವರು ತಂತಿ ವಾದ್ಯದ ಬಳಿ ಸ್ಮಿತಮುಖಿಯರಾಗಿ ನಿಂತಿದ್ದರು. ವೇರ ದಿವಾನ್ ಖಾನೆಯಲ್ಲಿ ಷಿನ್‌ಷಿನ್ ಜತೆ ಚದುರಂಗ ಆಡುತ್ತಿದ್ದಳು. ತಮ್ಮ ಮನೆಯಲ್ಲಿಯೇ ವಾಸಿಸುತ್ತಿದ್ದ ಮುದುಕಿ ಯೊಡನೆ ಹಿರಿಯ ಶ್ರೀಮಂತೆ ಇಸ್ಪೀಟ್ ಆಡುತ್ತ, ತನ್ನ ಗಂಡನ ಮತ್ತು ಮಗನ ಬರವಿ ಗಾಗಿ ಕಾಯುತ್ತಿದ್ದಳು. ಕೆದರಿದ ಕೂದಲ, ಹೊಳೆಯುವ ಕಣ್ಣುಗಳ ಡೆನಿಸೋವ್ ಎರಡು ಕಾಲುಗಳನ್ನು ಹಿಂದಕ್ಕೆ ಚಾಚಿ ಕುಳಿತು ತನ್ನ ಮೋಟು ಕೈಗಳಿಂದ ವಾದ್ಯದ ಬೀವುಗಳನ್ನು ಬೆರಳಿಸುತ್ತಿದ್ದನು. ತನ್ನ ಸಹಜ ಗೊಗ್ಗರ ದನಿಯಲ್ಲಿ ಮೆಲ್ಲಿತ್ತಾಗಿ ಹಾಡು ತ್ತಿದ್ದಾಗ ಅವನ ಕಣ್ಣುಗಳು ಹೊರಳಾಡುತ್ತಿದ್ದುವು. ತಾನೇರಚಿಸಿದ 'ಮೋಹಿನಿ' ಎಂಬ ಪದ್ಯಗಳಿಗೆ ರಾಗ ಜೋಡಿಸಲು ಅವನು ಪ್ರಯತ್ನಿಸುತ್ತಿದ್ದನು.

ಓ ಮೋಹಿನಿ, ನನ್ನಿಂದಗಲಿದ ವೀಣೆಗೆ ನೀನರುಹು
ಚಣ ಚಣಕೂ ಸ್ಫೂರ್ತಿಯ ನೀಡಿಹ ಯಕ್ಷಿಣಿ ಯಾವುದಿದು ?
ಅಂತರತಮ ಚೈತನ್ಯಾಗ್ನಿಗದೆಂತಹ ಕಿಡಿ ತೋರಿರುವೆ ?
ನನ್ನಂಗುಲಿಗಳ ಜುಮ್ಮೆನಿಸುವ ಆನಂದದ ಲಹರಿಯಿದೇನು ?

ಅವನು ಭೀತಿತುಷ್ಟಿಗಳಿಂದ ಕೂಡಿದ ನತಾಷಳ ಕಡೆಗೆ ತನ್ನ ಕಪ್ಪನೆಯ ಮಿಂಚು ಗಣ್ಣುಗಳನ್ನು ಕೀಲಿಸಿ, ಭಾವಪರವಶನಾಗಿ ಹಾಡುತ್ತಿದ್ದನು.

'ಅದ್ಭುತ ! ಮನೋಹರ !' ಎಂದು ನತಾಷ ಕೇಕಿಸಿದಳು. 'ಇನ್ನೊಂದು ಹಾಡು' ಎಂದವಳು ನಿಕೊಲಾಸ್‌ನನ್ನು ಗಮನಿಸದೆಯೆ ನುಡಿದಳು.

'ಅವರಲ್ಲಿ ಏನು ಬದಲಾವಣೆ ಕಾಣುತ್ತಿಲ್ಲ' ಎಂದುಕೊಳ್ಳುತ್ತ ನಿಕೊಲಾಸ್ ದಿವಾನಖಾನೆಯ ಕಡೆಗೆ ಕಣ್ಣು ಹಾಯಿಸಿದನು. ಅಲ್ಲಿ ಮುದುಕಿಯೊಡನಿದ್ದ ತಾಯಿ ಮತ್ತು ವೇರ ಅವನ ಕಣ್ಣಿಗೆ ಬಿದ್ದರು.

'ಆಃ! ಇಗೋ ನಿಕೊಲಾಸ್!' ಎಂದು ನತಾಷ ಕೂಗುತ್ತ ಅವನೆಡೆಗೆ ಹಾರಿದಳು.

'ಅಪ್ಪ ಒಳಗಿದ್ದಾರೆಯೆ?' ಎಂದವನು ಕೇಳಿದ.

'ನೀನು ಬಂದೆಯಲ್ಲ, ಸಂತೋಷ!' ಎಂದು ನತಾಷ ಅವನ ಪ್ರಶ್ನೆಗೆ ಉತ್ತರ ಹೇಳದೆ, ಮಾತು ಮುಂದುವರಿಸಿದಳು. 'ನಾವು ಸಂತೋಷದಿಂದ ಕಾಲ ಕಳೆಯುತ್ತಿದ್ದೇವೆ. ವಸಿಲಿದಿಮಿತ್ರಿಚ್ ನನಗಾಗಿ ಒಂದು ದಿನ ಹೆಚ್ಚಾಗಿ ನಿಲ್ಲುತ್ತಾರೆ. ಆ ವಿಷಯ ನಿನಗೆ ಗೊತ್ತೆ?'

'ಇಲ್ಲ, ಅಪ್ಪ ಇನ್ನೂ ಬಂದಿಲ್ಲ' ಎಂದು ಸೋನ್ಯ ನುಡಿದಳು.

'ನಿಕೊಲಾಸ್, ಬಂದೆಯಪ್ಪ ; ಬಾ ಇಲ್ಲಿ, ಮಗು' ಎಂದು ದಿವಾನಖಾನೆಯಿಂದ ಹಿರಿಯ ಶ್ರೀಮಂತೆ ಕರೆದಳು.

ನಿಕೊಲಾಸ್ ಅವಳ ಬಳಿ ಹೋಗಿ, ಅವಳ ಕೈಯನ್ನು ಚುಂಬಿಸಿ, ಅವಳ ಬಳಿ ಕುಳಿತು, ಎಲೆಗಳನ್ನು ಜೋಡಿಸುತ್ತಿದ್ದ ಅವಳ ಕೈಗಳನ್ನೇ ನೋಡುತ್ತಿದ್ದನು. ಹಾಡು ವಂತೆ ನತಾಷಳನ್ನು ಒಡಂಬಡಿಸಲು ಪ್ರಯತ್ನಿಸುತ್ತಿದ್ದ ನಗುನಲಿವುಗಳ ದನಿ ನೃತ್ಯ ಮಂದಿರದಿಂದ ತೂರಿ ಬರುತ್ತಿದ್ದುವು.

'ಸರಿ, ಸರಿ' ಕ್ಷಮಾಯಾಚನೆಯಿಂದ ಪ್ರಯೋಜನವಿಲ್ಲ. ಈಗ ನಿಮ್ಮ ಸರದಿ ಬಂದಿದೆ. ದೋಣಿ ಹಾಡು ಸಾಗಲಿ. ನಾನು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ' ಎಂದು ಡೆನಿಸೋವ್ ಬೊಬ್ಬಿರಿದನು.

ಮೌನಿ ಮಗನ ಕಡೆಗೆ ಶ್ರೀಮಂತೆ ದಿಟ್ಟಿ ಹರಿಸಿದಳು. 'ಏನು ಸಮಾಚಾರ?' ಎಂದವಳು ಪ್ರಶ್ನಿಸಿದಳು.

'ಏನೂ ಇಲ್ಲ' ಎಂದವನು ಒಂದೇ ಪ್ರಶ್ನೆ ಮತ್ತೆ ಮತ್ತೆ ಆವೃತ್ತಿಯಾದರೆ ಬೇಸರ ವುಂಟಾಗುವವನಂತೆ ನುಡಿದು 'ಅಪ್ಪ ಬೇಗ ಬರುತ್ತಾರೆಯೆ?' ಎಂದು ಕೇಳಿದನು.

'ಬಂದಾರು'

'ಅವರ ದೃಷ್ಟಿಯಿಂದ ಎಲ್ಲ ಒಂದೆ. ಅದರ ಬಗ್ಗೆ ಅವರಿಗೇನೂ ಗೊತ್ತಿಲ್ಲ. ನಾನೆಲ್ಲಿಗೆ ಹೋಗಲಿ?' ಎಂದವನು ಅಂದುಕೊಂಡು, ನೃತ್ಯಮಂದಿರದೊಳಗೆ, ವಾದ್ಯದ ಹತ್ತಿರ ಜುಣುಗಿದನು.

ಡೆನಿಸೋವ್‌ನಿಗೆ ಪ್ರಿಯವಾದ ದೋಣಿಹಾಡಿಗೆ ಉಪಕ್ರಮಾಲಾಪನೆಯನ್ನು ನುಡಿಸುತ್ತ ಸೋನ್ಯ ವಾದ್ಯದ ಮುಂದೆ ಕುಳಿತಿದ್ದಳು. ನತಾಷ ಹಾಡಲು ಸಿದ್ಧವಾಗುತ್ತಿದಳು.

ನಿಕೊಲಾಸ್ ಶತಪಥ ತಿರುಗಾಡುತ್ತಿದ್ದನು. 'ಅವಳನ್ನೇಕೆ ಹಾಡಲು ಪೀಡಿಸುತ್ತಿದ್ದಾರೆ? ಅವಳು ಹಾಡುವುದಾದರೂ ಹೇಗೆ? ಸಂತೋಷಪಡಲು ಕಾರಣವೇನಿದೆ?' ಎಂದವನು ಮನಸ್ಸಿನಲ್ಲಿಯೆ ಹೇಳಿಕೊಳ್ಳುತ್ತಿದ್ದನು.

ಸೋನ್ಯ ಉಪಕ್ರಮಾಲಾಪನೆಯ ಮೊದಲ ಸ್ವರವನ್ನು ಮಿಡಿದಳು.

'ಅಯ್ಯೋ ದೇವರೆ, ನಾನೊಬ್ಬ ಹಾಳಾದ ಅಗೌರವದ ವ್ಯಕ್ತಿ. ನನ್ನ ಮೆದುಳಲ್ಲಿ ಗುಂಡು ತೂರುವುದೊಂದೆ ಬಾಕಿ. ನನಗೆ ಹಾಡು ಬೇಕಿಲ್ಲ' ಎಂಬುದಾಗಿ ಅವನ

ಆಲೋಚನಾಲಹರಿ ಹರಿಯಿತು. 'ಹೊರಟು ಹೋಗು! ಆದರೆ ಎಲ್ಲಿಗೆ? ಅದೆಲ್ಲ ಒಂದೆ. ಅವರು ಹಾಡಲಿ!' ಅವನು ಖಿನ್ನನಾಗಿ ಡೆನಿಸೋವ್‌ನ ಕಡೆಗೂ ಹುಡುಗಿಯರ ಕಡೆಗೂ ಕಣ್ಣು ಹಾಯಿಸುತ್ತ, ಅವರ ನೋಟಗಳಿಂದ ಜಾರಿಕೊಳ್ಳುತ್ತ, ಹೆಜ್ಜೆ ಹಾಕುತ್ತಿದ್ದನು.

'ನಿಕೊಲೆಂಕ, ಏನು ಸಮಾಚಾರ?' ಎಂದು ಅವನಲ್ಲಿಯೇ ನಾಟಿದ್ದ ಸೋನ್ಯಳ ಕಣ್ಣು ಪ್ರಶ್ನಿಸುವಂತಿದ್ದುವು. ಅವನಿಗೇನೊ ಕಷ್ಟ ಬಂದಿರಬೇಕೆಂದು ಅವಳು ಕೂಡಲೇ ಊಹಿಸಿಕೊಂಡಳು.

ನಿಕೊಲಾಸ್ ಅವಳಿಂದ ದೂರ ಸರಿದನು. ತನ್ನ ಶೀಘ್ರ ಸಹಜ ಪ್ರಜ್ಞೆಯಿಂದಾಗಿ ನತಾಷ ಸಹ ತನ್ನ ಸೋದರನ ಸ್ಥಿತಿಯನ್ನರಿತುಕೊಂಡಳು. ಆದರೆ ಆ ಕ್ಷಣದಲ್ಲಿ ಅವಳು ದುಃಖೋದ್ವೇಗ ನಿಂದೆಗಳಿಂದ ದೂರವಾಗಿದ್ದು, ಅತ್ಯುತ್ಸಾಹದಲ್ಲಿದ್ದುದರಿಂದ, ಹಲವು ಯುವಕ ಯುವತಿಯರಂತೆ, ಯಾವುದೂ ತನಗೆ ಹೊದ್ದದಂತಿದ್ದಳು. 'ಇತರರ ದುಃಖದಲ್ಲಿ ಸಹಾನುಭೂತಿ ತಾಳುವುದರಿಂದ ನನ್ನ ಸುಖಾನುಭವಕ್ಕೆ ಭಂಗವೊದಗುತ್ತದೆ' ಎಂದವಳು ಭಾವಿಸಿದಳು. 'ಹಾಗಲ್ಲ. ನಾನು ತಪ್ಪಾಗಿ ತಿಳಿದೆ. ನನ್ನಂತೆಯೇ ಅವನೂ ಸುಖವಾಗಿರಬಹುದು' ಎಂದವಳು ಭಾವಿಸಿದಳು.

'ಸೋನ್ಯ ಈಗ!' ಎಂದವಳು ಮಂದಿರದ ಮಧ್ಯದಲ್ಲಿ ನಿಂತು, ಅನುರಣನ ಅತ್ಯುತ್ತಮವಾಗಿದೆಯೆಂದು ನುಡಿದಳು. ತನ್ನ ತಲೆಯೆತ್ತಿ ಬ್ಯಾಲೆ ನೃತ್ಯವಿದರನ್ನನುಕರಿಸಿ ಕೈಗಳನ್ನು ಜೀವರಹಿತವೆಂಬಂತೆ ಜೋಲು ಬೀಳಿಸಿ, ಉತ್ಸಾಹದಿಂದ ಮೇಲೆದ್ದು ಅಡಿಯೂರಿ, ಮಂದಿರದ ಮಧ್ಯಭಾಗಕ್ಕೆ ನಡೆದು, ನಿಶ್ಚಲವಾಗಿ ನಿಂತಳು.

'ಹೌದು, ನಾನೇ ನಾನು' ಎಂದು ತನ್ನನ್ನು ಹಿಂಬಾಲಿಸಿದ ಡೆನಿಸೋವ್‌ನ ಏಕಾಗ್ರತಾ ದೃಷ್ಟಿಗೆ ಅವಳು ಉತ್ತರ ಕೊಡುವವಳಂತೆ ಕಾಣಿಸಿದಳು.

'ಅವಳ ಆನಂದ ಪರವಶತೆಗೆ ಕಾರಣವೇನಿರಬಹುದು?' ಎಂದು ನಿಕೊಲಾಸ್ ತನ್ನ ಸೋದರಿಯ ಕಡೆಗೆ ನೋಡುತ್ತ ಯೋಚಿಸಿದನು. 'ಅವಳಿಗೇನು ನಾಚಿಕೆಯೇ ಇಲ್ಲದಂತಿದೆ?'

ನತಾಷ ಮೊದಲನೆಯ ಸ್ವರವನ್ನು ಗ್ರಹಿಸಿದಳು. ಅವಳ ಗಂಟಲು ಉಬ್ಬಿತು, ಎದೆ ನಿಮಿರಿತು, ಕಣ್ಣು ಗಂಭೀರವಾದುವು. ಆ ಕ್ಷಣದಲ್ಲಿ ಅವಳು ಬಾಹ್ಯ ಜಗತ್ತನ್ನು ಮರೆತಳು. ಅದೇ ಸ್ಥಾಯಿಯ ಅಂತರದಲ್ಲಿ ಯಾರಾದರೂ ಮೂಡಿಸಿ, ನಿರ್ದಿಷ್ಟ ವೇಳೆಯ ತನಕ ಹಿಡಿದುಕೊಳ್ಳಬಹುದಾದ ಧ್ವನಿಗಳು ಅವಳ ದರಹಸಿತ ಅಧರಗಳಿಂದ ನಿರರ್ಗಳವಾಗಿ ಹರಿಯುತ್ತಿದ್ದುವು. ಆ ಧ್ವನಿಗಳು ಸಾವಿರ ಸಲ ಶ್ರೋತೃಗಳ ಭಾವಾವೇಗವನ್ನು ತಗ್ಗಿಸಿ, ಸಾವಿರದೊಂದು ಸಲ ಅವರನ್ನು ಪುಲಕಗೊಳಿಸಿ, ಅವರ ಕಣ್ಣುಗಳಲ್ಲಿ ನೀರೊಸರುವಂತೆ, ಪರಿಣಾಮಕಾರಿಯಾಗಿದ್ದುವು.

ನತಾಷ ಮೊಟ್ಟಮೊದಲಿಗೆ ಶ್ರದ್ಧೆಯಿಂದ ಸಂಗೀತಾಭ್ಯಾಸವನ್ನು ಪ್ರಾರಂಭಿಸಿದ್ದು ಆ ಚಳಿಗಾಲದಲ್ಲಿಯೇ. ಡೆನಿಸೋವ್ ಅವಳ ಸಂಗೀತವನ್ನು ಮೆಚ್ಚಿಕೊಂಡದ್ದೇ ಅವಳ ಉತ್ಸಾಹಕ್ಕೆ ಕಾರಣವಾಗಿತ್ತು. ಅವಳು ಮಗುವಿನಂತೆ ಹಾಡುತ್ತಿರಲಿಲ್ಲ, ನಿಜ. ಅವಳ ಸಂಗೀತದಲ್ಲಿ ಹಿಂದಿದ್ದ ವಿಚಿತ್ರವೂ ಶಿಶು ಸಹಜವೂ ಶ್ರಮಪೂರ್ವಕವೂ ಆದ ಪ್ರಯತ್ನ ವಿರಲಿಲ್ಲವೆಂಬುದೂ ನಿಜ; ಆದರೂ ಅವಳ ಸಂಗೀತ ಅಷ್ಟೇನೂ ಮೇಲ್ಮಟ್ಟದ್ದಾಗಿರಲಿಲ್ಲ.

'ತರಬೇತಿ ಸಾಲದು; ಸರಿಯಾದ ತರಬೇತಿ ದೊರೆತರೆ ಅವಳ ಶಾರೀರ ಮನೋಹರವಾಗುತ್ತದೆ' ಎಂದು ಅವಳ ಸಂಗೀತವನ್ನು ಕೇಳಿಸಿಕೊಂಡ ರಸಿಕರು ಅಭಿಪ್ರಾಯಪಡುತ್ತಿದ್ದರು. ಅವಳು ಹಾಡು ಮುಗಿಸಿದ ಕೆಲವು ನಿಮಿಷಗಳ ನಂತರ ಆ ಜನ ಸಾಮಾನ್ಯವಾಗಿ ಹಾಗೆ ಹೇಳುತ್ತಿದ್ದುದುಂಟು. ತಪ್ಪುಸಿರಿನ, ಅಸಹಜ ಬದಲಾವಣೆಯ, ಅಶಿಕ್ಷಿತ ಸ್ವರದ ಶಬ್ದ ಕೇಳಿಸಿದಾಗ ರಸಿಕರು ತುಟಿಪಿಟಕ್ಕೆನ್ನಲಿಲ್ಲ; ಆದರಲ್ಲವರು ಮಗ್ನರಾಗಿದ್ದುದಲ್ಲದೆ, ಮತ್ತೆ ಮತ್ತೆ ಕೇಳಲಾಶಿಸಿದರು. ಅವಳ ಸ್ವರದಲ್ಲಿ ಕನ್ಯೋಚಿತ ಶುಭ್ರತೆಯೂ, ಆತ್ಮಕೌಶಲ ವಿಸ್ಮೃತಿಯೂ, ಅಶಿಕ್ಷಿತ ಕೋಮಲತೆಯೂ ಪ್ರಧಾನವಾಗಿದ್ದುವು. ಅವು ಸಂಗೀತಕಲಾಜ್ಞಾನದ ಅಭಾವದೊಡನೆ ಕೂಡಿಕೊಂಡು ಆ ಸ್ವರವನ್ನು ಕೆಡಿಸದೆ ಬದಲಾಯಿಸಲು ಸಾಧ್ಯವಿಲ್ಲವೆಂಬಂತೆ ತೋರುತ್ತಿತ್ತು.

'ಏನಿದು?' ಎಂದು ನಿಕೊಲಾಸ್, ತೆರೆದ ಕಣ್ಣುಗಳಿಂದ ಅವಳ ಸಂಗೀತವನ್ನಾಲಿಸುತ್ತ ಯೋಚಿಸಿದನು. 'ಅವಳಿಗೇನಾಗಿದೆ? ಈ ದಿನ ಅವಳು ಹೇಗೆ ಹಾಡುತ್ತಿದ್ದಾಳೆ?' ಮುಂದಿನ ಸ್ವರದ ಮುಂದಿನ ಭಾಗದ ನಿರೀಕ್ಷೆಯಲ್ಲಿ ಇಡೀ ಜಗತ್ತೇ ಮಗ್ನವಾಗಿದ್ದಂತೆ ಅವನಿಗೆ ಹಠಾತ್ತನೆ ತೋರಿತು. ಜಗತ್ತಿನಲ್ಲಿ ಪ್ರತಿಯೊಂದೂ ಮೂರೇ ಮೂರು ತಾಳಗಳನ್ನವಲಂಬಿಸಿದ್ದಂತೆ ಕಂಡಿತು. 'ಓ, ನಮ್ಮ ಈ ಬದುಕು ವಿವೇಕವಿಲ್ಲದ್ದು! ಈ ದುಃಖ, ದ್ರವ್ಯ, ದೋಲೊಖೊವ್, ಕೋಪ, ಗೌರವ–ಇವೆಲ್ಲ ಅರ್ಥವಿಲ್ಲದ್ದು....ಆದರೆ ಇದು ಮಾತ್ರ ವಾಸ್ತವವಾದದ್ದು. ಒಮ್ಮೊಮ್ಮೆ ನತಾಷ, ನನ್ನ ಮುದ್ದು ತಂಗಿ! ಒಮ್ಮೊಮ್ಮೆ ನನ್ನ ಅಚ್ಚುಮೆಚ್ಚಿನ ತಂಗಿ! ಸಪ್ತಮಸ್ವರದಲ್ಲಿ ಹೇಗೆ ಹಾಡುತ್ತಾಳೆ, ನೋಡಬೇಕು. ಭೇಷ್, ಹಾಡುತ್ತಿದ್ದಾಳೆ. ದೇವರದಯೆ!' ತನಗರಿವಿಲ್ಲದೆಯೇ ಅವನು ಸಹ ಸಪ್ತಮ ಸ್ವರದಲ್ಲಿ ಗುನುಗಿಕೊಳ್ಳಲನುವಾದನು. 'ಅಹ, ದೇವರೆ! ಎಷ್ಟು ಸೊಗಸಾಗಿದೆ! ನಿಜಕ್ಕೂ ನಾನು ಹಾಡಿದೆನೆ? ನಾನೆಂಥ ಪುಣ್ಯಶಾಲಿ!'

ಆ ಬೀವಿಸ ಕಂಪನ ಮತ್ತು ಚಲನೆಗಳು ರೊಸ್ತೋವ್‌ನ ಚೇತನದಲ್ಲಿ ಅವರ್ಣನೀಯವಾದ ಆನಂದವನ್ನು ಜಾಗರಗೊಳಿಸಿದ್ದುವು. ಪ್ರಪಂಚದಲ್ಲಿ ಅದಕ್ಕಿಂತ ಅಮೂಲ್ಯವಾದದ್ದು, ಅಪೂರ್ವವಾದದ್ದು ಮತ್ತೊಂದಿರಲಿಲ್ಲ. ನಷ್ಟಗಳೆಂದರೇನು? ದೋಲೊಖೊವ್ ಏನು? ಯಾವುದು ಗೌರವ?....ಅದೆಲ್ಲ ವಿಪರೀತ! ಕೊಂದರೂ, ದರೋಡೆಮಾಡಿದರೂ, ಜನ ಸುಖವಾಗಿರಬಹುದು....'

ಅಧ್ಯಾಯ ೧೬

ಆ ದಿನದಂತೆ ರೊಸ್ತೋವ್ ಸಂಗೀತದ ಆನಂದವನ್ನನುಭವಿಸಿ ಎಷ್ಟೋ ದಿನಗಳಾಗಿದ್ದುವು. ನತಾಷ ದೋಣಿ ಹಾಡನ್ನು ಮುಗಿಸಿದ ಕೂಡಲೇ ವಾಸ್ತವ ಜಗತ್ತು ಮತ್ತೆ ಅವನ ಮುಂದೆ ಗೋಚರಿಸಿತು. ಏನೊಂದೂ ಮಾತಾಡದೆ ಮೇಲೆದ್ದು, ತನ್ನ ಕೋಣೆಗೆ ಹೋದನು. ಕಾಲು ಗಂಟೆಯ ನಂತರ ಹಿರಿಯ ಶ್ರೀಮಂತ ಸಂತೋಷ ಸಂತುಷ್ಟಚಿತ್ತನಾಗಿ ಕ್ಲಬ್ಬಿನಿಂದ ಮರಳಿದನು. ಅವನು ಮಹಡಿ ಮೇಲೆ ಹೋದುದನ್ನು ತಿಳಿದ ನಿಕೊಲಾಸ್ ಅವನನ್ನು ಹಿಂಬಾಲಿಸಿದನು.

'ಬಾ ಮಗನೆ, ಸಂತೋಷವಾಗಿ ಕಾಲ ಕಳೆದೆಯಾ?' ಎಂದು ಶ್ರೀಮಂತ ಉಲ್ಲಾಸಾಭಿಮಾನಗಳಿಂದ ತನ್ನ ಮಗನ ಕಡೆಗೆ ನೋಡಿದನು.

'ಹೌದು' ಎಂದು ನಿಕೊಲಾಸ್ ಹೇಳತೊಡಗಿದನು. ಆದರೆ ಸಾಧ್ಯವಾಗಲಿಲ್ಲ. ಗದ್ಗದ ಅವನ ಕೊರಳು ಬಿಗಿಯಿತು. ಚುಂಗಾಣಿ ಹಚ್ಚುತ್ತಿದ್ದ ಶ್ರೀಮಂತ ಮಗನ ಅವಸ್ಥೆಯನ್ನು ಗಮನಿಸಲಿಲ್ಲ.

'ಹೇಗೂ ಅದನ್ನು ಮುಚ್ಚಲು ಸಾಧ್ಯವಿಲ್ಲ' ಎಂದು ನಿಕೊಲಾಸ್ ಮೊಟ್ಟ ಮೊದಲು ಆಲೋಚಿಸಿದನು. ಅದು ಅವನ ಅಂತಿಮ ನಿರ್ಣಯವೂ ಆಯಿತು. ತನಗೆ ನಾಚಿಕೆಯಾದರೂ ಪೇಟೆಗೆ ಹೋಗಲು ಗಾಡಿ ಬೇಕೆಂದು ತಂದೆಯನ್ನು ಕೇಳಲಿದ್ದಾನೆಂಬಂತೆ ಅವನು ಹಠಾತ್ತನೆ, ಆಕಸ್ಮಿಕ ಧ್ವನಿಯಲ್ಲಿ, ಮಾತು ತೆಗೆದನು.

'ಅಪ್ಪ, ನಾನು ನಿಮ್ಮಲ್ಲೊಂದು ವ್ಯವಹಾರದ ವಿಷಯ ಕುರಿತು ಮಾತಾಡಬೇಕಾಗಿದೆ. ಅದು ಮರೆತುಹೋಗುವುದರಲ್ಲಿತ್ತು. ನನಗೆ ಸ್ವಲ್ಪ ಹಣ ಬೇಕಿತ್ತು.'

ಸಮಾಧಾನ ಸ್ಥಿತಿಯಲ್ಲಿದ್ದ ತಂದೆ 'ಮುದ್ದು ಮಗನೆ, ಅದು ಸಾಲುವುದಿಲ್ಲವೆಂದು ಮೊದಲೇ ಹೇಳಲಿಲ್ಲವೆ. ಎಷ್ಟು ಬೇಕು?' ಎಂದು ಕೇಳಿದನು.

'ತುಂಬ ಬೇಕು' ಎಂದು ಹೇಳುವಾಗ ನಿಕೊಲಾಸ್‌ನ ಕೆನ್ನೆ ಕೆಂಪೇರಿತು. ತನ್ನ ಮುಖದ ಮೇಲೆ ಮೂಡಿದ ಅವಿವೇಕದ ಹುಸಿ ನಗೆಯನ್ನು ಕ್ಷಮಿಸಲು ಅವನಿಗೆ ಸಾಧ್ಯವಾಗಲಿಲ್ಲ. 'ನಾನೊಂದಿಷ್ಟು ಕಳೆದುಕೊಂಡಿದ್ದೇನೆ. ಇಷ್ಟು ಎಂದರೆ ದೊಡ್ಡ ಮೊತ್ತವೇ. ನಲವತ್ತು ಮೂರು ಸಾವಿರ.'

'ಏನು! ಯಾರಿಗೆ!....ಬುದ್ಧಿಗೇಡಿತನ!' ಎಂದು ಶ್ರೀಮಂತ ಬೊಬ್ಬಿರಿದನು. ಮುದುಕರಿಗೆ ಸಹಜವಾಗಿರುವಂತೆ ಕತ್ತು ಹೆಕ್ಕತ್ತುಗಳಲ್ಲಿ ಚಲಿಸುವ ತೀಕ್ಷ್ಣವಾಯುವಿನಿಂದಾಗಿ ಅವನ ಮುಖ ಹಠಾತ್ತನೆ ಕೆಂಪೇರಿತು.

'ನಾಳೆಯೇ ಪಾವತಿ ಮಾಡುವುದಾಗಿ ವಚನ ನೀಡಿದ್ದೇನೆ' ಎಂದು ನಿಕೊಲಾಸ್ ನುಡಿದನು.

'ಹ್ಞಾಂ! ಸರಿಹೋಯ್ತು' ಎಂದು ಶ್ರೀಮಂತ ಕೈಗಳನ್ನು ಹರವುತ್ತ, ಅಸಹಾಯಕನಂತೆ ಸೋಫಾದ ಮೇಲೆ ಕುಸಿದನು.

'ಬೇರೆ ಮಾರ್ಗವೇ ಇಲ್ಲ! ಯಾರಿಗಾದರೂ ಇದು ಸಂಭವಿಸುವಂಥಾದ್ದೇ!' ಎಂದು ಮಗ ಧೈರ್ಯವಾಗಿ, ಸರಾಗವಾಗಿ, ಸಿಗ್ಗಿಲ್ಲದೆ ನುಡಿದನು. ಆದರೆ ತನ್ನ ಅಪರಾಧದ ಪ್ರಾಯಶ್ಚಿತ್ತಕ್ಕೆ ಇಡೀ ಜೀವನ ಸಾಲದಂಥ ಅಯೋಗ್ಯ ನೀಚ ತಾನೆಂದು ಅವನ ಅಂತರಾತ್ಮ ಪಿಸುಗುಟ್ಟುತ್ತಿತ್ತು. ತನ್ನ ತಂದೆಯ ಕೈಗಳನ್ನು ಚುಂಬಿಸಬೇಕು, ಮಂಡಿಯೂರಿ ಅವನ ಕ್ಷಮೆಯನ್ನು ಯಾಚಿಸಬೇಕೆಂದು ಅವನಿಗೆ ಮನಸ್ಸಾಯಿತು. ಆದರೆ ಅಜಾಗರೂಕತೆಯ ರೂಕ್ಷ ಧ್ವನಿಯಲ್ಲಿ, ಯಾರಿಗಾದರೂ ಅದು ಸಂಭವಿಸುವಂಥಾದ್ದೇ ಎಂದು ದುಡುಕಿದನು.

ತನ್ನ ಮಗನ ಮಾತುಗಳನ್ನು ಕೇಳಿದ ಹಿರಿಯ ಶ್ರೀಮಂತ ಅಧೋವದನನಾಗಿ ಏನನ್ನೋ ಸಶಬ್ದವಾಗಿ ಹುಡುಕತೊಡಗಿದನು. 'ಹೌದ್ಹಾದು; ಅಷ್ಟು ಹಣ ಕೊಡಿಸುವುದು ಕಷ್ಟವಾಗುತ್ತದೆ....ಎಲ್ಲರಿಗೂ ಸಂಭವಿಸುವಂಥಾದ್ದೇ! ಹೌದು, ಇಂಥಾದ್ದನ್ನು ಮಾಡದವರಾರು?' ಎಂದವನು ಗೊಣಗಿದನು. ತನ್ನ ಮಗನ ಮುಖದ ಕಡೆಗೆ ಕಳ್ಳನೋಟ ಹರಿಸಿ, ಶ್ರೀಮಂತ ಕೋಣೆಯಿಂದ ಹೊರಗೆ ನಡೆದನು....ನಿಕೊಲಾಸ್ ತಂದೆಯಿಂದ ಪ್ರತಿಭಟನೆ ನಿರೀಕ್ಷಿಸಿದ್ದನೇ ಹೊರತು ಮೃದುವರ್ತನೆಯನ್ನಲ್ಲ.

'ಅಪ್ಪ! ಅ....ಪ್ಪ!' ಎಂದು ಗದ್ಗದಿಸುತ್ತ, ಅವನನ್ನು ಹಿಂಬಾಲಿಸಿ, 'ನನ್ನನ್ನು ಕ್ಷಮಿಸಿ' ಎಂದವನು ಬೇಡಿಕೊಂಡನು. ತಂದೆಯು ಕೈಹಿಡಿದುಕೊಂಡು, ತನ್ನ ತುಟಿ ಗೊತ್ತಿಕೊಂಡು, ರೋದಿಸತೊಡಗಿದನು.

* * *

ತಂದೆ ಮತ್ತು ಮಗ ಪರಸ್ಪರ ಸಮಜಾಯಿಷಿಯಲ್ಲಿ ನಿರತರಾಗಿದ್ದಾಗ, ತಾಯಿ ಮತ್ತು ಮಗಳು ಅದರಷ್ಟೇ ಪ್ರಮುಖವಾದ ಸಂಗತಿಯ ವಿವರಣೆಯಲ್ಲಿ ಮಗ್ನರಾಗಿದ್ದರು. ಭಾವೋದ್ರೇಕದಿಂದ ತನ್ನ ತಾಯಿಯ ಬಳಿಗೆ ಓಡಿ ಬಂದ ನತಾಷ 'ಅಮ್ಮ!....ಅಮ್ಮ! ... ಪ್ರಸ್ತಾಪ....' ಎಂದು ಒರಲಿದಳು.

'ಎಂಥದೇ ಪ್ರಸ್ತಾಪ ?'

'ಮದುವೆಯ ಪ್ರಸ್ತಾಪ, ಅಮ್ಮ! ಅಮ್ಮ!' ಎಂದು ನತಾಷ ಮಿಡುಕಿದಳು.

ಶ್ರೀಮಂತೆ ತನ್ನ ಕಿವಿಗಳನ್ನೇ ನಂಬಲಿಲ್ಲ. ಡೆನಿಸೋವ್ ಮದುವೆಯ ಪ್ರಸ್ತಾಪ ವೆತ್ತಿದ್ದ. ಯಾರೊಡನೆ? ಎಳೆಯ ವಯಸ್ಸಿನ ನತಾಷಳೊಡನೆ, ಕೇವಲ ಕೆಲವು ದಿನಗಳ ಹಿಂದೆ ಬೊಂಬೆಗಳೊಡನೆ ಆಡುತ್ತ, ಈಗಲೂ ಪಾಠ ಕಲಿಯುತ್ತಿರುವ ಈ ಪೋರಿಯೊಡನೆ.

'ಕೂಡದು, ನತಾಷ! ಅದೆಂಥ ಅವಿವೇಕತನ!' ಎಂದು ಶ್ರೀಮಂತೆ ನತಾಷಳ ಮಾತನ್ನು ತಮಾಷೆಯೆಂದೇ ತಿಳಿದು ಗದರಿದಳು.

'ಅವಿವೇಕತನ ನಿಜ! ಆದರೆ ನಿಮಗೆ ನಡೆದದ್ದನ್ನು ಹೇಳುತ್ತಿದ್ದೇನೆ. ಏನು ಮಾಡುವುದೆಂದು ನಿಮ್ಮ ಸಲಹೆ ಕೇಳಲು ಬಂದರೆ, "ಅದೆಲ್ಲ ಅವಿವೇಕ" ಎಂದು ಒದರುತ್ತೀರಿ' ಎಂದು ನತಾಷ ಸಿಡಿಮಿಡಿಗೊಂಡಳು.

ಶ್ರೀಮಂತೆ ತನ್ನ ಭುಜಗಳನ್ನು ಹಾರಿಸಿದಳು. 'ಶ್ರೀಮಾನ್ ಡೆನಿಸೋವ್ ಮದುವೆಯ ಪ್ರಸ್ತಾಪ ಮಾಡಿದ್ದು ನಿಜವಾದರೆ, ಅವನೊಬ್ಬ ಬೆಪ್ಪನೆಂದು ಹೇಳಿಬಿಡು. ಅಷ್ಟೇ ತಾನೆ!'

'ಇಲ್ಲ, ಅವನು ಬೆಪ್ಪನಲ್ಲ' ಎಂದು ನತಾಷ ಗಾಂಭೀರ್ಯ ಬೆರೆತ ಕ್ರೋಧದಿಂದ ನುಡಿದಳು.

'ಹಾಗಾದರೆ. ನಿನ್ನಿಷ್ಟವೇನು ಹೇಳು. ಈಚೀಚೆಗೆ ನೀವೆಲ್ಲರೂ ಪ್ರಣಯ ವ್ಯವಹಾರಗಳಲ್ಲಿ ತೊಡಗಿದ್ದೀರಿ. ಸರಿ, ನೀನವನನ್ನು ಪ್ರೀತಿಸುವುದಾದರೆ, ಮದುವೆಯಾಗು' ಎಂದು ಶ್ರೀಮಂತೆ ಜಿಗುಪ್ಸೆಯಿಂದ ನಕ್ಕಳು. 'ನಿನಗೆ ಶುಭವಾಗಲಿ !'

'ಇಲ್ಲ, ಅಮ್ಮ. ನಾನವನನ್ನು ಪ್ರೀತಿಸುತ್ತಿಲ್ಲ; ಖಂಡಿತ ಇಲ್ಲ.'

'ಹಾಗಾದರೆ, ಅದನ್ನೇ ಅವನಿಗೆ ಹೇಳಿ ಬಿಡು.'

'ನನ್ನ ಮಾತಿನಿಂದ ನಿಮಗೆ ಕಿರಿಕಿರಿ ಆಯಿತೆ, ಅಮ್ಮ? ಈ ಬಗ್ಗೆ ಚಿಂತೆ ಬೇಡ, ನನ್ನಮ್ಮ; ಅದು ನನ್ನ ತಪ್ಪೆ, ಹೇಳಿ.'

'ಇಲ್ಲ. ಹಾಗಾದರೆ ನಿನ್ನ ಮನಸ್ಸಿನಲ್ಲಿರುವುದೇನು ? ಮುದ್ದೆ. ನಾನೇ ಅವನ ಬಳಿ ಹೋಗಿ, ಹೇಳಬೇಕೆಂಬುದು ನಿನ್ನ ಇಷ್ಟವೆ?' ಎಂದು ಶ್ರೀಮಂತೆ ನಕ್ಕಳು.

'ಹಾಗಲ್ಲಮ್ಮ. ಆ ಕೆಲಸ ನಾನೇ ಮಾಡ್ತೀನಿ. ನಾನೇನು ಹೇಳಬೇಕೆಂಬುದನ್ನು ತಿಳಿಸಿ, ಅಷ್ಟೆ. ನಿಮ್ಮಿಷ್ಟವೇ ನನ್ನಿಷ್ಟ' ಎಂದು ನತಾಷ ನಗೆಗೂಡಿಸಿದಳು. 'ಅವನು ಹೇಗೆ ಆ ಪ್ರಸ್ತಾಪವನ್ನೆತ್ತಿದನೆಂಬುದನ್ನು ನೀವು ನೋಡಬೇಕಿತ್ತು. ಅವನೇನೂ ಉದ್ದೇಶ ಪೂರ್ವಕವಾಗಿ ಆ ಮಾತೆತ್ತಿದಂತಿಲ್ಲ. ಅದು ಕೇವಲ ಆಕಸ್ಮಿಕವಾಗಿ ಹೊರಹೊಮ್ಮಿತೆಂದು ತೋರುತ್ತದೆ.'

'ಅದೇನೇ ಇರಲಿ, ನೀನು ಈ ಪ್ರಸ್ತಾಪವನ್ನು ತಿರಸ್ಕರಿಸಬೇಕು.'

'ಅವನನ್ನು ನಾನು ಮದುವೆಯಾಗಬಾರದಲ್ಲವೆ? ಅವನಿಗಾಗಿ ನಾನು ಮರುಗುತ್ತೇನೆ. ಅವನು ತುಂಬ ಒಳ್ಳೆಯವನು.'

'ಸರಿ ಹಾಗಾದರೆ, ಅವನ ಬಯಕೆಯನ್ನೀಡೇರಿಸು. ನಿನಗೆ ಮದುವೆಯಾಗುವ ವಯಸ್ಸು ಮೀರುತ್ತಿದೆ' ಎಂದು ಶ್ರೀಮಂತೆ ಹರಿತವಾಗಿ, ವ್ಯಂಗ್ಯವಾಗಿ ಕೊರಚಾಡಿದಳು.

'ಹಾಗಲ್ಲಮ್ಮ ಅವನ ಬಗ್ಗೆ ನನಗೆ ಮರುಕವಿರುವುದು ನಿಜ. ಅದನ್ನು ಹೇಗೆ ವಿವರಿಸಬೇಕೊ, ನನಗೆ ತಿಳಿಯದು.'

'ನೀನು ಹೇಳಬೇಕಾದ್ದೇನೂ ಇಲ್ಲ. ನಾನೇ ಅವನೊಡನೆ ಮಾತಾಡುತ್ತೇನೆ' ಎಂದು ಶ್ರೀಮಂತೆ ಸಿಡುಕಿದಳು. ಚಿಕ್ಕ ಹುಡುಗಿ ನತಾಷ ಪ್ರಾಯ ಬಂದವಳೆಂದು ತಿಳಿದು ಅವಳೊಡನೆ ಅವನು ಮದುವೆಯ ಪ್ರಸ್ತಾಪವನೆತ್ತ ಬಾರದಿತ್ತೆಂಬುದೇ ಅವಳ ಸಿಡುಕಿಗೆ ಕಾರಣವಾಗಿತ್ತು.

'ಖಂಡಿತವಾಗಿ ಬೇಡಮ್ಮ. ನಾನೇ ಅವನೊಡನೆ ಮಾತಾಡ್ತೀನಿ. ನೀವು ಬೇಕಾದರೆ ಬಾಗಿಲಲ್ಲಿ ನಿಂತು ಕೇಳಿಸಿಕೊಳ್ಳಬಹುದು' ಎಂದು ನತಾಷ ದಿವಾನಖಾನೆಯ ಮುಖಾಂತರ ನೃತ್ಯಮಂದಿರದ ಕಡೆಗೆ ಓಡಿದಳು. ಡೆನಿಸೋವ್ ತಂತಿವಾದ್ಯದ ಬಳಿ, ಅದೇ ಕುರ್ಚಿಯಲ್ಲಿ, ಕೈಗಳಿಂದ ಮುಖ ಮುಚ್ಚಿಕೊಂಡು ಕುಳಿತಿದ್ದನು. ಅವಳ ಹಗುರ ಹೆಜ್ಜೆಯ ಸಪ್ಪಳ ಕೇಳಿದ ಕೂಡಲೇ ಅವನು ನೆಗೆದೆದ್ದನು.

'ನತಾಲಿ' ಎಂದವನು ಅವಳೆಡೆಗೆ ಬಿರುಹೆಜ್ಜೆ ಹಾಕುತ್ತ, 'ನನ್ನ ಹಣೆಬರಹ ನಿರ್ಧರಿಸು. ಅದು ನಿನ್ನ ಕೈಯಲ್ಲಿದೆ' ಎಂದು ನುಡಿದನು.

'ವಸಿಲಿ ದಿಮಿತ್ರಿಚ್, ನಿಜಕ್ಕೂ ನಿಮಗಾಗಿ ನಾನು ಮರುಗುತ್ತೇನೆ!....ನೀವು ತುಂಬ ಒಳ್ಳೆಯವರು....ಆದರೂ ಸಾಧ್ಯವಿಲ್ಲ....ನಿಮ್ಮನ್ನು ನನ್ನ ಗೆಳೆಯನೆಂದು ಬಗೆದು ಸದಾ ಪ್ರೀತಿಸುತ್ತೇನೆ.'

ಡೆನಿಸೋವ್ ಅವಳ ಕೈಮೇಲೆ ಬಾಗಿದನು. ತನಗರ್ಥವಾಗದ ವಿಚಿತ್ರ ಧ್ವನಿಗಳು ಅವಳ ಕಿವಿಗೆ ಬಿದ್ದುವು. ಗುಂಗುರು ಕೂದಲು ತುಂಬಿದ ಕಪ್ಪನೆಯ ಅವನ ತಲೆಯನ್ನು ಚುಂಬಿಸಿದಳು. ಅಷ್ಟರಲ್ಲಿ ಶ್ರೀಮಂತೆಯ ಚುರುಕು ಹೆಜ್ಜೆಯ ಉಡುಪಿನ ಮರ್ಮರ ಶಬ್ದ ಅವರಿಗೆ ಕೇಳಿಸಿತು. ಅವಳು ಅವರ ಬಳಿಗೆ ಬಂದಳು.

'ವಸಿಲಿ ದಿಮಿತ್ರಿಚ್, ನೀವು ತೋರಿಸಿರುವ ಗೌರವಕ್ಕಾಗಿ ಧನ್ಯವಾದಗಳು' ಎಂದವಳು ಕಿರಿಕಿರಿಯಿಂದ ನುಡಿದಳು. ಆ ಕಿರಿಕಿರಿ ಡೆನಿಸೋವ್‌ನಿಗೆ ಕಠಿನವಾಗಿ ತೋರಿತು. 'ಆದರೆ ಮಗಳಿನ್ನು ಚಿಕ್ಕವಳು. ನೀವು ನನ್ನ ಮಗನ ಗೆಳೆಯರಾಗಿ, ಮದುವೆಯ ಬಗ್ಗೆ ಮೊದಲು ನನ್ನೊಡನೆ ಪ್ರಸ್ತಾಪಿಸಬೇಕಾಗಿತ್ತೆಂಬುದೇ ನನ್ನ ಇರಾದೆ. ಹಾಗಾಗಿದ್ದರೆ, ತಿರಸ್ಕಾರದ ಹಕ್ಕನ್ನು ನಾನು ಚಲಾಯಿಸುವಂತಿರಲಿಲ್ಲ.'

'ಶ್ರೀಮಂತೆಯರೆ....' ಎಂದು ಡೆನಿಸೋವ್ ಅಧೋನೇತ್ರನಾಗಿ, ಅಪರಾಧ ಮುಖಿಯಾಗಿ ಸಂಬೋಧಿಸಿದನು; ಮಾತು ಮುಂದುವರಿಸಲು ಪ್ರಯತ್ನಿಸಿ, ತಡವರಿಸಿದನು.

ಅಂಥ ದುರ್ದಶೆಗೀಡಾದ ಅವನನ್ನು ನೋಡಿ ನತಾಷ ಕಳವಳಕ್ಕೀಡಾಗಿ ಬಿಕ್ಕಿಬಿಕ್ಕಿ ಅತ್ತಳು.

'ಶ್ರೀಮಂತೆಯರೆ, ನಾನು ತಪ್ಪು ಮಾಡಿದ್ದೇನೆ' ಎಂದು ಡೆನಿಸೋವ್ ಅಸ್ತಿಮಿತ ಧ್ವನಿಯಲ್ಲಿ ಮಾತಿಗಾರಂಭಿಸಿದನು. 'ನನ್ನನ್ನು ನಂಬಿ, ನಿಮ್ಮ ಮಗಳನ್ನೇ ಏಕೆ, ನಿಮ್ಮ ಇಡೀ ಕುಟುಂಬವನ್ನೇ ನಾನು ಆರಾಧಿಸುತ್ತೇನೆ; ನನ್ನ ಬದುಕನ್ನೇ ಧಾರೆಯೆರೆಯಲು ಸಿದ್ಧನಾಗಿದ್ದೇನೆ....' ಅವನು ಶ್ರೀಮಂತೆಯ ಕಡೆಗೆ ನೋಡಿ, ಅವಳ ಮುಖದ ಕಠೋರತೆಯನ್ನು ಗಮನಿಸಿ 'ಒಳ್ಳೆಯದು, ಶ್ರೀಮಂತೆಯರೆ, ನಮಸ್ಕಾರ' ಎಂದು ನುಡಿದು ಅವಳ ಕೈಯನ್ನು ಚುಂಬಿಸಿ, ನತಾಷಳ ಕಡೆಗೆ ನೋಡದೆಯೆ, ದೃಢಸಂಕಲ್ಪದಿಂದೆಂಬಂತೆ ದಾಪುಗಾಲು ಹಾಕುತ್ತ, ಕೋಣೆಯಿಂದ ಹೊರಗೆ ನಡೆದನು.

* * *

ಮಾರನೆಯ ದಿನ ರೊಸ್ತೋವ್ ಡೆನಿಸೋವ್‌ನನ್ನು ಬೀಳ್ಕೊಟ್ಟನು. ಮಾಸ್ಕೋ ನಗರದಲ್ಲಿ ಒಂದು ದಿನ ಸಹ ನಿಲ್ಲಲು ಡೆನಿಸೋವ್ ಇಷ್ಟಪಡಲಿಲ್ಲ. ಡೆನಿಸೋವ್‌ನ ಮಾಸ್ಕೋ ಮಿತ್ರರು ಜಿಪ್ಸಿ ನೃತ್ಯವನ್ನೇರ್ಪಡಿಸಿ, ಅವನಿಗೆ ಬೀಳ್ಕೊಡಿಗೆ ಸಮಾರಂಭವನ್ನು ಜರುಗಿಸಿದರು. ಅದೇ ಗುಂಗಿನಲ್ಲಿದ್ದ ಅವನಿಗೆ, ತಾನು ಜಾರುಬಂಡಿಯನ್ನೇರಿದ್ದಾಗಲಿ, ಪ್ರಯಾಣದ ಮೊದಲ ಮೂರು ಹಂತಗಳಾಗಲಿ, ನೆನಪಾಗಲಿಲ್ಲ.

ಡೆನಿಸೋವ್‌ನ ನಿರ್ಗಮನಾನಂತರ ರೊಸ್ತೋವ್ ಮನೆಯಿಂದ ಹೊರಗೆ ಹೋಗದೆಯೆ, ತನ್ನ ತಂದೆ ಕೂಡಲೇ ಸಂಗ್ರಹಿಸಲಾಗದಿದ್ದ ಹಣಕ್ಕಾಗಿ ಕಾಯುತ್ತ, ಮಾಸ್ಕೋದಲ್ಲಿ ಮತ್ತೊಂದು ಪಕ್ಷ ಕಳೆದನು. ಅವನು ದಿನವಿಡೀ ಹುಡುಗಿಯರ ಕೋಣೆಯಲ್ಲಿರುತ್ತಿದ್ದನು.

ಸೋನ್ಯ ಮೊದಲಿಗಿಂತ ಮಿಗಿಲಾಗಿ ಅವನ ಬಗ್ಗೆ ಶ್ರದ್ಧೆಯಿಂದಿದ್ದಳು, ದಯಾರ್ದ್ರ ಹೃದಯವುಳ್ಳವಳಾಗಿದ್ದಳು. ಸೋಲಿನಲ್ಲಿಯೇ ಗೆಲವಿದೆಯೆಂದು ತಿಳಿದು, ಅವನ ಬಗ್ಗೆ ಹೆಚ್ಚು ಅನುರಾಗವನ್ನು ಪ್ರದರ್ಶಿಸಬೇಕೆಂಬ ಮನೋಭಾವವುಳ್ಳವಳಾಗಿದ್ದಂತೆ ಅವಳು ತೋರಿದಳು.

ಹುಡುಗಿಯರ ಚಿತ್ರಸಂಪುಟಗಳನ್ನು ಪದ್ಯ ಮತ್ತು ಸಂಗೀತಗಳಿಂದ ತುಂಬಿಸಿದನು. ದೋಲೊಖೊವ್‌ನಿಗೆ ನಲವತ್ತಮೂರು ಸಾವಿರ ರೂಬಲ್‌ಗಳನ್ನು ಮುರಿಯದೆ ಕಳಿಸಿ, ಪಾವತಿಯನ್ನು ಪಡೆದನಂತರ ಅವನು, ಪೋಲೆಂಡಿನಲ್ಲಿದ್ದ ತನ್ನ ದಳವನ್ನು ಹಿಡಿಯುವ ಸಲುವಾಗಿ, ತನ್ನ ಪರಿಚಿತರಿಗೂ ಹೇಳದೆ ಕೇಳದೆ, ನವೆಂಬರ್ ತಿಂಗಳ ಕೊನೆಯಲ್ಲಿ ಊರು ಬಿಟ್ಟನು.

ಪರ್ವ-೫

ಅಧ್ಯಾಯ ೧

ಹೆಂಡತಿಯ ಭೇಟಿಯ ನಂತರ ಪಿಯರಿ ಪೀಟರ್ಸ್ ಬರ್ಗ್‌ಗೆ ಹೊರಟನು. ತಾರ್‌ಝೂಕ್ ಅಂಚೆ–ಪಾಳೆಯದಲ್ಲಿ ಕುದುರೆಗಳು ಸಿಗಲಿಲ್ಲ, ಅಂಚೆಕಚೇರಿಯ ಅಧಿಕಾರಿಯೂ ಅವುಗಳನ್ನು ಒದಗಿಸಲಿಲ್ಲ. ಪಿಯರಿ ಅನಿವಾರ್ಯವಾಗಿ ಕಾಯಬೇಕಾಯಿತು. ಬಟ್ಟೆ ತೆಗೆಯದೆಯೆ ದುಂಡುಮೇಜಿನ ಮುಂದಿದ್ದ ತೊಗಲು ಸೋಫಾದ ಮೇಲೆ ಅವನು ಬಿದ್ದು ಕೊಂಡನು. ಬೂಟುಗಳಿದ್ದ ದೊಡ್ಡ ಪಾದಗಳನ್ನು ಮೇಜಿನ ಮೇಲಿರಿಸಿಕೊಂಡು, ಚಿಂತಾ ಮಗ್ನನಾದನು.

'ಕೈಪೆಟ್ಟಿಗೆಯನ್ನು ಒಳಗೆ ತರಲೆ? ಹಾಸುಗೆ ಅಣಿ ಮಾಡಲೆ? ಟೀ ತರುವುದೆ?' ಎಂದವನ ಸೇವಕ ಕೇಳಿದನು.

ಪಿಯರಿ ಉತ್ತರಿಸಲಿಲ್ಲ. ಅವನಿಗೇನೂ ಕೇಳಿಸಲಿಲ್ಲ; ಯಾರೂ ಕಣ್ಣಿಗೆ ಬೀಳಲಿಲ್ಲ. ಹಿಂದಿನ ನಿಲ್ದಾಣದಲ್ಲಿಯೇ ಅವನು ಆಲೋಚನಾಮಗ್ನನಾಗಿದ್ದ ; ಅದೇ ವಿಷಯವನ್ನು ಕುರಿತಂತೆ ಅವನ ಆಲೋಚನೆ ಮುಂದುವರಿದಿತ್ತು. ಅದರ ಪ್ರಾಮುಖ್ಯತೆಯಿಂದಾಗಿ, ತನ್ನ ಸುತ್ತಮುತ್ತ ಏನು ನಡೆಯುತ್ತಿತ್ತೆಂಬುದು ಅವನ ಕಣ್ಣಿಗೆ ಬೀಳುವಂತಿರಲಿಲ್ಲ. ಪೀಟರ್ಸ್‌ಬರ್ಗ್‌ಗೆ ಯಾವಾಗ ಹೋಗಬೇಕೆಂಬುದರ ಬಗ್ಗೆಯಾಗಲಿ, ಈ ನಿಲ್ದಾಣದಲ್ಲಿ ವಸತಿ ಸಿಗಬೇಕೆಂಬುದರ ಬಗ್ಗೆಯಾಗಲೀ ಅವನು ನಿರ್ಲಕ್ಷ್ಯದಿಂದಿದ್ದನು. ಅವನ ತಲೆಯಲ್ಲಿ ತುಂಬಿಕೊಂಡಿದ್ದ ಆಲೋಚನೆಗಳನ್ನು ಗಮನಿಸಿದಾಗ, ಕೆಲವು ದಿನಗಳ ಅಥವಾ ಜೀವನಾವಧಿಯ ಅಲ್ಲಿಯ ತಂಗಣೆಯ ಸಂಗತಿ ಅವನ ಪಾಲಿಗೆ ಕ್ಷುಲ್ಲಕವಾದುದಾಗಿತ್ತು.

ಅಂಚೆಯಧಿಕಾರಿ, ಅವನ ಮಡದಿ, ಸೇವಕ ಮತ್ತು ತಾರ್‌ಝೂಕ್ ಕಸೂತಿ ವಸ್ತ್ರವನ್ನು ಮಾಡುವ ಒಕ್ಕಲಿತಿ ಎಲ್ಲರೂ ಅವನಿದ್ದೆಡೆಗೆ ಹೋಗಿ, ತಮ್ಮ ಕೈಂಕರ್ಯವನ್ನು ಒಪ್ಪಿಸಿಕೊಳ್ಳುವಂತೆ ನಿವೇದಿಸಿಕೊಂಡರು. ಯಥಾ ಸ್ಥಿತಿಯ ನಿರ್ಲಕ್ಷ್ಯ ಮನೋಭಾವದಿಂದ ಪಿಯರಿ ತನ್ನ ಕನ್ನಡಕಗಳ ಮೂಲಕ ಅವರ ಕಡೆಗೆ ಕಣ್ಣು ಹಾಯಿಸಿದನು. ಅವರ ಇಷ್ಟಾರ್ಥವನ್ನಾಗಲಿ, ತನ್ನನ್ನು ಕಾಡುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳದೆಯೇ ಅವರು ಹೇಗೆ ಜೀವನವನ್ನು ಸಾಗಿಸುತ್ತಿದ್ದರೆಂಬುದನ್ನಾಗಲಿ ಅವನು ಅರ್ಥ ಮಾಡಿಕೊಳ್ಳಲು ಅಸಮರ್ಥನಾಗಿದ್ದನು. ದ್ವಂದ್ವ ಯುದ್ಧದ ತರುವಾಯ, ಸೊಕೋಲ್ನಿಕಿಯಿಂದ ಹಿಂದಿರುಗಿದಂದಿನಿಂದ ಅದೇ ಆಲೋಚನೆಗಳು ಅವನ ಮನಸ್ಸನ್ನೆಲ್ಲ ತುಂಬಿಕೊಂಡಿದ್ದುವು; ಅದೇ ಆಲೋಚನೆಯಲ್ಲಿ ಯಾತನಾಮಯ ನಿದ್ರಾರಹಿತ ಪ್ರಥಮ ರಾತ್ರಿಯನ್ನು ಕಳೆದಿದ್ದನು. ಆದರೆ ಪ್ರಯಾಣದ ಒಂಟಿತನದಲ್ಲೀಗ ಅವು ಹೆಚ್ಚು ರಭಸದಿಂದ ಅವನನ್ನು ಆಕ್ರಮಿಸಿಕೊಂಡಿದ್ದುವು. ಈ ಮಧ್ಯೆ ಯಾವುದೇ ಹೊಸ ಆಲೋಚನೆ ಪ್ರವೇಶಿಸಿದರೂ, ಅವನು ಮತ್ತೆ ಮತ್ತೆ ಬಗೆಹರಿಯದ ಹಳೆಯ ಸಮಸ್ಯೆಗಳ

ಕಡೆಗೆ ಮರಳುತ್ತಿದ್ದನು; ಪುನಃ ಪುನಃ ಅವುಗಳಲ್ಲಿಯೇ ಮಗ್ನನಾಗುತ್ತಿದ್ದನು. ಅವನ ಬದುಕನ್ನು ಬಿಗಿಯಾಗಿ ಬಂಧಿಸಿದ್ದ ತಿರುಪು ಮೊಳೆಯ ಎಳೆ ಕಿತ್ತುಹೋಗಿ, ಒಳಗೆ ಹೋಗದೆ, ಹೊರಗೆ ಬರದೆ, ಒಂದೇ ಜಾಗದಲ್ಲಿ ವ್ಯರ್ಥವಾಗಿ ತಿರುಗುತ್ತಿದ್ದ ಮೊಳೆಯಂತಿತ್ತು ಅವನ ಬದುಕು.

ಕೇವಲ ಎರಡೇ ಎರಡು ಗಂಟೆ ಕಾಯುವುದಾದರೆ, ಏನೇ ತೊಂದರೆ ಬರಲಿ, ಹರಿಕಾರನ ಕುದುರೆಗಳನ್ನಾದರೂ ಮಹಾಸ್ವಾಮಿಯವರಿಗೆ ಒದಗಿಸಿಕೊಡುವುದಾಗಿ ಕೋಣೆಯೊಳಗೆ ಬಂದ ಅಂಚೆಯ ಅಧಿಕಾರಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸಿಕೊಂಡನು. ಸುಳ್ಳು ಹೇಳಿ ಪ್ರಯಾಣಿಕನಿಂದ ಹೆಚ್ಚು ಹಣ ವಸೂಲಿ ಮಾಡಿಕೊಳ್ಳಬೇಕೆಂಬುದೇ ಅವನ ಉದ್ದೇಶವಾಗಿತ್ತು.

'ಇದು ಸರಿಯೊ ತಪ್ಪೊ?' ಎಂದು ಪಿಯರಿ ತನ್ನನ್ನು ತಾನೇ ಪ್ರಶ್ನಿಸಿಕೊಂಡನು. 'ಇದು ನನಗೇನೋ ಸರಿ; ಬೇರೆ ಪ್ರಯಾಣಿಕನಿಗೆ ಸರಿಯಾಗದು; ಅವನಿಗಾದರೊ ಅನ್ನಕ್ಕಾಗಿ ಹಣ ಬೇಕಾದ್ದು ಅನಿವಾರ್ಯ; ಖಾಸಗಿ ಪ್ರಯಾಣಿಕನಿಗೆ ಹರಿಕಾರನ ಕುದುರೆಗಳನ್ನು ಬಾಡಿಗೆಗೆ ಕೊಟ್ಟಿದ್ದಕ್ಕಾಗಿ ಒಮ್ಮೆ ಅಧಿಕಾರಿಯೊಬ್ಬ ತನ್ನನ್ನು ಚಾಟಿಯಿಂದ ತೀಡಿದ್ದುದಾಗಿ ಅವನು ನುಡಿದನು. ತಾನು ಬಹು ಬೇಗನೆ ಹೋಗಬೇಕಾಗಿದ್ದುದರಿಂದ ಅಧಿಕಾರಿ ಅವನಿಗೆ ತೀಡಿದ್ದನು. 'ನನ್ನ ಮನಸ್ಸಿಗೆ ನೋವಾಗಿದ್ದುದರಿಂದ ದೋಲೊಖೊವ್‌ನ ಮೇಲೆ ಗುಂಡು ಹಾರಿಸಿದೆ. ಅಪರಾಧಿಯಾಗಿ ಕಂಡು ಬಂದದ್ದರಿಂದ ೧೬ನೆಯ ಲೂಯಿಯನ್ನು ಗಲ್ಲಿಗೇರಿಸಲಾಯಿತು. ಒಂದು ವರ್ಷದ ನಂತರ ಯಾವುದೋ ಕಾರಣಕ್ಕಾಗಿ ಅವನನ್ನು ಯಾರು ಗಲ್ಲಿಗೇರಿಸಿದ್ದರೋ ಅವರಿಗೂ ಮರಣದಂಡನೆಯಾಯಿತು. ಯಾವುದು ಸರಿ? ಯಾವುದು ತಪ್ಪು? ಯಾವುದನ್ನು ಪ್ರೀತಿಸಬೇಕು? ಯಾವುದನ್ನು ದ್ವೇಷಿಸಬೇಕು? ಮನುಷ್ಯ ಏಕೆ ಜೀವಿಸಬೇಕು? ನಾನು ಯಾರು? ಜೀವನ ಮರಣಗಳೆಂದರೇನು? ಎಲ್ಲವನ್ನಾಳುತ್ತಿರುವ ಶಕ್ತಿಯಾವುದು?' ಎಂಬುದಾಗಿ ಪಿಯರಿಯ ಆಲೋಚನಾ ಲಹರಿ ಹರಿಯಿತು.

ಒಂದು ಹೊರತಾಗಿ, ಉಳಿದ ಪ್ರಶ್ನೆಗಳಿಗೆ ಉತ್ತರ ದೊರೆಯಲಿಲ್ಲ. ಅದು ಸಹ ತರ್ಕಬದ್ಧವಾಗಿರಲಿಲ್ಲ; ಉಚಿತವಾಗಿರಲಿಲ್ಲ. ಆ ಉತ್ತರವಿದು: 'ನೀನು ಸಾಯುತ್ತೀಯೆ. ಎಲ್ಲವೂ ಕೊನೆಗೊಳ್ಳುತ್ತದೆ. ನೀನು ಸಾಯುತ್ತೀಯೆ. ಎಲ್ಲವನ್ನು ತಿಳಿಯಲು ಯತ್ನಿಸು; ಇಲ್ಲ, ಪ್ರಶ್ನಿಸುವುದನ್ನು ನಿಲ್ಲಿಸು.' ಆದರೆ ಸಾವು ಸಹ ಭಯಂಕರವಾಗಿತ್ತು.

ತಾರ್‌ಝೋಕ್ ಬೀದಿವ್ಯಾಪಾರಿ ರಾಗವಾಗಿ ತನ್ನ ಮಾರಾಟದ ವಸ್ತುಗಳ, ಮುಖ್ಯವಾಗಿ ಮೇಕೆ ಚರ್ಮದ ಒಂದು ಜೊತೆ ಚಪ್ಪಲಿಗಳ ಹೆಸರು ಹಿಡಿದು ಸಾರುತ್ತ ಹೊರಟಿದ್ದಳು. 'ನನ್ನ ಬಳಿ ನೂರಾರು ರೂಬಲ್‌ಗಳಿವೆ. ಅವನ್ನೇನು ಮಾಡುವುದೊ ಗೊತ್ತಿಲ್ಲ. ಚಿಂದಿ ಬಟ್ಟೆಯ ಆ ಹೆಂಗಸು ಬೆದರುಗಣ್ಣಿನಿಂದ ನನ್ನನ್ನೆ ನೋಡುತ್ತಿದ್ದಾಳೆ. ಅವಳಿಗೇಕೆ ಹಣ ಬೇಕು? ಆ ಹಣದಿಂದ ಅವಳ ಸುಖಸಂತೋಷಗಳಾಗಲಿ, ಮನಶ್ಶಾಂತಿಯಾಗಲಿ ಕೂದಲೆಳೆಯಷ್ಟಾದರೂ ಹೆಚ್ಚುವುದುಂಟೆ? ನಾನು ಅಥವಾ ಅವಳು ದೌಷ್ಟ್ಯ ಮತ್ತು ಮರಣಗಳಿಗೆ ಬಲಿಯಾಗದಂತೆ ಈ ಜಗತ್ತಿನಲ್ಲಿ ಯಾವುದೇ ಆಗಲಿ ರಕ್ಷಿಸಬಲ್ಲುದೆ?—ಎಲ್ಲಕ್ಕೂ ಅಂತ್ಯದ ತೆರೆ ಎಳೆಯುವ ಸಾವು ಇಂದೋ ನಾಳೆಯೋ, ಅನಂತ

ದೊಡನೆ ಹೋಲಿಸಿದಾಗ ಅರೆಕ್ಷಣದಲ್ಲಿ ಬಂದೇ ಬರುತ್ತದೆ' ಎಂದವನು ಆಲೋಚಿಸಿದನು. ಎಳೆ ಕಿತ್ತು ಹೋಗಿದ್ದ ತಿರುಪುಮೊಳೆಯನ್ನವನು ಮತ್ತೆ ತಿರುಚಿದನು; ಅದು ಮತ್ತೆ ಅದೇ ಜಾಗದಲ್ಲಿ ವ್ಯರ್ಥವಾಗಿ ಸುತ್ತುತ್ತಿತ್ತು.

ಪತ್ರಗಳ ಆಕಾರದಲ್ಲಿದ್ದ, ಇನ್ನೂ ಸರಿಯಾಗಿ ರಟ್ಟು ಜೋಡಿಸದ ಕಾದಂಬರಿಯನ್ನು ಆಳು ಅವನಿಗೆ ತಂದುಕೊಟ್ಟನು. ಅದರ ಕರ್ತೃ ಶ್ರೀಮತಿ ಡಿಸೂಜಾ. ಎಮಿಲಿ ಡಿ ಮ್ಯಾನ್ಸ್ ಫೀಲ್ಡ್ ಎನ್ನುವವಳ ಧಾರ್ಮಿಕ ಹೋರಾಟಗಳ ಮತ್ತು ಸಂಕಟಗಳ ಕತೆಯನ್ನವನು ಓದಿದನು. 'ತನ್ನ ಸತೀತ್ವವನ್ನು ಹಾಳುಮಾಡಿದ ನೀಚನನ್ನವಳು ಪ್ರೀತಿಸುತ್ತಿದ್ದುದೇ ಆದರೆ ಅವನನ್ನೇಕೆ ಅವಳು ಪ್ರತಿಭಟಿಸಬೇಕಿತ್ತು? ತನ್ನಿಚ್ಛೆಗೆ ವಿರುದ್ಧವಾದ ಭಾವನೆಯನ್ನು ದೇವರು ಅವಳ ಹೃದಯದಲ್ಲಿರಿಸಿರಲಾರನು. ನನ್ನ ಮಡದಿ ಹಿಂದಿನಂತೆ ಹೋರಾಟ ನಡಸಲಿಲ್ಲ. ಪ್ರಾಯಶಃ ಅವಳ ವರ್ತನೆ ಸರಿಯೆಂದು ತೋರುತ್ತದೆ. ಸಾಕ್ಷಿ ದೊರೆತಿಲ್ಲ; ಪತ್ತೆ ಹಚ್ಚುವುದೂ ಸಾಧ್ಯವಾಗಿಲ್ಲ' ಎಂಬುದಾಗಿ ಪಿಯರಿಯ ಆಲೋಚನಾ ಪ್ರವಾಹ ಹರಿಯಿತು. 'ನಮಗೇನೂ ತಿಳಿದಿಲ್ಲವೆಂಬುದೇ ನಾವು ತಿಳಿಯಬೇಕಾದ ಸತ್ಯ. ಮಾನವನ ಅತ್ಯುತ್ಕೃಷ್ಟವಾದ ವಿವೇಕವದು.'

ಅವನ ಹೊರಗೊಳಗಿನ ಸಮಸ್ತವೂ ಅಸ್ತವ್ಯಸ್ತಗೊಂಡಂತೆ, ವಿವೇಕಶೂನ್ಯವಾಗಿದ್ದಂತೆ, ಜಿಗುಪ್ಸಾವಹವಾಗಿದ್ದಂತೆ ತೋರುತ್ತಿತ್ತು. ಆದರೂ ಆ ಜಿಗುಪ್ಸೆಯಲ್ಲಿಯೇ ಪಿಯರಿಗೆ ಮೋಹಕವಾದ ತೃಪ್ತಿ ಕಾಣುತ್ತಿತ್ತು.

'ಈ ಮಹನೀಯರಿಗೆ ಎಡೆಮಾಡಿಕೊಡುವ ಸಲುವಾಗಿ ಮಹಾಸ್ವಾಮಿಯವರು ತುಸು ಪಕ್ಕಕ್ಕೆ ಒತ್ತಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ' ಎಂದು ಅಂಚೆ ಅಧಿಕಾರಿ ಮತ್ತೊಬ್ಬ ಪ್ರಯಾಣಿಕನೊಂದಿಗೆ ಬಂದು ಕೇಳಿಕೊಂಡನು. ಕುದುರೆಗಳು ಸಿಗದೆ ಆ ಪ್ರಯಾಣಿಕನೂ ಅಲ್ಲಿಯೇ ತಂಗಬೇಕಾಗಿತ್ತು.

ಹೊಸದಾಗಿ ಬಂದವನು ಸುಕ್ಕು ಹಿಡಿದ ಹಳದಿ ಮುಖದ, ಕುಬ್ಜಾಕಾರದ, ದೊಡ್ಡೆಲುಬಿನ ಮುದುಕ. ಬೂದು ಬಣ್ಣದ ಕಾಂತಿಯುತ ನೇತ್ರಗಳ ಮೇಲೆ ಬಿಳಿಯ ಹುಬ್ಬುಪೊದೆ ಜೋತು ಬಿದ್ದಿತ್ತು.

ಪಿಯರಿ ಮೇಜಿನ ಮೇಲಿದ್ದ ಪಾದವನ್ನಿಳಿಸಿ, ನಿಂತುಕೊಂಡಿದ್ದು, ಹೊಸಬನ ಕಡೆಗೆ ಒಮ್ಮೊಮ್ಮೆ ಕಣ್ಣು ಮಿಟುಕಿಸುತ್ತ, ತನಗಾಗಿಯೇ ಸಿದ್ಧವಾಗಿದ್ದ ಹಾಸುಗೆಯ ಮೇಲೆ ಹೊರಳಿಕೊಂಡನು. ಹೊಸಬ ಪಿಯರಿಯ ಕಡೆಗೆ ನೋಡದೆಯೆ, ತನ್ನ ಸೇವಕನ ಸಹಾಯದಿಂದ ಶ್ರಮಪೂರ್ವಕವಾಗಿ ಉಡುಪುಗಳನ್ನು ತೆಗೆಯುತ್ತಿದ್ದನು. ದಣಿದ ಅವನ ಮುಖ ಮಂಕಾಗಿತ್ತು; ಮೂಳೆ ಬಿಟ್ಟುಕೊಂಡಿದ್ದ ಸಣಕಲ ಕಾಲುಗಳಲ್ಲಿ ಫೆಲ್ಟು ಬೂಟುಗಳಿದ್ದುವು; ಹಳದಿ ಹತ್ತಿಬಟ್ಟೆ ಮುಚ್ಚಿದ ಕುರಿತೊಗಲಿನ ಕೋಟನ್ನವನು ಧರಿಸಿದ್ದನು; ತುಂಡಾಗಿ ಕತ್ತರಿಸಿದ ಕೂದಲ, ಅಗಲವಾದ ಕಪೋಲಗಳ, ದಪ್ಪ ತಲೆಯನ್ನು ಹಿಂದಕ್ಕೆ ಚಾಚಿ, ಸೋಫಾದ ಮೇಲೆ ಕುಳಿತು, ಬೆಜುಕೋವ್ ಕಡೆಗೊಮ್ಮೆ ಕಣ್ಣು ಹಾಯಿಸಿದನು. ನಿಷ್ಠುರವೂ, ತೀಕ್ಷ್ಣವೂ, ಸೂಕ್ಷ್ಮಗ್ರಾಹಿಯೂ ಆದ ಆ ನೋಟ ಪಿಯರಿಯನ್ನು ಚಕಿತಗೊಳಿಸಿತು. ಆ ಅಪರಿಚಿತನನ್ನು ಮಾತಾಡಿಸುವುದೆಂದು ಅವನಿಂದ ರಸ್ತೆಗಳ ವಿವರ ತಿಳಿಯುವುದೆಂದು ಮನಸ್ಸಿನಲ್ಲಂದುಕೊಂಡನು. ಆ ಅನಿಸಿಕೆ

ನಿರ್ಧಾರವಾಗುವ ಹೊತ್ತಿಗೆ ಪ್ರಯಾಣಿಕ ಕಣ್ಣು ಮುಚ್ಚಿಕೊಂಡಿದ್ದನು. ಅವನ ಸುರುಟಿ ಕೈಗಳು ಮಡಿಚಿಕೊಂಡಿದ್ದುವು. ಅವನೊಂದು ಬೆರಳಿನಲ್ಲಿದ್ದ ಎರಕ ಕಬ್ಬಿಣದ ಉಂಗುರದ ಕಡೆಗೆ ಪಿಯರಿಯ ಗಮನ ಹರಿಯಿತು. ಆ ಉಂಗುರದ ಮೇಲೆ ಸಾವಿನ ಚಿಹ್ನೆಯು ತಲೆಬುರುಡೆಯ ಮುದ್ರೆಯಿತ್ತು. ಆ ಅಪರಿಚಿತ ನಿಶ್ಚಲನಾಗಿ ಕುಳಿತಿದ್ದನು. ಅವನು ವಿಶ್ರಾಂತಿ ಪಡೆಯುತ್ತಿರಬೇಕೆಂದು, ಇಲ್ಲವೆ ಪ್ರಶಾಂತ ಗಾಢಧ್ಯಾನದಲ್ಲಿ ಮುಳುಗಿರಬೇಕೆಂದು ಪಿಯರಿಗನಿಸಿತು. ಅವನ ಆಳು ಸಹ ಸುಕ್ಕು ಹಿಡಿದ ಹಳದಿ ಮುಖದ ಮುದುಕ. ಅವನ ಮುಖದಲ್ಲಿ ಗಡ್ಡ ಮೀಸೆಗಳಿರಲಿಲ್ಲ. ಅವುಗಳ ಗೈರು ಹಾಜರಿಗೆ ಕಾರಣ ಕ್ಷೌರವಲ್ಲ. ಅವೆಂದೂ ಹುಟ್ಟಿ, ಬೆಳೆದಂತಿರಲಿಲ್ಲ. ತುಂಬ ಚುರುಕಾಗಿದ್ದ ಆ ಮುದಿ ಸೇವಕ ಪ್ರಯಾಣದ ಅಡುಗೆ ಪಾತ್ರೆಗಳ ಪೆಟ್ಟಿಗೆಯಿಂದ ಸಾಮಾನುಗಳನ್ನು ಹೊರತೆಗೆದು, ಟೀ ಅಣಿಗೊಳಿಸುತ್ತಿದ್ದನು. ಅವನು ಕುದಿಯುತ್ತಿದ್ದ ಪಾತ್ರೆಯೊಂದನ್ನು ತಂದನು. ಎಲ್ಲವೂ ಸಿದ್ಧವಾದಾಗ, ಅಪರಿಚಿತವ್ಯಕ್ತಿ ಕಣ್ಣು ತೆರೆದು, ಮೇಜಿನ ಬಳಿಗೆ ಸರಿದು, ಎರಡು ಪಾತ್ರೆಗಳಿಗೆ ಟೀ ತುಂಬಿ; ಒಂದನ್ನು ಗಡ್ಡವಿಲ್ಲದ ಮುದಿಯನ ಕಡೆಗೆ ಸರಿಸಿದನು. ಪಿಯರಿಯ ಮನಸ್ಸಿಗೆ ಮುಜುಗರವಾಗಿ, ಆ ಹೊಸಬನೊಡನೆ ಮಾತುಕತೆ ಯಾಡುವುದು ಅನಿವಾರ್ಯವೆಂದು ಅವನಿಗನ್ನಿಸಿತು.

ತನಗೆ ಟೀ ಸಾಕೆನ್ನುವಂತೆ ಸೇವಕ ತನ್ನ ಪಾತ್ರೆಯನ್ನು ತಲೆಕೆಳಗಾಗಿ ಇರಿಸಿದನು, ಮಿತವ್ಯಯದ ದೃಷ್ಟಿಯಿಂದ ಸಕ್ಕರೆ ಚಿಲ್ಲೆಯನ್ನು ತುಸುತುಸುವೆ ಕೆರೆದು, ಟೀಗೆ ಹಾಕಿ ಕೊಂಡು, ಉಳಿದುದನ್ನು ಹಾಗೆಯೇ ಮುಚ್ಚಿಟ್ಟನು; ಮತ್ತಷ್ಟು ಸಕ್ಕರೆ ಬೇಕಾಗುವುದೆ ಎಂದು ತನ್ನ ಯಜಮಾನನನ್ನು ಕೇಳಿದನು.

'ಬೇಡ. ಪುಸ್ತಕ ತಾ, ಇಲ್ಲಿ' ಎಂದು ಪ್ರಯಾಣಿಕ ಆಣತಿಯಿತ್ತನು.'

ಆಳು ಪುಸ್ತಕವನ್ನವನ ಕೈಗೆ ಕೊಟ್ಟನು. ಅದೊಂದು ಧಾರ್ಮಿಕ ಗ್ರಂಥವಿರ ಬೇಕೆಂದು ಪಿಯರಿ ಭಾವಿಸಿದನು. ಪ್ರಯಾಣಿಕ ಅದರಲ್ಲಿಯೇ ಮಗ್ನನಾದನು. ಪಿಯರಿ ಅವನ ಕಡೆ ನೋಡುತ್ತಿದ್ದನು. ಇದ್ದಕ್ಕಿದ್ದಂತೆ ಅಪರಿಚಿತ ಗುರುತಿರಿಸಿ, ಪುಸ್ತಕವನ್ನು ಮುಚ್ಚಿ, ಕೈಗಳನ್ನು ಸೋಫಾದ ಹಿಂದಕ್ಕೆ ಚಾಚಿ, ಮುನ್ನಿನ ಭಂಗಿಯಲ್ಲಿ, ಕಣ್ಣು ಮುಚ್ಚಿಕೊಂಡು ಕುಳಿತನು. ಪಿಯರಿ ಅವನ ಕಡೆಗೆ ನೋಡುತ್ತಿದ್ದಂತೆ, ಮುದುಕ ಕಣ್ಣು ತೆರೆದು, ಪಿಯರಿಯ ಮುಖದ ಮೇಲೆ ತನ್ನ ನಿಶ್ಚಲವೂ ನಿಸ್ಪೃಹವೂ ಆದ ದೃಷ್ಟಿಯನ್ನಿರಿಸಿದನು.

ಕಳವಳಗೊಂಡ ಪಿಯರಿ ಆ ನೋಟದಿಂದ ಪಾರಾಗಲೆಳಸಿದನು; ಆದರೆ ಕಾಂತಿ ಯುತವಾದ ಆ ಮುದಿಗಣ್ಣುಗಳ ಅದಮ್ಯ ಆಕರ್ಷಣೆಗೊಳಗಾದನು.

ಅಧ್ಯಾಯ ೨

'ನಾನು ನಿಮ್ಮನ್ನು ಶ್ರೀಮಂತ ಬೆಜುಕೊವ್‌ರೆಂದು ಸಂಬೋಧಿಸಿದರೆ ತಪ್ಪಾಗು ವುದಿಲ್ಲವೆಂದು ಭಾವಿಸಿದ್ದೇನೆ' ಎಂದು ಆ ಅಪರಿಚಿತ ಉದ್ದೇಶಪೂರ್ವಕವಾಗಿಯೆಂಬಂತೆ ಗಟ್ಟಿಯಾಗಿ ಒರಲಿದನು.

ಪಿಯರಿ ಮಾತಿಲ್ಲದೆ, ಕುತೂಹಲದಿಂದ ಅವನ ಕಡೆಗೆ ನೋಡುತ್ತಿದ್ದನು.

'ನಿಮ್ಮ ವಿಷಯ ಕೇಳಿದ್ದೇನೆ, ಬುದ್ಧಿ. ನಿಮಗೊದಗಿರುವ ದುರ್ದೈವವೂ ನನಗೆ ಗೊತ್ತಿದೆ' ಎಂದು ಹೊಸಬ ಮಾತು ಮುಂದುವರಿಸಿದನು. 'ಹೌದು, ದುರ್ದೈವ! ಅದನ್ನು ಯಾವ ಹೆಸರಿನಿಂದಾದರೂ ಕರೆಯಿರಿ. ಮಾಸ್ಕೋದಲ್ಲಿ ನೀವೆದುರಿಸಿದ ಘಟನೆಯನ್ನು ದುರ್ದೈವವೆಂದೇ ತಿಳಿದಿದ್ದೇನೆ' ಎಂಬ ಭಾವನೆಯನ್ನವನು ತನ್ನ ಕೊನೆಯ ಮಾತಿನ ಮೂಲಕ ಒತ್ತಿ ಹೇಳುವಂತಿತ್ತು. 'ಅದರಿಂದ ನನಗೆ ತುಂಬ ವ್ಯಸನವಾಗಿದೆ, ಸ್ವಾಮಿ.'

ಮುಖ ಕೆಂಪೇರಿದ ಪಿಯರಿ ಅವಸರವಾಗಿ ಕಾಲುಗಳನ್ನು ಹಾಸುಗೆಯಿಂದ ತೆಗೆದು, ಕೆಳಗೆ ಇಳಿಬಿಟ್ಟುಕೊಂಡು, ಬಲವಂತದ, ಗಾಬರಿಯ ಮುಗುಳುನಗೆಯೊಡನೆ ಮುದಿಯನ ಕಡೆಗೆ ವಾಲಿದನು.

'ಕೇವಲ ಕುತೂಹಲಕ್ಕಾಗಿ ಈ ವಿಷಯವನ್ನೆತ್ತಿಕೊಂಡಿಲ್ಲ, ಸ್ವಾಮಿ. ಗುರುತರವಾದ ಕಾರಣಕ್ಕಾಗಿ ಎತ್ತಿದ್ದೇನೆ.'

ಅವನು ಮಾತು ನಿಲ್ಲಿಸಿ, ಪಿಯರಿಯ ಮುಖದಲ್ಲಿಯೇ ದೃಷ್ಟಿಯನ್ನು ನಾಟಿ, ಅವನನ್ನು ತನ್ನ ಪಕ್ಕಕ್ಕೆ ಕರೆಯುವ ರೀತಿಯಲ್ಲಿ, ಸೋಫಾದ ಮತ್ತೊಂದು ತುದಿಗೆ ಸರಿದನು. ಆ ಮುದಿಯನೊಡನೆ ಸಂಭಾಷಣೆ ನಡಸುವ ಇಚ್ಛೆ ಪಿಯರಿಗಿರಲಿಲ್ಲ. ಆದರೆ ಅನೈಚ್ಛಿಕವಾಗಿ ಎಂಬಂತೆ ಅವನಿಗೆ ಮಣಿದು, ಎದ್ದು ಬಂದು, ಅವನ ಪಕ್ಕದಲ್ಲಿ ಕುಳಿತನು.

'ನೀವು ದುಃಖದಲ್ಲಿದ್ದೀರಿ, ನೀವು ಚಿಕ್ಕವರು; ನಾನು ವಯಸ್ಸಾದವನು. ನಿಮಗೆ ನನ್ನ ಕೈಲಾದ ಸಹಾಯ ಮಾಡಬೇಕೆಂದಿದ್ದೇನೆ' ಎಂದು ಅಪರಿಚಿತ ವ್ಯಕ್ತಿ ಮಾತು ಮುಂದುವರಿಸಿದನು.

'ಓ ಆಗಲಿ. ನಿಮಗೆ ನಾನು ಕೃತಜ್ಞ. ನೀವು ಎಲ್ಲಿಂದ ಹೊರಟಿರುವಿರಿ?' ಎಂದು ಪಿಯರಿ ಬಲವಂತದಿಂದ ಮುಗುಳು ನಗೆ ಬೀರಿದನು.

ಅಪರಿಚಿತನ ಮುಖ ಪ್ರಸನ್ನವಾಗಿರಲಿಲ್ಲ. ನಿರುತ್ಸಾಹದಿಂದ ಕಠಿನವಾಗಿತ್ತೆಂದೇ ಹೇಳಬಹುದು. ಆದರೆ ಅವನ ಮಾತು ಮತ್ತು ಚಹರೆಗಳು ಪಿಯರಿಗೆ ತಡೆಯಲಾಗದಷ್ಟು ಆಕರ್ಷಣೀಯವಾಗಿದ್ದುವು.

'ಯಾವುದಾದರೂ ಕಾರಣಕ್ಕಾಗಿ ನನ್ನೊಡನೆ ಮಾತಾಡಲು ನಿಮಗಿಷ್ಟವಿಲ್ಲದಿದ್ದಲ್ಲಿ, ಹೇಳಿಬಿಡಿ, ಸ್ವಾಮಿ' ಎಂದು ಮುದಿಯ ನುಡಿದನು. ಒಡನೆಯೆ ಅನಿರೀಕ್ಷಿತವಾದ ಪಿತೃಪ್ರಾಯದ ವಾತ್ಸಲ್ಯ ಅವನ ಮುಖದ ಮೇಲೆ ಸುಳಿಯಿತು.

'ಓ, ಖಂಡಿತವಾಗಿ ಹಾಗೇನೂ ಇಲ್ಲ. ಅದಕ್ಕೆ ಪ್ರತಿಯಾಗಿ, ನಿಮ್ಮ ಪರಿಚಯದಿಂದ ನನಗೆ ತುಂಬ ಸಂತೋಷವಾಗುತ್ತದೆ' ಎಂದು ಪಿಯರಿ ನುಡಿದನು. ಅವನು ಮತ್ತೆ ಅಪರಿಚಿತನ ಕೈಗಳ ಕಡೆಗೆ ಕಣ್ಣು ಹಾಯಿಸಿ, ಗುಪ್ತಸಂಕೇತದ ತಲೆಬುರುಡೆಯ ಉಂಗುರವನ್ನು ಎಚ್ಚರಿಕೆಯಿಂದ ವೀಕ್ಷಿಸಿದನು. 'ನಾನೊಂದು ಪ್ರಶ್ನೆ ಕೇಳಬಹುದೆ? ನೀವು ಫ್ರೀಮೇಸನ್ ಅಹುದೆ?'

'ಹೌದು. ನಾನು ಸಹಕಾರ ಸೌಭ್ರಾತ್ರ ಮಂಡಲಿಗೆ ಸೇರಿದವನು. ಆ ಫ್ರೀಮೇಸನರ ಮತ್ತು ನನ್ನ ಹೆಸರಿನಲ್ಲಿ ನಿಮಗೆ ಭ್ರಾತೃ ಹಸ್ತವನ್ನು ನೀಡುತ್ತಿದ್ದೇನೆ' ಎಂದು ಪಿಯರಿಯ ಕಣ್ಣುಗಳನ್ನೇ ಗಾಢವಾಗಿ ನೋಡುತ್ತ ಹೊಸಬ ನುಡಿದನು.

'ನನಗೆ ಅಂಜಿಕೆಯಾಗುತ್ತಿದೆ' ಎಂದು ಪಿಯರಿ ನುಡಿದನು. ಆ ಫ್ರೀಮೇಸ್‌ನ ವ್ಯಕ್ತಿತ್ವ ತನ್ನಲ್ಲಿ ಪ್ರಚೋದಿಸಿದ ವಿಶ್ವಾಸದ ಜತೆಗೆ, ಆ ಸೌಭ್ರಾತೃ ಮಂಡಲಿಯ ನಂಬಿಕೆಗಳನ್ನು ಅಣಕವಾಡುತ್ತಿದ್ದ ತನ್ನ ನಡತೆಯಿಂದಾಗಿ ಅವನ ಮನಸ್ಸು ಇಬ್ಬಗಿಯಾಗಿತ್ತು. 'ಸೂಕ್ಷ್ಮಗ್ರಹಣ ಸಾಮರ್ಥ್ಯ ನನ್ನಲ್ಲಿರಲಾರದೆಂಬ ಶಂಕೆಯಿದೆ. ಅದನ್ನು ಹೇಗೆ ಹೇಳಬೇಕೊ, ಗೊತ್ತಿಲ್ಲ. ಜಗತ್ತಿನ ಬಗೆಗಿನ ನನ್ನ ನಿಲವು ನಿಮ್ಮ ನಿಲವಿಗಿಂತ ತೀರ ಭಿನ್ನವಾದುದರಿಂದ, ನಾವು ಪರಸ್ಪರವಾಗಿ ಅರ್ಥಮಾಡಿಕೊಳ್ಳಲಾರೆವೆಂದು ತಿಳಿಸಲು ನನಗೆ ಸಂಕೋಚವಾಗುತ್ತದೆ.'

'ನಿಮ್ಮ ಮನೋಧರ್ಮ ನನಗೆ ಗೊತ್ತಿದೆ. ನಿಮ್ಮ ಬೌದ್ಧಿಕ ಪ್ರಯತ್ನದ ಫಲವೆಂದು ನೀವು ತಿಳಿದು ವಿವರಿಸಿರುವ ಜೀವನದೃಷ್ಟಿ ಬಹುಜನ ಮಾನ್ಯವಾದದ್ದೇ ಅಹುದು. ಆದರೆ ಅದು ಅಜ್ಞಾನ, ಅಹಂಕಾರ, ಆಲಸ್ಯಗಳ ಅನಿವಾರ್ಯ ಫಲವೆಂದೇ ಹೇಳಬೇಕಾಗಿದೆ. ಕ್ಷಮಿಸಿ, ಸ್ವಾಮಿ, ಆ ವಿಚಾರ ನನಗೆ ಗೊತ್ತಿರದಿದ್ದರೆ, ನಿಮ್ಮನ್ನು ಮಾತಾಡಿಸಬೇಕಾಗಿರಲಿಲ್ಲ. ನಿಮ್ಮ ಜೀವನ ದೃಷ್ಟಿ ವಿಷಾದಿಸಬೇಕಾದ ಭ್ರಾಂತಿಯಾಗಿದೆ' ಎಂದು ಫ್ರೀಮೇಸನ್ ನುಡಿದನು.

'ನೀವೆಂತು ಭ್ರಾಂತಿಗೊಳಗಾಗಿದ್ದೀರೋ ಅಂತೆಯೇ' ಎಂದು ಪಿಯರಿ ನುಡಿದಾಗ ಅವನ ನಗೆಯೂ ಮಾಸಲಾಗಿತ್ತು.

'ನನಗೆ ಸತ್ಯ ತಿಳಿದಿದೆಯೆಂದು ನಾನೆಂದೂ ಧೈರ್ಯವಾಗಿ ಹೇಳಲಾರೆ' ಎಂಬ ಮೇಸನ್ ಹುರುಳು ನುಡಿಗಳ ಖಚಿತತೆ ಮತ್ತು ದೃಢತೆ ಪಿಯರಿಯ ಹೃದಯವನ್ನು ನೇರವಾಗಿ ಪ್ರವೇಶಿಸಿದುವು. 'ಸತ್ಯ ಸಾಕ್ಷಾತ್ಕಾರ ಯಾವೊಬ್ಬ ವ್ಯಕ್ತಿಯ ಮೀಸಲು ಆಸ್ತಿಯಲ್ಲ. ನಮ್ಮ ಪ್ರಥಮ ಪೂರ್ವಜ ಆ್ಯಡಂನಿಂದ ಹಿಡಿದು ನಮ್ಮ ಕಾಲದವರೆಗಿನ ಸಹಸ್ರಸಹಸ್ರ ಪೀಳಿಗೆಯ ಜನ ಒಂದೊಂದೇ, ಒಂದರ ಮೇಲೊಂದು ಕಲ್ಲಿಡುತ್ತ ಎಲ್ಲರ ಸಹಕಾರದಿಂದ ಮಹದೇವನ ನಿವಾಸಕ್ಕೆ ಯೋಗ್ಯವಾದ ಮಂದಿರವನ್ನು ನಿರ್ಮಿಸಲಾಗಿದೆ' ಎಂದು ಮೇಸನ್ ನುಡಿದು, ಕಣ್ಣು ಮುಚ್ಚಿದನು.

'ನನಗೆ ನಂಬಿಕೆಯಿಲ್ಲ ದೇವರಲ್ಲಿ ನಂಬಿಕೆಯಿಲ್ಲವೆಂಬುದನ್ನು ನಾನು ನಿಮಗೆ ಸ್ಪಷ್ಟಪಡಿಸಲೇಬೇಕು' ಎಂದು ಪಿಯರಿ, ಪೂರ್ಣಸತ್ಯ ಹೇಳುವುದು ಅತ್ಯವಶ್ಯವೆನ್ನುವಂತೆ, ವಿಷಾದದಿಂದ, ಪ್ರಯತ್ನ ಪೂರ್ವಕವಾಗಿ ನುಡಿದನು.

ಮೇಸನ್ ಪಿಯರಿಯ ಕಡೆಗೆ ಉದ್ದೇಶಪೂರ್ವಕವಾಗಿ ನೋಡಿ, ನಕ್ಕನು. ತನ್ನಲ್ಲಿ ಐದು ರೂಬಲ್‌ಗಳಾದರೂ ಇದ್ದಿದ್ದರೆ ತಾನು ಸುಖಿಯಾಗಿರುತ್ತಿದ್ದೆನೆಂದು ಹೇಳುವ ಬಡವನ ಮೇಲೆ ಮಿಲಿಯಾಧಿಪನೊಬ್ಬ ಸೂಸುವ ನಗೆಯನ್ನು ಆ ನಗೆ ಹೋಲುವಂತಿತ್ತು. 'ಹೌದು, ನೀವು ಆ ಮಹಾದೇವನನ್ನರಿತಿಲ್ಲ ಸ್ವಾಮಿ. ಅರಿಯುವಂತೆಯೂ ಇಲ್ಲ. ಅವನನ್ನರಿಯಲಾರಿರಿ. ಆದ್ದರಿಂದಲೇ ನೀವು ಅಸುಖಿಯಾಗಿದ್ದೀರಿ!'

'ನಿಜ, ನಿಜ. ನಾನು ಅಸುಖಿ. ನಾನೇನು ಮಾಡುವುದಿದೆ?' ಎಂದು ಪಿಯರಿ ಕಂಠೋಕ್ತವಾಗಿ ನುಡಿದನು.

'ನೀವವನನ್ನರಿಯಲಾರಿರಿ, ಸ್ವಾಮಿ. ಅದರಿಂದ ನೀವು ಅಸುಖಿಯಾಗಿದ್ದೀರಿ. ನೀವವನನ್ನು ಕಂಡಿಲ್ಲ. ಅವನು ಇಲ್ಲಿದ್ದಾನೆ, ನನ್ನಲ್ಲಿದ್ದಾನೆ, ನನ್ನ ಮಾತುಗಳಲ್ಲಿದ್ದಾನೆ,

ನಿಮ್ಮೊಳಗಿದ್ದಾನೆ; ಅಷ್ಟೇ ಅಲ್ಲ, ಇದೇ ತಾನೆ ನೀವು ಉಚ್ಚರಿಸಿದ ಪಾಷಂಡಿತನದ, ದ್ವೇಷದ ಪದಪಂಕ್ತಿಯಲ್ಲಿಯೂ ಇದ್ದಾನೆ' ಎಂದು ಮೋಸಸ್ ತಳ್ಳಂಕದ, ಆದರೆ ದೃಢ ಸಂಕಲ್ಪದ ಧ್ವನಿಯಲ್ಲಿ ಘೋಷಿಸಿದನು.

ಅವನು ಮಾತು ನಿಲ್ಲಿಸಿ, ತನ್ನನ್ನು ತಾನು ಸಂತೈಸಿಕೊಳ್ಳುವಸಲುವಾಗಿ ಸುಯ್ದನು. 'ಅವನು ಇಲ್ಲವೆಂದಾಗಿದ್ದರೆ, ಸ್ವಾಮಿ, ನಾನೂ ನೀವೂ ಅವನ ಬಗ್ಗೆ ಮಾತಾಡುತ್ತಿರಲಿಲ್ಲ. ಯಾರ ಬಗ್ಗೆ, ಯಾವುದನ್ನು ಕುರಿತು ನಾವು ಮಾತಾಡುತ್ತಿದ್ದೇವೆ? ನೀವು ಯಾರನ್ನು ಇಲ್ಲವೆಂದು ಅಲ್ಲಗಳೆದಿದ್ದೀರಿ?' ಎಂದವನು ಒಡನೆಯೆ ಜಯೋನ್ಮತ್ತನಾದ ಕಠೋರ ವ್ರತಿಯಂತೆ ಅಧಿಕಾರವಾಣಿಯಿಂದ ಪ್ರಶ್ನಿಸಿದನು. 'ಅವನು ಅಸ್ತಿತ್ವದಲ್ಲಿಲ್ಲವೆನ್ನುವುದಾದರೆ, ಅವನನ್ನು ಸೃಷ್ಟಿಸಿದವರು ಯಾರು? ಅಂಥ ಅಜ್ಞೇಯ ಶಕ್ತಿಯ ಅಸ್ತಿತ್ವದ ಕಲ್ಪನೆಯಾದರೂ ನಿಮಗೆಲ್ಲಿಂದ ಬಂತು? ಸರ್ವಶಕ್ತ, ಶಾಶ್ವತ, ಅನಂತ ಎಂಬೆಲ್ಲ ವಿಶೇಷಣಗಳಿಗೆ ಭಾಜನನೆನ್ನಲಾದ ಆ ಅಜ್ಞೇಯ ಶಕ್ತಿಯ ಅಸ್ತಿತ್ವದ ಭಾವನೆಯನ್ನು ನೀವಾಗಲಿ, ಇಡೀ ಜಗತ್ತಾಗಲಿ ಕಲ್ಪಿಸಿಕೊಂಡದ್ದೇಕೆ?....'

ಅವನು ಮಾತು ನಿಲ್ಲಿಸಿ, ಬಹು ಹೊತ್ತು ತೆಪ್ಪಗಿದ್ದನು. ಪಿಯರಿ ಅವನ ಮೌನವನ್ನು ಮುರಿಯಲಿಷ್ಟಪಡಲಿಲ್ಲ.

'ಅವನಿದ್ದಾನೆ. ಆದರೆ ಅವನನ್ನರ್ಥಮಾಡಿಕೊಳ್ಳುವುದು ಕಷ್ಟ' ಎಂದು ಮೋಸಸ್ ಮತ್ತೆ ವಾಕ್ ಲಹರಿ ಹರಿಸಿದನು. ಪಿಯರಿಯತ್ತಣಿಂದ ಜಾರಿದ ಅವನ ದೃಷ್ಟಿ ಎದುರುಗಡೆ ನೆಟ್ಟಿತ್ತು. ಭಾವೋದ್ರೇಕದಿಂದಾಗಿ ಅವನ ಕೈಗಳು ಸುಮ್ಮನಿರದೆ ಪುಸ್ತಕದ ಹಾಳೆಗಳನ್ನು ಮಗುಚುತ್ತಿದ್ದುವು. 'ಅವನೊಬ್ಬ ಮಾನುಷ ವ್ಯಕ್ತಿಯಾಗಿದ್ದು, ಅವನ ಅಸ್ತಿತ್ವದ ಬಗ್ಗೆ ನಿಮಗೆ ಸಂದೇಹ ಮೂಡಿದ್ದರೆ, ಅವನನ್ನು ಕೈಹಿಡಿದು ಎಳೆತಂದು ನಿಮ್ಮ ಮುಂದೆ ಪ್ರದರ್ಶಿಸಬಹುದಿತ್ತು. ತನ್ನ ಪಾಪ ಮತ್ತು ದೌರ್ಬಲ್ಯಗಳನ್ನರಿಯಲಾರದ ಕುರುಡನಿಗೆ, ಭಗವಂತನನ್ನು ನೋಡಬಾರದು, ಅರ್ಥಮಾಡಿಕೊಳ್ಳಬಾರದು ಎಂದು ಕಣ್ಣು ಮುಚ್ಚಿಕೊಳ್ಳುವ ಅವಿವೇಕಿಗೆ ನಾನು, ನನ್ನಂಥ ಅನಾಮಧೇಯ ಮರ್ತ್ಯ ಅವನ ಸರ್ವ ಶಕ್ತಿಯನ್ನು ಅವನ ಅನಂತತೆಯನ್ನು ಮತ್ತು ಅವನ ದಯೆಯನ್ನು ತೋರಿಸುವುದಾದರೂ ಹೇಗೆ?' ಅವನು ಮತ್ತೆ ಮೌನಿಯಾದನು. 'ನೀನು ಯಾರು? ಅಂಥ ದೈವ ದೂಷಣೆಯ ಮಾತುಗಳನ್ನು ಸಾರಿ, ನೀನು ವಿವೇಕಿಯೆಂದು ಕನಸು ಕಾಣುತ್ತಿರುವೆಯೇನು?' ಎಂದವನು ನಿರುತ್ಸಾಹದ ಮತ್ತು ಧಿಕ್ಕಾರದ ಧ್ವನಿಯಲ್ಲಿ ಮಾತು ಮುಂದುವರಿಸಿದನು. 'ಚಿಕ್ಕ ಮಗುವೊಂದು ಕೌಶಲದಿಂದ ನಿರ್ಮಿಸಿದ ಗಡಿಯಾರದ ಭಾಗಗಳೊಂದಿಗೆ ಆಟವಾಡುತ್ತಿದೆಯೆಂದಿಟ್ಟುಕೊಳ್ಳೋಣ. ಆ ಭಾಗಗಳನ್ನು ಸರಿಯಾಗಿ ಜೋಡಿಸಿ, ಅದರ ಪ್ರಯೋಜನವನ್ನು ಪಡೆಯಲಾರದ ಮಗು ಗಡಿಯಾರದ ನಿರ್ಮಾತೃವನ್ನೇ ಶಂಕಿಸುತ್ತದೆ. ನೀನು ಆ ಮಗುವಿಗಿಂತ ಬುದ್ಧಿಹೀನ, ಅವಿವೇಕಿ. ಭಗವಂತನನ್ನರಿಯುವುದು ಸುಲಭವಲ್ಲ ....ಯುಗಯುಗಗಳಿಂದ, ಆ್ಯಡಂನಿಂದ ಹಿಡಿದು ಈ ತನಕ ನಾವು ಆ ಸತ್ಯ ಸಾಕ್ಷಾತ್ಕಾರಕ್ಕಾಗಿ ಶ್ರಮಿಸುತ್ತಿದ್ದೇವೆ; ಇನ್ನು ನಮ್ಮ ಗುರಿ ಅನಂತದಷ್ಟೇ ದೂರವಾಗಿದೆ. ಅರಿವಿನ ಅಭಾವದಿಂದಾಗಿ ನಮಗೆ ನಮ್ಮ ದೌರ್ಬಲ್ಯವೂ, ಅವನ ಮಹಿಮೆಯೂ ಕಾಣಿಸುತ್ತಿವೆ....'

ಹೊಳಹುಗಣ್ಣುಗಳ ಮೇಸನ್‌ನ ಮುಖವನ್ನೆ ನಿಟ್ಟಿಸುತ್ತ, ನಡುವೆ ಬಾಯಿ ಹಾಕದೆ ಅಥವಾ ಪ್ರಶ್ನಿಸದೆ, ಅಪರಿಚಿತ ನುಡಿವದ್ದನ್ನೆಲ್ಲ ಹೃತ್ಪೂರ್ವಕವಾಗಿ ನಂಬಿ ಕೊಂಡು ಪಿಯರಿ ಉಕ್ಕುತ್ತಿದ್ದ ಸಂತೋಷದಿಂದ ಆಲಿಸಿದನು. ಮೇಸನ್‌ನ ವಾದದ ತರ್ಕ ವಿವೇಕಗಳನ್ನವನು ಒಪ್ಪಿಕೊಂಡನೊ ಇಲ್ಲವೊ, ಅಥವಾ ಮಗುವಿನಂತೆ, ಆ ಮಾತುಗಾರನ ಆತ್ಮ ಪ್ರತ್ಯಯ ಆತ್ಮ ಶ್ರದ್ಧೆಗಳನ್ನು ಅಥವಾ ಒಮ್ಮೊಮ್ಮೆ ವಿಚ್ಛೇದಗೊಳ್ಳುತ್ತಿದ್ದ ಧ್ವನಿಯ ಕಂಪನವನ್ನು ಅಥವಾ ಆ ಶ್ರದ್ಧೆಯಲ್ಲಿಯೇ ಬೆಳೆದು ಮುಪ್ಪಾಗಿದ್ದ ಆ ಉಜ್ವಲ ನೇತ್ರಗಳನ್ನು ಅಥವಾ ಆತನ ಇಡೀ ಬದುಕಿನಿಂದ ತನ್ನ ನಿರಾಶೆ ನಿರುತ್ಸಾಹ ಗಳಿಂದಾಗಿ ತನ್ನ ಮತ್ತು ಅವನ ಬದುಕಿನ ನಡುವಣ ವ್ಯತ್ಯಾಸ ಪಿಯರಿಗೆ ಸ್ಪಷ್ಟ ಗೋಚರವಾಗಿತ್ತು. ಹೊರಸೂಸಿದ ಅಂತಃಪ್ರೇರಣೆಯ ದೃಢ ನಿಶ್ಚಯವನ್ನು ನಂಬಿಕೊಂಡನೊ ಇಲ್ಲವೊ, ಅಷ್ಟು ಸ್ಪಷ್ಟವಾಗಿರಲಿಲ್ಲ. ಹೃತ್ಪೂರ್ವಕವಾಗಿ ಅದನ್ನು ನಂಬಿಕೊಳ್ಳುವ ಇಚ್ಛೆಯೇನೋ ಇತ್ತು. ಅದನ್ನು ನಂಬಿದಾಗ ಸಮಾಧಾನದ, ಆತ್ಮೋನ್ನತಿಯ ಮತ್ತು ಪುನರುಜ್ಜೀವನದ ಹರ್ಷೋತ್ಕರ್ಷ ಭಾವನೆ ಅವನನ್ನು ವ್ಯಾಪಿಸಿಕೊಂಡಂತಾಯಿತು.

'ಅವನು ತರ್ಕಕ್ಕೆ ಸಿಗುವುದಿಲ್ಲ; ಬದುಕಿನ ಮೂಲಕ ಅರಿಯಬೇಕು' ಎಂದು ಮೇಸನ್ ನುಡಿದನು.

'ನನಗಂತು ಅರ್ಥವಾಗುವುದಿಲ್ಲ' ಎಂದು ಪಿಯರಿ ನುಡಿದನು. ಅವನ ಭಯ ಸಂದೇಹಗಳು ಮತ್ತೆ ತಲೆಯೆತ್ತಿದುವು. ಮೇಸನ್‌ನ ವಾದಗಳಲ್ಲಿ ನ್ಯೂನತೆಯಾಗಲಿ ಅಸ್ಪಷ್ಟತೆಯಾಗಲಿ ಕಾಣಲಿಲ್ಲ. ಅವನನ್ನು ನಂಬದಿರುವುದೂ ಕಷ್ಟವಾಯಿತು. 'ನೀವೀಗ ನಿರವಿಸಿದ ಸುಜ್ಞಾನ ಮಾನವ ಬುದ್ಧಿಗೆ ಎಟುಕಲಾರದೆಂಬುದೇ ನನಗರ್ಥವಾಗುವುದಿಲ್ಲ' ಎಂದವನು ನುಡಿದನು.

ಮೇಸನ್ ಮುಗುಳುನಗೆ ಬೀರಿದನು; ಆ ನಗೆಯಲ್ಲಿ ಕೋಮಲವೂ ಪಿತೃಪ್ರಾಯವೂ ಆದ ವಾತ್ಸಲ್ಯವಿತ್ತು. 'ಪರಮಜ್ಞಾನ ಮತ್ತು ಸತ್ಯಗಳು ನಾವು ಹೀರಿಕೊಳ್ಳಲಿಚ್ಛಿಸುವ ಶುದ್ಧ ದ್ರವದಂತಿವೆ. ಆ ಪರಿಶುದ್ಧ ದ್ರವವನ್ನು ಅಶುದ್ಧ ಪಾತ್ರೆಯಲ್ಲಿ ಹಿಡಿದುಕೊಂಡು, ಅದರ ಪಾವಿತ್ರ್ಯವನ್ನು ಪರೀಕ್ಷಿಸಲಾದೀತೆ? ನನ್ನ ಅಂತರಂಗ ಪರಿಶುದ್ಧವಾಗಿದ್ದರೆ ಮಾತ್ರ ನಾನು ಪಡೆಯುವ ದ್ರವದ ಪರಿಶುದ್ಧತೆಯನ್ನು ಅಲ್ಪ ಪ್ರಮಾಣದಲ್ಲಾದರೂ ಉಳಿಸಿಕೊಳ್ಳಬಹುದಾಗಿದೆ' ಎಂದವನು ನುಡಿದನು.

'ನಿಜ, ನಿಜ' ಎಂದು ಪಿಯರಿ ಸಂತೋಷದಿಂದ ಸಮ್ಮತಿ ಸೂಚಿಸಿದನು.

'ಕೇವಲ ತರ್ಕಾಧಾರದಿಂದ ಪರಮಜ್ಞಾನವನ್ನು ಸಾಧಿಸಲಾಗದು. ಭೌತವಿಜ್ಞಾನ, ಇತಿಹಾಸ, ರಸಾಯನ ವಿಜ್ಞಾನವೇ ಮೊದಲಾದ ಲೌಕಿಕ ಜ್ಞಾನ ಶಾಖೆಗಳು ಸಹ ಆ ಪರಮಜ್ಞಾನದ ಸಾಕ್ಷಾತ್ಕಾರಕ್ಕೆ ಸಾಧನವಾಗಲಾರವು. ಪರಮಜ್ಞಾನ ಏಕಮೇವಾ ದ್ವಿತೀಯವಾದದ್ದು. ಅದನ್ನು ಕುರಿತ ವಿಜ್ಞಾನವೆಂದರೆ ಪೂರ್ಣತಾ ವಿಜ್ಞಾನ. ಇಡೀ ವಿಶ್ವವನ್ನೂ, ಆ ವಿಶ್ವದಲ್ಲಿ ಮಾನವನ ಸ್ಥಾನವನ್ನೂ ವಿವರಿಸುವ ವಿಜ್ಞಾನವೇ ಅದು. ಅಂಥ ವಿಜ್ಞಾನವನ್ನು ಸ್ವೀಕರಿಸುವ ಮುನ್ನ ಪ್ರತಿಯೊಬ್ಬನೂ ತನ್ನ ಅಂತಶ್ಚೈತನ್ಯವನ್ನು ನವೀಕರಿಸಿ, ಅದನ್ನು ಶುದ್ಧೀಕರಿಸಿಕೊಳ್ಳಬೇಕಾದ್ದು ಅತ್ಯವಶ್ಯಕ. ಅದನ್ನು ಅರ್ಥಮಾಡಿ ಕೊಳ್ಳಲು ಪ್ರಯತ್ನಿಸುವ ಮೊದಲೇ ವಿಶ್ವಾಸ ಶ್ರದ್ಧೆಗಳೂ ಪೂರ್ಣೀಕರಣೇಚ್ಛೆಯೂ

ಅನಿವಾರ್ಯ. ಆ ಗುರಿಯನ್ನು ಮುಟ್ಟಲು, ದೇವರೇ ನಮ್ಮ ಅಂತರಂಗದಲ್ಲಿ ಹಚ್ಚಿಟ್ಟಿರುವ ಆತ್ಮಸಾಕ್ಷಿಯು ಜ್ಯೋತಿಯಿದೆ.'

'ಹೌದ್ಹೌದು' ಎಂದು ಪಿಯರಿ ಒಪ್ಪಿಕೊಂಡನು.

'ಹಾಗಾದರೆ ನಿಮ್ಮ ಅಂತಶ್ಚಕ್ಷುವಿನ ಸಹಾಯದಿಂದ ನಿಮ್ಮ ಅಂತರಂಗವನ್ನು ಶೋಧಿಸಿಕೊಳ್ಳಿ. ನಿಮ್ಮ ಬಗ್ಗೆ ನಿಮಗೆ ತೃಪ್ತಿಯಿದೆಯೆ ಎಂಬುದನ್ನು ನಿರ್ಧರಿಸಿಕೊಳ್ಳಿ. ತರ್ಕವನ್ನು ಮಾತ್ರವೇ ನಂಬಿ ನೀವು ಸಾಧಿಸಿರುವುದಾದರೂ ಏನು? ನೀವು ಏನಾಗಿದ್ದೀರಿ? ನೀವು ತರುಣರು, ಶ್ರೀಮಂತರು, ಬುದ್ಧಿವಂತರು, ಸುಶಿಕ್ಷಿತರು. ಈ ಎಲ್ಲ ಅಮೂಲ್ಯ ವರಗಳಿದ್ದೂ ನೀವೇನು ಸಾಧಿಸಿದ್ದೀರಿ? ನಿಮ್ಮ ಬಗ್ಗೆ ಮತ್ತು ನಿಮ್ಮ ಬದುಕಿನ ಬಗ್ಗೆ ನಿಮಗೆ ತೃಪ್ತಿಯಿದೆಯೆ?'

'ಇಲ್ಲ, ನನ್ನ ಬದುಕನ್ನು ದ್ವೇಷಿಸುತ್ತೇನೆ' ಎಂದು ಪಿಯರಿ ಬೆಚ್ಚಿ ಗೊಣಗಿದನು.

'ನೀವದನ್ನು ದ್ವೇಷಿಸುತ್ತೀರಲ್ಲವೆ? ಹಾಗಾದರೆ ಅದನ್ನು ಬದಲಿಸಿ, ಶುದ್ಧೀಕರಿಸಿಕೊಳ್ಳಿ. ನೀವು ಶುದ್ಧಿಗೊಂಡಂತೆಲ್ಲ, ಶುದ್ಧ ಜ್ಞಾನ ವಿಕಾಸಗೊಳ್ಳುತ್ತದೆ. ನಿಮ್ಮ ಬದುಕಿನ ಕಡೆಗೆ ಗಮನಹರಿಸಿ, ಸ್ವಾಮಿ. ಅದನ್ನು ನೀವು ಹೇಗೆ ಸಾಗಿಸಿದ್ದೀರಿ? ಅತಿರೇಕದ ಭೋಗವಿಲಾಸದಲ್ಲಿ, ಕಾಮಕೇಳಿಯಲ್ಲಿ, ವಿಷಯ ಲಂಪಟತೆಯಲ್ಲಿ ತಾನೆ. ನೀವು ಸಮಾಜದಿಂದ ಪ್ರತಿಯೊಂದನ್ನು ಪಡೆದಿರುವಿರೇ ಹೊರತು, ಇಂತಿಷ್ಟನ್ನಾದರೂ ಹಿಂದಿರುಗಿಸಲಿಲ್ಲ. ನೀವು ಅಪಾರ ಸಂಪತ್ತನ್ನು ವಶಪಡಿಸಿಕೊಂಡಿದ್ದೀರಿ. ಅದನ್ನು ನ್ಯಾಯವಾಗಿ ವಿತರಿಸಿದ್ದೀರಾ? ನಿಮ್ಮ ನೆರೆಯವರಿಗೆ ನೀವು ಮಾಡಿರುವ ಉಪಕಾರವೇನು? ನೀವೆಂದಾದರೂ ನಿಮ್ಮ ಸಾವಿರಾರು ಜೀತಗಾರರ ಕ್ಷೇಮದ ಬಗ್ಗೆ ಯೋಚಿಸಿದ್ದೀರಾ? ನೈತಿಕವಾಗಿ ಹಾಗೂ ಭೌತಿಕವಾಗಿ ಅವರಿಗೆ ಸಹಾಯ ಮಾಡಿದ್ದೀರಾ? ಇಲ್ಲ! ಅವರ ದುಡಿಮೆ ಬೆವರುಗಳಿಂದ ಲಾಭ ಪಡೆದು, ಸ್ವೇಚ್ಛಾಚಾರದ ಬದುಕು ನಡೆಸಿದ್ದೀರಿ. ನಿಮ್ಮ ಬದುಕಿನ ಸಾಧನೆಯೆಲ್ಲ ಇಷ್ಟೇ ತಾನೆ. ನಿಮ್ಮ ನೆರೆಯವರ ಸೇವೆಗನುವಾಗುವ ಕಾಯಕವನ್ನು ನೀವು ಆರಿಸಿಕೊಂಡಿದ್ದೀರೇನು? ಇಲ್ಲ! ನಿಮ್ಮ ಜೀವನವನ್ನೆಲ್ಲ ಸೋಮಾರಿತನದಲ್ಲಿ ಕಳೆದಿದ್ದೀರಿ. ತರುವಾಯ ನೀವು ಮದುವೆಯಾದಿರಿ, ಸ್ವಾಮಿ. ತರುಣಿಯೊಬ್ಬಳ ಮಾರ್ಗದರ್ಶನದ ಜವಾಬ್ದಾರಿಯನ್ನು ನೀವು ಹೊತ್ತುಕೊಂಡಿರಿ. ನೀವು ಮಾಡಿದ್ದಾದರೂ ಏನು? ಸತ್ಯದ ಮಾರ್ಗವನ್ನು ಕಂಡುಕೊಳ್ಳಲು ನೀವಾಕೆಗೆ ನೆರವು ನೀಡಿಲ್ಲ, ಸ್ವಾಮಿ. ಅದಕ್ಕೆ ಬದಲಾಗಿ ವಂಚನೆಯ ಹಾಗೂ ದುಃಖದ ಪಾತಾಳಕ್ಕೆ ಅವಳನ್ನು ನೂಕಿದ್ದೀರಿ. ವ್ಯಕ್ತಿಯೊಬ್ಬ ನಿಮ್ಮ ಮನಸ್ಸು ನೋಯಿಸಿದ, ನಿಜ. ನೀವವನ ಮೇಲೆ ಗುಂಡು ಹಾರಿಸಿದಿರಿ. ದೇವರನ್ನರಿತಿಲ್ಲವೆಂದು, ಬದುಕು ಅಸಹ್ಯವಾಗಿದೆಯೆಂದು ನೀವು ಹೇಳುತ್ತೀರಿ. ಅದರಲ್ಲೇನೂ ಸೋಜಿಗವಿಲ್ಲ, ಸ್ವಾಮಿ.'

ಈ ಮಾತುಗಳ ತರುವಾಯ, ತನ್ನ ಸುದೀರ್ಘ ಪ್ರವಚನದಿಂದ ಆಯಾಸಗೊಂಡಂತಾಗಿ ಮೋಸಸ್ ಮತ್ತೆ ಸೋಫಾದ ಹಿಂದಕ್ಕೆ ಕೈಚಾಚಿ, ಒರಗಿಕೊಂಡು, ಕಣ್ಣು ಮುಚ್ಚಿದನು. ಆ ಸುಪ್ಪಿನ, ನಿಷ್ಠುರದ, ಚಲನರಹಿತ, ಚೈತನ್ಯಹೀನ ಮುಖದ ಕಡೆಗೆ ಪಿಯರಿ ಕಣ್ಣಾಡಿಸಿದನು. ತುಟಿಯಲುಗಿಸಿದರೂ, ಅವನ ಬಾಯಿಂದ ಧ್ವನಿ ಹೊರಡಲಿಲ್ಲ. 'ಹೌದು, ದುರ್ಗುಣಗಳ, ಸೋಮಾರಿತನದ, ಅಧಮ ಜೀವನ!' ಎಂದು ಹೇಳಲಿಚ್ಛಿಸಿದ್ದರೂ, ಮೌನವನ್ನು ಕೆಡಿಸುವ ಧೈರ್ಯ ಅವನಿಗಿರಲಿಲ್ಲ.

ಎಲ್ಲ ಮುದುಕರಂತೆ ಮೇಸನ್ ಒಣಗಿದ ಗಂಟಲನ್ನು ಸರಿಮಾಡಿಕೊಂಡು, ತನ್ನ ಸೇವಕನನ್ನು ಕೂಗಿದನು. ಪಿಯರಿಯಕಡೆ ನೋಡದೆಯೆ, 'ಕುದುರೆಗಳ ಸಮಾಚಾರ ವೇನು?' ಎಂದು ಪ್ರಶ್ನಿಸಿದನು.

'ವಿನಿಮಯದ ಕುದುರೆಗಳು ಇದೆ ತಾನೆ ಬಂದಿವೆ' ಎಂದು ಉತ್ತರಿಸಿದ ಆಳು 'ತಾವಿಲ್ಲಿ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲವೆ'? ಎಂದು ಕೇಳಿದನು.

'ಇಲ್ಲ, ಕುದುರೆಗಳನ್ನು ಸಜ್ಜುಗೊಳಿಸಲಿ.'

'ನನ್ನೊಬ್ಬನನ್ನೇ ಇಲ್ಲಿ ಬಿಟ್ಟು, ಹೇಳಬೇಕಾದದ್ದನ್ನೆಲ್ಲ ಹೇಳದೆ, ನನಗೆ ನೆರವಿನ ವಚನವನ್ನೂ ನೀಡದೆ, ನಿಜಕ್ಕೂ ಇವರು ಹೊರಟುಹೋಗುತ್ತಾರೇನು?' ಎಂದು ಪಿಯುರಿ ಆಲೋಚಿಸುತ್ತ, ಅಧೋವದನನಾಗಿಯೇ ಮೇಲೆದ್ದನು. ಯಾವಾಗಲೋ ಒಮ್ಮೆ ಮೇಸನ್‌ಕಡೆಗೆ ಕಣ್ಣು ಮಿಟುಕಿಸುತ್ತ, ಅವನು ಶತಪಥ ತಿರುಗತೊಡಗಿದನು. 'ಹೌದು, ಆ ಬಗ್ಗೆ ನಾನೆಂದೂ ಯೋಚಿಸಿರಲಿಲ್ಲ. ಆದರೆ ನನಗಿಷ್ಟವಿರದಿದ್ದರೂ, ನನಗೆ ಬೇಡವಾಗಿದ್ದರೂ ನಾನು ದೂಷ್ಯವೂ ಲಜ್ಜಾಹೀನವೂ ಆದ ಜೀವನವನ್ನು ನಡಸಿದ್ದೇನೆ' ಎಂದವನು ನೆನೆದನು. 'ಆದರೆ ಈ ಮನುಷ್ಯನಿಗೆ ಸತ್ಯ ಗೊತ್ತಿದೆ. ಇಷ್ಟಪಟ್ಟರೆ ಅವರದನ್ನು ನನಗೆ ತಿಳಿಸಬಹುದಿತ್ತು.'

ಪಿಯರಿ ಈ ವಿಷಯವನ್ನು ಮೇಸನ್ನನಿಗೆ ತಿಳಿಸಲಿಚ್ಛಿಸಿದನು; ಆದರೆ ಧೈರ್ಯ ಬರಲಿಲ್ಲ. ಪ್ರಯಾಣಿಕ ಅಭ್ಯಾಸಸಿದ್ಧಿಯ ಕೈಗಳಿಂದ ತನ್ನ ಸಾಮಾನುಗಳನ್ನು ಕಟ್ಟಿ, ಕೋಟನ್ನು ಧರಿಸಿಕೊಳ್ಳತೊಡಗಿದನು. ಎಲ್ಲ ಮುಗಿದನಂತರ ಅವನು ಬೆಜುಕೋವ್‌ನ ಕಡೆಗೆ ತಿರುಗಿ, ಔದಾಸೀನ್ಯ ಬೆರೆತ ವಿನಯದಿಂದ 'ನೀವೀಗ ಎಲ್ಲಿಗೆ ಹೋಗುತ್ತಿದ್ದೀರಿ? ಸ್ವಾಮಿ' ಎಂದು ಪ್ರಶ್ನಿಸಿದನು.

'ನಾನೆ?....ನಾನು ಪೀಟರ್ಸ್‌ಬರ್ಗ್‌ಗೆ ಹೋಗುತ್ತಿದ್ದೇನೆ' ಎಂದು ಪಿಯರಿ ಶಿಶುಸದೃಶವಾದ ಸಂಶಯ ಧ್ವನಿಯಲ್ಲಿ ನುಡಿದನು. 'ನಿಮಗೆ ಧನ್ಯವಾದಗಳು. ನೀವು ಹೇಳಿದ್ದೆಲ್ಲ ನನಗೊಪ್ಪಿಗೆಯಾಗಿದೆ. ಆದರೆ ನಾನಷ್ಟು ಕೆಟ್ಟವನೆಂದು ತಿಳಿಯಬೇಡಿ. ನಾನು ಹೇಗಿರಬೇಕೆಂದು ನೀವೀಗ ಸೂಚಿಸಿದ್ದೀರೋ ಹಾಗಿರಬೇಕೆಂಬುದೇ ನನ್ನಿಷ್ಟ ವೆಂದು ಆತ್ಮಸಾಕ್ಷಿಯಾಗಿ ಹೇಳುತ್ತೇನೆ. ಆದರೆ ನನಗೆ ಯಾರಿಂದಲೂ ಸಹಾಯವೊದಗ ಲಿಲ್ಲ....ಆದರೆ ಎಲ್ಲಕ್ಕಿಂತ ಮಿಗಿಲಾಗಿ, ಎಲ್ಲ ತಪ್ಪುಗಳಿಗೆ ನಾನೊಬ್ಬನೇ ಹೊಣೆಗಾರ. ನನಗೆ ಸಹಾಯ ನೀಡಿ, ಬುದ್ಧಿಕಲಿಸಿ, ಪ್ರಾಯಶಃ ನಾನು....' ಪಿಯರಿಯ ಗಂಟಲು ಕಟ್ಟಿತು. ಅವನು ಬೇರೆ ಕಡೆಗೆ ಮುಖಮಾಡಿದನು.

ಗಾಢಾಲೋಚನೆಯಲ್ಲಿದ್ದಂತೆ ಮೇಸನ್ ಬಹುಹೊತ್ತು ಮೌನ ತಾಳಿದನು. 'ದೇವರಿಂದ ಮಾತ್ರ ಸಹಾಯ ಬರುತ್ತದೆ. ಆದರೆ ನಮ್ಮ ಪಂಥ ಎಷ್ಟು ಸಾಧ್ಯವೋ ಅಷ್ಟು ನೆರವನ್ನು ನೀಡುತ್ತದೆ. ನೀವು ಹೇಗೂ ಪೀಟರ್ಸ್‌ಬರ್ಗ್‌ಗೆ ಹೋಗುತ್ತಿದ್ದೀರಿ. ಈ ಚೀಟಿಯನ್ನು ಶ್ರೀಮಂತ ವಿಲ್ಲಾರ್‌ಸ್ಕಿಗೆ ಕೊಡಿ' (ತನ್ನ ಟಿಪ್ಪಣಿ ಪುಸ್ತಕವನ್ನು ಕೈಗೆತ್ತಿಕೊಂಡು, ಅಗಲವಾದ ಕಾಗದದ ಮೇಲೆ ಕೆಲವು ವಾಕ್ಯಗಳನ್ನು ಬರೆದು, ನಾಲ್ಕು ಮಡಿಕೆಯಾಗಿ ಮಡಿಸಿದನು) 'ನಿಮಗೆ ಒಂದೆರಡು ಹಿತನುಡಿ ಹೇಳಲು ಅವಕಾಶ ಕೊಡಿ. ನೀವು ರಾಜಧಾನಿಯನ್ನು ತಲುಪಿದಾಗ, ಮೊದಲು ಕೆಲವು ದಿನ ಒಂಟಿಯಾಗಿದ್ದು, ಆತ್ಮಶೋಧನೆ ಮಾಡಿಕೊಳ್ಳಿ. ಹಿಂದಿನ ಜೀವನ ವಿಧಾನವನ್ನು ತ್ಯಜಿಸಿ. ನಿಮಗೆ ಸುಖ

ಪ್ರಯಾಣವಾಗಲಿ, ಸ್ವಾಮಿ' ಅಷ್ಟರಲ್ಲಿ ಆಳು ಒಳಗೆ ಪ್ರವೇಶಿಸಿದ್ದನ್ನು ಕಂಡು 'ನಿಮಗೆ ಶುಭವಾಗಲಿ' ಎಂದು ಹಾರೈಸಿದನು.

ಅಂಚೆ ಅಧಿಕಾರಿಯ ಪುಸ್ತಕವನ್ನು ಬಿಚ್ಚಿನೋಡಿದಾಗ, ಪ್ರಯಾಣಿಕ ಜೋಸೆಫ್ ಅಲೆಕ್ಸೀವಿಚ್ ಬಜ್‌ದೀವ್ ಎಂದು ಪಿಯರಿಗೆ ಗೊತ್ತಾಯಿತು. ನೊವಿಕೊವ್ ಕಾಲದಲ್ಲಿಯೂ (ಎನ್. ಐ. ನೊವಿಕೊವ್ ೧೭೪೪–೧೮೧೮ ಕ್ರಿಯಾಶೀಲ ಫ್ರೀಮೇಸನ್ ಹಲವು ವರ್ಷ ಜೈಲುವಾಸ ಅನುಭವಿಸಿದವನು. ಬ್ರಹ್ಮವಿದ್ಯಾವಾದಿ ಎಲ್. ಸಿ. ಡಿ. ಸೆಯಿಂಟ್ ಮಾರ್ಟಿನ್ ಅದೇ ಕಾಲದಲ್ಲಿದ್ದವನು. ಅವನ ಅನುಯಾಯಿಗಳನ್ನು ಮಾರ್ಟಿನೀಯರೆಂದೇ ಕರೆಯುತ್ತಾರೆ.) ಬಜ್‌ದೀವ್ ಪ್ರಥಮ ಶ್ರೇಣಿಯ ಫ್ರೀಮೇಸನ್ ಎಂದೂ, ಮಾರ್ಟಿನೀಯನೆಂದೂ ಸುವಿಖ್ಯಾತನಾಗಿದ್ದನು. ಅವನು ತನ್ನಿಂದಗಲಿದ ನಂತರ ಬಹಳ ಹೊತ್ತಿನ ತನಕ ಪಿಯರಿ ಹಾಸುಗೆಯಮೇಲೂ ಉರುಳಿಕೊಳ್ಳದೆ, ಕುದುರೆಗಳನ್ನು ತರಹೇಳದೆ, ಗತಕಾಲದ ತನ್ನ ಹೇಯ ಜೀವನವನ್ನು ಕುರಿತು ಆಲೋಚಿಸುತ್ತ, ಶತಪಥ ತಿರುಗುತ್ತಿದ್ದನು. ನವಜೀವನವನ್ನಾರಂಭಿಸುವ ಭಾವತನ್ಮಯತೆಯಿಂದ, ತನಗೆ ಅತ್ಯಂತ ಸುಲಭವಾಗಿ ತೋರಿದ ಆನಂದಮಯವೂ, ನಿಂದಾತೀತವೂ ಪವಿತ್ರತಮವೂ ಆದ ಭವಿಷ್ಯವನ್ನು ಚಿತ್ರಿಸಿಕೊಂಡನು. ಧರ್ಮಜೀವನದ ಉತ್ಕೃಷ್ಟತೆಯನ್ನು ಮರೆತಿದ್ದುದರಿಂದ ತಾನು ಪಾಪಕರ್ಮದಲ್ಲಿ ತೊಡಗಬೇಕಾಯಿತೆಂದು ಅವನಿಗನ್ನಿಸಿತು. ಅವನ ಚೇತನದಲ್ಲಿ ಹಿಂದಿನ ಸಂಶಯಗಳ ತುಣುಕು ಸಹ ಉಳಿಯಲಿಲ್ಲ. ಧರ್ಮ ಮಾರ್ಗದಲ್ಲಿ, ಪರಸ್ಪರ ಸಹಕಾರೋದ್ದೇಶದಿಂದ ಒಂದಾಗಿ, ಮನುಕುಲದ ಭ್ರಾತೃತ್ವವನ್ನು ಪ್ರತಿಷ್ಠಾಪಿಸುವ ಸಾಧ್ಯತೆಯಲ್ಲಿ ಅವನ ನಂಬುಗೆ ದೃಢವಾಯಿತು. ಫ್ರೀಮೇಸನ್ ಪಂಥ ಅವನಿಗೆ ತೋರಿದ ಬಗೆಯಿದು.

ಅಧ್ಯಾಯ ೩

ಪೀಟರ್ಸ್‌ಬರ್ಗ್ ತಲುಪಿದ ನಂತರ ಪಿಯರಿ ತನ್ನ ಆಗಮನ ವಾರ್ತೆಯನ್ನು ಯಾರಿಗೂ ತಿಳಿಸಲಿಲ್ಲ; ಎಲ್ಲಿಗೂ ಹೋಗಲಿಲ್ಲ; ಅಜ್ಞಾತ ವ್ಯಕ್ತಿಯೊಬ್ಬ ಕಳಿಸಿದ್ದ ಥಾಮಸ್ ಎಕೆಂಪಿಸ್‌ನ 'ಕ್ರಿಸ್ತನ ಅನುಕರಣೆ' ಎಂಬ ಪುಸ್ತಕದ ಅಧ್ಯಯನದಲ್ಲಿ ಅವನು ಮುಳುಗಿದ್ದನು. ಆ ಪುಸ್ತಕವನ್ನು ಓದುತ್ತಿದ್ದಂತೆ ಮೇಲಿಂದ ಮೇಲೆ ಅವನಿಗೊಂದು ಅನುಭವವಾಗುತ್ತಿತ್ತು: ಜೋಸೆಫ್ ಅಲೆಕ್ಸೀವಿಚ್ ತನಗೆ ಮನಗಾಣಿಸಿದ್ದ, ತನಗೆ ಆ ತನಕ ಗೊತ್ತಿರದಿದ್ದ, ಪರಿಪೂರ್ಣತಾ ಸಾಕ್ಷಾತ್ಕಾರದ ಹಾಗೂ ಮಾನವರ ನಡುವೆ ಭ್ರಾತೃಪ್ರೇಮವನ್ನು ಪ್ರೇರಿಸಬಹುದಾದ ಸಾಧ್ಯತೆಯ ವಿಶ್ವಾಸದಿಂದಾಗಿ ಅವನ ಹೃದಯವನ್ನು ತುಂಬಿಕೊಂಡಿದ್ದ ಆನಂದ. ಅವನು ಊರಿಗೆ ಬಂದ ವಾರದ ನಂತರ, ಪೀಟರ್ಸ್‌ಬರ್ಗ್ ಸಮಾಜದಲ್ಲಿ ತಕ್ಕಮಟ್ಟಿಗೆ ಪರಿಚಯವಾಗಿದ್ದ ಯುವ ಪೋಲಿಷ್ ಶ್ರೀಮಂತ ವಿಲ್ಲರ್‌ಸ್ಕಿ ಒಂದು ದಿನ ಸಂಜೆ ಅಧಿಕೃತವಾಗಿ, ಸಂಪ್ರದಾಯಾನುಸಾರವಾಗಿ ಅವನಲ್ಲಿಗೆ ಬಂದನು. ಬಂದವನೇ ಬಾಗಿಲು ಮುಚ್ಚಿ ಕೋಣೆಯಲ್ಲಿ ಬೇರೆ ಯಾರೂ ಇಲ್ಲವೆಂಬುದನ್ನು ಖಾತರಿಪಡಿಸಿಕೊಂಡು, ಕೂರದೆಯೆ, ಪಿಯರಿಯನ್ನು ಮಾತಾಡಿಸಿದನು:

'ನಿಮಗಾಗಿ ನಾನೊಂದು ಸಂದೇಶವನ್ನು ನಿವೇದನೆಯನ್ನು ತಂದಿದ್ದೇನೆ. ನಮ್ಮ ಭ್ರಾತೃ ಮಂಡಲಿಯ ಗಣ್ಯರೊಬ್ಬರು ಸಾಮಾನ್ಯಾವಧಿಗೆ ಮುಂಚೆಯೇ ನಿಮ್ಮನ್ನು ನಮ್ಮ

ಮಂಡಲಿಗೆ ಸೇರಿಸಿಕೊಳ್ಳುವ ಬಗ್ಗೆ ಒಂದು ಪತ್ರ ಬರೆದಿದ್ದಾರೆ. ನಾನು ನಿಮ್ಮ ಬೆಂಬಲಿಗನಾಗಬೇಕೆಂದು ನನಗವರು ಸೂಚಿಸಿದ್ದಾರೆ. ಆ ವ್ಯಕ್ತಿಯ ಇಷ್ಟಾರ್ಥವನ್ನು ನೆರವೇರಿಸುವುದು ನನ್ನ ಪವಿತ್ರ ಕರ್ತವ್ಯವೆಂದು ಬಗೆದಿದ್ದೇನೆ. ನನ್ನ ಹೊಣೆಗಾರಿಕೆಯಲ್ಲಿ ಫ್ರೀಮೇಸನ್ನರ ಸೌಭ್ರಾತೃ ಮಂಡಲಿಯನ್ನು ಪ್ರವೇಶಿಸುವುದು ನಿಮಗಿಷ್ಟವೆ?'

ನೃತ್ಯ ಮಂದಿರದಲ್ಲಿ ಸುಸಂಸ್ಕೃತ ಸ್ತ್ರೀಯರ ನಡುವೆ ಅವನನ್ನು ಪಿಯರಿ ಆಗಾಗ್ಗೆ ಸಂಧಿಸಿದ್ದುಂಟು. ಅಂಥ ಸಂದರ್ಭಗಳಲ್ಲಿ ಸ್ನೇಹಪರನಾಗಿ ವರ್ತಿಸುತ್ತಿದ್ದ ಅವನ ಈಗಿನ ನಿರುತ್ಸಾಹದ, ಸಂಯಮದ ಧೋರಣೆ ಪಿಯರಿಯನ್ನು ಚಕಿತಗೊಳಿಸಿತು. 'ಹೌದು. ನನಗದು ಇಷ್ಟ.'

ವಿಲ್ಲರ್‌ಸ್ಕಿ ನಮಸ್ಕಾರ ಪೂರ್ವಕವಾಗಿ ತಲೆ ಬಗ್ಗಿಸಿದನು. 'ಒಂದೇ ಒಂದು ಪ್ರಶ್ನೆ ಉಳಿದಿದೆ, ಶ್ರೀಮಂತರೆ. ಮುಂದಿನ ಮೇಸನ್‌ರಾಗಿ ಅಲ್ಲ, ಪ್ರಾಮಾಣಿಕ ವ್ಯಕ್ತಿಯಾಗಿ, ನಿಷ್ಠೆಯಿಂದ ಅದಕ್ಕೆ ಉತ್ತರ ಕೊಡಿ : ನೀವು ಹಿಂದಿನ ನಂಬಿಕೆಗಳನ್ನೆಲ್ಲ ತ್ಯಜಿಸಿರುವಿರಾ ? ನಿಮಗೆ ದೇವರಲ್ಲಿ ನಂಬಿಕೆಯಿದೆಯೆ ?'

ಪಿಯರಿ ತುಸು ಅಂತರ್ಮುಖನಾಗಿದ್ದು 'ಹೌದು....ಹೌದು....ನಾನು ದೇವರನ್ನು ನಂಬುತ್ತೇನೆ' ಎಂದನು.

'ಹಾಗಾದರೆ ..' ಎಂದು ವಿಲ್ಲರ್‌ಸ್ಕಿ ಮಾತು ತೆಗೆಯುವಷ್ಟರಲ್ಲಿ ಪಿಯರಿ 'ಹೌದು, ನಾನು ದೇವರನ್ನು ನಂಬುತ್ತೇನೆ' ಎಂದು ನಡುವೆ ಬಾಯಿ ಹಾಕಿದನು.

'ಹಾಗಾದರೆ ನಾವೀಗ ಹೋಗೋಣ. ನನ್ನ ಗಾಡಿ ಸಿದ್ಧವಾಗಿದೆ' ಎಂದು ವಿಲ್ಲರ್‌ಸ್ಕಿ ನುಡಿದನು.

ದಾರಿಯುದ್ದಕ್ಕೂ ವಿಲ್ಲರ್‌ಸ್ಕಿ ಮೌನವಾಗಿದ್ದನು. ತಾನೇನು ಮಾಡಬೇಕು, ಏನು ಉತ್ತರ ಹೇಳಬೇಕು ಎನ್ನುವ ಪಿಯರಿಯ ಪ್ರಶ್ನೆಗಳಿಗೆ, ತನಗಿಂತಲೂ ಯೋಗ್ಯವಾದ ಸೋದರರು ಅವನನ್ನು ಪರೀಕ್ಷಿಸುವುದಾಗಿಯೂ, ಅವನು ಸತ್ಯವನ್ನೇ ಹೇಳಬೇಕೆಂದೂ ವಿಲ್ಲರ್‌ಸ್ಕಿ ಉತ್ತರಿಸಿದನು.

ಸೌಭ್ರಾತೃ ಮಂಡಲಿಯ ಕಚೇರಿಯಿದ್ದ ದೊಡ್ಡ ಸೌಧದ ಅಂಗಳವನ್ನು ಅವರಿಬ್ಬರೂ ಪ್ರವೇಶಿಸಿದರು. ಕತ್ತಲಿಡಿದಿದ್ದ ಸೋಪಾನ ಪಂಕ್ತಿಯನ್ನೇರಿ, ದೀಪಗಳಿಂದ ಬೆಳಗುತ್ತಿದ್ದ ಮುಂಗೋಣೆಯನ್ನು ಹೊಕ್ಕು, ಆಳುಗಳ ನೆರವಿಲ್ಲದೆ ತಮ್ಮ ಮೇಲುಡುಪುಗಳನ್ನು ತೆಗೆದರು. ಅಲ್ಲಿಂದ ಅವರು ಮತ್ತೊಂದು ಕೋಣೆಗೆ ಹೋದರು. ವಿಚಿತ್ರ ವಸ್ತ್ರಧಾರಿಯೊಬ್ಬ ಬಾಗಿಲಲ್ಲಿ ಕಾಣಿಸಿಕೊಂಡನು. ವಿಲ್ಲರ್‌ಸ್ಕಿ ಫ್ರೆಂಚ್ ಭಾಷೆಯಲ್ಲಿ ಮೆಲ್ಲಗೆ ಅವನ ಕಿವಿಯಲ್ಲೇನೊ ಹೇಳಿದನು. ಅನಂತರ ಇಬ್ಬರೂ ಬಟ್ಟೆ ಕಪಾಟಿನ ಬಳಿಗೆ ಹೋದರು. ತಾನೆಂದೂ ನೋಡದಿದ್ದ ಉಡುಪುಗಳನ್ನಲ್ಲಿ ಪಿಯರಿ ಕಂಡನು. ಅಲಮಾರಿನಿಂದೊಂದು ಕೈಚಾಕವನ್ನು ತೆಗೆದುಕೊಂಡು ವಿಲ್ಲರ್‌ಸ್ಕಿ ಅವನ ಕಣ್ಣುಗಳನ್ನು ಕಟ್ಟಿ, ಚೌಕದ ತುದಿಗಳನ್ನು ಹಿಂದಕ್ಕೆಳೆದು, ಕೂದಲೊಡನೆ ಗಂಟು ಹಾಕಿದನು. ಕೂದಲೆಳೆತದಿಂದ ಪಿಯರಿಗೆ ನೋವಾಗುತ್ತಿತ್ತು. ಅನಂತರ ವಿಲ್ಲರ್‌ಸ್ಕಿ ಅವನ ಮುಖವನ್ನು ತನ್ನ ಕಡೆಗೆಳೆದುಕೊಂಡು ಚುಂಬಿಸಿ, ಅವನ ಕೈಹಿಡಿದುಕೊಂಡು, ಮುಂದೆ ಕರೆದೊಯ್ದನು. ಗಂಟಿನ ಕೂದಲಿಂದ ಪಿಯರಿಗೆ ಬಾಧೆಯಾಗುತ್ತಿತ್ತು. ಅವನ ಮುಖದ ಮೇಲೆ ನೋವು ನಾಚಿಕೆಗಳ ಗೆರೆ ಎದ್ದು ಕಾಣುತ್ತಿದ್ದುವು. ಇಳಬಿದ್ದಿದ್ದ ತೋಳುಗಳ, ಸಿರಿಗೆ ಹಿಡಿದ

ನಗುಮೊಗದ ಅವನ ದೈತ್ಯಾಕೃತಿ ಗಾಬರಿಗೊಂಡ ಅನಿಶ್ಚಯದ ಗತಿಯಿಂದ ವಿಲ್ಲರ್‌ಸ್ಕಿಯನ್ನು ಹಿಂಬಾಲಿಸುತ್ತಿತ್ತು.

ಹತ್ತು ಹೆಜ್ಜೆ ಮುಂದೆ ಸಾಗಿದನಂತರ ವಿಲ್ಲರ್‌ಸ್ಕಿ ನಿಂತನು. 'ನಮ್ಮ ಸೌಭ್ರಾತೃತ್ವ ಮಂಡಲಿಯನ್ನು ಸೇರುವ ದೃಢಸಂಕಲ್ಪ ನಿಮ್ಮಲ್ಲಿದ್ದರೆ ನೀವು ಎಲ್ಲ ಪಾಡುಗಳನ್ನು ಸ್ಥೈರ್ಯದಿಂದ ಸಹಿಸಿಕೊಳ್ಳಬೇಕು.' (ಪಿಯರಿ ಸ್ಥಿರೀಕರಣ ಭಾವನೆಯಿಂದ ತಲೆಯಲ್ಲಾಡಿಸಿದನು) 'ಬಾಗಿಲು ಸದ್ದಾದಾಗ ನಿಮ್ಮ ಕಣ್ಣಿನ ಮುಸುಕನ್ನು ತೆರೆಯಬಹುದು. ನಿಮಗೆ ಧೈರ್ಯ ಬರಲಿ, ಜಯವೊದಗಲಿ' ಎಂದು ವಿಲ್ಲರ್‌ಸ್ಕಿ ಅವನ ಕೈಕುಲುಕಿ, ಹೊರಗೆ ಹೋದನು.

ಒಂಟಿಯಾದ ಪಿಯರಿ ಮೊದಲಿನಂತೆಯೇ ನಗುಮುಖನಾಗಿದ್ದನು. ಒಂದೆರಡು ಸಾರಿ ಭುಜ ಕುಣಿಸಿದನು; ಕಣ್ಣು ಮುಸುಕನ್ನು ತೆಗೆದುಬಿಡಲೆಂದು ಚೌಕದ ತನಕ ತನ್ನ ಕೈ ಎತ್ತಿ ಇಳಿಸಿದನು. ಐದು ನಿಮಿಷ ಒಂದು ಗಂಟೆಯಾಗಿ ತೋರಿತು. ಅವನ ತೋಳುಗಳು ಜೋವು ಹಿಡಿದಿದ್ದುವು; ಕಾಲುಗಳಲ್ಲಿ ತ್ರಾಣವಿರಲಿಲ್ಲ, ತುಂಬ ಬಳಲಿದ್ದಂತೆ ಅವನಿಗೆ ಭಾಸವಾಯಿತು. ವೈವಿಧ್ಯಮಯ ಸಂಕೀರ್ಣ ಸಂವೇದನೆಗಳ ಅನುಭವವಾಯಿತು. ತನಗೇನಾಗುತ್ತದೋ ಎಂಬ ಭಯ ಅವನ ಮನಸ್ಸಿನಲ್ಲುದಿಸಿತು. ತನ್ನ ಭಯವನ್ನು ತೋರಿಸಿಕೊಳ್ಳಲು ಸಹ ಅಂಜಿದನು. ಮುಂದೆ ನಡೆಯಬಹುದಾದ ಸಂಗತಿಯ ಬಗ್ಗೆ, ಗೋಚರಿಸಬಹುದಾದ ದರ್ಶನದ ಬಗ್ಗೆ ಅವನು ಕುತೂಹಲಿತನಾದನು. ಜೋಸೆಫ್ ಅಲೆಕ್ಸೀವಿಚ್‌ನನ್ನು ನೋಡಿದಾಗಿನಿಂದ ಕನಸು ಕಾಣುತ್ತಿದ್ದ ಧಾರ್ಮಿಕ ಜೀವನವನ್ನು ಪ್ರಾರಂಭಿಸುವ ಮತ್ತು ಆತ್ಮೋನ್ನತಿಯ ಪಥದಲ್ಲಿ ಕಾಲಿಡುವ ಮುಹೂರ್ತ ಸನ್ನಿಹಿತವಾಯಿತೆಂದು ಅವನು ಹರ್ಷಗೊಂಡನು. ಗಟ್ಟಿಯಾಗಿ ಬಾಗಿಲು ಕುಟ್ಟಿದ ಸದ್ದಾಯಿತು. ಪಿಯರಿ ಕಣ್ಣುಕಟ್ಟನ್ನು ಬಿಚ್ಚಿ ಸುತ್ತಲೂ ಕಣ್ಣು ಹಾಯಿಸಿದನು. ಕೋಣೆಯಲ್ಲಿ ಅಂಧಕಾರ ಕವಿದಿತ್ತು. ಬಿಳಿಯ ಗೂಡಿನಲ್ಲೊಂದು ಹಣತೆ ಉರಿಯುತ್ತಿತ್ತು. ಅದರ ಬಳಿ ಸರಿದಾಗ, ಕಪ್ಪು ಮೇಜಿನ ಮೇಲೆ ಹಣತೆಯೂ ಒಂದು ತೆರೆದ ಪುಸ್ತಕವೂ ಇದ್ದದ್ದು ಕಾಣಿಸಿತು. ಸುವಾರ್ತೆಯೇ ಆ ಪುಸ್ತಕ. ಹಣತೆ ಉರಿಯುತ್ತಿದ್ದ ಗೂಡೇ ಹಲ್ಲುಕುಳಿಗಳಿದ್ದ ಮಾನವಖರ್ಪರ. 'ಆದಿಯಲ್ಲಿ ಶಬ್ದವಿತ್ತು, ಆ ಶಬ್ದ ಭಗವಂತನನ್ನು ಆಶ್ರಯಿಸಿತ್ತು' ಎಂಬ ಸುವಾರ್ತೆಯ ಪ್ರಥಮ ಪದಗಳನ್ನು ಓದಿದ ತರುವಾಯ, ಪಿಯರಿ ಮೇಜಿನ ಸುತ್ತ ಪ್ರದಕ್ಷಿಣೆ ಮಾಡಿದನು. ಭರ್ತಿಯಿದ್ದ ತೆರೆದ ಪೆಟ್ಟಿಗೆಯೊಂದು ಅವನ ಕಣ್ಣಿಗೆ ಬಿತ್ತು. ಅದೊಂದು ಎಲುಬುಗಳಿದ್ದ ಶವದ ಪೆಟ್ಟಿಗೆ. ಅದನ್ನು ನೋಡಿ ಅವನಿಗೆ ಸೋಜಿಗವಾಗಲಿಲ್ಲ. ಹಳೆಯದಕ್ಕಿಂತ ತೀರ ಭಿನ್ನವಾದ ನೂತನ ಜೀವನವನ್ನು ಪ್ರವೇಶಿಸಲು ಬಯಸಿದ್ದ ಅವನು ಅಸಾಮಾನ್ಯವಾದದ್ದನ್ನು, ತಾನು ನೋಡುತ್ತಿದ್ದುದಕ್ಕಿಂತ ಅಧಿಕಾಧಿಕ ಅಸಾಮಾನ್ಯವಾದದ್ದನ್ನು ಅವನು ನಿರೀಕ್ಷಿಸಿಕೊಂಡಿದ್ದನು. ತಲೆಬುರುಡೆ, ಶವಸಂಪುಟ, ಸುವಾರ್ತೆ—ಇದೆಲ್ಲ ಅವನು ನಿರೀಕ್ಷಿಸಿಕೊಂಡಿದ್ದದ್ದೇ. ತನ್ನ ಭಾವಗಳನ್ನು ಕೆರಳಿಸುವ ಸಲುವಾಗಿ ಸುತ್ತ ನೋಡಿದನು. 'ದೇವರು, ಸಾವು, ಪ್ರೇಮ, ಮಾನವನ ಭ್ರಾತೃತ್ವ' ಎಂಬ ಸೂತ್ರಗಳನ್ನು ಜಪಿಸುತ್ತ, ಅಸ್ಪಷ್ಟವಾದರೂ ಆನಂದದಾಯಕವಾದ ಭಾವನೆಗಳೊಡನೆ ಅವನ್ನು ಸಂಯೋಜಿಸಿಕೊಂಡನು. ಬಾಗಿಲು ತೆರೆಯಿತು. ವ್ಯಕ್ತಿಯೊಬ್ಬ ಒಳಗೆ ಬಂದ.

(ಮುಂದುವರಿಯುವುದು)

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಎ. ಆರ್. ನಾಗಭೂಷಣ
   1235, ಕೆ. ಎಂ. ಪುರಂ, ಮೈಸೂರು–೫೭೦ ೦೦೪

2. ಕೆ. ಪಿ. ವಾಸುದೇವನ್
   ನಂ. 2, 10ನೇ ಮೈನ್, ಸರಸ್ವತಿಪುರಂ, ಮೈಸೂರು–೫೭೦ ೦೦೯

3. ಡಿ. ನಂದಾ
   C/o ರಾಜ್ಯ ಸಂಪನ್ಮೂಲ ಕೇಂದ್ರ, 464, ಎ ಎಂಡ್ ಬಿ ಬ್ಲಾಕ್
   ಕುವೆಂಪುನಗರ, ಮೈಸೂರು–೫೭೦ ೦೨೩

4. ಸೂಜನ್ ಡ್ಯಾನಿಯಲ್, ಅಧ್ಯಾಪಕಿ
   ಇಂಗ್ಲಿಷ್ ವಿಭಾಗ, ಯುವರಾಜ ಕಾಲೇಜು, ಮೈಸೂರು–೫೭೦ ೦೦೫

5. ನರಹಳ್ಳಿ ಬಾಲಸುಬ್ರಹ್ಮಣ್ಯ
   76, 1ನೇ ಕ್ರಾಸ್, ಶ್ರೀರಾಮಪುರಂ, ಬೆಂಗಳೂರು–೫೬೦ ೦೨೧

6. ವಿ. ಎಸ್. ಲಕ್ಷ್ಮೀನಾರಾಯಣ
   ನಂ. 14–ಎ, 15ನೇ ಕ್ರಾಸ್, ಜಯನಗರ, ಮೈಸೂರು–೫೭೦ ೦೧೪

7. ಡಾ|| ಬಿ. ಸಿ. ರಾಮಚಂದ್ರ ಶರ್ಮಾ
   "ಪರಾಶರ" 222, 39ನೇ ಸಿ ಕ್ರಾಸ್, 5ನೇ ಬ್ಲಾಕ್, ಜಯನಗರ
   ಬೆಂಗಳೂರು–೫೬೦ ೦೪೧

9. ಪ್ರೊ|| ಎ. ಎಸ್. ಮೂರ್ತಿರಾವ್
   185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
   ಬೆಂಗಳೂರು–೫೬೦ ೦೨೪

10. ಪ್ರೊ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
    ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

ರಾಜ್ಯದ ನಿಸ್ಸಹಾಯಕ ಹೆಣ್ಣುಮಕ್ಕಳಿಗೆ "ಅರಿಶಿನ-ಕುಂಕುಮ"ದ ಕೊಡುಗೆ

ದೇವದಾಸಿ ಪದ್ಧತಿಯ ನಿರ್ಮೂಲನ ಹಾಗೂ ಅವರ ಪುನರುದ್ಧಾರ

ತಲೆ ತಲಾಂತರದಿಂದ ಬಂದಿದ್ದ ದೇವದಾಸಿ ಪದ್ಧತಿಯಂಥ ಹೀನ ಸಂಪ್ರದಾಯದ ಸಾಮಾಜಿಕ ಪಿಡುಗನ್ನು ತೊಡೆದು ಹಾಕಲೆಂದು ಕರ್ನಾಟಕ ದೇವದಾಸಿ (ಸಮರ್ಪಣಾ ನಿಷೇಧ) ಕಾನೂನನ್ನು ಜಾರಿಗೊಳಿಸಲಾಗಿದೆ.

ಯಾವ ಸ್ತ್ರೀಯನ್ನೂ ದೇವರು, ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಯ ಹೆಸರಿನಲ್ಲಿ ಸಮರ್ಪಿಸುವುದನ್ನು ಈ ಕಾನೂನು ನಿಷೇಧಿಸುತ್ತದೆ. ಅಲ್ಲದೆ ಅಂತಹ ಅಪರಾಧಗಳ ಶೋಧನೆ, ವಿಮುಕ್ತಿಗೊಂಡ ಮಹಿಳೆಯರ ಪಾಲನೆ, ರಕ್ಷಣೆ, ಆಕೆಯ ಕಲ್ಯಾಣ ಹಾಗೂ ಪುನರುದ್ಧಾರಕ್ಕೂ ಈ ಕಾನೂನು ಅನುವು ಮಾಡಿಕೊಡುತ್ತದೆ. ಈ ಕಾನೂನಿನ ಉಲ್ಲಂಘನೆಯ ಅಪರಾಧಗಳಿಗೆ ರೂ. 2000ದಿಂದ 5000 ರೂ. ಗಳವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

ಹೀಗೆ ವಿಮುಕ್ತಿಗೊಂಡ ಮಹಿಳೆಯ ವಿವಾಹ ಆಕೆಯ ಪುನರುದ್ಧಾರದ ಶ್ರೇಷ್ಠ ಮಾರ್ಗ. ಇಂತಹ ಮದುವೆಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರ ಈ ದಂಪತಿಗಳಿಗೆ 3000-00 ರೂ. ಗಳ ಪ್ರೋತ್ಸಾಹ ಧನವನ್ನು ನೀಡುತ್ತದೆ. ಈ ಪ್ರೋತ್ಸಾಹ ಧನವನ್ನು ಪಡೆಯಲು ಯುವಕರು 21 ವರ್ಷದ ಮೇಲ್ಪಟ್ಟವರಾಗಿದ್ದು ಮಾಹೆಯಾನ 500 ರೂ.ಗಳ ಖಚಿತ ಸಂಪಾದನೆಯುಳ್ಳವರಾಗಿರಬೇಕು. ವಿವಾಹವಾಗುವ ದೇವದಾಸಿಯರು 18ರಿಂದ 35 ವರ್ಷ ವಯಸ್ಸಿನವರಾಗಿದ್ದು ಕರ್ನಾಟಕದಲ್ಲಿ ಕನಿಷ್ಠ 2 ವರ್ಷಗಳಿಂದ ವಾಸವಾಗಿರಬೇಕು.


ಇದರೊಂದಿಗೆ, ಇನ್ನೂ ಅನೇಕ ಯೋಜನೆಗಳನ್ನು ರಾಜ್ಯ ಸರ್ಕಾರ ದೇವದಾಸಿಯರ ಪುನರುದ್ಧಾರಕ್ಕಾಗಿ ಹಮ್ಮಿಕೊಂಡಿದೆ. ಜನತಾ ಮನೆಗಳ ನೀಡಿಕೆ ಈ ಯೋಜನೆಗಳಲ್ಲೊಂದು. ಇದರೊಂದಿಗೆ ದೇವದಾಸಿಯರಿಗೆ ಸಾಲಗಳನ್ನು ಹಾಗೂ ಪ್ರೋತ್ಸಾಹ ಧನವನ್ನು ನೀಡಿ ತನ್ಮೂಲಕ ಅವರು ಸಣ್ಣ ಕೈಗಾರಿಕೆ, ಹೈನುಗಾರಿಕೆ ಮುಂತಾದ ವ್ಯಾಪಾರ, ಉದ್ಯೋಗಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಪಡೆಯುವಂತೆ ಮಾಡಲಾಗುವದು.

ಅಲ್ಲದೆ ಸೌಂದತ್ತಿ ಮತ್ತು ಅಥಣಿಗಳಲ್ಲಿ ಅಬಲಾಶ್ರಮಗಳನ್ನು ರಾಜ್ಯ ಸರ್ಕಾರ ಸ್ಥಾಪಿಸಿದೆ. ಇಲ್ಲಿ ದೇವದಾಸಿ ಜೀವನವನ್ನು ತೊರೆದ ಮಹಿಳೆಯರಿಗೆ ಆಶ್ರಯ ನೀಡಲಾಗುತ್ತಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ.

ಅಸಹಾಯಕರಿಗೊಂದು ಸಹಾಯದ ಯೋಜನೆ

"ಕರ್ನಾಟಕ ವಾರ್ತೆ"



ಡಾ|| ಬಿ. ಸಿ. ರಾಮಚಂದ್ರ ಶರ್ಮ